ಶುಕ್ರವಾರ, ನವೆಂಬರ್ 21, 2025| ₹ 7.00
prajavani.net prajavani
www.prajavani.net

ಕ್ವಾರ್ಟರ್‌ಗೆ ಆಯುಷ್
ಕರ್ನಾಟಕದ ಆಯುಷ್ ಶೆಟ್ಟಿ ಅವರು ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಾಯಕತ್ವದ ಮಾತು
ಬೆಂಗಳೂರು ಟೆಕ್ ಶೃಂಗದಲ್ಲಿ ವೆರಿಕ್ಸ್ ಮತ್ತು ಆಪ್ಟಿಮೈಜ್ ಜಿಇಒ ಕಂಪನಿಯ ಸಿಇಒ ಕೀರ್ತಿಗ ರೆಡ್ಡಿ ಅವರು 'ನಾಯಕತ್ವದಲ್ಲಿ ಮಹಿಳೆಯರು' ಗೋಷ್ಠಿಯಲ್ಲಿ ಮಾತನಾಡಿದರು

ಡ್ಯುಯಲ್ 62.5 cm (12.3" + 12.3") ಕರ್ವ್ಡ್ ಪ್ಯಾನೊರಾಮಿಕ್ ಡಿಸ್‌ಪ್ಲೇ ಜೊತೆಗೆ ಕನೆಕ್ಟ್ ಕಾರ್ ನೇವಿಗೇಶನ್ ಕಾಕ್‌ಪಿಟ್ (ccNC)^ ಮತ್ತು ಕಂಟ್ರೋಲರ್ – OTA
ಡ್ಯುಯಲ್ ಟೋನ್ (ಡಾರ್ಕ್ ನೇವಿ & ಡವ್ ಗ್ರೇ) ಇಂಟೀರಿಯರ್ ಥೀಮ್ ಜೊತೆಗೆ ಟೆರಾಜೊ-ಟೆಕ್ಸ್ಚರ್ ಕ್ರ್ಯಾಶ್‌ಪ್ಯಾಡ್ ಫಿನಿಶ್

ಡಾರ್ಕ್ ಕ್ರೋಮ್ ರೇಡಿಯೇಟರ್ ಗ್ರಿಲ್
ಕ್ವಾಡ್ ಬೀಮ್ LED ಹೆಡ್‌ಲ್ಯಾಂಪ್ಸ್

ವಿಶಾಲವಾದ ಕ್ಯಾಬಿನ್ – ಹೆಚ್ಚು ಹೆಡ್‌ರೂಮ್, ಶುಲ್ಡರ್ ರೂಮ್ ಮತ್ತು ನೀ ರೂಮ್

New

ಫ್ರಂಟ್ ರೋ ವೆಂಟಿಲೇಟೆಡ್ ಸೀಟ್ಸ್

New

ಸರೌಂಡ್ ವ್ಯೂ ಮಾನಿಟರ್ (SVM)

New

ಬೋಸ್ ಪ್ರೀಮಿಯಂ ಸೌಂಡ್
8 ಸ್ಪೀಕರ್ ಸಿಸ್ಟಮ್

New

Hyundai ಸ್ಮಾರ್ಟ್‌ಸೆನ್ಸ್ –
ಲೆವೆಲ್ 2 ADAS (16 ಫೀಚರ್ಸ್)

6 AT ಇನ್ 1.5 l ಡೀಸೆಲ್ New
ಎಂಜಿನ್ ಆಯ್ಕೆಗಳು
ಕಪ್ಪಾ 1.2 l MPi ಪೆಟ್ರೋಲ್
ಕಪ್ಪಾ 1.0 l ಟರ್ಬೋ GDi ಪೆಟ್ರೋಲ್
U2 1.5 l CRDi ಡೀಸೆಲ್
ಟ್ರಾನ್ಸ್‌ಮಿಶನ್ ಆಯ್ಕೆಗಳು
MT I AT I DCT

ಸೂಪರ್ ಸ್ಟ್ರಾಂಗ್ ಬಾಡಿ ಸ್ಟಕ್ಚರ್
33 ಸ್ಟಾಂಡರ್ಡ್ ಸೇಫ್ಟಿ ಫೀಚರ್ಸ್
65ಕ್ಕೂ ಹೆಚ್ಚು ಅಡ್ವಾನ್ಸ್ಡ್ ಸೇಫ್ಟಿ ಫೀಚರ್ಸ್

HYUNDAI

To enquire give a missed call at **9555295868** | my Hyundai app | Hyundai Click to Buy | 3 YEAR Unlimited* Kilometer Warranty | UPTO 7 YEARS Extended Warranty## | UPTO 5 YEARS Shield of Trust Running Repair Package** | UPTO 5 YEARS Shield of Trust Super Maintenance Package** | 10 YEAR Road Side Assistance (RSA)** | Shield of Trust Bodycare Body Maintenance Package** | Bluelink 3 Years free Bluelink subscription | Accelerated by^ NVIDIA ^31.24 cm (12.3") ccNC navigation system is accelerated by NVIDIA

For Information Contact: Toll Free: 1800114645 **Bangalore:** **Blue Hyundai,** Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Hesserghatta Main Road, Ph: 9916208888, **Lakshmi Hyundai,** Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, **Pavan Hyundai,** Kanakpura Road, Ph: 7337882522, Electronic City, Ph: 7337882522, **Dhruvdesh Hyundai,** Banashankari, Ph: 9205770577, **Trident Hyundai,** Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, **Advaith Hyundai,** Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458, Bilekahalli, Ph: 9606076457 **Mangalore: Kanchana Hyundai,** Ph: 9900144113, **Advaith Hyundai,** Ph: 9606938832 **Udupi: Kanchana Hyundai,** Ph: 9972440758 **Mysore: Advaith Hyundai,** Belavadi, Ph: 9620257012 JLB Road, Ph: 9606938831, **KPR Hyundai,** Mysore Ph: 9606470291 **Hassan: Advaith Hyundai,** Ph: 9538971132 **Shimoga: Rahul Hyundai,** Ph: 6364465441, **Hubli: Bellad Hyundai,** Ph: 9900553490, **Raam Hyundai,** Ph: 7337785999, **Kanakpura: Pavan Hyundai,** Ph: 7892718572, **Belgaum: Nagshanti Hyundai,** Ph: 9844890456, 9844890459 **Bijapur: Narayan Hyundai,** Ph: 9742272157, 9742272153 **Bagalkot: Narayan Hyundai,** Ph: 9742253245 **Jamkhandi: Narayan Hyundai,** Ph: 9742272179, **Davanagere: K J Hyundai,** Ph: 7022001201, **Chitradurga: K J Hyundai,** Ph: 7022898488, **Channagiri: K J Hyundai,** Ph: 9945059764, **Ranebennur: K J Hyundai,** Ph: 7022992350, **Gulbarga: Shah Hyundai,** Ph: 9108049250 **Tumkur: Pavan Hyundai,** Ph: 7337882522 **Bellari: Anika Hyundai,** Ph: 8884484020, **Ramanagara: Advaith Hyundai,** Ph: 9620594433 **Kolar: Advaith Hyundai,** Ph: 9620229885, **Chintamani:** Ph: 8147994737, **Mandya: Advaith Hyundai,** Ph: 9740060075, **Coorg: Advaith Hyundai,** Madikeri, Ph: 9538971151 Gonikoppal, Ph: 9945774088 Kushalnagar, Ph: 9538971149 **Tiptur: Advaith Hyundai,** Ph: 7619577050 **Chikodi: Nagshanti Hyundai,** Ph: 8951947001 **Gokak: Nagshanti Hyundai,** Ph: 8147978240 **Savadatti: Nagshanti Hyundai,** Ph: 8007228679 **Athani: Nagshanti Hyundai,** Ph: 9620341451, **Belthangady: Advaith Hyundai,** Ph: 7760962819, **Sullia: Advaith Hyundai,** Ph: 7760962813 **Dharwad: Bellad Hyundai,** Ph: 6364333461, **Hunsur: KPR Hyundai,** Ph: 9538879235 **Channarayapatna: KPR Hyundai,** Ph: 9538879238 **Kollegala: KPR Hyundai,** Ph: 9606478215, **Sakleshpura: KPR Hyundai, Ph:** 9538879238 **Raichur: Shah Hyundai,** Ph: 9108049252 **Bidar: Shah Hyundai,** Ph: 7625093556 **Yadgir: Shah Hyundai,** Ph: 9108049262 **Sindhanur: Shah Hyundai,** Ph: 9071411136/9513897444 **Basavakalyan: Shah Hyundai,** Ph: 7353307776 **Madikeri: Advaith Hyundai,** Ph: 9538971151 **Kushalnagar: Advaith Hyundai,** Ph: 9538971149 **Gonikoppa: Advaith Hyundai,** Ph: 9945774088 **Belthangady: Advaith Hyundai,** Ph: 77609 62819 **Sullia: Advaith Hyundai,** Ph: 7760962813 **Chikmagalur: Rahul Hyundai,** Ph: 7795800038 **Sagara: Rahul Hyundai,** Ph: 7625080180 **Thirthahalli: Rahul Hyundai,** Ph: 7625080183 **Shikaripura: Rahul Hyundai,** Ph: 9108843230, **Kadur: Rahul Hyundai,** Ph: Ph: 6366974514 **Puttur: Kanchana Hyundai,** Ph: 9740873450 **Surathkal: Kanchana Hyundai,** Ph: 9482574530 **Karkala: Kanchana Hyundai,** Ph: 8762464853, **Kundapura: Kanchana Hyundai,** Ph: 9900145948 **Kumta: Kanchana Hyundai,** Ph: 9535855966 **Sirsi: Kanchana Hyundai,** Ph: 9731856300 **Karwara: Kanchana Hyundai,** Ph: 6366770399, **Kadri: Kanchana Hyundai,** Ph: 7353506111, **Hospet: Anika Hyundai,** Ph: 8884484018 **Ballari: Anika Hyundai,** Ph: 8884484020 **Koppal: Anika Hyundai,** Ph: 8884484031

*Terms & Conditions apply. ~Ex-showroom price mentioned is for HX 2 MT (Kappa 1.2 l MPi Petrol) variant. Creative shown is for representation purpose only. Features & specifications shown may vary or not be a part of standard fitment & are subject to change without prior notice. Hyundai Motor India Limited reserves the right to change specifications, colour, equipment and schemes at any time without prior notice. Images shown are for creative representation. The black shade on glasses is due to lighting effect. Size, colour may vary due to lighting and positioning effects. Bluelink functionality is dependent on adequate power supply and uninterrupted network connectivity. The Bluelink system is designed in such a way that it makes vehicle theft difficult if its circuit and battery connection is uninterrupted. Hyundai SmartSense, the Advanced Driver Assistance System is not a substitute for safe and attentive driving. Its effectiveness depends on various factors. Availability of Hyundai SmartSense Features may differ by variants. ##Upto 7 years extended warranty is applicable for all variants. It is applicable for upto 7 years or 1 40 000 kms whichsoever is earlier. *For detailed terms & conditions of warranty refer owner's manual. **For detailed terms & conditions of extended warranty & Shield of Trust/Super/Bodycare kindly visit Hyundai India website, https://www.hyundai.co.in/. Extended warranty, RSA and Shield of Trust Packages are on payable basis. For more details, consult the nearest Hyundai authorized dealer. Hyundai urges you to follow traffic rules-these are meant to keep you safe on roads.
INNOCEAN-056/25 KAN

ಸಿನಿಮಾ ರಂಜನೆ

ಚಂದನ್

ನಟ ಚಂದನ್ ನಟಿಸಿ, ನಿರ್ದೇಶಿಸಿರುವ 'ಫ್ಲರ್ಟ್' ಚಿತ್ರ ನ. 28ರಂದು ತೆರೆ ಕಾಣುತ್ತಿದೆ. ಕಿರುತೆರೆಯಿಂದ ಹಿರಿತೆರೆಗೆ ಬಂದು ಭದ್ರವಾಗಿ ಬೇರೂರುವ ಕನಸು ಕಾಣುತ್ತಿರುವ ಅವರು ತಮ್ಮ ಸಿನಿಮಾ ಕುರಿತು ಮಾತನಾಡಿದ್ದಾರೆ.

'ಪ್ರೇಕ್ಷಕರ ತೀರ್ಪಿಗೆ ಕಾಯುತ್ತಿದ್ದೇನೆ'

• ವಿನಾಯಕ ಕೆ.ಎಸ್.

• ಚಿತ್ರದಲ್ಲಿ ನಿಮ್ಮ ಪಾತ್ರ ಯಾವ ರೀತಿಯದ್ದು?

ಪಾತ್ರದ ಹೆಸರು 'ಕೃಷ್ಣ'. ಜಿಮ್ ಟ್ರೈನರ್ ಆಗಿರುತ್ತೇನೆ. ಈಗಿನ ಕಾಲದ ಯುವಕರನ್ನು ಪ್ರತಿನಿಧಿಸುವ ಪಾತ್ರ. ಹುಡುಗಿಯರನ್ನು ಪಟಾಯಿಸುವ ವ್ಯಕ್ತಿ. ಈಗಾಗಲೇ ಚಿತ್ರದ ಟ್ರೇಲರ್ ಬಿಟ್ಟಿದ್ದೇವೆ. ಆದರೆ ಟ್ರೇಲರ್‌ನಲ್ಲಿ ಮೇಲ್ನೋಟಕ್ಕೆ ಕಾಣುವಂತೆ ಸಿನಿಮಾವಿಲ್ಲ. ನೋಡಿದರೆ ನಕಾರಾತ್ಮಕ ಪಾತ್ರದಂತೆ ಅನ್ನಿಸುತ್ತದೆ. ಆದರೆ ಆ ಪಾತ್ರ ಹಾಗಲ್ಲ ಎಂಬುದು ಸಿನಿಮಾ ನೋಡಿದರೆ ಗೊತ್ತಾಗುತ್ತದೆ. ಸಿನಿಮಾ ಮುಗಿಯುವ ಹೊತ್ತಿಗೆ ನಾಯಕನ ಮೇಲೆ ಒಲುವು ಮೂಡುತ್ತದೆ. ಆ ರೀತಿಯ ಪಾತ್ರ.

• ರಾಮ್‌ಕಾಮ್ ಜಾನರ್‌ನ ಚಿತ್ರವೇ?

ಅಲ್ಲ. ಇದು ಸೈಕಿಕ್, ಥ್ರಿಲ್ಲರ್ ಜಾನರ್ ಚಿತ್ರ. ರಿವರ್ಸ್ ಸ್ಕ್ರೀನ್‌ಪ್ಲೇನಲ್ಲಿ ಮಾಡಿರುವ ಸಿನಿಮಾ. ಕೊನೆ ನಿಮಿಷದವರೆಗೂ ಸಿನಿಮಾ ನೋಡಿಸಿಕೊಂಡು ಹೋಗುತ್ತದೆ. ಚಿತ್ರಕಥೆ ಆಧಾರಿತ ಚಿತ್ರ. ಸಿನಿಮಾ ಬೇರೆ ಏನೋ ಇದೆ ಎಂಬುದು ಊಹೆಗೂ ಸಿಗುವುದಿಲ್ಲ. ನಾಯಕ ಕೃಷ್ಣನೇ ಹೌದಾ ಅಥವಾ ಬೇರೆ ಯಾರಾದರೂ ಇದ್ದಾರಾ ಎಂಬುದನ್ನು ಪ್ರೇಕ್ಷಕರೇ ನಿರ್ಧಾರ ಮಾಡಬೇಕು.

• ನಟನೆಯಿಂದ ನಿರ್ದೇಶನದತ್ತ ತಿರುಗಿದ್ದು ಯಾಕೆ?

ನಾನು ಉದ್ಯಮಕ್ಕೆ ಬಂದಿದ್ದು ನಿರ್ದೇಶಕನಾಗಬೇಕೆಂದು. ನನ್ನ ಲುಕ್, ನಟನೆ ಎಲ್ಲವೂಗಳಿಂದ ನನ್ನನ್ನು ನಟ ಎಂದು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎಂದಿತ್ತು. ನಾನು ಎಂಜಿನಿಯರ್ ಆಗಿದ್ದೆ. ಕೆಲಸ ಬೋರ್ ಬಂದಿತ್ತು. ಕಚೇರಿ ಬದಲಾಗಬಹುದು, ಕೂರುವ ಸ್ಥಳ ಬೇರೆಯಾಗಬಹುದು, ಆದರೆ ಯಾವ ಕಂಪನಿಗೆ ಹೋದರೂ ಮಾಡುವುದು ಅದೇ ಕೆಲಸ ಅನ್ನಿಸುತ್ತಿತ್ತು. ಹೀಗಾಗಿ ಇಂಗ್ಲಿಷ್‌ನ 'ಫ್ರೆಂಡ್ಸ್' ಸರಣಿಯನ್ನು ಕನ್ನಡದಲ್ಲಿ ಮಾಡೋಣ ಎಂದು ಆಗ ಒಂದು ವಾಹಿನಿ ಬಳಿಗೆ ಹೋದೆ. ಆಗ ಅಲ್ಲಿ ಮುಖ್ಯಸ್ಥರಾಗಿದ್ದ ಪರಮೇಶ್ವರ್ ಗುಂಡ್ಕಲ್ 'ರಾಧಾ ಕಲ್ಯಾಣ' ಧಾರಾವಾಹಿಯಲ್ಲಿ ನಟಿಸಲು ಅವಕಾಶ ನೀಡಿದರು. ಅಲ್ಲಿಂದ ಆಕಸ್ಮಿಕವಾಗಿ ನಟನಾಗಿಬಿಟ್ಟೆ. ಆದರೆ ನನ್ನೊಳಗೆ ಇದ್ದಿದ್ದು ನಿರ್ದೇಶನ. ಧಾರಾವಾಹಿ ಲೋಕದಿಂದ ಹೊರಬಂದ ಬಳಿಕ ಕಥೆ ಬರೆಯಲು ಶುರು ಮಾಡಿದೆ. ಈಗ ನಿರ್ದೇಶಕನಾಗುವ ಕಾಲ ಕೂಡಿ ಬಂದಿದೆ.

• ಕೆಲಸ ಮಾಡುತ್ತಿದ್ದಾಗಲೇ ನಟನೆ, ಸಿನಿಮಾದ ಒಡನಾಟವಿತ್ತಾ?

ಖಂಡಿತ ಇಲ್ಲ. ಕೆಲಸ ಬೋರಾಗಿ ಈ ವೃತ್ತಿ ಆಯ್ದುಕೊಂಡಿದ್ದು. ನನಗೆ ನಟನೆಯ ಯಾವ ಹಿನ್ನೆಲೆಯೂ ಇರಲಿಲ್ಲ. ಅಥವಾ ಆಸಕ್ತಿಕರ ಕ್ಷೇತ್ರವೂ ಆಗಿರಲಿಲ್ಲ. ಬುದ್ಧಿ ಬಳಸಿ ಏನಾದರೂ ಮಾಡಬೇಕು ಎಂಬುದು, ಕೆಲಸದ ಮೇಲಿನ ಅಸಹನೆಯೇ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದು.

• ಈತನಕದ ಸಿನಿಪಯಣ ಹೇಗನ್ನಿಸುತ್ತಿದೆ?

ತುಂಬಾ ತೃಪ್ತಿಯಿದೆ. ಸಾಧನೆ ಅಂತ ಏನಾಗಿಲ್ಲ. ಏನೂ ಇಲ್ಲದೆ ಬಂದವನು ಒಂದು ಮಟ್ಟಕ್ಕೆ ಬಂದು ನಿಂತಿದ್ದೇನೆ ಅನ್ನಿಸುತ್ತಿದೆ. ಯಾವುದೇ ಹಿನ್ನೆಲೆ, ಬೆಂಬಲ ಇಲ್ಲದವನು ಕಿರುತೆರೆ ಮತ್ತು ಹಿರಿತೆರೆಯಲ್ಲಿ ಗುರುತಿಸುವ ಮಟ್ಟಕ್ಕೆ ತಲುಪಿದ್ದೇನೆ ಎಂಬ ಖುಷಿಯಿದೆ. ಕಿರುತೆರೆ ಪಯಣ ತುಂಬ ಚೆನ್ನಾಗಿತ್ತು. ನಾನು ಮಾಡಿರುವ ಧಾರಾವಾಹಿಗಳು, ರಿಯಾಲಿಟಿ ಶೋಗಳು ದೊಡ್ಡ ಮಟ್ಟದಲ್ಲಿ ಯಶಸ್ವಿಯಾಗಿವೆ. ಅದೇ ಯಶಸ್ಸನ್ನು ಸಿನಿಮಾದಲ್ಲಿಯೂ ಗಳಿಸಬೇಕೆಂಬ ಆಸೆಯಿದೆ.

• ಈ ಸಿನಿಮಾದಿಂದ ನಿಮ್ಮ ಯಶಸ್ಸಿನ ಕನಸು ನನಸಾಗಬಹುದಾ?

ಥ್ರಿಲ್ ಆಗಿರುವ ಸಿನಿಮಾ. ನಿರೀಕ್ಷೆ ಮಾಡಿದ್ದು ಯಾವುದೂ ಇರುವುದಿಲ್ಲ. ಎರಡು ಮೂರು ಪದರಗಳಲ್ಲಿ ಕಥೆ ಸಾಗುತ್ತದೆ. ಈ ಪಾತ್ರ ಹೀಗೇ ಅಂತ ಮೊದಲಾರ್ಧದಲ್ಲಿ ಅಂದುಕೊಂಡಿದ್ದು ದ್ವಿತೀಯಾರ್ಧದಲ್ಲಿ ಬದಲಾಗಿರುತ್ತದೆ. ಬೇರೆ ಆಯಾಮದಿಂದ ಮತ್ತೆ ಸಿನಿಮಾ ನೋಡಬೇಕು ಎನ್ನಿಸುವಂಥ ಚಿತ್ರಕಥೆ ಎಂದಷ್ಟೇ ಹೇಳಬಲ್ಲೆ. ಹೀಗಾಗಿ ಈ ಸಿನಿಮಾದ ಮೇಲೆ ಬಹಳ ಭರವಸೆಯಿದೆ. ಇವತ್ತು ಕಥೆ ಗಟ್ಟಿಯಾಗಿದ್ದರೆ ಮಾತ್ರ ಪ್ರೇಕ್ಷಕರನ್ನು ಸೆಳೆಯಬಹುದು. ಇಲ್ಲವಾದಲ್ಲಿ ಇಲ್ಲಿ ನೆಲೆ ಕಷ್ಟ. ಅದನ್ನು ಅರ್ಥಮಾಡಿಕೊಂಡು ಈ ಸಿನಿಮಾ ನಿರ್ದೇಶನದ ಜತೆಗೆ ನಿರ್ಮಾಣದ ಸಾಹಸಕ್ಕೂ ಕೈ ಹಾಕಿರುವೆ. ಮಿಕ್ಕಿದ್ದು ಜನರ ತೀರ್ಪು.

• ನಿಮ್ಮ ಮುಂದಿನ ಯೋಜನೆಗಳು...

ಈ ಚಿತ್ರದ ಟ್ರೇಲರ್ ಬಿಡುಗಡೆ ಬಳಿಕ ಕೆಲ ಸಿನಿಮಾ ಆಫರ್‌ಗಳು ಬಂದಿವೆ. ಆದರೆ ಯಾವ ಕಥೆಯನ್ನೂ ಕೇಳಿಲ್ಲ. ಪೂರ್ತಿಯಾಗಿ ಈ ಸಿನಿಮಾದ ಮೇಲೆ ಫೋಕಸ್ ಆಗಿರುವೆ. ಹೀಗಾಗಿ ಮುಂದಿನ ಯೋಜನೆಗಳ ಬಗ್ಗೆ ಹೆಚ್ಚು ಯೋಚನೆ ಮಾಡಿಲ್ಲ.

ತೇಜಸ್ವಿನಿ

ತೇಜಸ್ವಿನಿ ಶರ್ಮ ಮುಖ್ಯಭೂಮಿಕೆಯಲ್ಲಿರುವ 'ಫುಲ್ ಮೀಲ್ಸ್' ಚಿತ್ರ ಇಂದು (ನ.21) ತೆರೆ ಕಾಣುತ್ತಿದೆ. ಚಿತ್ರದಲ್ಲಿನ ತಮ್ಮ ಪಾತ್ರ ಹಾಗೂ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

'10 ಸಿನಿಮಾಗಳು ಸಿಕ್ಕರೆ ದೊಡ್ಡದು'

'ಇದು ರಾಮ್‌ಕಾಮ್ ಚಿತ್ರ. ನಾಯಕ ಲಿಖಿತ್ ಛಾಯಾಗ್ರಾಹಕನಾಗಿ ಕಾಣಿಸಿಕೊಂಡಿದ್ದಾರೆ. ಅವರಿಗೆ ಮೇಕಪ್ ಕಲಾವಿದೆಯಾಗಿ 'ಪ್ರೀತಿ' ಎಂಬ ಪಾತ್ರದಲ್ಲಿ ನಾನು ಕಾಣಿಸಿಕೊಂಡಿರುವೆ. ಸಾಮಾನ್ಯವಾಗಿ ಮೇಕಪ್ ಕಲಾವಿದೆ ಹಾಗೂ ಛಾಯಾಗ್ರಾಹಕನ ನಡುವಿನ ಸಹಭಾಗಿತ್ವ ಹೇಗೆ ಇರುತ್ತದೆಯೋ ಅದೇ ರೀತಿ ಕಥೆ ಸಾಗುತ್ತದೆ. ಆನಂತರ ಒಂದು ವಧುವಿನ ಜತೆ ನಡೆಯುವ ಡ್ರಾಮಾವೇ ಚಿತ್ರ. ಈವರೆಗೆ ನಾನು ಮಾಡಿದ್ದು ಥ್ರಿಲ್ಲರ್, ಗಂಭೀರ ಎನ್ನುವ ರೀತಿಯ ಪಾತ್ರಗಳು. 'ಪ್ರೀತಿ' ರೀತಿಯ ಪಾತ್ರ ಮಾಡಿರಲಿಲ್ಲ' ಎಂದು ಮಾತು ಪ್ರಾರಂಭಿಸಿದರು ತೇಜಸ್ವಿನಿ.

ಕೊಡಗಿನವರಾದ ಇವರು 'ಕೊಡವರ ಸಿಪಾಯಿ', 'ಮೇರಿ', 'ಇಂಗ್ಲಿಷ್ ಮಂಜ' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಪ್ರೀತಿ' ಪಾತ್ರ ಹೆಸರಿಗೆ ತಕ್ಕಂತೆ ಇದೆ. ತನ್ನದೇ ಒಂದು ಪ್ರಪಂಚದಲ್ಲಿ ಇರುವ ಹುಡುಗಿ. ಇಲ್ಲೊಂದು ಪ್ರೇಮಕಥೆ ಬರುತ್ತದೆ. ಈ ಸಿನಿಮಾ ಮೇಲೆ ತುಂಬ ಭರವಸೆಯಿದೆ' ಎನ್ನುತ್ತಾರೆ ಅವರು.

> ಚಿತ್ರದಲ್ಲಿ ನಾಯಕಿಯ ಪಾತ್ರವನ್ನು ಗಟ್ಟಿಯಾಗಿ ಬರೆದರೆ ನಾಯಕಿ ಗುರುತಿಸಿಕೊಳ್ಳುತ್ತಾಳೆ.

'ಕನ್ನಡ ಸಿನಿಮಾಗಳಲ್ಲಿ ಸಾಕಷ್ಟು ಅವಕಾಶ ಸಿಗಬೇಕು ಎಂಬ ಆಸೆಯಿದೆ. ಸುಮಾರು ಜನ ನನ್ನನ್ನು ನೋಡಿ, ಹೆಸರು ನೋಡಿ ಕನ್ನಡ ಬರುವುದಿಲ್ಲ, ಉತ್ತರ ಭಾರತೀಯಳು ಅಂದುಕೊಳ್ಳುತ್ತಾರೆ. ನಾನು ಕೊಡಗಿನವಳು. ಬೆಳೆದಿದ್ದೆಲ್ಲ ಮೈಸೂರಿನಲ್ಲಿ. ಈಗೀಗ ನಾನು ಕನ್ನಡದವಳೇ ಎಂದು ಹಲವರಿಗೆ ಗೊತ್ತಾಗುತ್ತಿದೆ. ನಾನು ಈತನಕ ಮಾಡಿದ ಸಿನಿಮಾಗಳು ಅಂದುಕೊಂಡಷ್ಟು ರೀಚ್ ಆಗಲಿಲ್ಲ. ಆದರೆ ಕಲಾವಿದೆಯಾಗಿ ನಾನು ಆ ಸಿನಿಮಾಗಳಿಗೆ ನ್ಯಾಯ ಒದಗಿಸಿದ್ದೇನೆ ಎಂಬ ತೃಪ್ತಿಯಿದೆ' ಎಂಬ ಅಭಿಪ್ರಾಯ ಅವರದ್ದು.

'ಇವತ್ತು ನಟಿಯರಿಗೆ ಅವಕಾಶಗಳು ಬಹಳ ಸವಾಲಾಗಿವೆ. ಹಿಂದಿನ ನಟಿಯರಂತೆ ಈಗ ಅವಕಾಶಗಳು ಸಿಗುವುದಿಲ್ಲ. ಮಾಲಾಶ್ರೀ, ಶ್ರುತಿ ಅವರಂಥ ನಟಿಯರು ನೂರು ಸಿನಿಮಾಗಳನ್ನು ಮಾಡಿದ್ದಾರೆ. ಈಗಿನ ನಟಿಯರಿಗೆ ಹತ್ತು ಸಿನಿಮಾ ಸಿಕ್ಕರೆ ದೊಡ್ಡದು ಎಂಬಂತಾಗಿದೆ. ಒಬ್ಬಳು ನಾಯಕಿಯಾಗಿ ಕಾಲಿಟ್ಟರೆ, ಮುಂದಿನ ಸಿನಿಮಾಗೆ ಮತ್ತೊಬ್ಬ ನಾಯಕಿ ಬಂದಿರುತ್ತಾರೆ. ಅಷ್ಟು ಸ್ಪರ್ಧೆಯಿದೆ. ಸಿನಿಮಾ ಯಶಸ್ವಿಯಾದರೆ ಮಾತ್ರ ನಾಯಕಿಗೆ ಅವಕಾಶ ಎಂಬಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಈ ಕ್ಷೇತ್ರಕ್ಕೆ ಬಂದ ಮೇಲೆ ಇದರಲ್ಲಿ ಈಜಲೇಬೇಕು. ಜನರನ್ನು ಚಿತ್ರಮಂದಿರಕ್ಕೆ ಕರೆಸುವುದು ದೊಡ್ಡ ಸವಾಲಾಗಿದೆ. ಚಿತ್ರ ಗೆದ್ದರೆ ನಟಿಸಿದವರು ಕೂಡ ಪ್ರೇಕ್ಷಕರನ್ನು ತಲುಪುತ್ತಾರೆ. ಜತೆಗೆ ನಾಯಕಿಯ ಪಾತ್ರವನ್ನು ಗಟ್ಟಿಯಾಗಿ ಬರೆದರೆ ನಾಯಕಿ ಗುರುತಿಸಿಕೊಳ್ಳುತ್ತಾಳೆ. ಉದಾಹರಣೆಗೆ 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾದಲ್ಲಿ ನಾಯಕಿ ಪಾತ್ರ ಎಲ್ಲರಿಗೂ ರೀಚ್ ಆಗಿದೆ. ನಾಯಕನಷ್ಟೇ ನಾಯಕಿಗೂ ಅಲ್ಲಿ ಪ್ರಾಶಸ್ತ್ಯವಿತ್ತು. ಅಂಥ ಪಾತ್ರಗಳು ಸಿಗಬೇಕು. ತಮಿಳಿನಲ್ಲಿ ಒಂದು ಸಿನಿಮಾ ಮಾಡುತ್ತಿರುವೆ. ತೆಲುಗು ಭಾಷೆಯಲ್ಲೊಂದು ಸಿನಿಮಾ ಮಾತುಕತೆ ನಡೆಯುತ್ತಿದೆ. ಕನ್ನಡದಲ್ಲಿ ಒಳ್ಳೆಯ ಸಿನಿಮಾಗಳು ಸಿಗಬೇಕಿದೆ' ಎಂದು ಮಾತಿಗೆ ವಿರಾಮವಿತ್ತರು.

ಧ್ರುವ ಈಗ 'ಕ್ರಿಮಿನಲ್'

ಧ್ರುವ ಸರ್ಜಾ, ರಚಿತಾ ರಾಮ್

ಧ್ರುವ ಸರ್ಜಾ ನಟನೆಯ 'ಕ್ರಿಮಿನಲ್' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಉತ್ತರ ಕರ್ನಾಟಕದ ಸೊಗಡಿನ ಕಥೆ ಹೊಂದಿರುವ ಚಿತ್ರದಲ್ಲಿ ರಚಿತಾ ರಾಮ್ ಧ್ರುವಗೆ ಜೋಡಿಯಾಗಿದ್ದಾರೆ. ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಚಿತ್ರಕ್ಕೆ ರಾಜ್‌ಗುರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಇದು ನನ್ನ ಏಳನೇ ಸಿನಿಮಾ. ಚಿತ್ರದಲ್ಲಿ ಶಿವನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಹಾವೇರಿಯ ಹಾನಗಲ್‌ನಲ್ಲಿ ನಡೆದ ಪ್ರೇಮಕಥೆಯಾಧಾರಿತ ಸಿನಿಮಾವಿದು. ಕಲ್ಟ್ ಲವ್ ಸ್ಟೋರಿ. ಶೇಕಡ 99ರಷ್ಟು ನೈಜಕಥೆಯನ್ನೇ ಚಿತ್ರೀಕರಿಸುತ್ತೇವೆ. ಹೀರೊಯಿಸಂ ಹೆಚ್ಚು ಇರುವುದಿಲ್ಲ. ನೈಜ ಕಥೆಯಲ್ಲಿ ನಾಯಕ ಹೇಗಿದ್ದನೋ, ಅದೇ ರೀತಿ ನಟಿಸಲು ಯತ್ನಿಸುತ್ತೇನೆ. 'ಭರ್ಜರಿ' ಚಿತ್ರದ ಬಳಿಕ ತಾರಮ್ಮ ಮತ್ತೆ ಅಮ್ಮನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಕಥೆ ಕೇಳಿದ ಮೇಲೆ ರಚಿತಾ ಅವರಿಗೆ ಕರೆ ಮಾಡಿದೆ. ಅವರು ಕೂಡಾ ಒಪ್ಪಿಕೊಂಡ್ರು. ತುಂಬ ಭಿನ್ನವಾದ ಕಥೆ. ಇಡೀ ಸಿನಿಮಾ ಉತ್ತರ ಕರ್ನಾಟಕದ ಭಾಷೆಯಲ್ಲೇ ಇರಲಿದೆ. ನಾನು ಮೊದಲ ಸಲ ಉತ್ತರ ಕರ್ನಾಟಕ ಶೈಲಿಯಲ್ಲಿ ಮಾತನಾಡುತ್ತಿದ್ದೇನೆ. ಅದಕ್ಕಾಗಿ ತಯಾರಿ ಮಾಡಿಕೊಳ್ಳುತ್ತಿರುವೆ. ನಿರ್ದೇಶಕರ ವಿಷನ್ ಸ್ಪಷ್ಟವಾಗಿದೆ. ಮುಂದಿನ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಇನ್ನು ಮುಂದೆ ಒಂದು ಸಿನಿಮಾ ಮುಗಿಯುತ್ತಿದ್ದಂತೆ ಇನ್ನೊಂದು ಸಿನಿಮಾದ ಮುಹೂರ್ತ ಮಾಡುತ್ತೇನೆ. ಎಲ್ಲರ ಹಾರೈಕೆ ಇರಲಿ' ಎಂದರು ಧ್ರುವ.

ರಾಜ್‌ಗುರು ಈ ಹಿಂದೆ 'ಕೆರೆಬೇಟೆ' ಚಿತ್ರವನ್ನು ನಿರ್ದೇಶಿಸಿದ್ದರು. 'ನಾಯಕನ ಹೆಸರು ಹೋರಿ ಶಿವ. ಇದೇ ರೀತಿಯ ಓರ್ವ ವ್ಯಕ್ತಿ ಇದ್ದ. ಆತನ ಹೆಸರು ಬದಲಿಸಿದ್ದೇವೆ. ಇದು ಬಯೋಪಿಕ್ ಅಲ್ಲ. ಒಂದು ಪ್ರೇಮಕಥೆ. ಮರ್ಯಾದೆ ಹತ್ಯೆ ಕಥೆಯಲ್ಲ. ಹೋರಿ ಬೆದರಿಸುವ ಪೈಲ್ವಾನ್ ಆಗಿ ಧ್ರುವ ಸರ್ಜಾ ಕಾಣಿಸಿಕೊಳ್ಳುತ್ತಿದ್ದಾರೆ. ರಚಿತಾ ರಾಮ್ ಆತನ ಪ್ರೇಯಸಿಯಾಗಿರುತ್ತಾರೆ. ಇದು ಬೇರೆ ರೀತಿಯ ಕಥೆ' ಎಂದರು ನಿರ್ದೇಶಕ.

ಗೋಲ್ಡ್‌ಮೈನ್ಸ್ ಟೆಲಿಫಿಲ್ಮ್ಸ್‌ನ ಮನೀಶ್ ಶಾ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಏಕಕಾಲಕ್ಕೆ ಐದು ಭಾಷೆಗಳಲ್ಲಿ ಸಿನಿಮಾ ತೆರೆಗೆ ಬರಲಿದೆ. ಚಂದನ್ ಶೆಟ್ಟಿ ಸಂಗೀತ, ವೈದಿ ಛಾಯಾಚಿತ್ರಗ್ರಹಣ, ರವಿವರ್ಮಾ, ವಿಕ್ರಂ ಮೋರ್ ಸಾಹಸ ಸಂಯೋಜನೆ ಚಿತ್ರಕ್ಕಿರಲಿದೆ.

ತೆರೆಯಲ್ಲಿ ಆರು ಸಿನಿಮಾಗಳು

ಸೋನಲ್, ಅಜಯ್ ರಾವ್

ರಾಧೇಯ

ಕೃಷ್ಣ ಅಜಯ್ ರಾವ್ ನಾಯಕನಾಗಿ ಅಭಿನಯಿಸಿರುವ ಚಿತ್ರವಿದು. ಸೋನಲ್ ಮೊಂತೆರೋ ನಾಯಕಿ. ಹಲವಾರು ನಿರ್ದೇಶಕರ ಜತೆ ಕೆಲಸ ಮಾಡಿ ಅನುಭವ ಪಡೆದ ವೇದಗುರು ಮೊದಲ ಸಲ ಆ್ಯಕ್ಷನ್-ಕಟ್ ಹೇಳಿದ್ದಾರೆ. ಕೀರ್ತಿ ಚಾಹ್ನಾ ಸಿನಿಮಾ ಕಾರ್ಖಾನೆ ಮೂಲಕ ನಿರ್ದೇಶಕರೇ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

'ಮಹಾಭಾರತದ ಕರ್ಣನ ಇನ್ನೊಂದು ಹೆಸರು 'ರಾಧೇಯ'. ಕರ್ಣನ ಸಾಕು ತಾಯಿ ರಾಧಾ ಆಗಿದ್ದರಿಂದ, ಕರ್ಣನಿಗೆ ರಾಧೇಯ ಎಂದೂ ಕರೆಯುತ್ತಾರೆ. ಕರ್ಣನಲ್ಲಿದ್ದ ತ್ಯಾಗದ ಗುಣ ನಾಯಕನಿಗಿದೆ. ಹೀಗಾಗಿ ಚಿತ್ರಕ್ಕೆ ಈ ಶೀರ್ಷಿಕೆ ಇಟ್ಟಿದ್ದೇವೆ. ಇದೊಂದು ಲವ್ ಜಾನರ್ ಚಿತ್ರವಾದರೂ, ಕಥೆ ಹೇಳಿಕೊಂಡು ಹೋಗಿರುವ ರೀತಿ ಭಿನ್ನವಾಗಿದೆ. ನಾಯಕ ರಾಧೇಯ ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ?, ಅದಕ್ಕಾಗಿ ಏನೆಲ್ಲ ಕಷ್ಟಗಳನ್ನು ಎದುರಿಸುತ್ತಾನೆ ಎಂಬುದೇ ಕಥೆ. ಜೈಲಿನಲ್ಲಿರುವ ವ್ಯಕ್ತಿಯೊಬ್ಬನ ಸುತ್ತ ಈ ಚಿತ್ರದ ಕಥೆ ಸಾಗಲಿದ್ದು, ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದೆ' ಎಂದಿದ್ದಾರೆ ನಿರ್ದೇಶಕ.

ಸೋನಲ್ ಮೊಂತೆರೋ ಸುದ್ದಿವಾಹಿನಿಯೊಂದರ ಕ್ರೈಮ್ ರಿಪೋರ್ಟರ್ ಆಗಿ ನಟಿಸಿದ್ದಾರೆ. ಈ ಚಿತ್ರಕ್ಕೆ ವಿಯಾನ್ (ಸ್ಯಾಂಡಿ) ಸಂಗೀತ, ರಮ್ಮಿ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಅವರ ಸಂಕಲನವಿದೆ.

ಮಾರುತ

ಎಸ್. ನಾರಾಯಣ್ ನಿರ್ದೇಶಿಸಿ ದುನಿಯಾ ವಿಜಯ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಚಿತ್ರವಿದು. ಕೆ.ಮಂಜು, ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಚಿತ್ರವನ್ನು ನಿರ್ಮಿಸಿದ್ದಾರೆ. ಶ್ರೇಯಸ್ ಮಂಜುಗೆ ಬೃಂದಾ ಆಚಾರ್ಯ ಜೋಡಿಯಾಗಿದ್ದಾರೆ. ಸಾಧು ಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ, ಸುಜಯ್ ಶಾಸ್ತ್ರಿ ಮುಂತಾದವರ ತಾರಾಬಳಗವಿರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ವಿ. ರವಿಚಂದ್ರನ್ ನಟಿಸಿದ್ದಾರೆ.

'ಸಾಮಾಜಿಕ ಜಾಲತಾಣ ಬಳಕೆ ಕುರಿತು ಜಾಗೃತಿ ಮೂಡಿಸುವ ಕಮರ್ಷಿಯಲ್ ಸಿನಿಮಾ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗವಿದೆಯೋ, ಅದಕ್ಕಿಂತ ಹೆಚ್ಚು ಅಪಾಯವಿದೆ. ಈ ನಿಟ್ಟಿನಲ್ಲಿ ಪೋಷಕರು ಯುವಜನತೆಯ ಮೇಲೆ ಹೆಚ್ಚು ಗಮನ ನೀಡಬೇಕು ಎಂಬ ಸಂದೇಶವಿದೆ' ಎಂದು ನಿರ್ದೇಶಕ ಎಸ್ ನಾರಾಯಣ್ ಹೇಳಿದ್ದಾರೆ.

ಎಸ್.ನಾರಾಯಣ್ ಹಾಗೂ ಜೆಸ್ಸಿಗಿಫ್ಟ್ ಸಂಗೀತ ನೀಡಿದ್ದು, ಪಿ.ಕೆ.ಹೆಚ್ ದಾಸ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನವಿದೆ.

ದಿ ಟಾಸ್ಕ್

ರಾಘು ಶಿವಮೊಗ್ಗ ನಿರ್ದೇಶನದ ಚಿತ್ರ ಬಹುತೇಕ ಹೊಸ ಕಲಾವಿದರಿಂದಲೇ ಕೂಡಿದೆ. ಸಾಗರ್ ಹಾಗೂ ಸೂರ್ಯ ಚಿತ್ರದ ನಾಯಕರು.

'ಹಲವು ನೈಜ ಘಟನೆಗಳನ್ನು ಇಟ್ಟುಕೊಂಡು ಈ ಸಿನಿಮಾದ ಕಥೆ ಹೆಣೆಯಲಾಗಿದೆ. ಆ್ಯಕ್ಷನ್ ಮಾಸ್ ಜತೆಗೆ ಮನರಂಜನೀಯ ಕಥೆ ಹೊಂದಿರುವ ಚಿತ್ರವಿದು' ಎಂದಿದ್ದಾರೆ ನಿರ್ದೇಶಕ.

ಲೋಕಪೂಜ್ಯ ಪಿಕ್ಚರ್ ಹೌಸ್ ಮೂಲಕ ವಿಜಯ್ ಕುಮಾರ್ ಮತ್ತು ರಾಮಣ್ಣ ನಿರ್ಮಾಣ ಮಾಡಿದ್ದಾರೆ. ರಾಘು ಶಿವಮೊಗ್ಗ ಅವರು ನಿರ್ದೇಶನದ ಜೊತೆಗೆ ಒಂದು ಮುಖ್ಯ ಪಾತ್ರವನ್ನು ಕೂಡ ನಿರ್ವಹಿಸಿದ್ದಾರೆ. ಅಚ್ಯುತ್ ಕುಮಾರ್, ಶ್ರೀಲಕ್ಷ್ಮೀ, ಗೋಪಾಲಕೃಷ್ಣ ದೇಶಪಾಂಡೆ, ಹರಿಣಿ ಶ್ರೀಕಾಂತ್, ಅರವಿಂದ್ ಕುಪ್ಲಿಕರ್, ಸಂಪತ್ ಮೈತ್ರೇಯ, ಬಿ.ಎಂ.ಗಿರಿರಾಜ್, ಬಾಲಾಜಿ ಮನೋಹರ್ ಮುಂತಾದವರು ಪಾತ್ರವರ್ಗದಲ್ಲಿದ್ದಾರೆ.

ರಕ್ಷಿತ್ ನಾಗ್

Congratulations

ಬ್ರದರ್

ಈ ಚಿತ್ರದಲ್ಲಿ ಯುವ ನಟ ರಕ್ಷಿತ್ ನಾಗ್‌ಗೆ ಸಂಜನಾ ದಾಸ್ ಮತ್ತು ಅನುಷಾ ಜೋಡಿಯಾಗಿದ್ದಾರೆ. ಪ್ರತಾಪ್ ಗಂಧರ್ವ ನಿರ್ದೇಶನದ ಚಿತ್ರಕ್ಕೆ ಪ್ರಶಾಂತ್ ಕಲ್ಲೂರ್ ಬಂಡವಾಳ ಹೂಡಿದ್ದಾರೆ. ನಿರ್ದೇಶಕ ಹರಿ ಸಂತೋಷ್ ಕಥೆ ಬರೆದು ಕ್ರಿಯೇಟಿವ್ ಹೆಡ್ ಆಗಿ ಕಾರ್ಯ ನಿರ್ವಹಿಸಿರುವ ಚಿತ್ರವಿದು.

ಎಂ.ಬಿ.ಧ್ರುವ್, ಸೂರಜ್ ಜೋಯಿಸ್ ಸಂಗೀತ, ಗುರುಪ್ರಸಾದ್ ಎಂ.ಜಿ. ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ.

ಗಿಡುಗ ಚಿತ್ರ ಕೂಡ ಈ ವಾರ ತೆರೆ ಕಾಣುತ್ತಿದೆ.

ಖುಷಿ ರವಿ

ಫುಲ್ ಮೀಲ್ಸ್

ಲಿಖಿತ್ ಶೆಟ್ಟಿ ನಿರ್ಮಾಣ ಹಾಗೂ ನಟನೆಯ ಚಿತ್ರವಿದು. ಇವರು ಈ ಹಿಂದೆ 'ಫ್ಯಾಮಿಲಿ ಪ್ಯಾಕ್', 'ಸಂಕಷ್ಟಕರ ಗಣಪತಿ' ಚಿತ್ರಗಳಲ್ಲಿ ನಟಿಸಿದ್ದರು. ಖುಷಿ ರವಿ, ತೇಜಸ್ವಿನಿ ಶರ್ಮ ನಾಯಕಿಯರಾಗಿ ನಟಿಸಿರುವ ಈ ಚಿತ್ರವನ್ನು ಎನ್. ವಿನಾಯಕ ನಿರ್ದೇಶಿಸಿದ್ದಾರೆ.

'ಇದೊಂದು ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಚಿತ್ರ. ಲಿಖಿತ್ ಶೆಟ್ಟಿ ವೆಡ್ಡಿಂಗ್ ಫೋಟೋಗ್ರಾಫರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕಥೆ ಕೂಡ ಫೋಟೋಗ್ರಾಫರ್ ಸುತ್ತ ಸಾಗುತ್ತದೆ' ಎಂದಿದ್ದಾರೆ ನಿರ್ದೇಶಕ.

'ನಿರ್ದೇಶಕರು ಕಥೆ ಹೇಳಲು ಬಂದಾಗ, ನಾನು ಮೊದಲು ಸಂಗೀತ ನಿರ್ದೇಶಕ ಗುರುಕಿರಣ್ ಅವರಿಗೆ ಕಥೆ ಒಪ್ಪಿಸಲು ಹೇಳಿದೆ. ಗುರುಕಿರಣ್ ಅವರು ಕಥೆ ಮೆಚ್ಚಿಕೊಂಡು, ಸಂಗೀತವನ್ನು ನೀಡಲು ಒಪ್ಪಿಕೊಂಡರು. ನಾನೇ ಈ ಚಿತ್ರದ ನಿರ್ಮಾಣಕ್ಕೆ ಮುಂದಾದೆ. ವಿಜಯ್ ಚಂಡೂರ್, ಸೂರಜ್ ಲೋಕ್ರೆ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ರವಿಶಂಕರ್ ಗೌಡ, ಕೋಟೆ ಪ್ರಭಾಕರ್ ಹೀಗೆ ಅನೇಕ ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ' ಎಂದು ಲಿಖಿತ್ ಶೆಟ್ಟಿ ತಿಳಿಸಿದ್ದಾರೆ. ಮನೋಹರ್ ಜೋಶಿ ಛಾಯಾಚಿತ್ರಗ್ರಹಣ ಹಾಗೂ ದೀಪು ಎಸ್. ಕುಮಾರ್ ಸಂಕಲನ ಈ ಚಿತ್ರಕ್ಕಿದೆ.

ⓕprajavani.net ⓘⓧⓨprajavani | ಶುಕ್ರವಾರ, ನವೆಂಬರ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 321 | ಪುಟ 16 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಘೂಮರ್ ಉತ್ಸವ ರಾಜಸ್ಥಾನದ ಜೈಪುರದಲ್ಲಿ ಗುರುವಾರ ನಡೆದ 'ಘೂಮರ್ ಉತ್ಸವ–2025'ರಲ್ಲಿ ಭಾಗವಹಿಸಿದ್ದ ಯುವತಿ

ಪ್ರಣವಿಗೆ ಕಿರೀಟ ಮೈಸೂರಿನ ಯುವ ಗಾಲ್ಫರ್ ಪ್ರಣವಿ ಅರಸ್ ಅವರು ಮುಂಬೈನಲ್ಲಿ ಗುರುವಾರ ಮುಕ್ತಾಯಗೊಂಡ ಐಜಿಪಿಎಲ್ ಟೂರ್‌ನ ಪ್ರಶಸ್ತಿಯನ್ನು ಮುಡಿಗೇಡಿಸಿಕೊಂಡರು

ಸೆನ್ಸೆಕ್ಸ್ 85,632 | ನಿಫ್ಟಿ 26,192 | $/₹ 88.68 | ಚಿನ್ನ (Std. 10g) ₹1,28,430 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,66,860 (ಬೆಂಗಳೂರು)

ಸಿ.ಎಂ ಮನೆಗೂ ಸಿಗದ ವಿದ್ಯುತ್ ಸಂಪರ್ಕ

● ಎ.ಎಂ.ಸುರೇಶ

ಮುಖ್ಯಾಂಶಗಳು

- ಎಂಟು ತಿಂಗಳಿಂದ ಕಂಗಾಲಾಗಿರುವ ಗ್ರಾಹಕರು
- ಇಎಂಐ ಕಟ್ಟಲು ಪರದಾಟ
- ಯಾವಾಗ ಸಂಪರ್ಕ ಸಿಗಲಿದೆ ಎಂಬುದು ಅಧಿಕಾರಿಗಳಿಗೂ ಗೊತ್ತಿಲ್ಲ

ಬೆಂಗಳೂರು: ಮೈಸೂರಿನ ಕುವೆಂಪು ನಗರದಲ್ಲಿ ನಿರ್ಮಿಸಿರುವ ಹೊಸ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೇ ಇನ್ನೂ ಸಾಧ್ಯವಾಗಿಲ್ಲ...!

ಹೊಸದಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವ ಸಂಬಂಧ ಉಂಟಾಗಿರುವ ಕಗ್ಗಂಟಿಗೆ ಪರಿಹಾರ ಸಿಗದೇ ಇರುವುದು ಇದಕ್ಕೆ ಕಾರಣವಾಗಿದೆ.

'ಸಿದ್ದರಾಮಯ್ಯ ಅವರು 80X120 ಅಡಿ ಅಳತೆಯ ನಿವೇಶನದಲ್ಲಿ ಮೂರು ಅಂತಸ್ತಿನ ಮನೆ ನಿರ್ಮಿಸಿದ್ದಾರೆ. ಆರು ತಿಂಗಳ ಹಿಂದೆಯೇ 94 ಕಿಲೊವಾಟ್ ವಿದ್ಯುತ್ ಮಂಜೂರಾಗಿದೆ. ಆದರೆ, ನ್ಯಾಯಾಲಯವು ನಕ್ಷೆ ಮಂಜೂರಾತಿ, ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಕಡ್ಡಾಯ ಮಾಡಿರುವ ಕಾರಣ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗಿಲ್ಲ' ಎಂದು ಮೂಲಗಳು ಖಚಿತಪಡಿಸಿವೆ.

'ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಈ ವರ್ಷದ ಏಪ್ರಿಲ್‌ನಿಂದಲೇ ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ನೀಡಲು ನಕ್ಷೆ ಮಂಜೂರಾತಿ, ಒಸಿಯನ್ನು ಕಡ್ಡಾಯಗೊಳಿಸಲಾಗಿದೆ. ಒ.ಸಿ ಇಲ್ಲದೆ ಇರುವುದರಿಂದ ಸಿದ್ದರಾಮಯ್ಯ ಅವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ' ಎಂದು ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಸಂಘದ (ಕೆಎಸ್‌ಎಲ್‌ಇಸಿಎ) ಅಧ್ಯಕ್ಷ ರಮೇಶ್ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು. ಮನೆ ನಿರ್ಮಾಣ ಕಾಮಗಾರಿಯನ್ನು ಈಚೆಗೆ ವೀಕ್ಷಿಸಿದ್ದ ಸಿದ್ದರಾಮಯ್ಯ ಅವರು, ಡಿಸೆಂಬರ್‌ನಲ್ಲಿ 'ಗೃಹ ಪ್ರವೇಶ' ಮಾಡುವುದಾಗಿ ಹೇಳಿದ್ದರು.

ಹಗ್ಗಜಗ್ಗಾಟ: ನಿವೇಶನ ಅಥವಾ ಕಟ್ಟಡದ ವಿಸ್ತೀರ್ಣವನ್ನು ಪರಿಗಣಿಸದೆ, ಈಗಾಗಲೇ ನಿರ್ಮಾಣವಾಗಿರುವ ಎಲ್ಲ ಕಟ್ಟಡಗಳಿಗೆ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಷರತ್ತು ವಿಧಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಇಂಧನ ಇಲಾಖೆ ಒಲವು ತೋರಿದೆ.

'ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಬಂಧಪಟ್ಟ ಇಲಾಖೆಯಿಂದ ನಕ್ಷೆಗೆ ಅನುಮೋದನೆ ಪಡೆಯದೆ ಕಟ್ಟಡಗಳನ್ನು ನಿರ್ಮಿಸಿರುವ, ಒ.ಸಿ ಇಲ್ಲದೆ ಇದ್ದರೂ, ವಿದ್ಯುತ್ ಸಂಪರ್ಕ ಕೋರಿ ಈಗಾಗಲೇ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ವಿದ್ಯುತ್ ಸಂಪರ್ಕ ನೀಡಬೇಕು ಎಂಬ ಸಲಹೆಯನ್ನು ಇಂಧನ ಇಲಾಖೆ ಅಧಿಕಾರಿಗಳು ನೀಡಿದ್ದಾರೆ. ಆದರೆ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಇದಕ್ಕೆ ಒಪ್ಪುತ್ತಿಲ್ಲ' ಎನ್ನಲಾಗಿದೆ.

'ಈ ರೀತಿ ಮಾಡುವುದರಿಂದ ಸುಮಾರು ಒಂದು ಲಕ್ಷ ಗ್ರಾಹಕರಿಗೆ ಅನುಕೂಲವಾಗಲಿದೆ. ದಂಡ ಹಾಕಿ, ಸಂಪರ್ಕ ನೀಡಬಹುದು ಎಂದು ಸಲಹೆ ನೀಡಲಾಗಿದೆ. ಆದರೆ, ಸಂಪುಟ ಸಭೆಯ ಮುಂದೆ ಈ ವಿಷಯ ಬಂದಾಗ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಹೀಗಾಗಿ ಎಂಟು ತಿಂಗಳಾದರೂ, ಇದಕ್ಕೆ ಪರಿಹಾರ ಸಿಕ್ಕಿಲ್ಲ, ಯಾವಾಗ ಸಮಸ್ಯೆ ಬಗೆಯುತ್ತದೆ ಎಂಬುದೂ ಗೊತ್ತಿಲ್ಲ' ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹೆಚ್ಚು ಜನರಿಗೆ ಅನುಕೂಲವಿಲ್ಲ: 1,200 ಚದರಡಿ ಅಥವಾ ಅದಕ್ಕಿಂತ ಕಡಿಮೆ ನಿವೇಶನದಲ್ಲಿ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ + 3 ಅಂತಸ್ತುವರೆಗಿನ ವಸತಿ ಕಟ್ಟಡಗಳಿಗೆ, ನಕ್ಷೆ ಮಂಜೂರಾತಿ, ಒ.ಸಿ ಅಗತ್ಯವಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

▶11

ತಾತ್ಕಾಲಿಕ ಸಂಪರ್ಕವೇ ಗತಿ

ಕಾಯಂ ಸಂಪರ್ಕ ನೀಡದ ಕಾರಣ, ಬಹುತೇಕ ಗ್ರಾಹಕರು ತಾತ್ಕಾಲಿಕ ಸಂಪರ್ಕವನ್ನೇ ಅವಲಂಬಿಸಿದ್ದಾರೆ. ನಿರ್ಮಾಣ ಮುಗಿದಿದ್ದರೂ ಹಲವರು ತಾತ್ಕಾಲಿಕ ಸಂಪರ್ಕ ಮುಂದುವರಿಸಿದ್ದಾರೆ. ಅಧಿಕಾರಿಗಳು ಕೂಡ ಇದಕ್ಕೆ ಆಕ್ಷೇಪ ಮಾಡುತ್ತಿಲ್ಲ. ಕಾಯಂ ಸಂಪರ್ಕ ನೀಡದೆ ಇರುವುದರಿಂದ, ಅವರೂ ಸಹಕರಿಸಿಕೊಂಡು ಹೋಗುತ್ತಿದ್ದಾರೆ.

'ಈಗ ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿರುವವರಿಗೆ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ + 3 ಅಂತಸ್ತು ವರೆಗೆ ಮಾತ್ರ ನಿರ್ಮಿಸಬೇಕು ಎಂಬ ಷರತ್ತಿನ ಮೇಲೆ ತಾತ್ಕಾಲಿಕ ಸಂಪರ್ಕಗಳನ್ನು ನೀಡಲಾಗುತ್ತಿದೆ. ಹೀಗಾಗಿ ಒಂದು ತಿಂಗಳಿಂದ ಈಚೆಗೆ ನಿರ್ಮಾಣ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ಗರಿಗೆದರಿವೆ' ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.

ಮಸೂದೆಗೆ ಅಂಕಿತ: ಕಾಲಮಿತಿ ಸಲ್ಲ

ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು, ರಾಷ್ಟ್ರಪತಿ ಒಪ್ಪಿಗೆಗೆ ಸಂಬಂಧಿಸಿ 'ಸುಪ್ರೀಂ' ಮಹತ್ವದ ತೀರ್ಪು

ನವದೆಹಲಿ(ಪಿಟಿಐ): 'ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಅವರಿಗೆ ಕಾಲಮಿತಿ ನಿಗದಿ ಮಾಡುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ.

ಮಸೂದೆಗಳಿಗೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಅವರಿಂದ ಅಂಕಿತ ಲಭಿಸಿದೆ ಎಂಬುದಾಗಿ ಪರಿಭಾವಿಸುವುದನ್ನು (ಡೀಮ್ಡ್) ಕೂಡ ಸುಪ್ರೀಂ ಕೋರ್ಟ್ ನಿರ್ಬಂಧಿಸಿದೆ.

ಅದೇ ರೀತಿ, ಮಸೂದೆಗಳಿಗೆ ಸಂಬಂಧಿಸಿದಂತೆ ಸಂವಿಧಾನದ 200ನೇ ವಿಧಿಯಡಿ ನೀಡಲಾಗಿರುವ 'ಮೂರು ಆಯ್ಕೆ'ಗಳ ಅಧಿಕಾರ ಮೀರಿ, ರಾಜ್ಯಪಾಲರು ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಸುಮ್ಮನೆ ಕೂರುವಂತಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ಸದಸ್ಯರಿದ್ದ ಸಂವಿಧಾನ ಪೀಠವು ತಾನು ಪ್ರಕಟಿಸಿರುವ ಸರ್ವಾನುಮತದ ತೀರ್ಪಿನಲ್ಲಿ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮನಾಥ್, ಪಿ.ಎಸ್.ನರಸಿಂಹ ಹಾಗೂ ಎ.ಎಸ್.ಚಂದೂರ್ಕರ್ ಈ ಪೀಠದಲ್ಲಿ ಇದ್ದರು.

'ಮಸೂದೆಗಳಿಗೆ ಸಂಬಂಧಿಸಿದಂತೆ ತೀರ್ಮಾನ ಮಾಡದೆ ಸುಮ್ಮನೆ ಕೂರಲು ರಾಜ್ಯಪಾಲರಿಗೆ ಅನಿಯಂತ್ರಿತ ಅಧಿಕಾರ ಇದೆ ಎಂದು ನಾವು ಭಾವಿಸುವುದಿಲ್ಲ. ಹೊಂದಾಣಿಕೆಗೆ ಅವಕಾಶ ಕಲ್ಪಿಸಿರುವ ಉದಾತ್ತ ಸಂವಿಧಾನ ನಮ್ಮದು. ಭಾರತದಂತಹ ಪ್ರಜಾಸತ್ತಾತ್ಮಕ ದೇಶದಲ್ಲಿ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಮಾಡುವುದು ಕೂಡ ಸಂವಿಧಾನದ ಈ ಮೌಲ್ಯಕ್ಕೆ ವಿರುದ್ಧವಾದುದು' ಎಂದು ತೀರ್ಪನ್ನು ಓದಿದ ಮುಖ್ಯನ್ಯಾಯಮೂರ್ತಿ ಗವಾಯಿ ಹೇಳಿದರು.

▶11

ಪೀಠ ಹೇಳಿದ್ದು

1 ಸಂವಿಧಾನದ 200ನೇ ವಿಧಿಯಡಿ ರಾಜ್ಯಪಾಲರು ಮೂರು ಆಯ್ಕೆಗಳನ್ನು ಹೊಂದಿದ್ದಾರೆ. ಮೊದಲನೆಯದು ಮಸೂದೆಗಳಿಗೆ ಅಂಕಿತ ಹಾಕುವುದು. ಎರಡನೆಯದು ಮಸೂದೆಗಳನ್ನು ರಾಷ್ಟ್ರಪತಿಗೆ ಶಿಫಾರಸು ಮಾಡುವುದು. ಮಸೂದೆಗಳಿಗೆ ಅಂಕಿತ ಹಾಕುವುದನ್ನು ತಡೆದು, ತಮ್ಮ ಟಿಪ್ಪಣಿಯೊಂದಿಗೆ ಅವುಗಳನ್ನು ಪುನಃ ವಿಧಾನಸಭೆಗೆ ಮರಳಿಸುವುದು ಮೂರನೇ ಆಯ್ಕೆ

2 ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ, ಈ ಮೂರು ಸಾಂವಿಧಾನಿಕ ಆಯ್ಕೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವ ವಿವೇಚನಾಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ

3 ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರಿಗೆ ಸಾಂವಿಧಾನಿಕವಾಗಿ ಕಾಲಮಿತಿ ನಿಗದಿ ಮಾಡಲಾಗಿಲ್ಲ. ಸಂವಿಧಾನದತ್ತವಾಗಿ ತಮಗಿರುವ ಅಧಿಕಾರವನ್ನು ಅವರು ಚಲಾಯಿಸಬಹುದು. ಇಂತಹ ಸಂದರ್ಭದಲ್ಲಿ, ಸಂವಿಧಾನದ 200ನೇ ವಿಧಿಯಡಿ ತಮಗಿರುವ ಅಧಿಕಾರವನ್ನು ಚಲಾಯಿಸುವಂತೆ ನ್ಯಾಯಾಂಗವು ಅವರಿಗೆ ಕಾಲಮಿತಿ ನಿಗದಿ ಮಾಡುವುದು ಸಮಂಜಸವಾಗದು

4 ಸಂವಿಧಾನದ 142ನೇ ವಿಧಿಯಡಿ ರಾಷ್ಟ್ರಪತಿ/ರಾಜ್ಯಪಾಲರಿಗೆ ನೀಡಲಾಗಿರುವ ಸಾಂವಿಧಾನಿಕ ಅಧಿಕಾರಗಳು ಹಾಗೂ ಅವರು ಹೊರಡಿಸಬಹುದಾದ ಆದೇಶಗಳಿಗೆ ಯಾವುದೇ ರೀತಿಯ ಪರ್ಯಾಯ ಇಲ್ಲ. ಹೀಗಾಗಿ, 'ಮಸೂದೆಗಳಿಗೆ ಅಂಕಿತ ದೊರೆತಿದೆ ಎಂದು ಭಾವಿಸಬೇಕು' ಎಂಬ ಪರಿಕಲ್ಪನೆಗೆ ಈ ವಿಧಿಯು ಅವಕಾಶ ನೀಡುವುದಿಲ್ಲ

5 200ನೇ ವಿಧಿಯಡಿ ರಾಜ್ಯಪಾಲರು ನಿರ್ವಹಿಸುವ ಕಾರ್ಯ ಕುರಿತು ನ್ಯಾಯಾಲಯ ವಿಚಾರಣೆ ನಡೆಸುವುದು ಸಮಂಜಸವಲ್ಲ. ಆದರೆ, ಅಧಿಕಾರ ಬಳಸುವ ವಿಚಾರದಲ್ಲಿ ವಿಳಂಬ, ವಿವರಿಸಲಾಗದ ಮತ್ತು ಅನಿರ್ದಿಷ್ಟವಾದ ನಿಷ್ಕ್ರಿಯತೆ ಕಂಡುಬಂದ ಸಂದರ್ಭಗಳಲ್ಲಿ, ಸೂಕ್ತ ಕಾಲಮಿತಿಯೊಳಗೆ ಸಂವಿಧಾನದಡಿ ಕ್ರಮ ಕೈಗೊಳ್ಳುವಂತೆ ಅವರಿಗೆ ನ್ಯಾಯಾಲಯವು ಸೀಮಿತ ಆದೇಶ ನೀಡಬಹುದು. ಇಂತಹ ಸಂದರ್ಭದಲ್ಲಿ ರಾಜ್ಯಪಾಲರು ಕೈಗೊಂಡ ನಿರ್ಣಯ ಕುರಿತು ನ್ಯಾಯಾಲಯ ಯಾವುದೇ ಅಭಿಪ್ರಾಯ ಹೇಳುವಂತಿಲ್ಲ

ಉತ್ತಮ ತೀರ್ಪು: ಇಳಂಗೋವನ್

ಚೆನ್ನೈ: 'ಮಸೂದೆಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಉತ್ತಮ ತೀರ್ಪನ್ನೇ ನೀಡಿದೆ. ರಾಜ್ಯಪಾಲರ ಅಧಿಕಾರಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಈ ತೀರ್ಪು ಉಪಯುಕ್ತವಾಗಲಿದೆ' ಎಂದು ಡಿಎಂಕೆ ಗುರುವಾರ ಹೇಳಿದೆ. 'ತಮಿಳುನಾಡು ವಿಧಾನಸಭೆಯು ಅಂಗೀಕರಿಸಿದ ಮಸೂದೆ/ನಿರ್ಣಯವನ್ನು ರಾಜ್ಯಪಾಲರು ಒಪ್ಪಬೇಕು' ಎಂದು ಪಕ್ಷದ ಹಿರಿಯ ನಾಯಕ ಟಿ.ಕೆ.ಎಸ್. ಇಳಂಗೋವನ್ ಹೇಳಿದರು.

▶11

'ಅಧಿಕಾರ ಭವಿಷ್ಯದಲ್ಲೂ ಭದ್ರ'

ಜನರು ಅಪೇಕ್ಷಿಸುವವರೆಗೆ ಬಜೆಟ್ ಮಂಡಿಸುವೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ನನ್ನ ಅಧಿಕಾರ ಈಗಲೂ ಮತ್ತು ಭವಿಷ್ಯದಲ್ಲಿಯೂ ಭದ್ರವಾಗಿರುತ್ತದೆ. ಜನರು ಎಲ್ಲಿಯವರೆಗೆ ಅಪೇಕ್ಷಿಸುವರೋ, ಅಲ್ಲಿಯವರೆಗೆ ನಾನೇ ಬಜೆಟ್ ಮಂಡಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಇಲ್ಲಿ ಗುರುವಾರ ಮಾತನಾಡಿದ ಅವರು, 'ಚಾಮರಾಜ-ನಗರಕ್ಕೆ ಭೇಟಿ ನೀಡಿದರೆ ಮಂತ್ರಿ ಸ್ಥಾನ ಹೋಗುತ್ತದೆ ಎಂಬ ಮೌಢ್ಯ ಇತ್ತು. ಇಲ್ಲಿಗೆ 20ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದು ಬಂದಾಗಲೆಲ್ಲ ಮುಖ್ಯಮಂತ್ರಿ ಕುರ್ಚಿ ಗಟ್ಟಿಯಾಗಿದೆ. ಜೊತೆಗೆ ಪಕ್ಷದ ಅಧಿಕಾರವೂ ಗಟ್ಟಿಯಾಗುತ್ತಲೇ ಇದೆ' ಎಂದು ಪ್ರತಿಪಾದಿಸಿದರು.

'ಎರಡೂವರೆ ವರ್ಷದ ಬಳಿಕ ಸಂಪುಟ ಪುನರ್‌ರಚನೆ ಮಾಡಬಹುದು ಎಂದು ಹೈಕಮಾಂಡ್ ಹೇಳಿದ ನಂತರವಷ್ಟೇ, ಮುಖ್ಯಮಂತ್ರಿ ಬದಲಾವಣೆಯ ವಿಷಯ ಮುನ್ನೆಲೆಗೆ ಬಂದಿದೆ' ಎಂದೂ ಅವರು ಹೇಳಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ಬಗ್ಗೆ ಡಿ.ಕೆ. ಸುರೇಶ್ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, 'ಅದಕ್ಕೆಲ್ಲ ಪ್ರತಿಕ್ರಿಯೆ ನೀಡುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಐದು ವರ್ಷ ಆಡಳಿತ ನಡೆಸಲು ಜನಾದೇಶ ಇದೆ. ಜನರ ಆಸೆಯಂತೆ ಐದು ವರ್ಷ ಸರ್ಕಾರ ನಡೆಸಿ ನಂತರವೂ ಪುನಃ ಕಾಂಗ್ರೆಸ್ ಪಕ್ಷವೇ ಆಯ್ಕೆಯಾಗಿ ಬರಲಿದೆ' ಎಂದರು.

'2028ರಲ್ಲಿಯೂ ನಿಮ್ಮ ನೇತೃತ್ವದಲ್ಲಿಯೇ ಚುನಾವಣೆ ನಡೆಯಲಿದೆಯೇ' ಎಂಬುದಕ್ಕೆ 'ಈ ಬಗ್ಗೆ ಭವಿಷ್ಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಜನರು ಅಪೇಕ್ಷಿಸುವವರೆಗೆ ನಾನೇ ಬಜೆಟ್ ಮಂಡಿಸುತ್ತೇನೆ' ಎಂದು ಪ್ರತಿಕ್ರಿಯಿಸಿದರು. 'ಸಂಪುಟ ಪುನಾರಚನೆ ವಿಚಾರದಲ್ಲಿ ಗೊಂದಲ ಇಲ್ಲ. ಈ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ತಿಳಿಸಲಿದ್ದಾರೆ. ಸಂಪುಟದಲ್ಲಿದ್ದ 34 ಸಚಿವರ ಸ್ಥಾನಗಳ ಪೈಕಿ ಕೆ.ಎನ್.ರಾಜಣ್ಣ ಹಾಗೂ ಬಿ.ನಾಗೇಂದ್ರ ರಾಜೀನಾಮೆಯಿಂದ ತೆರವಾಗಿರುವ ಎರಡು ಸ್ಥಾನಗಳನ್ನು ಪುನಾರಚನೆ ವೇಳೆ ಭರ್ತಿ ಮಾಡಲಾಗುವುದು' ಎಂದರು.

▶11

'ಸಿ.ಎಂ ಆಗಿರೋಲ್ಲ ಎಂದು ಹೇಳಿಲ್ಲ'

ಬೆಂಗಳೂರು: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎಂದು ಯಾರೂ ಹೇಳಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟನೆ ನೀಡಿದರು.

ಸದಾಶಿವನಗರದ ನಿವಾಸದ ಬಳಿ ಗುರುವಾರ ರಾತ್ರಿ ಸುದ್ದಿಗಾರರ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಉತ್ತರಿಸಿದರು.

ದೆಹಲಿ ಪ್ರವಾಸ: ಚರ್ಚೆಗೆ ಗ್ರಾಸ

ನವದೆಹಲಿ: ಅಧಿಕಾರ ಹಸ್ತಾಂತರ ಹಾಗೂ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಕಾಂಗ್ರೆಸ್ ಪಾಳಯದಲ್ಲಿ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ, ಸಚಿವರಿಬ್ಬರು ಹಾಗೂ ಕೆಲವು ಶಾಸಕರ ದೆಹಲಿ ಪ್ರವಾಸ ಗುರುವಾರ ಚರ್ಚೆಗೆ ಗ್ರಾಸವಾಗಿದೆ.

ವಿವರ ಪುಟ ▶11

'ಹಗಲು' ದರೋಡೆ ಮೂವರು ವಶ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಮಹಿಳೆ ಸೇರಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಸುದ್ದಿ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ

ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಸೌಲಭ್ಯ ಕಲ್ಪಿಸಲು ಅನುದಾನ

ಮುಸ್ಲಿಂ 'ಭವನ'ಗಳಿಗೆ ₹67 ಕೋಟಿ

● ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು

- ಮಸೀದಿ, ವಕ್ಫ್ ಜಾಗದಲ್ಲಿ ಭವನ ನಿರ್ಮಾಣ
- 7 ಜಿಲ್ಲಾಕೇಂದ್ರಗಳಿಗೆ ತಲಾ ₹ 2 ಕೋಟಿ
- ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಸಂಸ್ಥೆಗಳ ಹೆಸರು ಇಲ್ಲ

ಬೆಂಗಳೂರು: ಅಲ್ಪಸಂಖ್ಯಾತರ ಸಮು-ದಾಯದವರಿಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆ ಹಮ್ಮಿಕೊಳ್ಳಲು 'ಬಹೂಪಯೋಗಿ ಭವನ'ಗಳನ್ನು ನಿರ್ಮಿಸಲು ಮುಸ್ಲಿಂ ಸಮುದಾಯದ 60 ಸಂಸ್ಥೆಗಳಿಗೆ ಒಟ್ಟು ₹67 ಕೋಟಿ ಅನುದಾನವನ್ನು ರಾಜ್ಯ ಸರ್ಕಾರ ಮಂಜೂರು ಮಾಡಿದೆ.

ಭವನ ನಿರ್ಮಿಸಲು ಪ್ರಸ್ತಾಪಿಸಿರುವ ಬಹುತೇಕ ಸಂಸ್ಥೆಗಳು ಮಸೀದಿಗಳಾಗಿವೆ. ಇನ್ನೂ ಕೆಲವು ವಕ್ಫ್ ಸಂಸ್ಥೆಯ ಜಾಗಗಳಲ್ಲಿ ತಲೆ ಎತ್ತಲಿವೆ. ಅಲ್ಪಸಂಖ್ಯಾತರ ಪಟ್ಟಿಯಲ್ಲಿರುವ ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಸಮುದಾಯಗಳಿಗೆ ಸೇರಿದ ಸಂಸ್ಥೆಗಳ ಹೆಸರು ಅನುದಾನ ಮಂಜೂರಾಗಿರುವ ಪಟ್ಟಿಯಲ್ಲಿ ಇಲ್ಲ.

ಜಿಲ್ಲಾ ಮಟ್ಟದಲ್ಲಿ ತಲಾ ₹2 ಕೋಟಿ ಹಾಗೂ ತಾಲ್ಲೂಕು ಮಟ್ಟದಲ್ಲಿ ತಲಾ ₹1 ಕೋಟಿ ವೆಚ್ಚದಲ್ಲಿ ಬಹೂಪಯೋಗಿ ಭವನ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ.

▶11

ಯಾವೆಲ್ಲ ಸಂಸ್ಥೆಗಳಿಗೆ ₹2 ಕೋಟಿ ಅನುದಾನ

ಬಳ್ಳಾರಿ ನಗರದಲ್ಲಿ ವಕ್ಫ್ ಜಾಗ, ಹುಬ್ಬಳ್ಳಿ–ಧಾರವಾಡದ ಇಸ್ಲಾಂಪುರ ಬೀದಿಯಲ್ಲಿರುವ ವಕ್ಫ್ ಜಾಗ, ಕಲಬುರಗಿಯ ಹಜರತ್ ಸಯ್ಯದ್ ರುಕ್ಮೊದ್ದೀನ್ ತೋಲಾ ದರ್ಗಾ ಆವರಣ, ಕೊಪ್ಪಳ ನಗರದ ಹಮಾಲರ ಕಾಲೊನಿಯ ಶಾದಿ ಮಹಲ್ (ಸರ್ಕಾರಿ ಜಾಗ), ಮೈಸೂರು ನಗರದ ವಕ್ಫ್ ಜಾಗ, ಶಿವಮೊಗ್ಗ ನಗರದ ಗಾಂಧಿ ಬಜಾರ್ ನಲ್ಲಿರುವ ಮರ್ಕಜಿ ಸುನ್ನಿ ಜಾಮಿಯಾ ಮಸೀದಿ ಮತ್ತು ಹೊಸಪೇಟೆ ನಗರದ ವಕ್ಫ್ ಜಾಗದಲ್ಲಿ ತಲಾ ₹2 ಕೋಟಿ ವೆಚ್ಚದಲ್ಲಿ ಬಹೂಪಯೋಗಿ ಭವನ ನಿರ್ಮಿಸಲು ಸರ್ಕಾರ ಅನುಮೋದನೆ ನೀಡಿದೆ.

57 ತಾಲ್ಲೂಕು ಕೇಂದ್ರಗಳಲ್ಲಿರುವ ಮಸೀದಿ, ವಕ್ಫ್ ಸಂಸ್ಥೆಯ ಜಾಗ, ಅಂಜುಮಾನ್ ಇಸ್ಲಾಂ ಸಮಿತಿಯ ಜಾಗ, ಶಾದಿಮಹಲ್ ಇರುವ ಕಡೆಗಳಲ್ಲಿ ತಲಾ ₹1 ಕೋಟಿ ವೆಚ್ಚದಲ್ಲಿ ಈ ಭವನಗಳು ನಿರ್ಮಾಣ ಆಗಲಿವೆ.

ಈ ಹಿಂದೆ 'ಶಾದಿ ಮಹಲ್'

2017ರಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಂ ಸಮುದಾಯಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ಹಮ್ಮಿಕೊಳ್ಳಲು, ಈ ಸಮುದಾಯಗಳಿಗೆ ಸೇರಿದ ವಕ್ಫ್ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಜಿಲ್ಲಾ ಕೇಂದ್ರದಲ್ಲಿ ₹2 ಕೋಟಿ ಮತ್ತು ತಾಲ್ಲೂಕು ಕೇಂದ್ರ ಹಾಗೂ ಇತರೆ ಪ್ರದೇಶಗಳಲ್ಲಿ ₹1 ಕೋಟಿ ಅನುದಾನದಲ್ಲಿ 'ಶಾದಿಮಹಲ್' ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿತ್ತು. ಈ ಬಾರಿ 'ಶಾದಿ ಮಹಲ್' ಹೆಸರಿನ ಬದಲು 'ಬಹೂಪಯೋಗಿ ಭವನ' ಎಂದು ಹೆಸರು ಬದಲಿಸಲಾಗಿದೆ ಎಂದು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಧರ್ಮಸ್ಥಳ: ಮೃತದೇಹಗಳನ್ನು ಹೂತುಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ

ನ್ಯಾಯಾಲಯಕ್ಕೆ ಎಸ್‌ಐಟಿ ವರದಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಿಎನ್‌ಎಸ್‌ಎಸ್ ಸೆಕ್ಷನ್ 215ರ ಅಡಿ ವರದಿ ಸಲ್ಲಿಕೆ
- ಸಾಕ್ಷಿ ದೂರುದಾರ ಸೇರಿ ಆರು ಮಂದಿ ವಿರುದ್ಧ ಆರೋಪ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ಈ ಪ್ರಕರಣದ ಸಾಕ್ಷಿ ದೂರುದಾರ ಸೇರಿ ಆರು ಮಂದಿ ಯಾವ ರೀತಿ ನ್ಯಾಯಾಲಯದ ದಾರಿ ತಪ್ಪಿಸಿದ್ದಾರೆ ಎಂಬ ಕುರಿತು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಗುರುವಾರ ವರದಿ ಸಲ್ಲಿಸಿದರು.

ಎಸ್‌ಐಟಿಯ ಮುಖ್ಯ ತನಿಖಾಧಿಕಾರಿಗಳಾದ ಜಿತೇಂದ್ರ ಕುಮಾರ್ ದಯಾಮ ಹಾಗೂ ಸಿ.ಎ.ಸೈಮನ್ ಅವರು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಎಚ್.ಟಿ.ವಿಜಯೇಂದ್ರ ಅವರಿಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 215 ಅಡಿ ವರದಿ ಸಲ್ಲಿಸಿದರು.

'5000ಕ್ಕೂ ಹೆಚ್ಚು ಪುಟಗಳ ವರದಿ ಸಲ್ಲಿಸಲಾಗಿದೆ. ಈ ಪ್ರಕರಣದಲ್ಲಿ ಸಾಕ್ಷಿ ದೂರುದಾರ, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ., ವಿಠಲ ಗೌಡ, ಸುಜಾತಾ ಭಟ್ ನ್ಯಾಯಾಲಯದ ದಾರಿ ತಪ್ಪಿಸಿದ ಕುರಿತು ಗಮನಕ್ಕೆ ತರಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

▶11

ವಿಶೇಷ ತನಿಖಾ ತಂಡದ ಮುಖ್ಯ ತನಿಖಾಧಿಕಾರಿಗಳಾದ ಸಿ.ಎ.ಸೈಮನ್ ಹಾಗೂ ಜಿತೇಂದ್ರ ಕುಮಾರ್ ದಯಾಮ ಅವರು ವರದಿ ಸಲ್ಲಿಸಲು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಗುರುವಾರ ಹಾಜರಾದರು

'ವರದಿ ಬಹಿರಂಗಗೊಳಿಸುವಂತಿಲ್ಲ'

'ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯನ್ನು ತನ್ನ ಒಪ್ಪಿಗೆ ಇಲ್ಲದೇ ಬಹಿರಂಗಗೊಳಿಸುವಂತಿಲ್ಲ ಎಂದು ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯ ಸೂಚಿಸಿದೆ' ಎಂದು ಮೂಲಗಳು ತಿಳಿಸಿವೆ.

'ಈ ವರದಿಯ ಬಿಡುಗಡೆಗೆ ಒಪ್ಪಿಗೆ ನೀಡುವ ಬಗ್ಗೆ ಅಥವಾ ಆರೋಪಿಗಳಿಗೆ ಅದರ ಪ್ರತಿಗಳನ್ನು ಒದಗಿಸುವ ಬಗ್ಗೆ ಸೋಮವಾರ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ' ಎಂಬುದು ಈ ಮೂಲಗಳ ಮಾಹಿತಿ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

ನಗರದ ನಯನ ಸಭಾಂಗಣದಲ್ಲಿ ಗುರುವಾರ 'ಒಂದೆಡೆ' 12ನೇ ವರ್ಷದ ಸಂಭ್ರಮಾಚರಣೆ ಮತ್ತು ಅಕ್ಕೈ ಪದ್ಮಶಾಲಿ ಅವರ 'ಯಾರು ಸೂಳೆಯರು?' ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಅಕ್ಕೈ ಪದ್ಮಶಾಲಿ, ಅನಿಲ್ ಕುಮಾರ್, ರಂಗಭೂಮಿ ಕಲಾವಿದೆ ಮಂಗಳಾ ಎನ್, ಲಕ್ಷ್ಮಮ್ಮ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಬರಹಗಾರ್ತಿ ಕೆ. ಷರೀಫಾ , ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜೆ.ಪಿ.ಬಿ ಚಂದ್ರು ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

'ಲಿಂಗತ್ವ ಅಲ್ಪಸಂಖ್ಯಾತರಿಗೆ ಸೌಲಭ್ಯ ಹೆಚ್ಚಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗತ್ವ ಅಲ್ಪಸಂಖ್ಯಾತರಿಗೂ ರಾಜಕೀಯ ಮೀಸಲಾತಿ ನೀಡಬೇಕು. ಪ್ರತ್ಯೇಕ ಶೌಚಾಲಯದಂತಹ ಮೂಲಸೌಕರ್ಯಗಳನ್ನು ಒದಗಿಸಬೇಕು' ಎಂದು ಸಾಹಿತಿ ಕೆ.ಷರೀಫಾ ಸಲಹೆ ನೀಡಿದರು.

ಒಂದೆಡೆ ಸಂಸ್ಥೆ 12ನೇ ವರ್ಷದ ಸಂಭ್ರಮಾಚರಣೆಯ ಭಾಗವಾಗಿ ನಗರದ ಕನ್ನಡ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಜನಾರ್ಪಣೆಗೊಂಡ ಅಕ್ಕೈ ಪದ್ಮಶಾಲಿ ಅವರ 'ಯಾರು ಸೂಳೆಯರು?' ಪುಸ್ತಕ ಕುರಿತು ಮಾತನಾಡಿದರು.

'ಲಿಂಗತ್ವ ಅಲ್ಪಸಂಖ್ಯಾತರು ಸಮಾಜದಲ್ಲಿ ಎಲ್ಲರಂತೆ ಬದುಕುವ ಪ್ರಯತ್ನ ಮಾಡಿದರೂ ಅಡ್ಡಿ–ಆತಂಕ ಇದ್ದೇ ಇದೆ. ಹಲವರು ಸಾಮಾಜಿಕ, ಆರ್ಥಿಕ, ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಅಂತಹವರಲ್ಲಿ ಶಕ್ತಿ ತುಂಬಲು ಸರ್ಕಾರ ಸೌಲಭ್ಯಗಳನ್ನು ನೀಡಬೇಕು' ಎಂದು ತಿಳಿಸಿದರು.

'ಅಕ್ಕೈ ಪದ್ಮಶಾಲಿ ಅವರು ಬರೆದಿರುವ ಈ ಪುಸ್ತಕದಲ್ಲಿ 18 ಘಟನೆಗಳಿವೆ. ಓದಿದಾಗ ಮೈ ಜುಮ್ಮೆನಿಸುತ್ತದೆ. ಲೈಂಗಿಕ ವೃತ್ತಿ ನಿರತ ಮಹಿಳೆಯರು ಅನುಭವಿಸುವ ಕಷ್ಟಗಳು, ಅವರನ್ನು ವಿಭಿನ್ನ ಹೆಸರಿನಿಂದ ಕರೆಯುವ ರೀತಿಯನ್ನು ಬರೆದಿದ್ದಾರೆ' ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎನ್.ಎಲ್.ಮುಕುಂದರಾಜ್ ಮಾತನಾಡಿ, 'ನಮಗೆ ಮೊದಲು ಮನುಷ್ಯನ ಸಂಕಟಗಳು ಅರ್ಥವಾಗಬೇಕು. ಸಾಮಾಜಿಕ, ಆರ್ಥಿಕ ಕಾರಣಗಳಿಂದ ಬೇರೆ ಬೇರೆ ವೃತ್ತಿ ಆಯ್ಕೆ ಮಾಡಿಕೊಂಡವರೂ ನಮ್ಮಂತೆ ಮನುಷ್ಯರು ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು. ಸೂಳೆಯರು ಎಂದು ಗುರುತಿಸಿಕೊಂಡ ಮಹಿಳೆಯರಿಗೆ ಶರಣರು ಶತಮಾನಗಳ ಹಿಂದೆಯೇ ಗೌರವ ನೀಡಿದ್ದಾರೆ' ಎಂದು ತಿಳಿಸಿದರು.

ಕಲಾವಿದೆ ಎನ್.ಮಂಗಳಾ, ಲಿಂಗತ್ವ ಅಲ್ಪಸಂಖ್ಯಾತ ಹೋರಾಟಗಾರ್ತಿ ಮೋನಿಕಾ, ಅನಿತಾ ಕುಮಾರಿ, ಅನಿಲ್‌ಕುಮಾರ್, ಸುಮತಿ, ಲಕ್ಷ್ಮಮ್ಮ, ಚಂದ್ರು ಹಾಜರಿದ್ದರು. ನಂತರ ಪ್ರದರ್ಶನಗೊಂಡ 'ಹಸಿವು ಕನಸು ಭಾಗ–2' ನಾಟಕ ಗಮನ ಸೆಳೆಯಿತು.

ಬಿಳಿಮಲೆ ಹೇಳಿಕೆಗೆ ಸಮರ್ಥನೆ

ಲೇಖಕಿ ಅಕ್ಕೈ ಪದ್ಮಶಾಲಿ ಮಾತನಾಡಿ, 'ಯಕ್ಷಗಾನ ಕಲಾವಿದರಲ್ಲಿ ಬಹುತೇಕ ಜನ ಸಲಿಂಗಕಾಮಿಗಳು ಎಂಬ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರ ಹೇಳಿಕೆಯನ್ನು ನಾನು ಸಮರ್ಥಿಸುತ್ತೇನೆ. ಬರೀ ಯಕ್ಷಗಾನ ಅಷ್ಟೇ ಅಲ್ಲ; ಎಲ್ಲಾ ಕಲೆ, ವಲಯಗಳಲ್ಲಿಯೂ ನಮ್ಮ ಜನರಿದ್ದಾರೆ. ನಮ್ಮ ಸಮುದಾಯ ಎಂದ ಕೂಡಲೇ ಅದು ಹೀನಾಯ, ಕೀಳು ಎಂದು ಟೀಕಿಸುವುದು ಸರಿ ಇಲ್ಲ' ಎಂದು ಹೇಳಿದರು.

ವಿಶ್ವ ಆಹಾರ ಆರೋಗ್ಯ ಎಕ್ಸ್‌ಪೊ ಡಿ.6ರಿಂದ

ಬೆಂಗಳೂರು: ರೋಟರಿ ಬೆಂಗಳೂರು ಗ್ಲೋಬಲ್ ಯೋಗಾ ಟ್ರಸ್ಟ್‌ನಿಂದ ಡಿಸೆಂಬರ್ 6ರಿಂದ 7ರವರೆಗೆ ಜಿಕೆವಿಕೆ ಆವರಣದಲ್ಲಿರುವ ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ನಾಲ್ಕನೇ ವಿಶ್ವ ಆಹಾರ ಆರೋಗ್ಯ ಎಕ್ಸ್‌ಪೊ ಹಾಗೂ ಗ್ಲೋಬಲ್ ಯೋಗ ಸಮ್ಮೇಳನ ಹಮ್ಮಿಕೊಳ್ಳಲಾಗುತ್ತದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಂತರರಾಷ್ಟ್ರೀಯ ಯೋಗಗುರು ಯೋಗಿ ದೇವರಾಜ್, 'ಮಾನಸಿಕ ಆರೋಗ್ಯಕ್ಕಾಗಿ ಯೋಗ' ಎಂಬ ಘೋಷಣೆಯಡಿ ಈ ಬಾರಿಯ ಸಮ್ಮೇಳನ ಆಯೋಜಿಸಲಾಗುತ್ತದೆ. ಇದರಲ್ಲಿ ಕನಿಷ್ಠ ಐದು ಸಾವಿರ ಯೋಗ ಶಿಕ್ಷಕರು, ಥೆರಪಿಸ್ಟ್, ಯೋಗ ಕನ್ಸಲ್ಟೆಂಟ್ಸ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶ ಇದೆ' ಎಂದರು.

ಉದ್ಘಾಟನಾ ಸಮಾರಂಭದಲ್ಲಿ ಕಾಗಿನೆಲೆ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವಿನಯ್ ಗುರೂಜಿ, ಅರಳು ಮಲ್ಲಿಗೆ ಪಾರ್ಥಸಾರಥಿ, ಸಚಿವರಾದ ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ಕೃಷ್ಣ ಬೈರೇಗೌಡ, ಎಚ್.ಎಂ. ರೇವಣ್ಣ ಭಾಗವಹಿಸಲಿದ್ದಾರೆ' ಎಂದರು. ನಾಗೇಂದ್ರ ಪ್ರಸಾದ್, ಲಕ್ಷ್ಮೀಕಾಂತ್, ವಿ.ಬಿ. ನಾಗೇಶ್, ಜ್ಯೋತಿ ಮಂಜುನಾಥ್, ಸಂಧ್ಯಾಪ್ರಕಾಶ್, ಲೇಖಕಿ ನಳಿನಾ ಡಿ. ಉಪಸ್ಥಿತರಿದ್ದರು.

'ಮಾದರಿ ನೆರೆಹೊರೆ' ಅಭಿಯಾನ

ಬೆಂಗಳೂರು: 'ಸ್ವಸ್ಥ ಮತ್ತು ಸ್ವಚ್ಛ ಸಮಾಜ ನಿರ್ಮಿಸುವ ಉದ್ದೇಶದಿಂದ 'ಮಾದರಿ ನೆರೆಹೊರೆ, ಮಾದರಿ ಸಮಾಜ' ಎಂಬ ಅಭಿಯಾನವನ್ನು ನಡೆಸಲಾಗುತ್ತದೆ' ಎಂದು ಜಮಾಅತ್ ಇಸ್ಲಾಮಿ ಹಿಂದ್ ರಾಜ್ಯ ಘಟಕದ ಅಧ್ಯಕ್ಷ ಮುಹಮ್ಮದ್ ಸಾದ್ ಬೆಳ್ಗಾಮಿ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನವೆಂಬರ್ 21ರಿಂದ 30ರವರೆಗೆ ಅಭಿಯಾನ ನಡೆಯಲಿದೆ. ಒಂದೆಡೆಯೇ ಬದುಕುತ್ತಿರುವ ಕುಟುಂಬಗಳ ನಡುವಣ ಅಂತರವನ್ನು ಹೋಗಲಾಡಿಸುವುದು ಈ ಅಭಿಯಾನದ ಮುಖ್ಯ ಉದ್ದೇಶ. ಒಂದೆಡೆಯೇ ಬದುಕುವವರು ಪರಸ್ಪರರ ಬಗ್ಗೆ ಕಾಳಜಿ, ಸಹಕಾರ ಮತ್ತು ಸಾಮಾಜಿಕ ಹೊಣೆಗಾರಿಕೆ ಹೊಂದುವುದು ಇಂದಿನ ಅಗತ್ಯವಾಗಿದೆ. ಇದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಶಾಂತಿ ಸಭೆ, ಮನೆ–ಮನೆ ಭೇಟಿ, ಸಂವಾದ ನಡೆಸಲಾಗುತ್ತದೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಅಭಿಯಾನದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು. ಸಂಘಟನೆಯ ರಾಜ್ಯ ಕಾರ್ಯದರ್ಶಿಗಳಾದ ಮೌಲಾನಾ ಅಬ್ದುಲ್ ಗಫ್ಫಾರ್ ಹಾಮಿದ್ ಉಮ್, ಮೌಲಾನಾ ವಹೀದುದ್ದೀನ್ ಖಾನ್ ಉಮ್ರಿ ಮದನಿ, ಜನಾಬ್ ಮಹಮ್ಮದ್ ಬಿಲಾಲ್ ಸುದ್ದಿಗೋಷ್ಠಿಯಲ್ಲಿದ್ದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail :- ka.chikkaballapur.dudc@gmail.com, Ph. & Fax : 08156-277005
ಸಂಖ್ಯೆ:ಜಿನಕೋ/ಚಿಕ್ಕ(1)/ಶಾಖಾ/ಇ.ನ-4/105/2025-26 ದಿನಾಂಕ:14.11.2025

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ಈ ಕೆಳಕಂಡ ಕಾಮಗಾರಿ/ವಸ್ತು ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ:** (1) ಬಾಗೇಪಲ್ಲಿ ಪುರಸಭೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ(ಅಲ್ಪಾವಧಿ ಟೆಂಡರ್) (DMA/2025-26/BD/WORK_INDENT49835/Call-2) **ಟೆಂಡರ್‌ಗಟ್ಟಿ ಮೊತ್ತ: ರೂ.** 216.30 **ಲಕ್ಷ, ಇ.ಎಂ.ಡಿ. ಮೊತ್ತ : ರೂ.** 3.24 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು (2) ಟೌನ್‌ಹಾಲ್ ವೃತ್ತದಿಂದ ಕೃಷ್ಣ ಚಿತ್ರಮಂದಿರ ಮೂಲಕ ಸಾಧುಮಠ ವೃತ್ತದವರೆಗೆ, ಕಂದವಾರ ಬಾಗಿಲುನಿಂದ ಸಿ.ಸಿ.ವೃತ್ತ, ಗರ್ಲ್ಸ್ ಸ್ಕೂಲ್ ಮೂಲಕ ಟೌನ್‌ಹಾಲ್ ವೃತ್ತದವರೆಗೆ, ಜಿಲ್ಲಾ ಕೇಂದ್ರ ಗ್ರಂಥಾಲಯದಿಂದ ಜಿಲ್ಲಾ ನ್ಯಾಯಾಲಯದವರೆಗೆ, ಹಾಗೂ ಬಿ.ಬಿ.ರಸ್ತೆಯ ಕೆ.ಇ.ಬಿ. ಕ್ವಾಟ್ರಸ್ ಸರ್ಕಲ್‌ನಿಂದ ಕೆ.ಎಸ್.ಆರ್.ಟಿ.ಸಿ. ಡಿಪೋ ಮುಖಾಂತರ ಮುಸ್ತೂರು ರಸ್ತೆವರೆಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ. (ಅಲ್ಪಾವಧಿ ಟೆಂಡರ್) (DMA/2025-26/EL/WORK_INDENT 49057/Call-2) **ಟೆಂಡರ್‌ಗಟ್ಟಿ ಮೊತ್ತ ರೂ.** 197.16 **ಲಕ್ಷ, ಇ.ಎಂ.ಡಿ. ಮೊತ್ತ : ರೂ.** 2.96 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು (3) ಚಿಂತಾಮಣಿ ನಗರಸಭೆಯ ಪರಿಶಿಷ್ಟ ಜನಾಂಗದ, ಪರಿಶಿಷ್ಟ ಪಂಗಡ ಜನಾಂಗದ, ಇತರೆ ಹಿಂದುಳಿದ ಜನಾಂಗದ ಮತ್ತು ವಿಕಲ ಚೇತನರ ಪದವಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಿ ವಿತರಿಸುವುದು. (DMA/2025-26/IND 5600) **ಟೆಂಡರ್‌ಗಟ್ಟಿ ಮೊತ್ತ: ರೂ.** 70.96 **ಲಕ್ಷ, ಇ.ಎಂ.ಡಿ. ಮೊತ್ತ : ರೂ.** 1.39 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು (4) ಗೌರಿಬಿದನೂರು ನಗರಸಭೆಯ ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ, ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದ ಅನುಕೂಲಕ್ಕಾಗಿ ಲ್ಯಾಪ್‌ಟಾಪ್ ವಿತರಣೆ(ಬಿ.ಇ ಮತ್ತು ಎಂ.ಬಿ.ಬಿ.ಎಸ್) (DMA/2025-26/IND 5598) **ಟೆಂಡರ್‌ಗಟ್ಟಿ ಮೊತ್ತ: ರೂ.** 76.50**ಲಕ್ಷ, ಇ.ಎಂ.ಡಿ. ಮೊತ್ತ : ರೂ.** 1.51 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು (5) ಶಿಡ್ಲಘಟ್ಟ ನಗರಸಭೆಯ ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ, ಮತ್ತು ಇತರೆ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಿ ವಿತರಿಸುವುದು. (DMA/2025-26/IND 5599) **ಟೆಂಡರ್‌ಗಟ್ಟಿ ಮೊತ್ತ: ರೂ.** 93.95 **ಲಕ್ಷ, ಇ.ಎಂ.ಡಿ. ಮೊತ್ತ : ರೂ.** 1.85 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು (6) ಬಾಗೇಪಲ್ಲಿ ಪುರಸಭೆಯ ಪರಿಶಿಷ್ಟ ಜನಾಂಗದ, ಪರಿಶಿಷ್ಟ ಪಂಗಡ ಜನಾಂಗದ, ಇತರೆ ಹಿಂದುಳಿದ ಜನಾಂಗದ ಮತ್ತು ವಿಕಲ ಚೇತನರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಿ ವಿತರಿಸುವುದು. (DMA/2025-26/IND 5591) **ಟೆಂಡರ್‌ಗಟ್ಟಿ ಮೊತ್ತ: ರೂ.** 30.00 **ಲಕ್ಷ, ಇ.ಎಂ.ಡಿ. ಮೊತ್ತ : ರೂ.** 0.59 **ಲಕ್ಷ, ಗುತ್ತಿಗೆ ಅವಧಿ:** 03 ತಿಂಗಳು. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಪೂರ್ವಭಾವಿ ಸಭೆ (PRE-BID MEETING) (ಕ್ರ.ಸಂ 1 & 2 ರ ಕಾಮಗಾರಿಗಳಿಗೆ ಸಂಬಂಧಿಸಿದಂತೆ): **19.11.2025 ರ 5:30 ಗಂಟೆಗೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ. (2) ಪೂರ್ವಭಾವಿ ಸಭೆ (PRE-BID MEETING) (ಕ್ರ.ಸಂ 3, 4, 5, 6 ರ ಕಾಮಗಾರಿಗಳಿಗೆ ಸಂಬಂಧಿಸಿದಂತೆ): **20.11.2025 ರ ಪೂರ್ವಾಹ್ನ 11:00 ಗಂಟೆಗೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **29.11.2025 ರ ಸಂಜೆ 05.30 ಗಂಟೆಗೆ.** (4) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02.12.2025 ರ ಪೂರ್ವಾಹ್ನ 11.00 ಗಂಟೆಗೆ.** (5) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.12.2025 ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:269/ಕೆಎಸ್‌ಎಂಸಿಎ/2025–26

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869
ನೋಂದಾಯಿತ ಕಚೇರಿ: ನಂ.44, ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು 560 064. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com
ವೆಬ್‌ಸೈಟ್: www.centumelectronics.com

ಸೂಚನೆ

ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 124ರ ನಿಯಮಗಳಿಗೆ ಅನುಸಾರವಾಗಿ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ & ರಿಫಂಡ್) ನಿಯಮಗಳು, 2016 ರೊಂದಿಗೆ ಓದಲಾದ ಅದಕ್ಕೆ ಮಾಡಲಾದ ತಿದ್ದುಪಡಿಗಳೊಂದಿಗೆ ಒಳಗೊಂಡಂತೆ ಪ್ರಕ್ರಿಯಾತ್ಮಕ ನಿಯಮಗಳನುಸಾರ, ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಇವರಲ್ಲಿ ಕ್ಲೇಮ್ ಆಗದಿರುವ ಡಿವಿಡೆಂಡ್‌ಗೆ ಸಂಬಂಧಿತ ಕಂಪನಿಯ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಈ ಮಾಹಿತಿ.

ಕಂಪನಿಗಳ ಕಾಯ್ದೆ, 2013ರ ನಿಯಮಗಳು ಮತ್ತು ಮೇಲೆ ತಿಳಿಸಲಾಗಿರುವ ನಿಯಮಾವಳಿಗಳ ಪ್ರಕಾರ, ನಿರಂತರವಾಗಿ ಏಳು ವರ್ಷಗಳಿಂದ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಡಿವಿಡೆಂಡ್ ಕ್ಲೇಮ್ ಆಗದಿರುವ ಎಲ್ಲಾ ಷೇರುಗಳನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಬೇಕಾಗುತ್ತದೆ. ಕಂಪನಿಯು ತನ್ನ ಹಣಕಾಸು ವರ್ಷ 2018-19ನೇ ಸಾಲಿಗೆ ಘೋಷಿಸಿರುವ ಮಧ್ಯಂತರ ಡಿವಿಡೆಂಡ್‌ಗೆ ಸಂಬಂಧಿಸಿದಂತೆ, ಕಾಯ್ದೆ ಮತ್ತು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಡಿವಿಡೆಂಡ್ ಹಾಗೂ ತತ್ಸಂಬಂಧಿತ ಷೇರುಗಳ ವರ್ಗಾವಣೆಗೆ ಅಂತಿಮ ದಿನಾಂಕ 21ನೇ ಫೆಬ್ರವರಿ, 2026 ಆಗಿರುತ್ತದೆ.

ಡಿವಿಡೆಂಡ್‌ನ ಕ್ಲೇಮ್‌ಗಾಗಿ ಸೂಕ್ತ ಕ್ರಮ ಕೈಗೊಳ್ಳಲಿಂದು, ಯಾರ ಷೇರುಗಳ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆಯೊ ಅಂತಹ ಷೇರುದಾರರಿಗೆ ಕಂಪನಿಯು ವೈಯಕ್ತಿಕವಾಗಿ ಮಾಹಿತಿ ರವಾನಿಸಿದೆ. ಕಂಪನಿಯು ಇಂತಹ ಷೇರುದಾರರ ಸಂಪೂರ್ಣ ವಿವರವನ್ನು ತನ್ನ ವೆಬ್‌ಸೈಟ್ https://www.centumelectronics.com/unclaimed-dividends/ ನಲ್ಲಿ ಕೂಡ ಪ್ರಕಟಿಸಿರುತ್ತದೆ.

ನಿರಂತರವಾಗಿ 7 ವರ್ಷಗಳ ಅವಧಿಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಷೇರುಗಳು:

- ಡಿಮ್ಯಾಟ್ ರೂಪದ ಷೇರುಗಳಾಗಿದ್ದಲ್ಲಿ, ಅಂತಹವುಗಳನ್ನು ನೇರವಾಗಿ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಇವರೊಂದಿಗೆ ನಿರ್ವಹಿಸಲಾಗುತ್ತಿರುವ ಐಇಪಿಎಫ್ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಲಾಗುತ್ತದೆ.
- ಭೌತಿಕ ರೂಪದ ಷೇರುಗಳು ಯಾವುದಾದರೂ ಇದ್ದಲ್ಲಿ, ಅಂತಹ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸಲು ಮೂಲ ಷೇರು ಪ್ರಮಾಣಪತ್ರಗಳು ರದ್ದುಗೊಳಿಸುವ ಜೊತೆಗೆ ಹೊಸ ಫೋಲಿಯೊ ಮತ್ತು ಪ್ರಮಾಣಪತ್ರ ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಷೇರುಗಳನ್ನು ಡಿಮ್ಯಾಟ್ ರೂಪದಲ್ಲಿ ಮಾರ್ಪಡಿಸಲು ಮತ್ತು ಐಇಪಿಎಫ್ ಪರವಾಗಿ ವರ್ಗಾಯಿಸಲು ವ್ಯವಹಾರಿಕ ಕ್ರಮ ಕೈಗೊಳ್ಳುವ ಮೂಲಕ ಕಂಪನಿಯು ಎನ್‌ಎಸ್‌ಡಿಎಲ್ ಇವರಿಗೆ ಮಾಹಿತಿ ನೀಡಬಹುದಾಗಿರುತ್ತದೆ.

ಒಂದು ವೇಳೆ ಸಂಬಂಧಿತ ಷೇರುದಾರರಿಂದ ಕಂಪನಿಗೆ 10ನೇ ಫೆಬ್ರವರಿ, 2026 ರೊಳಗೆ ಯಾವುದೇ ರೀತಿಯ ಪ್ರತಿಕ್ರಿಯೆ ಲಭಿಸದಿದ್ದಲ್ಲಿ, ಐಇಪಿಎಫ್ ನಿಯಮಗಳ ಪ್ರಕಾರ ಕಂಪನಿಯಿಂದ ಅಂತಹ ಕ್ಲೇಮ್ ಆಣದಿರುವ ಡಿವಿಡೆಂಡ್ ಅನ್ನು ನಿಗದಿತ ದಿನಾಂಕದಂದು ಅಥವಾ ಮೊದಲು ವರ್ಗಾವಣೆ ಮಾಡಲಾಗುತ್ತದೆ. ಅನುಕ್ರಮವಾದ ಷೇರುಗಳನ್ನು ಕೂಡ ಷೇರುದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ವರ್ಗಾವಣೆ ಮಾಡಲಾಗುತ್ತದೆ.

ಮೇಲೆ ತಿಳಿಸಿರುವಂತೆ, ಕಂಪನಿಯಿಂದ ಒಂದು ಬಾರಿ ಡಿವಿಡಂಡ್ ಮತ್ತು ಇಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಿದ ನಂತರ, ಷೇರುದಾರರು ತಮ್ಮ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ಮತ್ತು ಇಕ್ವಿಟಿ ಷೇರುಗಳನ್ನು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಐಇಪಿಎಫ್ ಪ್ರಾಧಿಕಾರದಿಂದ ಮಾತ್ರ ಕ್ಲೇಮ್ ಮಾಡಿಕೊಳ್ಳಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗೆ ಪ್ರತಿಯಾಗಿ ಯಾವುದೇ ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಎಂಬುದು ದಯವಿಟ್ಟು ಗಮನದಲ್ಲಿರಲಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಷೇರುದಾರರಿಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ನಮ್ಮ ರೆಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ಸ್ ಕೇಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರನ್ನು ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬೇಕೆಂದು ಕೋರಲಾಗಿದೆ:

ಘಟಕ: ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಸೆಲಿನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32,
ಫೈನ್ಯಾನ್ಶಿಯೆಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್,
ಹೈದರಾಬಾದ್ - 500 032, ಫೋನ್ ಸಂಖ್ಯೆ: +91 40 6716 2222,
ಇಮೇಲ್: einward.ris@kfintech.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್
ಸದಸ್ಯತ್ವ ಸಂಖ್ಯೆ: F12285

ಬೆಂಗಳೂರು
20ನೇ ನವೆಂಬರ್, 2025

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B-TRD-29-2025-26-OT-27
ದಿನಾಂಕ: 13.11.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ 3 ವರ್ಷಗಳ ಅವಧಿಗೆ ಟವರ್ ವೇಗನ್‌ಗಳ ಸಮಗ್ರವಾದ ನಿರ್ವಹಣಾ ಒಪ್ಪಂದ.	ರೂ. 12,03,98,752.74

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05.12.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ ಬೆಂಗಳೂರು
PUB/657/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

---

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/148/2025
ದಿನಾಂಕ: 13.10.2025 ಗೆ ತಿದ್ದುಪಡಿ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಅಡಿಯಲ್ಲಿ ಬರುವ ವಿವಿಧ ಯೋಜನೆಗಳಿಗೆ ಇಂಟಿಗ್ರೇಟೆಡ್ ಯೋಜನಾ ನಿರ್ವಹಣೆ ಮತ್ತು ಮಾಹಿತಿ ವ್ಯವಸ್ಥೆ (ಪಿಎಂಐಎಸ್) ನ ವಿನ್ಯಾಸ, ಗ್ರಾಹಕೀಕರಣ, ಅನುಷ್ಠಾನ, ಕಾರ್ಯಾಚರಣೆಗಳು (ಟೆಂಡರು ಉಲ್ಲೇಖ ಸಂ.: **PMIS-SWR-01**)	ರೂ. 6,66,00,380/-

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
25.11.2025 (15:00 ಗಂಟೆಯವರೆಗೆ)	10.12.2025 (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿ / ಬೆಂಗಳೂರು ದಂಡು
PUB/641/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

---

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. CAO/CN/BNC/159/2025 ದಿನಾಂಕ: 14.11.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ	ಕೊನೆಯ ದಿನಾಂಕ
1	ಗದಗ – ವಾಡಿ ಹೊಸ ಬ್ರಾಡ್ ಗೇಜ್ ರೈಲ್ವೆ ಮಾರ್ಗದ ಯೋಜನೆಗೆ ಸಂಬಂಧಿಸಿದಂತೆ, ಕಿಮೀ. 145950 ರಿಂದ ಕಿಮೀ. 149225 (3.275 ಕಿಮೀ) ರಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಪ್ರಸ್ತಾವಿತ ಪ್ರಮುಖ ರೈಲ್ವೆ ಸೇತುವೆ ಸಂ. 195 ಮತ್ತು ಇತರ ಸೇತುವೆಗಳಿಗೆ ಅಡಿಪಾಯ, ಸಬ್‌ಸ್ಟ್ರಕ್ಚರ್ ಮತ್ತು ಸೂಪರ್‌ಸ್ಟ್ರಕ್ಚರ್‌ಗಾಗಿ ಭೂತಾಂತ್ರಿಕ/ಜಲವಿಜ್ಞಾನ ತನಿಖೆ ಮತ್ತು ಇತರ ಪೂರಕ ಕೆಲಸಗಳು ಸೇರಿದಂತೆ ವಿವರವಾದ ವಿನ್ಯಾಸ ಸಲಹಾ ಮತ್ತು ವಿನ್ಯಾಸಕರ ಸಂಘವನ್ನು ಒದಗಿಸುವುದು ಹಾಗೂ ಬೇಲೂರು – ಹಾಸನ (ಆಲೂರು) ಹೊಸ ಬ್ರಡ್ ಗೇಜ್ ರೈಲು ಮಾರ್ಗದ ವರೆಗಿನ ಪ್ರಸ್ತಾವಿತ ಸುರಂಗ ಯೋಜನೆಗೆ ಸಂಬಂಧಿಸಿದಂತೆ ಕಿಮೀ. 85125 ರಿಂದ ಕಿಮೀ. 86100 (ಅಂದಾಜು 975 ಮೀ) ರಲ್ಲಿ ಭೂತಾಂತ್ರಿಕ, ವೈಮಾನಿಕ, ಭೂಕಂಪ ತನಿಖೆ ಮತ್ತು ವಿವರವಾದ ವಿನ್ಯಾಸವನ್ನು ನಡೆಸಲು ಸಂಘವನ್ನು ಒದಗಿಸುವುದು. (**ಟೆಂಡರು ಉಲ್ಲೇಖ ಸಂಖ್ಯೆ: SWR-CN-DDC-DAS**)	ರೂ. 6,37,98,857/-	29.12.2025 (15:00 ಗಂಟೆಯವರೆಗೆ)
2	ನೈಋತ್ಯ ರೈಲ್ವೆಯ ನಿರ್ಮಾಣ ಸಂಸ್ಥೆಗಾಗಿ ಪ್ರೂಫ್ ಚೆಕ್ ಸಮಾಲೋಚಕರನ್ನು ನಿಯಮಿಸುವ ಕಾರ್ಯಕ್ಕಾಗಿ ಪ್ರಸ್ತಾವನೆಯ ಬೇಡಿಕೆ. (**ಟೆಂಡರು ಉಲ್ಲೇಖ ಸಂಖ್ಯೆ: PROOFCHECKCONSULTANCY**)	ರೂ. 11,36,29,457/-	29.12.2025 (15:00 ಗಂಟೆಯವರೆಗೆ)
3	ತುಮಕೂರು – ಚಿತ್ರದುರ್ಗ – ದಾವಣಗೆರೆ ಹೊಸ ಲೈನ್ ಯೋಜನೆಯಡಿಯಲ್ಲಿ ಚಿತ್ರದುರ್ಗ ಯಾರ್ಡ್‌ನಲ್ಲಿ ಕಿಮೀ. 140/190 ರಿಂದ 142/920 ನಡುವೆ ಟ್ರ್ಯಾಕ್ ಲಿಂಕಿಂಗ್ ಕಾಮಗಾರಿಗಳು ಸೇರಿದಂತೆ ಯಾರ್ಡ್ ರೀ–ಮಾಡೆಲಿಂಗ್, ಫಾರ್ಮೇಶನ್‌ನಲ್ಲಿ ಭೂಮಿಯ ಕೆಲಸ, ಬ್ಲಾಂಕೆಟಿಂಗ್, ಬಾಲಾಸ್ಟ್‌ಗಳ ಪೂರೈಕೆ, ಪಿ.ವೇ. ಸಾಮಗ್ರಿಗಳ ಪೂರೈಕೆ ಮತ್ತು ಸಾಗಿಸುವಿಕೆ, ಕಿರಿಯ ಬ್ರಿಡ್ಜ್‌ಗಳ ನಿರ್ಮಾಣ, ಸ್ಟ್ರಕ್ಚರಲ್ ಸ್ಟೀಲ್ ಕಾಮಗಾರಿ ಮತ್ತು ವಿದ್ಯುತೀಕರಣ ಕೆಲಸಗಳು. (ಸಂಯುಕ್ತ ಕಾಮಗಾರಿ) (**ಟೆಂಡರು ಉಲ್ಲೇಖ ಸಂಖ್ಯೆ: TK-DVG-25**)	ರೂ. 51,78,60,236/-	09.12.2025 (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ಕಂಟೋನ್ಮೆಂಟ್
PUB/660/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

---

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com **ಇ–ಮೇಲ್ :** investors@kirloskarelectric.com
CIN : L31100KA1946PLC000415

ಅಂಚೆ ಮತಪತ್ರದ ಸೂಚನೆ ಮತ್ತು ಇ-ಮತದಾನದ ಬಗ್ಗೆ ಮಾಹಿತಿ

ಸೆಕ್ಷನ್ 108, 110 ಕಂಪನಿಗಳ ಕಾಯಿದೆ, 2013 ("ದಿ ಆಕ್ಟ್"), ನಿಯಮ 20 ಮತ್ತು ನಿಯಮ 22 ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ಮತ್ತು ಇತರ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ("SS-2") ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('MCA') ನಿಗದಿಪಡಿಸಿದ ಅಗತ್ಯತೆಗಳಿಗೆ ಅನುಗುಣವಾಗಿ, ಇ–ಮತದಾನದ ಮೂಲಕ ಸಾಮಾನ್ಯ ಸಭೆಗಳನ್ನು ಅಥವಾ ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸುವ ಕುರಿತು, ದಿನಾಂಕ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಅನ್ನು ಇತರೆ ಸಂಬಂಧಿತ ಸುತ್ತೋಲೆಗಳೊಂದಿಗೆ ಓದಿಕೊಂಡು ("MCA ಸುತ್ತೋಲೆಗಳು") ಮತ್ತು ಅದರ ಅನುಸಾರವಾಗಿ ನಿಯಮ 44 ರಲ್ಲಿ ಹೊರಡಿಸಲಾದ ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ("SEBI ಪಟ್ಟಿಯ ನಿಯಮಗಳು 2015") (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಅನುಷ್ಠಾನವನ್ನು ಒಳಗೊಂಡಂತೆ) ನಿಗದಿಪಡಿಸಿದ ನಿರ್ಣಯಗಳು ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ಸದಸ್ಯರು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಮತ ಚಲಾಯಿಸುವ ಮೂಲಕ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ ('ರಿಮೋಟ್ ಇ–ವೋಟಿಂಗ್').

ಮೇಲೆ ತಿಳಿಸಿದ MCA ಸುತ್ತೋಲೆಯ ಅನುಸರಣೆಯಲ್ಲಿ, ಈ ಸೂಚನೆಯನ್ನು ಕೇವಲ ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಲಾಗುತ್ತಿದೆ, ಯಾರ ಹೆಸರುಗಳು ಸದಸ್ಯರ ನೋಂದಣಿ ಪುಸ್ತಕದಲ್ಲಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ದಾಖಲಾಗಿವೆಯೋ ಮತ್ತು ಕಂಪನಿಯೊಂದಿಗೆ ಕಟ್–ಆಫ್ ದಿನಾಂಕದಂದು, ಅಂದರೆ **ಶುಕ್ರವಾರ, ನವೆಂಬರ್ 14, 2025** ರಂದು ವ್ಯವಹಾರದ ಸಮಯ ಮುಗಿಯುವ ಹೊತ್ತಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿರುತ್ತಾರೋ ಅಂತಹ ಸದಸ್ಯರಿಗೆ ಮಾತ್ರ ಕಳುಹಿಸಲಾಗುತ್ತಿದೆ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಕಂಪನಿಯ ಪಾವತಿಯಾದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರ ಷೇರು ಹಿಡುವಳಿಯ ಪ್ರಮಾಣದಲ್ಲಿ ಇರುತ್ತವೆ. ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು, ದಯವಿಟ್ಟು ಸೂಚನೆಯ ಟಿಪ್ಪಣಿ ಸಂಖ್ಯೆ 14 ರ ಅಡಿಯಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕು. ಕಟ್–ಆಫ್ ದಿನಾಂಕದಂದು ಯಾರ ಹೆಸರುಗಳು ಸದಸ್ಯರ ನೋಂದಣಿ ಪುಸ್ತಕದಲ್ಲಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಕಾಣಿಸುತ್ತವೆಯೋ, ಅಂತಹ ಸದಸ್ಯರು ಸೂಚನೆಯಲ್ಲಿ ನಿಗದಿಪಡಿಸಿದ ನಿರ್ಣಯ(ಗಳ) ಮೇಲೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿ ಈ ಸೂಚನೆಯನ್ನು ಕೇವಲ ಮಾಹಿತಿಯ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.

ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿಯೂ ಸಹ ಲಭ್ಯವಾಗುವಂತೆ ಮಾಡಲಾಗಿದೆ. ಈ ಮಾಹಿತಿಯು ಸ್ಟಾಕ್ ಎಕ್ಸ್ಚೇಂಜ್‌ಗಳಾದ BSE ಲಿಮಿಟೆಡ್, www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, www.nseindia.com ಮತ್ತು CDSL ವೆಬ್‌ಸೈಟ್ www.evotingindia.com ನಲ್ಲಿ ಸಹ ಲಭ್ಯವಿದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ, MCA ಸುತ್ತೋಲೆಗಳೊಂದಿಗೆ, ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಿದೆ ಹಾಗೂ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (CDSL) ಒದಗಿಸಿದ ರಿಮೋಟ್ ಇ–ವೋಟಿಂಗ್ ಸೇವೆಗಳ ಮೂಲಕ ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಬಹುದು. ಈ ಉದ್ದೇಶಕ್ಕಾಗಿ ಕಟ್–ಆಫ್ ದಿನಾಂಕವು **ಶುಕ್ರವಾರ, ನವೆಂಬರ್ 14, 2025** ಆಗಿದೆ ಮತ್ತು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಕಟ್–ಆಫ್ ದಿನಾಂಕದಂದು ಡಿಪಾಸಿಟರಿಗಳಲ್ಲಿ ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ನೋಂದಾಯಿಸಿರುವ ಸದಸ್ಯರು ಮಾತ್ರ ಇ–ಮತದಾನ ಸೇವೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದ ನಂತರ ಸದಸ್ಯರಾದವರು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು. ಇ–ಮತದಾನದ ಅವಧಿಯು **ಶನಿವಾರ, ನವೆಂಬರ್ 22, 2025 ರಂದು ಬೆಳಿಗ್ಗೆ 9:00 ಗಂಟೆಗೆ** (IST) **ಪ್ರಾರಂಭವಾಗುತ್ತದೆ ಮತ್ತು ಭಾನುವಾರ, ಡಿಸೆಂಬರ್ 21, 2025 ರಂದು ಸಂಜೆ 5:00 ಗಂಟೆಗೆ** (IST) ಗೆ ಕೊನೆಗೊಳ್ಳುತ್ತದೆ. ಆನಂತರ CDSL ಇ–ವೋಟಿಂಗ್ ಮಾಡ್ಯೂಲ್ ಅನ್ನು ಮತ ಚಲಾಯಿಸಲು ನಿಷ್ಕ್ರಿಯಗೊಳಿಸುತ್ತದೆ.

ಡಿಮೆಟಿರಿಯಲೈಸ್ಡ್ ಮತ್ತು ಫಿಸಿಕಲ್ ರೀತಿಗಳಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಹಾಗೂ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ವಿಧಾನವನ್ನು ಪೋಸ್ಟಲ್ ಬ್ಯಾಲೆಟ್ ಸೂಚನೆಯಲ್ಲಿ ಒದಗಿಸಲಾಗಿದೆ.

ಶ್ರೀ ಚಂದ್ರ ಶೇಖರ್ ಕಂಡುಕೂರಿ, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (ACS No. 14441 / PCS No. 24363), ಬೆಂಗಳೂರು, ಇವರನ್ನು ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರಾಗಿ ನೇಮಿಸಲಾಗಿದೆ. ಪೋಸ್ಟಲ್ ಬ್ಯಾಲೆಟ್ ಮೂಲಕ ನಡೆಸಿದ ಇ–ವೋಟಿಂಗ್ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಇ–ಮತದಾನ ಮುಗಿದ ಎರಡು ಕಾರ್ಯಾಚರಣಾ ದಿನಗಳಲ್ಲಿ ಪ್ರಕಟಿಸಲಾಗುವುದು. ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ www.kirloskarelectric.com ನಲ್ಲಿ ಪ್ರದರ್ಶಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳು ಅಂದರೆ, BSE ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ನಲ್ಲಿ, ಮತ್ತು CDSL ನ ವೆಬ್‌ಸೈಟ್ www.evotingindia.com ನಲ್ಲಿ ಪ್ರಕಟಿಸಲಾಗುವುದು.

ಲಾಗಿನ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು helpdesk.evoting@cdslindia.com ಗೆ ವಿನಂತಿಯನ್ನು ಕಳುಹಿಸುವ ಮೂಲಕ CDSL ಸಹಾಯವಾಣಿಯನ್ನು ಸಂಪರ್ಕಿಸಬಹುದು ಮತ್ತು ಒಂದು ಪ್ರತಿಯನ್ನು investors@kirloskarelectric.com ಗೆ ಕಳುಹಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್,
ಸಹಿ/–
ಮಹಾಬಲೇಶ್ವರ ಭಟ್,
ವೈಸ್ ಪ್ರೆಸಿಡೆಂಟ್ – ಕಾರ್ಪೊರೇಟ್ ವ್ಯವಹಾರಗಳು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ನವೆಂಬರ್ 20, 2025

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO India

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 22210705; ಫ್ಯಾಕ್ಸ್: +91 80 2224 5253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೂಚನೆ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ("ಕಂಪನಿ") ಶ್ರೀ ನಾರಾಯಣ್ ಕೆ. ಶೇಷಾದ್ರಿ (DIN 00053563) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸಲು ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ದೂರಸ್ಥ ಇ–ಮತದಾನದ ಮೂಲಕ ಅಂಚೆ ಮತಪತ್ರದ ಮೂಲಕ ಸದಸ್ಯರ ಅನುಮೋದನೆಯನ್ನು ಪಡೆಯಲಾಗುತ್ತಿದೆ.

ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 108 ಮತ್ತು 110ರ ಅನುಸಾರವಾಗಿ (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಜಾರಿ ಸೇರಿದಂತೆ) (ಕಾಯ್ದೆ), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ನಿಯಮ 20 ಮತ್ತು 22ರೊಂದಿಗೆ ಓದಿ ('ನಿಯಮಗಳು') ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ('ಎಂಸಿಎ') ಸೂಚಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇ–ವೋಟಿಂಗ್ ಮೂಲಕ ಸಾಮಾನ್ಯ ಸಭೆ/ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸಲು ಸೆಪ್ಟೆಂಬರ್ 22, 2025ರ ಸಾಮಾನ್ಯ ಸುತ್ತೋಲೆ ಸಂಖ್ಯೆ. 03/2025 ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಇತರ ಅನ್ವಯವಾಗುವ ಸುತ್ತೋಲೆಗಳು ('ಎಂಸಿಎ ಸುತ್ತೋಲೆಗಳು'), ಮತ್ತು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗ ಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 44, (ಎಲ್‌ಒಡಿಆರ್ ನಿಯಮಗಳು) ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ('ಎಸ್‌ಎಸ್–2') ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳು, ನಿಯಮಗಳು, ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು ಜಾರಿಗೊಳಿಸುವಿಕೆ ಸೇರಿದಂತೆ ಅದರ ಅಡಿಯಲ್ಲಿ ಹೊರಡಿಸಲಾದ ಸುತ್ತೋಲೆಗಳು ಮತ್ತು ಅಧಿಸೂಚನೆಗಳು ಕಂಪನಿಯು 20ನೇ ನವೆಂಬರ್ 2025ರಂದು ಯಾವ ಸದಸ್ಯರ ಹೆಸರು ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರೊಂದಿಗೆ ('ಡಿಪಿಗಳು') ತಮ್ಮ ಇಮೇಲ್ ನೀಡಿರುವವರಿಗೆ ನ್ಯಾಶನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ('ಎನ್‌ಎಸ್‌ಡಿಎಲ್') ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನಿಂದ ಶುಕ್ರವಾರ 7ನೇ ನವೆಂಬರ್ 2025 ('ಕಟ್–ಆಫ್ ದಿನಾಂಕ') ಸ್ವೀಕರಿಸಿದಂತೆ ಸದಸ್ಯರ ನೋಂದಣಿ/ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಇಮೇಲ್ ವಿಳಾಸಗಳು ದಾಖಲಿಸಿರುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ಮೋಡ್ ಮೂಲಕ ಅಂಚೆ ಮತಪತ್ರ ನೋಟೀಸನ್ನು ಕಳುಹಿಸಿದೆ. ಅದರಂತೆ, ಅಂಚೆ ಮತಪತ್ರ ಸೂಚನೆಯ ಭೌತಿಕ ಪ್ರತಿ ಮತ್ತು ಪೂರ್ವ–ಪಾವತಿಸಿದ ವ್ಯವಹಾರ ಪ್ರತ್ಯುತ್ತರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸಲಾಗಿಲ್ಲ.

ಅಂಚೆ ಮತದಾನದ ನೋಟೀಸು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರಗಳಾದ ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ') ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ')ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಗಳಲ್ಲಿ ಹಾಗೂ ಸಿಡಿಎಸ್‌ಎಲ್‌ನ www.evotingindia.com ಗಳಲ್ಲಿ ಲಭ್ಯವಿದೆ.

ಸದಸ್ಯರ ದಾಖಲೆ ಪುಸ್ತಕ / ಕಟ್–ಆಫ್ ದಿನಾಂಕದಲ್ಲಿದ್ದಂತೆ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ನೋಟೀಸಿನಲ್ಲಿ ನಿಗದಿಪಡಿಸಿದ ಗೊತ್ತುವಳಿಗೆ ಮತ ಚಲಾಯಿಸಬಹುದು. ಸದಸ್ಯರ ಮತ ನೀಡುವ ಅಧಿಕಾರವು ಅವರು ಹೊಂದಿರುವ ಪ್ರಮಾಣದ ಪೂರ್ಣಪಾವತಿಯಾದ, ಕಂಪನಿಯ ಈಕ್ವಿಟಿ ಷೇರು ಬಂಡವಾಳದ, ಕಟ್–ಆಫ್ ದಿನಾಂಕದಲ್ಲಿದ್ದ ಷೇರುಗಳನ್ನು ಅವಲಂಬಿಸಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಅಂಚೆ ಮತಪತ್ರ ಪ್ರಕಟಣೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಕಂಪನಿಯು ತನ್ನ ಸದಸ್ಯರಿಗೆ ಪರೋಕ್ಷ ಇ–ವೋಟಿಂಗ್ ಸೌಲಭ್ಯ ಒದಗಿಸಲು ಸಿಡಿಎಸ್‌ಎಲ್ ಸೇವೆಯನ್ನು ಪಡೆದುಕೊಂಡಿದೆ. ಪರೋಕ್ಷ ಮತದಾನವು ಶುಕ್ರವಾರ 21ನೇ ನವೆಂಬರ್, 2025ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗಿ 20ನೇ ಡಿಸೆಂಬರ್ 2025 ಶನಿವಾರ ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯವಾಗುತ್ತದೆ. ಪರೋಕ್ಷ ಇ–ವೋಟಿಂಗ್ ಮಾಡ್ಯೂಲ್ ವ್ಯವಸ್ಥೆಯು ನಂತರ ಸಿಡಿಎಸ್‌ಎಲ್ ನಿಂದ ನಿಷ್ಕ್ರಿಯೆ ಮಾಡಲ್ಪಡುವುದು. ಸದಸ್ಯರು ಒಮ್ಮೆ ಗೊತ್ತುವಳಿಗೆ ಮತ ಚಲಾಯಿಸಿದ ನಂತರ ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.

ಇ–ಮೇಲ್ ವಿಳಾಸ ನೋದಾಯಿಸಿಲ್ಲದ ಸದಸ್ಯರು ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)/ಡಿಪಿಗಳ ಬಳಿ ನೋದಾವಣೆ ಮಾಡಬಹುದು. ಇ–ಮೇಲ್ ವಿಳಾಸ ನೋಂದಾಯಿಸುವ ಹಾಗೂ ಪರೋಕ್ಷ ಇ–ವೋಟಿಂಗ್ ಮಾಡುವ ವಿಧಾನಗಳು ನೋಟೀಸಿನಲ್ಲಿ ಲಭ್ಯವಿವೆ.

ಶ್ರೀ ಸುಧೀರ್ ವಿ ಹುಲ್ಯಾಳ್ಕರ್, ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ ವಿಫಲವಾದಲ್ಲಿ ಶ್ರೀ ಸುಧೀಂದ್ರ ಕೆ ಎಸ್ ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ ಅವರನ್ನು ಅಂಚೆ ಮತಪತ್ರದ ಮೂಲಕ ಚಲಾವಣೆಯಾದ ಮತಗಳನ್ನು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯಲ್ಲಿ ನ್ಯಾಯಯುತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ಪರಿಶೀಲಕರನ್ನಾಗಿ ನೇಮಿಸಲಾಗಿದೆ.

ಅಗತ್ಯವಿರುವ ಬಹುಮತದಿಂದ ಅಂಗೀಕರಿಸಲ್ಪಟ್ಟ ನಿರ್ಣಯವನ್ನು ಡಿಸೆಂಬರ್ 20, 2025ರ ಶನಿವಾರ ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ, ಇದು ಕಂಪನಿಯ ಇ–ಮತದಾನಕ್ಕಾಗಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕವಾಗಿದೆ. ಅಂಚೆ ಮತದಾನದ ಫಲಿತಾಂಶವನ್ನು ಮಂಗಳವಾರ 23ನೇ ಡಿಸೆಂಬರ್ 2025ರಂದು ಅಥವಾ ಅದಕ್ಕೆ ಮುಂಚಿತವಾಗಿ ಘೋಷಿಸಲಾಗುವುದು. ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಬಿಎಸ್‌ಇ ಮತ್ತು ಎನ್‌ಎಸ್‌ಇ ಗೆ ಕಳುಹಿಸಲಾಗುವುದು ಹಾಗೂ ಕಂಪನಿಯ ವೆಬ್ ಸೈಟ್ www.diageoindia.com ಮತ್ತು ಸಿಡಿಎಸ್‌ಎಲ್‌ನ ವೆಬ್ ಸೈಟ್ www.evotingindia.com ಗಳಲ್ಲಿ ಅಪ್ಲೋಡ್ ಮಾಡಲಾಗುವುದು.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು helpdesk.evoting@cdslindia.com ಗೆ ಇಮೇಲ್ ಬರೆಯಬಹುದು ಅಥವಾ ಟೋಲ್ ಫ್ರೀ ಸಂಖ್ಯೆ 18002109911ಗೆ ಸಂಪರ್ಕಿಸಬಹುದು ಅಥವಾ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25ನೇ ಮಹಡಿ, ಮ್ಯಾರಥಾನ್ ಫ್ಯೂಚರ್ಕ್ಸ್, ಮಫತ್ಲಾಲ್ ಮಿಲ್ ಕಾಂಪೌಂಡ್ಸ್, ಎನ್ ಎಂ ಜೋಶಿ ಮಾರ್ಗ್, ಲೋವರ್ ಪರೇಲ್ (ಪೂರ್ವ), ಮುಂಬೈ – 400013 ನಲ್ಲಿ ಶ್ರೀ ರಾಕೇಶ್ ದಳವಿ, ಸೀನಿಯರ್ ಮ್ಯಾನೇಜರ್, (CDSL) ಅವರಿಗೆ ವಿನಂತಿಯನ್ನು helpdesk.evoting@cdslindia.com ಗೆ ಕಳುಹಿಸಬಹುದು.

ಸದಸ್ಯರು ನೋಟೀಸಿನಲ್ಲಿ ವಿವರಿಸಿರುವ ಎಲ್ಲಾ ಟಿಪ್ಪಣಿಗಳನ್ನು ಗಮನವಿಟ್ಟು ನೋಡಲು ವಿಶೇಷವಾಗಿ ಪರೋಕ್ಷ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದಿಕೊಳ್ಳಲು ಕೋರಲಾಗಿದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಪ್ರಗ್ಯಾ ಕೌಲ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 20ನೇ ನವೆಂಬರ್, 2025

ಸ್ಥಾಪನೆ: 1970

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ.,

ರಾಜಾರಾಂ ಮೋಹನ್‌ರಾಯ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560 027

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ತನ್ನ ನೌಕರರಿಗೆ ಬಡಾವಣೆಗಳನ್ನು ನಿರ್ಮಿಸುತ್ತಾ ಬಂದಿದೆ. ಇದೀಗ ಹೊಸದಾಗಿ 2 ಬಡಾವಣೆಗಳನ್ನು ರಚಿಸಲು ತೀರ್ಮಾನಿಸಿದೆ. ಅದರಂತೆ ಒಂದು ಬಡಾವಣೆಯು ಬೆಂಗಳೂರು-ಮೈಸೂರು ಹೆದ್ದಾರಿಗೆ ಸಮೀಪದಲ್ಲಿ ವಂಡರ್‌ಲಾ ಇಂದ ಮುಂದಕ್ಕೆ ಬರುವ ಬನ್ನಿಕುಪ್ಪೆ ಗ್ರಾಮದಲ್ಲಿರುತ್ತದೆ.

ಮತ್ತೊಂದು ಬಡಾವಣೆಯು ಕನಕಪುರರಸ್ತೆಯಿಂದ ಉತ್ತರಿ ಗ್ರಾಮದ ಮುಖಾಂತರ ಚಿನಕುರಚಿ ಎಂಬ ಗ್ರಾಮದ 57ನೇ ಸರ್ವೆ ನಂ. ನಲ್ಲಿ ಬರುತ್ತದೆ. ಈ ಎರಡು ಬಡಾವಣೆಗೆ ಸಂಬಂಧಿಸಿದಂತೆ ಅಭಿವೃದ್ಧಿದಾರರೊಂದಿಗೆ ಒಡಂಬಡಿಕೆ ಯಾಗಿದ್ದು, ಮುಂದಿನ ಕೆಲಸಗಳು ಪ್ರಗತಿಯಲ್ಲಿದೆ.

ನಮ್ಮ ಸಂಘದ ವತಿಯಿಂದ ನಿವೇಶನ ಪಡೆಯದ ಬಿ.ಬಿ.ಎಂ.ಪಿ ಯ ಎಲ್ಲಾ ಅಧಿಕಾರಿ ಮತ್ತು ನೌಕರರಿಗೆ ನಿವೇಶನ ಪಡೆಯಲು ಇದೊಂದು ಸಧಾವಕಾಶ ಮಾಡಲಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಸಂಘದ ಉಪಾಧ್ಯಕ್ಷರ ನೇತೃತ್ವದಲ್ಲಿ ಅಧಿಕಾರಿ ಮತ್ತು ನೌಕರರುಗಳನ್ನು ಸಂಪರ್ಕಿಸಲು ಎಲ್ಲಾ ಕಛೇರಿಗಳಿಗೆ ತೆರಳಿ ಪ್ರಚಾರ ಮಾಡಲಾಗುತ್ತಿದೆ. ಹಾಗೆ ವಾಟ್ಸ್‌ಅಪ್, ಕರಪತ್ರದ ಮೂಲಕ ಮಾಹಿತಿ ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ನಿವೇಶನದ ಆಕಾಂಕ್ಷಿಗಳು ಸಂಘದ ಕಛೇರಿಯನ್ನು ಸಂಪರ್ಕಿಸಿ ವಿವರ ಪಡೆದು ಸದಸ್ಯತ್ವವನ್ನು, ಹೊಂದಿ ನಿವೇಶನವನ್ನು ಖರೀದಿಸಲು ಮುಂದಾಗಬೇಕೆಂದು ಆಶಿಸುತ್ತೇವೆ.

ಆದರೆ ಸದರಿ ವಿಷಯವು ಹಲವಾರು ಕಾರಣಗಳಿಂದ ಕೆಲವು ಅಧಿಕಾರಿಗಳು ಮತ್ತು ನೌಕರರಿಗೆ ತಲುಪದ ಪ್ರಯುಕ್ತ ನಿವೇಶನ ಹೊಂದುವ ಇಚ್ಛೆಯಿರುವವರಿಗೆ ಮತ್ತೊಮ್ಮೆ ಅವಕಾಶವು ಸಿಗಲಿ ಎಂಬ ಉದ್ದೇಶದಿಂದ ಈ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುತ್ತಿದೆ. ಇದನ್ನು ನಮ್ಮ ಎಲ್ಲಾ ಅಧಿಕಾರಿ ಮತ್ತು ನೌಕರರು ಉಪಯೋಗಿಸಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ,
ಆರ್ ಸುಬ್ರಮಣ್ಯಂ, ಅಧ್ಯಕ್ಷರು

ಪೀಣ್ಯ: ಬಸ್ ಪ್ರಯಾಣಿಕರ ಪೀಕಲಾಟ

ಸುಸಜ್ಜಿತ ಬಸ್ ನಿಲ್ದಾಣ, ಸುಗಮ ಸಂಚಾರಕ್ಕೆ ಹೆಚ್ಚಿದ ಬೇಡಿಕೆ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಅಡ್ಡಾದಿಡ್ಡಿ ಸಂಚರಿಸುವ ಬಸ್‌ಗಳು, ಜೀವ ಕೈಯಲ್ಲಿ ಹಿಡಿದುಕೊಂಡು ಬಸ್ ಹತ್ತಲು ಹರಸಾಹಸ ಪಡುವ ಪ್ರಯಾಣಿಕರು, ಪಾದಚಾರಿ ಮಾರ್ಗ ಇಲ್ಲದೇ ಪರದಾಡುವ ಜನರು, ನಿಂತುಕೊಳ್ಳಲು ಆಗದೇ ಅತ್ತ ರಸ್ತೆ ದಾಟಲು ಹರಸಾಹಸ ಪಡುವ ಸಾರ್ವಜನಿಕರು....

– ಇದು ಪೀಣ್ಯ ಎರಡನೇ ಹಂತದ ಬಸ್ ನಿಲ್ದಾಣದ ಸಮಸ್ಯೆಗಳ ನೋಟ.

ಬಿಎಂಟಿಸಿ ಬಸ್ ನಿಲ್ದಾಣವು ಪೀಣ್ಯ 2ನೇ ಹಂತದಲ್ಲಿದೆ. ಪ್ರತಿನಿತ್ಯ ನೂರಾರು ಬಿಎಂಟಿಸಿ ಬಸ್ ಸಂಚರಿಸುತ್ತವೆ. ರಾತ್ರಿ ವೇಳೆ ಬಸ್‌ಗಳು ಕೂಡ ಇಲ್ಲೇ ತಂಗುತ್ತವೆ. ಆದರೆ, ಬಸ್ ತಂಗುದಾಣವಿಲ್ಲದೆ ಪ್ರಯಾಣಿಕರು ರಸ್ತೆ ಮಧ್ಯೆ ನಿಂತು ಬಸ್ ಹತ್ತುವ ಪರಿಸ್ಥಿತಿ ನಿರ್ಮಾಣವಾಗಿದೆ.

'ಪೀಣ್ಯ ಬಸ್ ನಿಲ್ದಾಣಕ್ಕೆ ನಿತ್ಯ ಸಾವಿರಾರು ಪ್ರಯಾಣಿಕರು ಬಂದು ಹೋಗುತ್ತಾರೆ. ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ, ನೆಲಮಂಗಲ, ಕೆಂಗೇರಿ, ಶಿವಾಜಿನಗರ, ಯಲಹಂಕ, ಕೆ.ಆರ್.ಪುರ ಸೇರಿದಂತೆ ನಗರದ ಎಲ್ಲಾ ಭಾಗಗಳಿಗೂ ಬಸ್‌ಗಳು ಸಂಚರಿಸುತ್ತವೆ. ಆದರೂ ವ್ಯವಸ್ಥಿತ ಬಸ್ ನಿಲ್ದಾಣ ಇಲ್ಲಿಲ್ಲ' ಎಂದು ಸ್ಥಳೀಯರು ಆರೋಪಿಸುತ್ತಾರೆ.

ಸಂಚಾರ ಕಿರಿಕಿರಿ: ಬಸ್ ನಿಲ್ದಾಣದ ಮೂರು ಕಡೆ ಕೂಡುವ ರಸ್ತೆಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆ ವಾಹನಗಳು ಸಾಲುಗಟ್ಟಿ ನಿಂತು ಸಂಚಾರ ಸಮಸ್ಯೆ ಆಗುತ್ತಿದೆ. ಇದರಿಂದ ಪ್ರಯಾಣಿಕರು ಕಚೇರಿಗೆ ಹೋಗುವುದು ವಿಳಂಬ ವಾಗುತ್ತಿದೆ. ಅಲ್ಲದೆ ಸಂಜೆ ಮನೆ ತಲುಪುವುದು ತಡವಾಗುತ್ತಿದೆ.

ಅತಿದೊಡ್ಡ ಕೈಗಾರಿಕಾ ಪ್ರದೇಶ ಎಂಬ ಖ್ಯಾತಿ ಪಡೆದಿರುವ ಇಲ್ಲಿಗೆ ರಾಜ್ಯ ಮಾತ್ರವಲ್ಲದೇ ದೇಶದ ಬೇರೆ ಕಡೆಯಿಂದಲೂ ಜನರು ಉದ್ಯೋಗ ಅರಸಿ ಬರುತ್ತಾರೆ. ಕೆಲವರು ಪೀಣ್ಯ ಭಾಗದಲ್ಲಿ ನೆಲಸಿದ್ದಾರೆ. ಬಹುಪಾಲು ಕಾರ್ಮಿಕರು ಬಿಎಂಟಿಸಿ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ದಿನನಿತ್ಯವೂ ಕಷ್ಟದಿಂದಲೇ ಇಲ್ಲಿಂದ ಅವರೆಲ್ಲರೂ ಸಂಚರಿಸುತ್ತಾರೆ.

ಇಲ್ಲಿನ ರಸ್ತೆ ಬದಿಯಲ್ಲಿ ನಿಂತಿದ್ದ ಪ್ರಯಾಣಿಕರ ಮೇಲೆ ಬಸ್ ನುಗ್ಗಿದ್ದರಿಂದ ಮಹಿಳೆ ಸಾವನ್ನಪ್ಪಿದ್ದು, ನಾಲ್ವರು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡ ಉದಾಹರಣೆ ಇದೆ.

ಪೀಣ್ಯ 2ನೇ ಹಂತದ ಬಸ್ ನಿಲ್ದಾಣದಲ್ಲಿ ಅಡ್ಡಾದಿಡ್ಡಿ ಚಲಿಸುವ ಬಸ್‌ಗಳು

ಪಾದಚಾರಿ ಮಾರ್ಗವನ್ನು ಸಣ್ಣ ಪುಟ್ಟ ವ್ಯಾಪಾರಿಗಳು ಆಕ್ರಮಿಸಿಕೊಂಡು ನಿಲ್ಲಲು ಸ್ಥಳಾವಕಾಶವಿಲ್ಲದಾಗಿದೆ. ಮೂರು ಕಡೆಗಳಿಂದ ವಾಹನ ಬರುವ ಕಾರಣ ದಾಟಲು ಹರಸಾಹಸಪಡಬೇಕಾಗಿದೆ

ಕೆ.ಜಿ.ಕುಮಾರ್, ಅಧ್ಯಕ್ಷ, ಹಸಿರು ಪ್ರತಿಷ್ಠಾನ

ಪ್ರಿಯದರ್ಶಿನಿ ಕೈಮಗ್ಗ ವಿಭಾಗಕ್ಕೆ ಸರ್ಕಾರ ಮಂಜೂರು ಮಾಡಿದ ಜಾಗವನ್ನು ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲು ಸಾರಿಗೆ ನಿಗಮಕ್ಕೆ ನೀಡಲು ಸಚಿವ ಶಿವಾನಂದ ಪಾಟೀಲರಿಗೆ ಮನವಿ ಮಾಡಿದ್ದೇವೆ

ದಾನಪ್ಪ, ಅಧ್ಯಕ್ಷ, ಪೀಣ್ಯ ಕೈಗಾರಿಕಾ ಸಂಘ

'ಪಕ್ಕದಲ್ಲೇ ಖಾಲಿ ಇರುವ 4 ಎಕರೆ ಸರ್ಕಾರಿ ಜಾಗದಲ್ಲಿ ಬಿಎಂಟಿಸಿ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಿಸಿ' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

973 ಹುದ್ದೆಗಳ ನೇಮಕಾತಿ: ಲಿಖಿತ ಪರೀಕ್ಷೆ ಡಿ.20ರಿಂದ

ಬೆಂಗಳೂರು: ತಾಂತ್ರಿಕ ಶಿಕ್ಷಣ, ಕೃಷಿ ಮಾರಾಟ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆ, ನಿಗಮಗಳಲ್ಲಿನ 973 ಖಾಲಿ ಹುದ್ದೆಗಳ ನೇಮಕಾತಿಗೆ ಡಿ.20, 21, ಜ.24 ಮತ್ತು ಫೆ.22ರಂದು ಲಿಖಿತ ಪರೀಕ್ಷೆಗಳು ನಡೆಯಲಿವೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ತಾಂತ್ರಿಕ ಶಿಕ್ಷಣ, ಕೃಷಿ ಮಾರಾಟ, ಬಿಡಿಎ, ಬೆಂಗಳೂರು ಜಲಮಂಡಳಿ, ಕೆಎಸ್‌ಡಿಎಲ್, ಕೆಕೆಆರ್‌ಟಿಸಿ, ಆರ್‌ಜಿಯುಎಚ್‌ಎಸ್, ಕೆಎಸ್‌ಎಸ್‌ಐ-ಡಿಸಿ, ಶಾಲಾ ಶಿಕ್ಷಣ ಇಲಾಖೆಗಳ ಒಟ್ಟು ಖಾಲಿ ಹುದ್ದೆಗಳಲ್ಲಿ ಹೈದರಾಬಾದ್ ಕರ್ನಾಟಕ (ಎಚ್‌ಕೆ) ಕೋಟಾಕ್ಕೆ 391, ಹೈದರಾಬಾದ್ ಕರ್ನಾಟಕ ಕೋಟಾ ಹೊರತಾದ ಹುದ್ದೆಗಳು 582 ಇವೆ.

'ಎಚ್‌ಕೆ ಹಾಗೂ ಇತರೆ ಕೋಟಾದ ಎರಡೂ ಪರೀಕ್ಷೆಗಳಲ್ಲೂ ಋಣಾತ್ಮಕ ಮೌಲ್ಯಮಾಪನ ಇರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ 1/4 ಅಂಕ ಕಡಿತ ಮಾಡಲಾಗುತ್ತದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಮುಖ್ಯಮಂತ್ರಿ ಹಾಸನ ಭೇಟಿ: ಸಿದ್ಧತೆಗೆ ಸಚಿವರ ಸಭೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸೆಂಬರ್ 6ರಂದು ಹಾಸನ ಜಿಲ್ಲೆಗೆ ಭೇಟಿ ನೀಡಲಿದ್ದು, ಸಿದ್ಧತೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಜಿಲ್ಲೆಯ ಶಾಸಕರು ಮತ್ತು ಸಂಸದರ ಜತೆಗೆ ಸಭೆ ನಡೆಸಿದರು.

ವಿಕಾಸ ಸೌಧದಲ್ಲಿರುವ ಸಚಿವರ ಕೊಠಡಿಯಲ್ಲಿ ಗುರುವಾರ ಸಭೆ ನಡೆಯಿತು. ಜಿಲ್ಲೆಯಲ್ಲಿನ ನೂತನ ಕಂದಾಯ ಗ್ರಾಮಗಳ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಯಿತು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಟಿ.ಎಲ್. ಲಕ್ಷ್ಮೀಪತಿ

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ (BIAAPA), ದೇವನಹಳ್ಳಿ ಇವರು ನಗರ ಮತ್ತು ಪ್ರಾದೇಶಿಕ ಯೋಜನೆ ವಿಷಯದಲ್ಲಿ ಪ್ರೊ. ಡಾ॥ ಹೆಚ್.ಎನ್. ನಾಗೇಂದ್ರ ಇವರ ಮಾರ್ಗದರ್ಶನದಲ್ಲಿ ಮಂಡಿಸಿದ "Planning Imperatives of Village Peripheral Areas in Bangalore Metropolitan Region: A Study of Bengaluru International Airport Planning Area" ಎಂಬ ಶೀರ್ಷಿಕೆಯುಳ್ಳ ಮಹಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯವು ಪಿ.ಹೆಚ್.ಡಿ ಪದವಿಯನ್ನು ನೀಡಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203, ದೂರವಾಣಿ : 080-29562046

ಸಂಖ್ಯೆ: DPA/TP/CLU/53/2025-26 ದಿನಾಂಕ:19.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾ ಯೋಜನೆಯಲ್ಲಿನ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ಭಾಗ್ಯಲಕ್ಷ್ಮೀ ಆರ್. ಕೋಂ ಲೇ॥ ಕೆ.ಎನ್.ನಾಗರಾಜು	ದೊಡ್ಡ ಬಳ್ಳಾಪುರ	ಕಸಬಾ	ವಡ್ಡರಹಳ್ಳಿ	129/18	2–20 + 0–2.75 'ಎ' ಖರಾಬ್	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರಾ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052, ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/98/2025-26 ದಿನಾಂಕ: 18.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ವಿಜಯ ಕುಮಾರ್ ಆರ್. ಬಿನ್ ಲೇಟ್ ರಾಮಕೃಷ್ಣಪ್ಪ, ಹೊಸಹುಡ್ಯ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ದೊಡ್ಡ ಬಳ್ಳಾಪುರ	ದೊಡ್ಡ ಬೆಳವಂಗಲ	ಹುಲಿಕುಂಟೆ	27/2 27/5	0–20 0–20	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR)
ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3937/ಶಿರಡಿ ಸಾಯಿ/2025–26

ಮಕ್ಕಳ ಸಹಾಯವಾಣಿಗೆ 6.87 ಲಕ್ಷ ಕರೆ

33,945 ಪ್ರಕರಣಗಳಲ್ಲಿ ಬಾಲ್ಯ ವಿವಾಹದ ದೂರುಗಳೇ ಅಧಿಕ

● ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯದಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಕಳೆದ ಎರಡು ವರ್ಷಗಳಲ್ಲಿ ಮಕ್ಕಳ ಸಹಾಯವಾಣಿಗೆ ಒಟ್ಟು 6.87 ಲಕ್ಷ ಕರೆಗಳು ಬಂದಿದ್ದು, ಇದರಲ್ಲಿ 33,945 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಬಾಲ್ಯ ವಿವಾಹ ಮಾಡಲು ಯತ್ನಿಸಿದ ಬಗ್ಗೆ 8,171 ದೂರುಗಳು ಬಂದಿವೆ.

ಮಕ್ಕಳ ರಕ್ಷಣೆಗಾಗಿ ಆರಂಭಿಸಿರುವ 'ನೋವಿನ ಧ್ವನಿ' ಸಹಾಯವಾಣಿಗೆ (1098) ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಮಕ್ಕಳ ನಾಪತ್ತೆ, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012), ಮಕ್ಕಳ ಕಳ್ಳಸಾಗಣೆ, ದೈಹಿಕ ಹಿಂಸೆ, ಮಾನಸಿಕ ಹಿಂಸೆ, ಭಿಕ್ಷಾಟನೆ, ಪೋಷಕರ ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳು ಸೇರಿದಂತೆ ಹಲವು ರೀತಿಯ ದೌರ್ಜನ್ಯ ಪ್ರಕರಣಗಳ ಬಗ್ಗೆ ದೂರುಗಳು ಬಂದಿವೆ. ಈ ಎಲ್ಲಾ ಕರೆಗಳಿಗೂ ಮಕ್ಕಳ ರಕ್ಷಣಾ ಘಟಕ ಸ್ಪಂದಿಸುತ್ತಿದ್ದು, ಸತ್ಯಾಂಶ ಪರಿಶೀಲಿಸಿ ಬಳಿಕ ಕ್ರಮಕ್ಕೆ ಮುಂದಾಗುತ್ತಿದೆ.

'2023ರ ಸೆಪ್ಟೆಂಬರ್‌ನಿಂದ 2025ರ ಅಕ್ಟೋಬರ್‌ವರೆಗೆ ಒಟ್ಟು 6.87 ಲಕ್ಷ ಕರೆಗಳಲ್ಲಿ 81,303 ಕರೆಗಳಿಗೆ ಮಾಹಿತಿ ನೀಡಿ ವಿಲೇವಾರಿ ಮಾಡಲಾಗಿದೆ. 5.72 ಲಕ್ಷ ಅಸಂಬಂಧಿತ ಕರೆಗಳು ಬಂದಿದ್ದವು' ಎಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಸಹಾಯವಾಣಿಗೆ ಬಂದಿದ್ದ ಕರೆಗಳನ್ನು ಆಧರಿಸಿ, ಬೆಂಗಳೂರು ನಗರ ದಿಂದ 5,273, ಮೈಸೂರು ಜಿಲ್ಲೆಯಿಂದ 2,054, ಕಲಬುರಗಿ ಜಿಲ್ಲೆಯಿಂದ 1,507, ಧಾರವಾಡ ಜಿಲ್ಲೆಯಿಂದ 1,264, ಹಾಸನದಿಂದ 1,265, ಬೆಳಗಾವಿಯಿಂದ 1,209, ಮಂಡ್ಯದಿಂದ 1,144, ವಿಜಯಪುರ ಜಿಲ್ಲೆಯಿಂದ 1,139, ಉತ್ತರ ಕನ್ನಡ ಜಿಲ್ಲೆಯಿಂದ 297 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಹಂಗಾಮಿ ಅಧ್ಯಕ್ಷ ಶಶಿಧರ ಕೋಸಂಬೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಬೀದರ್ ಜಿಲ್ಲೆಯ ಕೆಲ ಪ್ರಕರಣಗಳಲ್ಲಿ ಬಾಲ್ಯ ವಿವಾಹ ವಿರೋಧಿಸಿ ಹೆಣ್ಣುಮಕ್ಕಳೇ ಕರೆ ಮಾಡಿದ್ದರು. ಬಹುತೇಕ ಪ್ರಕರಣಗಳಲ್ಲಿ ಗ್ರಾಮದ ಬೇರೆ ವ್ಯಕ್ತಿಗಳಿಂದ ಕರೆಗಳು ಬರುತ್ತಿವೆ. ಆಯೋಗವು ಮಕ್ಕಳ ರಕ್ಷಣೆಗೆ ಮೊದಲ ಆದ್ಯತೆ ನೀಡುತ್ತದೆ. ಮಕ್ಕಳ ಹಕ್ಕುಗಳ ರಕ್ಷಣೆಗೆ ಗ್ರಾಮ ಪಂಚಾಯಿತಿ, ಶಾಲಾ–ಕಾಲೇಜುಗಳು ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಕೈಜೋಡಿಸಬೇಕು' ಎಂದರು.

ಸಹಾಯವಾಣಿಗೆ ಬಂದ ಕರೆಗಳ ವಿವರ



'ಮಕ್ಕಳ ರಕ್ಷಣೆಗೆ ಆದ್ಯತೆ'

ಶಶಿಧರ ಕೋಸಂಬೆ

'ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಶೌಚಾಲಯದ ಸಮಸ್ಯೆ, ಶಿಕ್ಷಕರು ಪಾಠ ಮಾಡದಿರುವುದು, ಶಿಕ್ಷಕರ ವರ್ತನೆ ಸರಿ ಇಲ್ಲದಿರುವುದು, ವಸತಿನಿಲಯಗಳಲ್ಲಿನ ಸಮಸ್ಯೆಗಳ ಬಗ್ಗೆ ಮಕ್ಕಳು 1098ಕ್ಕೆ ಕರೆ ಮಾಡಬಹುದು. ಮಕ್ಕಳ ಸಮಸ್ಯೆಗಳಿಗೆ ಸಕಾಲದಲ್ಲಿ ಸಂಬಂಧಪಟ್ಟವರನ್ನು ಸಂಪರ್ಕಿಸಿ, ಮಕ್ಕಳಿಗೆ ತ್ವರಿತವಾಗಿ ನ್ಯಾಯ ಒದಗಿಸಲು ಸಹಾಯವಾಣಿ ಸಿಬ್ಬಂದಿ ಕ್ರಮ ವಹಿಸಬೇಕು' ಎಂದು ಶಶಿಧರ ಕೋಸಂಬೆ ಹೇಳಿದರು.

ಗ್ರಾ.ಪಂ ಸದಸ್ಯ ಅನರ್ಹ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಖಾಸಗಿ ಜಮೀನಿನಲ್ಲಿ ಕೊರೆದಿರುವ ಕೊಳವೆಬಾವಿಗೆ ಗ್ರಾಮ ಪಂಚಾಯಿತಿಯ ಆರ್.ಆರ್. ಸಂಖ್ಯೆಯಡಿ ಅನಧಿಕೃತ ವಿದ್ಯುತ್ ಸಂಪರ್ಕ ಪಡೆದ ದೂರಿನ ಹಿನ್ನೆಲೆಯಲ್ಲಿ ಕಣ್ಣೂರು ಗ್ರಾಮ ಪಂಚಾಯತಿ ಸದಸ್ಯ ದೊಡ್ಡಣ್ಣ ಅವರ ಸದಸ್ಯತ್ವ ಅನರ್ಹಗೊಳಿಸಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಏಕಸದಸ್ಯ ಪೀಠ ಮಧ್ಯಂತರ ತಡೆಯಾಜ್ಞೆ ನೀಡಿದೆ.

ದೊಡ್ಡಣ್ಣ

'ಪ್ರಾದೇಶಿಕ ಆಯುಕ್ತರ ವರದಿ ಪ್ರಕಾರ ಅರ್ಜಿದಾರರ ವಿರುದ್ಧ ಆರೋಪ ಸಾಬೀತಾಗಿಲ್ಲ. ಆದಾಗ್ಯೂ ಸರ್ಕಾರ ಆದೇಶ ಹೊರಡಿಸಿದೆ' ಎಂದು ಹೇಳಿರುವ ಹೈಕೋರ್ಟ್ ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಡಿ.1ಕ್ಕೆ ನಿಗದಿಪಡಿಸಿ ತಡೆಯಾಜ್ಞೆ ನೀಡಿದೆ.

ಮಡಿವಾಳ, ವಿಜಯನಗರ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತ

ಬಸ್ ಚಕ್ರ ಹರಿದು ವೃದ್ಧರಿಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳ ಹಾಗೂ ವಿಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಬಿಎಂಟಿಸಿ ಬಸ್ ಚಕ್ರ ಹರಿದು ವೃದ್ಧರಿಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮಡಿವಾಳ ಮಾರುಕಟ್ಟೆ ರಸ್ತೆಯಲ್ಲಿ ನಡೆದ ಸರಣಿ ಅಪಘಾತದಲ್ಲಿ ರೂಪೇನ ಅಗ್ರಹಾರದ ನಿವಾಸಿ ವೆಂಕಟರಾಮಪ್ಪ(65) ಅವರು ಮೃತಪಟ್ಟಿದ್ದಾರೆ.

ವೆಂಕಟರಾಮಪ್ಪ ಅವರು ತಮ್ಮ ಮನೆಯ ಎದುರು ತರಕಾರಿ ವ್ಯಾಪಾರ ಮಾಡುತ್ತಿದ್ದರು. ತರಕಾರಿ ಖರೀದಿಸಲೆಂದು ಗುರುವಾರ ಬೆಳಿಗ್ಗೆ ಮಡಿವಾಳದ ಮಾರುಕಟ್ಟೆಗೆ ತೆರಳಿದ್ದ ವೇಳೆ ಈ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಎರಡು ಸರಕು ಸಾಗಣೆ ವಾಹನಗಳಿಗೆ ಬಿಎಂಟಿಸಿ ಬಸ್ ಮೊದಲು ಡಿಕ್ಕಿ ಹೊಡೆದಿತ್ತು. ನಂತರ, ರಸ್ತೆಬದಿಯಲ್ಲಿ ನಡೆದು ತೆರಳುತ್ತಿದ್ದ ವೆಂಕಟರಾಮಪ್ಪ ಅವರಿಗೂ ಬಸ್ ಡಿಕ್ಕಿ ಆಗಿತ್ತು. ಆಗ ಅವರು ಕೆಳಗೆ ಬಿದ್ದಿದ್ದರು. ಅವರ ಮೇಲೆ ಬಸ್ ಚಕ್ರ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬೈಯ್ಯಪ್ಪನಹಳ್ಳಿಯಿಂದ ಸಿಲ್ಕ್ ಬೋರ್ಡ್ ಕಡೆಗೆ ಬಸ್ ತೆರಳುತ್ತಿತ್ತು. ಬಸ್ ಚಾಲಕ ಶ್ರೀನಿವಾಸ್ ಅವರ ನಿರ್ಲಕ್ಷ್ಯ ಹಾಗೂ ಅತಿ ವೇಗವೇ ಅಪಘಾತಕ್ಕೆ ಕಾರಣ. ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಮಡಿವಾಳ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಅಪಘಾತಕ್ಕೆ ಕಾರಣವಾದ ಬಿಎಂಟಿಸಿ ಬಸ್

ಗೋವಿಂದರಾಜ ನಗರದ ಸರ್ವಜ್ಞ ಜಂಕ್ಷನ್‌ನಲ್ಲಿ ಬಿಎಂಟಿಸಿ ಬಸ್ ಚಕ್ರ ಹರಿದು ಸುಶೀಲಾ (69) ಅವರು ಮೃತಪಟ್ಟಿದ್ದಾರೆ.

ನಾಗರಬಾವಿ ನಿವಾಸಿ ಸುಶೀಲಾ ಅವರು ಗೋವಿಂದರಾಜ ನಗರದ ಬ್ಯಾಂಕ್‌ಗೆ ಬಂದಿದ್ದಾಗ ಈ ದುರ್ಘಟನೆ ನಡೆದಿದೆ.

ಬಿಎಂಟಿಸಿ ಬಸ್‌ನಲ್ಲಿ ಗೋವಿಂದ ರಾಜ ನಗರಕ್ಕೆ ಬಂದಿದ್ದ ಅವರು ಕೆಳಗಿಳಿದು ರಸ್ತೆ ದಾಟುತ್ತಿದ್ದರು. ಈ ವೇಳೆ ಚಾಲಕ, ಸುಶೀಲಾ ಅವರನ್ನು ಗಮನಿಸದೇ ಬಸ್ ಚಾಲನೆ ಮಾಡಿದ್ದಾರೆ. ಆಗ ಬಸ್ ಚಕ್ರ ಹರಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಿಎಂಟಿಸಿಯ 30ನೇ ಡಿಪೊಗೆ ಸೇರಿದ ಬಸ್, ಕೆಂಗೇರಿಯಿಂದ ಯಲಹಂಕಕ್ಕೆ ತೆರಳುತ್ತಿತ್ತು.

ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ. ಚಾಲಕನನ್ನು ಬಂಧಿಸಿ, ಬಸ್ ಜಪ್ತಿ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ವಿಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಯಿ ಮುದ್ದು ಮಾಡುವ ನೆಪದಲ್ಲಿ ಲೈಂಗಿಕ ಕಿರುಕುಳ: ಆರೋಪಿ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ನಾಯಿ ಮುದ್ದು ಮಾಡುವ ನೆಪದಲ್ಲಿ ವಕೀಲೆಗೆ ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದ ಆರೋಪಿಯನ್ನು ಜ್ಞಾನಭಾರತಿ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಬ್ಯಾಡರಹಳ್ಳಿ ನಿವಾಸಿ ವಿಘ್ನೇಶ್ ಅಲಿಯಾಸ್ ವಿಕ್ಕಿ(19) ಬಂಧಿತ ಆರೋಪಿ. ವಕೀಲೆ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಗಳನ್ನು ಪರಿಶೀಲಿಸಿ ಆರೋಪಿಯನ್ನು ಪತ್ತೆ ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ನ.7ರಂದು ದೂರುದಾರೆ ವಕೀಲೆ, ಮನೆ ಬಳಿ ನಾಯಿಯನ್ನು ಕರೆದುಕೊಂಡು ವಾಯುವಿಹಾರಕ್ಕೆ ತೆರಳಿದ್ದರು. ಆಗ ನಾಯಿ ಮುದ್ದಾಡುವ ನೆಪದಲ್ಲಿ ವಕೀಲೆಗೆ ಕಿರುಕುಳ ನೀಡಿದ್ದ ಎಂದು ಪೊಲೀಸರು ಹೇಳಿದರು.

ಕೂಲಿ ಕಾರ್ಮಿಕನಾಗಿರುವ ವಿಘ್ನೇಶ್, ಮದ್ಯದ ಅಮಲಿನಲ್ಲಿ ಉದ್ದೇಶಪೂರ್ವಕವಾಗಿಯೇ ವಕೀಲೆಗೆ ಕಿರುಕುಳ ನೀಡಿದ್ದಾನೆ. ಮೊಬೈಲ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸಂತ್ರಸ್ತೆ ವೃತ್ತಿಯಲ್ಲಿ ವಕೀಲೆಯಾಗಿದ್ದು, ಉಲ್ಲಾಳದ ಉಪಕಾರ್ ಲೇಔಟ್‌ನಲ್ಲಿ ನ. 7ರಂದು ರಾತ್ರಿ 10.30ರ ಸುಮಾರಿಗೆ ನಾಯಿ ಜತೆ ವಾಯುವಿಹಾರಕ್ಕೆ ಹೋಗಿದ್ದರು. ಆಗ ಎದುರಾಗಿದ್ದ ಆರೋಪಿ 'ನಾಯಿಯನ್ನು ಮುಟ್ಟಬಹುದೇ' ಎಂದು ಕೇಳಿದ್ದ. ಅದಕ್ಕೆ ಸಂತ್ರಸ್ತೆ ಅವಕಾಶ ನೀಡಿದ್ದರು. ಬಳಿಕ ನಾಯಿಯನ್ನು ಆರೋಪಿ ಮುದ್ದಿಸುತ್ತಿದ್ದ. ನಂತರ, ಸಂತ್ರಸ್ತೆ ಮನೆಗೆ ತೆರಳಲು ಮುಂದಾದಾಗ ಏಕಾಏಕಿ ಆಕೆಯ ದೇಹ ಸ್ಪರ್ಶಿಸಿದ್ದ. ಗಾಬರಿಗೊಂಡಿದ್ದ ವಕೀಲೆ ಆರೋಪಿಯನ್ನು ತಳ್ಳಿದ್ದರು. ನಂತರವೂ ಆರೋಪಿ ಕಿರುಕುಳ ನೀಡಲು ಯತ್ನಿಸಿದ್ದಾಗ ಕಪಾಳಕ್ಕೆ ಹೊಡೆದಿದ್ದರು ಎಂದು ಪೊಲೀಸರು ಹೇಳಿದರು.

ಕುರಿ ತೊಳೆಯುವಾಗ ಕೆರೆಯಲ್ಲಿ ಮುಳುಗಿ ದಂಪತಿ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಗುಂಗರಹಳ್ಳಿ ಗ್ರಾಮದಲ್ಲಿ ಗುರುವಾರ ಕೆರೆಯಲ್ಲಿ ಕುರಿಗಳ ಮೈ ತೊಳೆಯುತ್ತಿದ್ದ ದಂಪತಿ ನೀರಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಲಕ್ಷ್ಮಣ (71), ಜಯಮ್ಮ (65) ಮೃತ ದಂಪತಿ. ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಳವಾದ ಕೆರೆ ಬದಿ ಕುರಿ ತೊಳೆಯುತ್ತಿದ್ದ ದಂಪತಿ ಪೈಕಿ ಒಬ್ಬರು ಕಾಲು ಜಾರಿ ನೀರಿಗೆ ಬಿದ್ದಾಗ, ಮತ್ತೊಬ್ಬರು ಅವರನ್ನು ರಕ್ಷಿಸಲು ಹೋಗಿ ಇಬ್ಬರೂ ಮುಳುಗಿ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ಪೊಲೀಸರು ಹೇಳಿದ್ದಾರೆ.

ಮನೆಯಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿರುವ ಕೆರೆ ಬಳಿ ದಂಪತಿ ಕುರಿಗಳನ್ನು ಮೇಯಿಸುತ್ತಿದ್ದರು. ಮಧ್ಯಾಹ್ನದ 3 ಗಂಟೆಗೆ ಕುರಿಗಳಷ್ಟೇ ಮನೆಗೆ ಬಂದಿದ್ದವು. ದಂಪತಿ ಬಂದಿರಲಿಲ್ಲ. ಕುಟುಂಬದವರು ಕೆರೆ ಕಡೆಗೆ ಹೋಗಿ ಹುಡುಕಾಡಿದ್ದಾರೆ. ದಡದಲ್ಲಿ ದಂಪತಿಯ ಚಪ್ಪಲಿ ಹಾಗೂ ಕೆರೆಯಲ್ಲಿ ಜಯಮ್ಮ ಅವರ ಶವ ತೇಲುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಲಕ್ಷ್ಮಣ

ಜಯಮ್ಮ

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಇಬ್ಬರ ಶವವನ್ನು ನೀರಿನಿಂದ ಹೊರತೆಗೆಯಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ.

'ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವ ಮಕ್ಕಳಿಗೆ ಹೆಲ್ಮೆಟ್ ಮತ್ತು ಸುರಕ್ಷತಾ ಕ್ರಮಗಳನ್ನು ಅನ್ವಯಿಸುವ ಕೇಂದ್ರ ಮೋಟಾರು ವಾಹನ ನಿಯಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತಕ್ಷಣವೇ ಮುಂದಾಗಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

'ಒಂಬತ್ತು ತಿಂಗಳಿನಿಂದ ನಾಲ್ಕು ವರ್ಷದೊಳಗಿನ ಮಕ್ಕಳನ್ನು ಹಿಂಬದಿ ಸವಾರರನ್ನಾಗಿ ಕರೆದುಕೊಂಡು ಹೋಗುವಾಗ ಮಕ್ಕಳೂ ಹೆಲ್ಮೆಟ್ ಧರಿಸಿರಬೇಕು ಮತ್ತು ಅಗತ್ಯ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಈ ಸಂಬಂಧ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಮುಂದುವರೆಸಬೇಕು' ಎಂದು ನ್ಯಾಯಪೀಠವು ಸಕ್ಷಮ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಈ ಸಂಬಂಧ ಶಿವಮೊಗ್ಗದ ಕಟೀಲ್ ಅಶೋಕ ಪೈ ಸ್ಮಾರಕ ಕಾಲೇಜಿನ ಮನೋವಿಜ್ಞಾನ ವಿಭಾಗದ ಮುಖ್ಯಸ್ಥೆ ಕೆ.ಅರ್ಚನಾ ಭಟ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠ ಈ ಕುರಿತಂತೆ ಆದೇಶಿಸಿದೆ.

ಸುರಕ್ಷತಾ ಪರಿಕರಗಳ ಲಭ್ಯತೆ ಖಚಿತ ಪಡಿಸಿಕೊಂಡ ಬಳಿಕ ನಿಯಮ ಜಾರಿಗೊಳಿಸಲು ಆರು ತಿಂಗಳ ಕಾಲಾವಕಾಶ ನೀಡಿದೆ.

ಭೂ ಕಬಳಿಕೆ: ಆರೋಪಿಗೆ ಒಂದು ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಮಾಳ ಜಮೀನು ಕಬಳಿಸಿ ಮನೆ ಕಟ್ಟಿದ ಆರೋಪ ಸಾಬೀತಾದ ಕಾರಣ ಮೈಲನಹಳ್ಳಿ ಗ್ರಾಮದ ನಿವಾಸಿ ಚೌಡಪ್ಪ ಅವರಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಒಂದು ವರ್ಷ ಸಾದಾ ಶಿಕ್ಷೆ ಹಾಗೂ ₹5 ಸಾವಿರ ದಂಡ ವಿಧಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಜಾಲಹಳ್ಳಿ ಹೋಬಳಿಯ ಮೈಲನಹಳ್ಳಿ ಗ್ರಾಮದ ಸರ್ವೆ ನಂ. 20ರ ಗೋಮಾಳ ಜಮೀನಿನಲ್ಲಿ 107X56 ಅಡಿ ಜಾಗವನ್ನು ಚೌಡಪ್ಪ ಅವರು ಒತ್ತುವರಿ ಮಾಡಿ, ಮನೆ ನಿರ್ಮಿಸಿದ್ದರು. ಈ ಸಂಬಂಧ ತಹಶೀಲ್ದಾರ್ ಅವರು ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ಸಾಕ್ಷ್ಯಗಳ ವಿಚಾರಣೆ ನಡೆಸಿದ ನ್ಯಾಯಾಲಯ, ಭೂ ಕಬಳಿಕೆ ಮಾಡಿರುವುದು ಸಾಬೀತಾದ ಕಾರಣ ಜೈಲು ಶಿಕ್ಷೆ ಹಾಗೂ ಐದು ಸಾವಿರ ರೂಪಾಯಿ ದಂಡ ವಿಧಿಸಿದೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಮೂರು ತಿಂಗಳ ಸಾದಾ ಶಿಕ್ಷೆ ವಿಧಿಸಿ 2ನೇ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯರಾದ ಪಾಟೀಲ ನಾಗಲಿಂಗನಗೌಡ, ಕಂದಾಯ ಸದಸ್ಯ ಕೆ.ಎಚ್.ಅಶ್ವತ್ಥ ನಾರಾಯಣಗೌಡ ಅವರಿದ್ದ ಪೀಠ ತೀರ್ಪು ನೀಡಿದೆ.

ಒತ್ತುವರಿಯಾಗಿದ್ದ ಆಶ್ರಯ ಯೋಜನೆಗಾಗಿ ಕಾಯ್ದಿರಿಸಿದ ಗೋಮಾಳ ಜಮೀನನ್ನು ಕೂಡಲೇ ತೆರವುಗೊಳಿಸಿ, ವರದಿ ಸಲ್ಲಿಸುವಂತೆ ಆದೇಶಿಸಿದೆ.

ನಗರದಲ್ಲಿ ಇಂದು

ಅರುಣೋದಯ ಪ್ರೀಮಿಯರ್ ಲೀಗ್: ಅತಿಥಿ: ಪಿ.ಸಿ. ಕೃಷ್ಣಸ್ವಾಮಿ, ಅಧ್ಯಕ್ಷತೆ: ಕವಿತಾ ಎಂ., ಆಯೋಜನೆ: ಅರುಣೋದಯ ಕಾಲೇಜು, ಸ್ಥಳ: ಯುಸಿಪಿಇ ಮೈದಾನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 8.30

'ಗಾಂಧೀಜಿಯವರ ವಿಚಾರಧಾರೆಗಳ ಪ್ರಸ್ತುತತೆ' ಒಂದು ದಿನದ ವಿಚಾರಸಂಕಿರಣ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ಜಮುನಾ, ಅಬಿದಾ ಬೇಗಂ, ಅಧ್ಯಕ್ಷತೆ: ಸತೀಶ ಡಿ.ಡಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪೀಣ್ಯ ಒಂದನೇ ಹಂತ, ಬೆಳಿಗ್ಗೆ 9.30

ಎಸ್.ಜಿ. ಸಿದ್ಧರಾಮಯ್ಯ

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ಜೈನ ಧರ್ಮದ ಸಂತರು': ಹಂ.ಪ. ನಾಗರಾಜಯ್ಯ, 'ಬೌದ್ಧ ಧರ್ಮದ ಬೋಧನೆಗಳು': ಆನಂದ ಥೇರ, 'ಕಣ್ವರಿಯಾ ಸಂಪ್ರದಾಯ': ಲೀನಾ ಮೆಹೆಂದಳೆ, 'ಭಕ್ತಿ–ಆದಿ ಮತ್ತು ಸಮನ್ವಯ': ಜಿ.ಎನ್. ಡೇವಿ, 'ಸಂತವಾಣಿ ಸಭಾ ಚರ್ಚೆ': ಕೆ.ಜಿ. ರಾಘವನ್, ಸಮಾರೋಪ ಸಮಾರಂಭ: ಅತಿಥಿ: ಜಗದೀಶ್ ಲಖಾನಿ, 'ರಾಮಾನುಜ ವೈಭವಂ' ಸಂಗೀತ ನೃತ್ಯ ರೂಪಕ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

ಕನ್ನಡ ಪರಿಚಾರಕರಿಗೆ ಗೌರವಾರ್ಪಣೆ: ಗೌರವಿಸುವವರು: ಜಿ. ರಾಮಕೃಷ್ಣ, ಗೌರವ ಸ್ವೀಕರಿಸುವವರು: ರಾಮಕೃಷ್ಣಯ್ಯ ವಿ.ಟಿ., ಶಾಂತಲಾ ಸುರೇಶ್, ಕೆ. ಕೇಶವ ಭಟ್ಟ, ಸುಬ್ರಹ್ಮಣ್ಯ ಕೆ.ಎನ್., ಬಿ. ಆನಂದಮೂರ್ತಿ, ಅಧ್ಯಕ್ಷತೆ: ಆರ್. ಶೇಷಶಾಸ್ತ್ರಿ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಅಭಿನಂದನಾ ನುಡಿ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ಹೈಸ್ಕೂಲ್ ವೃತ್ತ, ಬೆಳಿಗ್ಗೆ 11


ಜಿ.ರಾಮಕೃಷ್ಣ

ಸಂಗೀತ ಸಮ್ಮೇಳನ: ಬೆಳಿಗ್ಗೆ 10ರಿಂದ 'ಕರ್ನಾಟಕದ ತೆರೆಮರೆಯ ವಾಗ್ಗೇಯಕಾರರು: ಪದ್ಮಾ ಗುರುದತ್, 'ಮುತ್ತುಸ್ವಾಮಿ ದೀಕ್ಷಿತರ ನೋಟ್ಟು ಸ್ವರಗಳು': ಎಚ್. ಕೆ.ವೆಂಕಟರಾಮ್, ಸಂಜೆ 6ರಿಂದ ಸಂಗೀತ ಕಛೇರಿ: ಯುಗಳ ಗಾಯನ: ಅನಹಿತ, ಅಪೂರ್ವ, ಪಿಟೀಲು: ಬಿ.ಕೆ. ರಘು, ಮೃದಂಗ: ಯು. ಜಯಚಂದ್ರ ರಾವ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ

ಬೆಂಗಳೂರು ಎಡಿಆರ್ ವೀಕ್: ಉದ್ಘಾಟನೆ: ಅತಿಥಿಗಳು: ಡಿ.ಕೆ. ಸಿಂಗ್, ವಿವೇಕ್ ಸುಬ್ಬಾರೆಡ್ಡಿ, ಕೆ.ಎಸ್. ಮುದಗಲ್, ಆರ್. ನಟರಾಜ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಸಂಜೆ 4.30

'ಮ್ಯಾಜಿಕ್ ಎಂದಾಗಿದ್ದರೆ–ಅನುವಾದದ ಅನುಭವಗಳು' ತಿಂಗಳ ಉಪನ್ಯಾಸ: ದೀಪಾ ಭಾಸ್ತಿ, ಪ್ರಾಸ್ತಾವಿಕ ನುಡಿ: ಎಸ್. ಗಂಗಾಧರಯ್ಯ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

'ಯಮಕ ಭಾರತ' ಧಾರ್ಮಿಕ ಪ್ರವಚನ: ಅಜಯ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ವಿಜಯನಗರ ಎರಡನೇ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Industrial & Factory

Intl Airport Road

SALE INDUSTRIAL Properties in APIIC Hindupur RED ZONE from Half Acre to 5Acres with Two Sides Road. Call VERNA DEVELOPERS, Barton Centre,MG Road, BLR. 9916310226.

Residential/ Commercial

Srirampura

GODOWN - WAREHOUSE 30x100 Sale, Srirampuram, north facing, 1st cross, near mantri mall - srirampura metro, 17000/sqft PH 9739732433

REAL ESTATE BUYING

General

General

WANTED INDUSTRIES Runing or closed in Private or KIADB/ KSSIDC 10Guntas to 4Acres Bangalore Urban/ Rural. Wanted Residential/ Commercial from 4000 to 20000sft, and Agricultural Land 2 to 10Acres and above. Verna Developers, Barton Center, MG Road, Blr. 9620253180.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Marketing & Sales

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

PERSONAL

Lost

DOCUMENTS LOST
I, **Mrs K Madhumalathi** D/O C Kalegowda Door no. 56/E 14th main, Industry & Commerce layout, Vijayanagara, Bangalore 560040. lost My sale deed registered in the name of my father **Sri C Kalegowda** as No. **BNG(U) KNGR9346/2004-2005** of Bangalore south tq. Uttarahalli hobli Doddakallasandra village survey no 39/4-A extent 5.75 guntas sub register office kengeri 1st book 139 CD registered **14615/2003-04** Book in the Office of Sub Registrar, Kengeri Bangalore. A Complaint is lodged with Vijayanagara Police Station, Bangalore. If anyone founds the above, please Contact : 7411764640

Change of Name

I, SHANTI Yarapothina, residing at Flat no. S-02, Dharani Comforts, 2nd Cross, MLA Layout, Kalena Agrahara, Bangalore - 560076, hereby declare that I have changed my name to Shanti Kuropati.

I, BIMLESH, Residing at #4-B, 5th floor Pragna Homes, 18th avenue, Junnasandra, Bengaluru-35 have updated my name as BIMLESH KUSHAWAHA vide affidavit dated 20/11/2025 before Notary B.M.Chandrashekar Bengaluru

CHANGE OF NAME
I, **Priyanka Divakar,** residing at M 1604, Mantri Serenity M Block, 16th Floor, Doddakallasandra, Bengaluru-560062, have changed my name to **PRIYANKA SUJITH** vide affidavit dated 29.09.2025 before notary S.R. Thulasikrishna, Bengaluru. Henceforth I shall be called **PRIYANKA SUJITH** only

AMBUJAKSHY SHIVARAMA REDDY NO-1590, 20th Main, AECS Layout A-Block, Singasandra, Bengaluru-68, have changed my name to AMBUJA S Vide affidavit dated- 20/11/2025

AUTOMOTIVE

Four Wheelers Selling

Maruti

MARUTI IGNIS available for immediate sale. Automatic (2018) 52000 km. Strictly no brokers only genuine buyers. Contact 8870347278.

MCM
MQI COLLEGE OF MANAGEMENT
Recognised by Govt. of Karnataka | Approved by AICTE, New Delhi | Affiliated to Bengaluru City University
PGCET CODE: B388MB
10 FREE* SEATS MBA
LAST DATE: 26-11-2025
REGISTER NOW
Registration Link Available at : www.mcm.edu.in
Scan the QR Code for Registration
*Merit in MBA Admission Test - MCMAT
Day & Date of MCMAT: Saturday, 29 Nov. 2025
Time: 10:30 – 11:30am Venue: MCM Campus
CAMPUS ADDRESS: #8, Bore Bank Road, Benson Town, Bengaluru – 560 046
mqicollegeofmanagement@gmail.com
Website: www.mcm.edu.in
080–48904713 +91 7975961901
ROUNAQH

GLOBAL AGRI BIOTECH
Marketing of 100% Water Soluble Fertilizers
AS per the provision of S.O.2900(E) dated 24th October, 2015 issued by ministry of agriculture and farmers welfare, New Delhi, we intend to market the following 100% water soluble mixture of Fertilizers in the districts Mysore, Mandya, Chamarajanagar, Hassan and Kodagu of Karnataka State.

N : P : K
1) 19 : 19 : 19
2) 13 : 00 : 45
3) 00 : 00 : 50
4) 12 : 61 : 00
5) 00 : 52 : 34
6) Magnesium Sulphate
7) Potassium Magnesium Sulphate
8) Calcium Nitrate Granular
9) Boron 20%
10) 17 : 44 : 00
11) 13 : 40 : 13
12) 20 : 20 : 20

GLOBAL AGRI BIOTECH
No.271 Part, Hebbal Industrial Area,
Mysore - 570 018. KARNATAKA , INDIA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ನಿವಾಸ: #24, ಗುರುಕೃಪ ನಿಲಯ, 1ನೇ ಅಡ್ಡರಸ್ತೆ, ಕೆ.ಇ.ಬಿ. ಕಛೇರಿ ರಸ್ತೆ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು–560084.
Ph: 98441 65272 / 90365 52207
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ರ್ಡ್ ನಂಬರ್ ಬದಲು ಕ್ಕೆ ಇಲ್ಲ ಮಣೆ

ಣಿ ಝಾನ್ಸಿ, ಸುಭಾಷ್ ರ್ಡ್ ಹೆಸರು ಬದಲು

ರುವುದರಿಂದ ಒಟ್ಟಾರೆ ವಾರ್ಡ್‌ಗಳ ಸಂಖ್ಯೆ 368ರಿಂದ 369ಕ್ಕೆ ಏರಿದೆ. ಇನ್ನು ಐದೂ ನಗರ ಪಾಲಿಕೆಗಳ ವಾರ್ಡ್‌ಗಳ ಗಡಿಯನ್ನು ಕರಡಿನಲ್ಲಿರುವಂತೆಯೇ ಬಹುತೇಕ ಉಳಿಸಿಕೊಂಡಿದೆ. ವಾರ್ಡ್‌ಗಳ ನಂಬರ್ ಅನ್ನು ಅದಲು -ಬದಲು ಮಾಡಿದ್ದು, ಒಂದೆರಡು ವಾರ್ಡ್‌ಗಳ ಹೆಸರನ್ನು ಮಾತ್ರ ಬದಲಿಸಲಾಗಿದೆ.

ದಕ್ಷಿಣ ನಗರ ಪಾಲಿಕೆಯಲ್ಲಿ ಜಯನಗರದಲ್ಲಿ ಮಾರೇನಹಳ್ಳಿ- ದಕ್ಷಿಣ ವಾರ್ಡ್ ಹೊಸದಾಗಿ ಹೆಸರು ಪಡೆದುಕೊಂಡಿದ್ದರೆ, ಉತ್ತರ ನಗರ ಪಾಲಿಕೆಯಲ್ಲಿ ಚೌಡೇಶ್ವರಿ ಬದಲು ರಾಜ ಕೆಂಪೇಗೌಡ ವಾರ್ಡ್ ಎಂದಾಗಿದೆ. 'ಅನಿಬೆಸೆಂಟ್' ಹೆಸರು ಕೈಬಿಡಲಾಗಿದೆ.

ಪಶ್ಚಿಮ ನಗರ ಪಾಲಿಕೆಯಲ್ಲಿ ಮಂಗಲ್ ಪಾಂಡೆ, ರಾಣಿ ಝಾನ್ಸಿ ಹೆಸರನ್ನು ಕೈಬಿಡಲಾಗಿದೆ. ಬಿನ್ನಿಪೇಟೆ ಪ್ರದೇಶಕ್ಕೆ ಡಾ. ವಿಷ್ಣುವರ್ಧನ್ ವಾರ್ಡ್ ಎಂದು ಹೆಸರಿಸಲಾಗಿದೆ. ಇದೇ ನಗರ ಪಾಲಿಕೆಯಲ್ಲಿ ಡಾ. ರಾಜ್‌ಕುಮಾರ್ ವಾರ್ಡ್, ಡಾ. ಪುನೀತ್ ರಾಜ್‌ಕುಮಾರ್ ವಾರ್ಡ್ ಇದೆ. ಪೂರ್ವ ನಗರ ಪಾಲಿಕೆಯಲ್ಲಿ 'ತಲಕಾವೇರಿ', ಉತ್ತರ ನಗರ ಪಾಲಿಕೆಯಲ್ಲಿ 'ಅರುಣಾ ಆಸಿಫ್ ಅಲಿ' ವಾರ್ಡ್ ಹೆಸರು ಬದಲಾಯಿಸಲಾಗಿದೆ.

ಚುನಾವಣೆ ನಡೆಯುತ್ತಾ?

ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಅಂತಿಮಗೊಳಿಸಿರುವ ಅಧಿಸೂಚನೆ ಹೊರಬಿದ್ದಿದೆ. ಆದರೆ, ನಿಜಕ್ಕೂ 2026ರ ಫೆಬ್ರುವರಿಯಲ್ಲಿ ಪಾಲಿಕೆಗಳಿಗೆ ಚುನಾವಣೆ ನಡೆಯುತ್ತಾ ಎಂಬ ಪ್ರಶ್ನೆ ಟಿಕೆಟ್ ಆಕಾಂಕ್ಷಿಗಳಲ್ಲಿ ದಟ್ಟವಾಗಿ ಕಾಡುತ್ತಿದೆ.

ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿಯನ್ನು ಚುನಾವಣಾ ಆಯುಕ್ತ ಜನವರಿ 29ಕ್ಕೆ ಪ್ರಕಟಿಸುವ ವೇಳಾಪಟ್ಟಿ ಇದೆ. ಅದರೊಳಗೆ ವಾರ್ಡ್‌ಗಳಿಗೆ ಮೀಸಲಾತಿಯನ್ನು ನಿಗದಿಪಡಿ, ಕರಡು ಹೊರಡಿಸಿ, ಅಂತಿಮಗೊಳಿಸಬೇಕಿದೆ. ಆದರೆ, 'ಇದೆಲ್ಲ ಸಮಯಕ್ಕೆ ಅನುಗುಣವಾಗಿ ನಡೆಯುವುದಿಲ್ಲ. ಆ ಸಂದರ್ಭದಲ್ಲಿ ಕಾರಣಗಳು ಬೇರೆಬೇರೆಯಾಗುತ್ತವೆ' ಎಂಬುದು ಪಾಲಿಕೆಗೆ ಆಯ್ಕೆಬಯಸುತ್ತಿರುವ ಪ್ರಮುಖ ಪಕ್ಷಗಳ ಮಾತುಗಳು.

'ನಮ್ಮ ಶಾಸಕರಿಗ್ಯಾರಿಗೂ ಪಾಲಿಕೆಗೆ ಚುನಾವಣೆ ನಡೆಯುವುದು ಬೇಡ. ಹಿಂದಿನ ಸರ್ಕಾರ ಹಾಗೂ ಈಗಿನ ಸರ್ಕಾರದ ಸಚಿವರಿಗೂ ಅದರ ಅಗತ್ಯ ವಿಲ್ಲ. ನ್ಯಾಯಾಲಯಗಳು ಸ್ಪಷ್ಟ ಆದೇಶ ನೀಡದೆ ಹೋದರೆ ಚುನಾವಣೆ ನಡೆಯುವುದಿಲ್ಲ' ಎಂದು ಮಾಜಿ ಕಾರ್ಪೊರೇಟರ್‌ಗಳು ಅಭಿಪ್ರಾಯಪಡುತ್ತಾರೆ.

'ಕೆಂಗೇರಿ ಹೆಸರು ಮಾಯ'

'ಹೆಮ್ಮಿಗೆಪುರ'ದ ಬದಲು ಇತಿಹಾಸ ಪ್ರಸಿದ್ಧ 'ಕೆಂಗೇರಿ ಕೋಟೆ' ಅಥವಾ ಸೋಮೇಶ್ವರ ದೇವಸ್ಥಾನ ಎಂದು ಹೆಸರಿಡಲು ಕೋರಲಾಗಿತ್ತು. ಸ್ಥಳೀಯ ಶಾಸಕ ಎಸ್.ಟಿ. ಸೋಮಶೇಖರ್ ಅವರೂ ಪತ್ರ ಬರೆದಿದ್ದರು. ಆದರೆ, ಯಾವುದೇ ಬದಲಾವಣೆ ಮಾಡದೆ, ಕೆಂಗೇರಿಯ ಹೆಸರನ್ನೇ ಕೈಬಿಡಲಾಗಿದೆ ಎಂದು ಕೆಂಗೇರಿ ಕೋಟೆ ಯುವಕ ಮಂಡಳಿ, ಜನಾಭಿಮಾನ ಮಹಿಳಾ ವೇದಿಕೆ, ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಸದಸ್ಯರು ದೂರಿದರು.

'ಸ್ಥಳೀಯರ ಮನವಿ ಹಾಗೂ ಆಕ್ಷೇಪಣೆಗಳಿಗೆ ಮನ್ನಣೆ ನೀಡದೆ ವಾರ್ಡ್ ಹೆಸರನ್ನು ಅಂತಿಮಗೊಳಿಸಲಾಗಿದೆ' ಎಂದರು.

ಂದ್ರ ನಗರ ಪಾಲಿಕೆ; 63 ವಾರ್ಡ್

– 10 ವಾರ್ಡ್, ಚಿಕ್ಕಪೇಟೆ–
ಧಿನಗರ– 10,

ಾರ್ಡ್

ರ್ಡ್, ಪುಲಕೇಶಿನಗರ–
ಂಕ– 14,
ಗರ– 16 , ಹೆಬ್ಬಾಳ– 11

ಾರ್ಡ್

ರ್ಡ್, ಜಯನಗರ– 10 ,
್– 14, ಬೆಂಗಳೂರು ದಕ್ಷಿಣ– 19,
– 1, ಯಶವಂತಪುರ– 1

ಪೂರ್ವ ನಗರ ಪಾಲಿಕೆ;50 ವಾರ್ಡ್

ವಿಧಾನಸಭೆ ಕ್ಷೇತ್ರ: ಕೆ.ಆರ್ ಪುರ– 27 ವಾರ್ಡ್, ಮಹದೇವಪುರ– 23 ವಾರ್ಡ್.

ಪಶ್ಚಿಮ ನಗರ ಪಾಲಿಕೆ;112 ವಾರ್ಡ್

ವಿಧಾನಸಭೆ ಕ್ಷೇತ್ರ: ಗೋವಿಂದರಾಜನಗರ– 13 ವಾರ್ಡ್, ದಾಸರಹಳ್ಳಿ– 10, ಪದ್ಮನಾಭನಗರ– 8, ಬಸವನಗುಡಿ–10, ಮಲ್ಲೇಶ್ವರ– 10, ಮಹಾಲಕ್ಷ್ಮಿ ಲೇಔಟ್– 12, ಯಶವಂಪುರ– 11, ರಾಜರಾಜೇಶ್ವರಿನಗರ– 14, ರಾಜಾಜಿನಗರ– 11, ವಿಜಯನಗರ– 13

ಐದೂ ನಗರ ಪಾಲಿಕೆಗಳ ವಾರ್ಡ್ ಹೆಸರು, ವ್ಯಾಪ್ತಿ, ಗಡಿಯನ್ನು ಮಾಹಿತಿ ಪಡೆಯಲು ಲಿಂಕ್ ಬಳಸಿ: **https://ln.run/_B4Mx** ಅಥವಾ ಕ್ಯೂಆರ್ ಕೋಡ್ ಬಳಸಿ.

ಟಿಸಿಗೆ ಅಪೆಕ್ಸ್ ಇಂಡಿಯಾ ಪ್ರಶಸ್ತಿ

ರಾಜಸ್ಥಾನದ ಉದಯಪುರದಲ್ಲಿ ನಡೆದ ಅಪೆಕ್ಸ್ ಇಂಡಿಯಾ ಸುರಕ್ಷತೆ, ಗುಣಮಟ್ಟ, ಮಾನವ ಸಂಪನ್ಮೂಲ ಮತ್ತು ವ್ಯಾಪಾರ ಶ್ರೇಷ್ಠತೆ ಸಮ್ಮೇಳನದಲ್ಲಿ ಉದಯಪುರ ರಾಜಮನೆತನದ ಜಾಹ್ನವಿ ಕುಮಾರಿ ಮತ್ತು ಸೈಲ್ ಮಾಜಿ ಪ್ರಧಾನ ವ್ಯವಸ್ಥಾಪಕ ಎಸ್.ಸಿ. ಬಾಸಿನ್ ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಆರ್‌ಟಿಸಿ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ ಜಿ.ಎನ್. ಲಿಂಗರಾಜು, ಮುಖ್ಯ ಸಂಚಾರ ವ್ಯವಸ್ಥಾಪಕ ಜೆ. ಅಂಥೋಣಿ ಜಾರ್ಜ್ ಪ್ರಶಸ್ತಿ ಸ್ವೀಕರಿಸಿದರು.

ಅಪೆಕ್ಸ್ ಇಂಡಿಯಾ ಮಾನವ ಸಂಪನ್ಮೂಲ ಶ್ರೇಷ್ಠತೆ, ಮಾನವ ಸಂಪನ್ಮೂಲ ಧಾರಣಾ ಶ್ರೇಷ್ಠತೆ ಪ್ರಶಸ್ತಿಗಳನ್ನು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸ್ವೀಕರಿಸಿದರು

ವಿದೇಶಿ ವಿವಿ: ಸ್ಪಷ್ಟತೆ ಕೋರಿ ಯುಜಿಸಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಆರಂಭವಾಗುವ ವಿದೇಶಿ ವಿಶ್ವವಿದ್ಯಾಲಯಗಳು ದಿಢೀರ್ ಬಾಗಿಲು ಮುಚ್ಚಿದರೆ ವಿದ್ಯಾರ್ಥಿಗಳ ಅಹವಾಲುಗಳನ್ನು ಹೇಗೆ ಪರಿಹರಿಸಬೇಕು ಎಂಬ ಕುರಿತು ಸ್ಪಷ್ಟತೆ ಕೋರಿ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ಪತ್ರ ಬರೆಯಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಡಾ.ಎಂ.ಸಿ. ಸುಧಾಕರ್

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, 'ಕ್ಯಾಂಪಸ್‌ಗಳನ್ನು ಮುಚ್ಚುವ ಸ್ಥಿತಿ ಎದುರಾದರೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಭವಿಷ್ಯ ಏನು ಎಂಬುದರ ಬಗ್ಗೆ ಯುಜಿಸಿ ಯಾವುದೇ ಸ್ಪಷ್ಟತೆ ನೀಡಿಲ್ಲ. ವಿದೇಶಿ ವಿಶ್ವವಿದ್ಯಾಲಯಗಳು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಡುವುದಿಲ್ಲ. ನೆರವು ನೀಡುವ ಕೆಲಸವನ್ನಷ್ಟೇ ರಾಜ್ಯ ಸರ್ಕಾರ ಮಾಡುತ್ತದೆ. ಇಂತಹ ವಿಷಯಗಳಲ್ಲಿ ಯುಜಿಸಿಯಿಂದ ಸ್ಪಷ್ಟನೆ ಪಡೆದು, ವಿಧಿಸಿರುವ ಷರತ್ತುಗಳನ್ನು ಅಧ್ಯಯನ ಮಾಡಿ, ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

'ರಾಜ್ಯಗಳು ಹೆಚ್ಚು ನಿಯಂತ್ರಣ ಹೇರಿದರೆ ವಿದೇಶಿ ವಿಶ್ವವಿದ್ಯಾಲಯಗಳು ಬೇರೆ ರಾಜ್ಯಕ್ಕೆ ಹೋಗಬಹುದು. ಕರ್ನಾಟಕದಲ್ಲಿ ಕ್ಯಾಂಪಸ್ ತೆರೆಯುವುದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ವಿದೇಶಗಳಿಗೆ ತೆರಳಿ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು, ಅಧ್ಯಾಪಕರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಇದಕ್ಕೂ ಮೊದಲು ಬ್ರಿಟನ್‌ನ ಇಂಡೊ–ಪೆಸಿಫಿಕ್ ಸಚಿವೆ ಸೀಮಾ ಮಲ್ಹೋತ್ರಾ ನೇತೃತ್ವದ 10 ಪ್ರತಿನಿಧಿಗಳ ತಂಡದ ಜತೆ ಚರ್ಚೆ ನಡೆಸಿದ ಸಚಿವ ಸುಧಾಕರ್, ಕರ್ನಾಟಕದ ಐವರು ವಿದ್ಯಾರ್ಥಿಗಳಿಗೆ ಚಿವೆನಿಂಗ್ ವಿದ್ಯಾರ್ಥಿವೇತನ ನೀಡುತ್ತಿದ್ದು, ಈ ಸಂಖ್ಯೆಯನ್ನು ಹೆಚ್ಚಿಸಲು ಮನವಿ ಮಾಡಿದರು.

'3ಂಗಳೊಳಗೆ ಕುರ್ಚಿ ಕಿತ್ತಾಟದ ಸ್ಪಷ್ಟ ಚಿತ್ರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಕುರ್ಚಿ ಕಿತ್ತಾಟ ಪ್ರಹಸನದ ಸ್ಪಷ್ಟ ಚಿತ್ರಣ ಒಂದು ತಿಂಗಳ ಒಳಗೆ ಗೊತ್ತಾಗಲಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರು ವಚನ ಭ್ರಷ್ಟರಾಗಿದ್ದಾರೆ. ಸಿದ್ದರಾಮಯ್ಯ 'ಓ.ಸಿ' ಮುಖ್ಯಮಂತ್ರಿ ಎಂದು ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ಹೇಳಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಮಾತು ಆಡಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿ ಬಿಟ್ಟುಕೊಡುವುದಿಲ್ಲವೆಂದು ದಿಟ್ಟತನದಿಂದ ಹೇಳಿದ್ದಾರೆ. ಅಗತ್ಯ ಇಲ್ಲದಿದ್ದರೂ ನಾನೇ ಸಿಎಂ ಎಂದು ಪದೇ ಪದೇ ಹೇಳುತ್ತಿದ್ದಾರೆ' ಎಂದರು.

'ಕುರ್ಚಿ ಕಿತ್ತಾಟದ ಫಲವಾಗಿ ಜನರ ಕೆಲಸಗಳು ಆಗುತ್ತಿಲ್ಲ. ಪ್ರತಿಯೊಂದು ಇಲಾಖೆಯಲ್ಲಿ ಕಮಿಷನ್ ವ್ಯವಸ್ಥೆ ಇದೆ. ಎಲ್ಲೂ ಸಾರ್ವಜನಿಕರ ಕೆಲಸಗಳು ಆಗುತ್ತಿಲ್ಲ. ಶಾಲೆಗಳಲ್ಲಿ ಮೂಲಸೌಕರ್ಯ ಇಲ್ಲ. ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿಲ್ಲ' ಎಂದು ದೂರಿದರು.

ಬೆಳೆ ಹಾನಿ : ಸಿ.ಎಂಗೆ ಬೊಮ್ಮಾಯಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳಲ್ಲಿ ಅತಿವೃಷ್ಟಿಯಿಂದ ಅಪಾರ ಪ್ರಮಾಣದ ಬೆಳೆಗಳು ನಾಶವಾಗಿವೆ. ಬೆಳೆ ನಷ್ಟ ಸರ್ವೆಯಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿ ಎಲ್ಲ ರೈತರಿಗೂ ಬೆಳೆ ಪರಿಹಾರ ಕೊಡಬೇಕು ಎಂದು ಆಗ್ರಹಿಸಿ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಲಂಚ: ಜಲಮಂಡಳಿ ಮೀಟರ್ ರೀಡರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಮೀಟರ್ ತಾಂತ್ರಿಕ ಸಮಸ್ಯೆ ಬಗೆಹರಿಸಲು ₹10,000 ಲಂಚ ಪಡೆಯುತ್ತಿದ್ದ ವೇಳೆ, ಜಲಮಂಡಳಿಯ ಮೀಟರ್ ರೀಡರ್ ನರಸಿಂಹಪ್ಪ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮಡಿವಾಳ ನಿವಾಸಿ ಡೆಲ್ಸನ್ ಡಿಟ್ಟೊ, ತಮ್ಮ ಮನೆಯ ನೀರಿನ ಮೀಟರ್‌ನ ಬಿಲ್ ವಿಪರೀತ ಬರುತ್ತಿದೆ. ನೀರು ಬರದೇ ಇದ್ದ ಸಂದರ್ಭದಲ್ಲೂ ಮೀಟರ್ ಓಡಿದೆ. ಅದನ್ನು ಸರಿಪಡಿಸಿಕೊಡಿ ಎಂದು ಬಿಟಿಎಂ ಎರಡನೇ ಹಂತದ ಜಲಮಂಡಳಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಆ ವ್ಯಾಪ್ತಿಯ ಮೀಟರ್ ರೀಡರ್ ನರಸಿಂಹಪ್ಪ, 'ಮೀಟರ್‌ನಲ್ಲಿ ತಾಂತ್ರಿಕ ಸಮಸ್ಯೆ ಇದೆ. ಅದನ್ನು ಸರಿಪಡಿಸಿ, ಬಿಲ್ ಕಡಿಮೆ ಬರುವಂತೆ ಮಾಡಿ ಕೊಡುತ್ತೇನೆ' ಎಂದು ಅರ್ಜಿದಾರರಿಗೆ ಹೇಳಿದ್ದರು. ಜತೆಗೆ ₹20,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಡೆಲ್ಸನ್ ಅವರು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಡೆಲ್ಸನ್ ಅವರು ಜಲಮಂಡಳಿ ಕಚೇರಿಗೆ ತೆರಳಿ, ನರಸಿಂಹಪ್ಪ ಅವರಿಗೆ ₹10,000 ನೀಡಿದ್ದರು. ಈ ವೇಳೆ ದಾಳಿ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಅವರು ವಿವರಿಸಿದ್ದಾರೆ.

ORCHIDS The International School
Presents
ಪ್ರಜಾವಾಣಿ
QUIZ CHAMPIONSHIP
2025

ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಇದು ಸುಸಮಯ

ರಾಜ್ಯಮಟ್ಟದ ರಸಪ್ರಶ್ನೆ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ, ಮತ್ತು ನಿಮ್ಮ ಬುದ್ಧಿಚಾತುರ್ಯದ ನೈಪುಣ್ಯವನ್ನು ಸಾಬೀತುಮಾಡಿ

7 ರಿಂದ 10 ನೆಯ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಇದೊಂದು ಸದವಕಾಶ! ಮಹಾ ರಸಪ್ರಶ್ನೆ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳಿ. ರಾಜ್ಯಾದ್ಯಂತದ 6 ವಲಯಗಳ ಸಾವಿರಾರು ವಿದ್ಯಾರ್ಥಿಗಳೊಡನೆ ಸ್ಪರ್ಧಿಸಿ ಗೆದ್ದ ಅಗ್ರ ವಿಜೇತರಿಗೆ ಆಕರ್ಷಕ ಬಹುಮಾನಗಳು.

ರಾಜ್ಯಾದ್ಯಂತದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ
2000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ
ಒಂದು ದಿನದ ವಿನೂತನ ಕಲಿಕಾ ಕಾರ್ಯಾಗಾರದ ಅನುಭವ ಹೊಂದಿ
ಆಕರ್ಷಕ ಬಹುಮಾನಗಳನ್ನು ಗೆಲ್ಲಿ ಮತ್ತು ಮನ್ನಣೆ ಪಡೆಯಿರಿ

ವಲಯವಾರು ಸುತ್ತುಗಳ ವಿವರ

ಬೀದರ್	ಬಾಗಲಕೋಟೆ	ಹುಬ್ಬಳ್ಳಿ	ದಾವಣಗೆರೆ	ಮೈಸೂರು	ಬೆಂಗಳೂರು
ಡಿಸೆಂಬರ್ 8, 25	ಡಿಸೆಂಬರ್ 9, 25	ಡಿಸೆಂಬರ್ 10, 25	ಡಿಸೆಂಬರ್ 11, 25	ಡಿಸೆಂಬರ್ 12, 25	ಡಿಸೆಂಬರ್ 15, 25

ಸವಾಲನ್ನು ಸ್ವೀಕರಿಸಲು ಸಿದ್ಧವೇ?
ನೋಂದಾಯಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
ಅಥವಾ www.prajavani.net ಗೆ ಭೇಟಿ ನೀಡಿ.
ಸಂಪರ್ಕಿಸಿ: 7338018541 (ಸೋಮವಾರ-ಶುಕ್ರವಾರ, ಮಧ್ಯಾಹ್ನ 12 ರಿಂದ ಸಂಜೆ 5 ರ ವರೆಗೆ)
COLLATERAL

ಈಗಲೇ ನೋಂದಾಯಿಸಿ
ಉಚಿತ ಪ್ರವೇಶ!!!

Banking Partner: SBI The banker to every Indian
Refreshment Partner: MOGU MOGU
Special Partner: BHIMA
Nutrition Partner: ನಂದಿನಿ

Associate Sponsors
ಪೂರ್ವಿಕಾ · VIPS 25 YEARS IN SERVICE OF HUMANITY · talent sprint Part of Accenture · ICS MAHESH PU COLLEGE · SIDDAGANGA
ಮಾರ್ಗದರ್ಶಿ · THE TEAM ACADEMY Davangere & Shivamogga · IBMR GROUP OF INSTITUTIONS · MANGALORE INDEPENDENT PU COLLEGE · SHARADA VIDYA MANDIR

TV partner: asianet ಸುವರ್ಣ ನ್ಯೂಸ್
Knowledge partner: QURIOSITY Knowledge Solutions

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025
ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಶಿಪ್
ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ನಿತೀಶ್ ದಾಖಲೆ: 10ನೇ ಬಾರಿ ಸಿ.ಎಂ

ಬಿಹಾರದ ಮುಖ್ಯಮಂತ್ರಿಯಾಗಿ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ 'ಸುಶಾಸನ ಬಾಬು'

ಪಟ್ನಾ(ಪಿಟಿಐ): ರಾಜಕೀಯ ವಿರೋಧಿಗಳಿಂದ 'ಪಲ್ಟು ರಾಮ್' ಎಂಬ ಅಡ್ಡ ಹೆಸರಿನಿಂದಲೂ, ಬೆಂಬಲಿಗರಿಂದ 'ಸುಶಾಸನ ಬಾಬು' (ಉತ್ತಮ ಆಡಳಿತಗಾರ) ಎಂಬ ಪ್ರಶಂಸೆಗೂ ಪಾತ್ರರಾಗಿರುವ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ (71) ಅವರು, 10ನೇ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿ ದಾಖಲೆ ಬರೆದರು.

ಇಲ್ಲಿನ ಗಾಂಧಿ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ನಿತೀಶ್ ಕುಮಾರ್ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನಿತೀಶ್ ಸಂಪುಟದ 26 ಸದಸ್ಯರಿಗೆ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಪ್ರಮಾಣ ವಚನ ಬೋಧಿಸಿದರು.

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ನೆರೆದಿದ್ದ ಸಭಿಕರ ಎದುರು ಗಮ್ಛಾ (ತೆಳುವಾದ ಟವಲ್) ಬೀಸಿ, ಬಿಹಾರದ ಜನರಿಗೆ ಧನ್ಯವಾದ ಸಲ್ಲಿಸಿದರು.

ವಿಧಾನ ಪರಿಷತ್ತಿನ ಸದಸ್ಯರಾಗಿರುವ ನಿತೀಶ್ ಕುಮಾರ್, ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ. ಆದರೆ, ಮತ್ತೆ ಮುಖ್ಯಮಂತ್ರಿಯಾಗುವ ಮೂಲಕ ಅವರು ದಾಖಲೆ ಬರೆದಿದ್ದಾರೆ. ದೇಶದಲ್ಲಿ ಸುದೀರ್ಘ ಅವಧಿ ಅಧಿಕಾರದಲ್ಲಿದ್ದ 10 ಮುಖ್ಯಮಂತ್ರಿಗಳ ಪಟ್ಟಿಗೆ ಅವರ ಹೆಸರೂ ಸೇರ್ಪಡೆಗೊಂಡಿದೆ. ಇಂದಿರಾ ಗಾಂಧಿ ಹತ್ಯೆ ನಂತರ 1985ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು, ನಿತೀಶ್ ಕುಮಾರ್ ಮೊದಲ ಬಾರಿಗೆ ಬಿಹಾರ ವಿಧಾನಸಭೆ ಪ್ರವೇಶಿಸಿದ್ದರು. ಕಳೆದ 19 ವರ್ಷಗಳಿಂದ ಅವರು ಮುಖ್ಯಮಂತ್ರಿ ಗದ್ದುಗೆ ಉಳಿಸಿಕೊಂಡಿದ್ದಾರೆ.

ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಬಿಹಾರ ವಿಧಾನಸಭಾ ಚುನಾವಣೆಯ ಉಸ್ತುವಾರಿಯಾಗಿದ್ದ ಧರ್ಮೇಂದ್ರ ಪ್ರಧಾನ್ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಪ್ರಮುಖ ನಾಯಕರು ಮತ್ತು ಎನ್‌ಡಿಎ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ಪ್ರಮಾಣ ವಚನ ಸ್ವೀಕರಿಸಿದ ಪ್ರಮುಖರು: ಬಿಜೆಪಿಯ ಶಾಸಕಾಂಗ ಪಕ್ಷದ ನಾಯಕ ಸಾಮ್ರಾಟ್ ಚೌಧರಿ ಹಾಗೂ ಉಪ ನಾಯಕ ವಿಜಯ್ ಸಿನ್ಹಾ ಕೂಡ ನಿತೀಶ್ ಅವರೊಂದಿಗೆ ಪ್ರಮಾಣ ವಚನ ಸ್ವೀಕರಿಸಿದರು. ಈ ಇಬ್ಬರೂ ನಾಯಕರು ಹಿಂದಿನ ಎನ್‌ಡಿಎ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು. ಜೆಡಿ(ಯು) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಶೋಕ್ ಚೌಧರಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್, ಎಚ್‌ಎಎಂನ ಸಂತೋಷ್ ಕುಮಾರ್ ಸುಮನ್ ಕೂಡ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ.

ಇತ್ತೀಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 243 ಸ್ಥಾನಗಳಲ್ಲಿ, 202 ಸ್ಥಾನಗಳನ್ನು ಗೆಲ್ಲುವ ಮೂಲಕ ಎನ್‌ಡಿಎ ಅಧಿಕಾರಕ್ಕೆ ಮರಳಿತ್ತು. ಬಿಜೆಪಿ 89, ಜೆಡಿ(ಯು) 85, ಎಲ್‌ಜೆಪಿ (ಆರ್‌ವಿ) 19, ಎಚ್‌ಎಎಂ 5 ಮತ್ತು ಆರ್‌ಎಲ್‌ಎಂ 4 ಸ್ಥಾನಗಳಲ್ಲಿ ಗೆಲುವು ಗಳಿಸಿವೆ.

ಸಾರ್ವಜನಿಕ ಸೇವೆಗೆ ಮುಡಿಪಾಗಿರುವ ಅತ್ಯುತ್ಕೃಷ್ಟ ನಾಯಕರನ್ನು ಹೊಂದಿರುವ ನಿತೀಶ್ ನೇತೃತ್ವದ ತಂಡವು ಬಿಹಾರವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ

ನರೇಂದ್ರ ಮೋದಿ, ಪ್ರಧಾನಿ, 'ಎಕ್ಸ್' ಪೋಸ್ಟ್‌ನಲ್ಲಿ

ಬಿಹಾರದ ಡಬಲ್ ಎಂಜಿನ್ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯನ್ನು ಸಾಕಾರಗೊಳಿಸಲು ಇನ್ನೂ ಹೆಚ್ಚಿನ ಶಕ್ತಿಯಿಂದ ಕಾರ್ಯನಿರ್ವಹಿಸಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ, 'ಎಕ್ಸ್' ಪೋಸ್ಟ್‌ನಲ್ಲಿ

ನಿತೀಶ್ ಸಂಪುಟದ ಸಚಿವರು

ಪಕ್ಷ	ಸಚಿವರು
ಬಿಜೆಪಿ	14
ಜೆಡಿಯು	8
ಎಲ್‌ಜೆಪಿ (ಆರ್‌ವಿ)	2
ಎಚ್‌ಎಎಂ	1
ಆರ್‌ಎಲ್‌ಎಂ	1

(ಹಿಂದಿನ ಅವಧಿಯ ನಿತೀಶ್ ಸಚಿವ ಸಂಪುಟದಲ್ಲಿ ಬಿಜೆಪಿಯ 15, ಜೆಡಿ(ಯು)ನ 12, ಒಬ್ಬ ಸ್ವತಂತ್ರ ಅಭ್ಯರ್ಥಿ, ಎಚ್‌ಎಎಂನ ಒಬ್ಬರು ಸಚಿವರಿದ್ದರು)

ನಿತೀಶ್ ಸಂಪುಟದಲ್ಲಿ ಎಲ್‌ಜೆಪಿ (ಆರ್‌ವಿ)ಯ ಇಬ್ಬರು ಶಾಸಕರು, ಸೇರ್ಪಡೆಯಾಗುವ ಮೂಲಕ ತಂದೆ ದಿ. ರಾಮ್‌ವಿಲಾಸ್ ಪಾಸ್ವಾನ್ ಅವರ ಕನಸು ನನಸಾಗಿದೆ. 'ಬಿಹಾರವೇ ಮೊದಲು, ಬಿಹಾರಿಗಳೇ ಮೊದಲು' ಎನ್ನುವುದು ನಮ್ಮ ಮಂತ್ರ

ಚಿರಾಗ್ ಪಾಸ್ವಾನ್, ಕೇಂದ್ರ ಸಚಿವ, ಎಲ್‌ಜೆಪಿ (ಆರ್‌ವಿ) ಅಧ್ಯಕ್ಷ

ಪಟ್ನಾದ ಗಾಂಧಿ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಕೈ ಮೇಲೆತ್ತಿ ಹಿಡಿದು ಅಭಿನಂದಿಸಿದರು —ಪಿಟಿಐ ಚಿತ್ರ

ಕ್ರೀಡಾ ಪ್ರತಿಭೆ ಶ್ರೇಯಸಿ ಸಿಂಗ್ ಸಚಿವೆ

2018ರ ಕಾಮನ್‌ವೆಲ್ತ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದಿರುವ ಕ್ರೀಡಾ ಪ್ರತಿಭೆ, ಜಮುಯಿ ಕ್ಷೇತ್ರದಿಂದ ಗೆದ್ದಿರುವ ಬಿಜೆಪಿಯ ಶ್ರೇಯಸಿ ಸಿಂಗ್ ಕೂಡ ನಿತೀಶ್ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಇವರು ದಿವಂಗತ ದಿಗ್ವಿಜಯ ಸಿಂಗ್ ಅವರ ಪುತ್ರಿ. ಮೊದಲ ಗೆಲುವಿನಲ್ಲೇ ಶ್ರೇಯಸಿಗೆ ಸಚಿವರಾಗುವ ಭಾಗ್ಯವೂ ಒಲಿದಿದೆ.

ಮುಜಾಫರ್‌ಪುರದ ಮಾಜಿ ಸಂಸದ ಅಜಯ್ ನಿಶಾದ್ ಅವರ ಪತ್ನಿ, ಔರಾಯಿ ಕ್ಷೇತ್ರದ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದಿದ್ದ ರಮಾ ನಿಶಾದ್ ಕೂಡ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಜೆಡಿ(ಯು)ನ ಬಿಜೇಂದ್ರ ಪ್ರಸಾದ್ ಯಾದವ್ 9ನೇ ಬಾರಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ ನಿತೀಶ್ ಸಂಪುಟಕ್ಕೆ ಮರಳಿದ್ದಾರೆ.

ಎಂಎಲ್‌ಎ, ಎಂಎಲ್‌ಸಿ ಅಲ್ಲದ ಪ್ರಕಾಶ್ ಸಂಪುಟಕ್ಕೆ

ಶಾಸಕ ಅಥವಾ ವಿಧಾನ ಪರಿಷತ್‌ನ ಸದಸ್ಯರೂ ಅಲ್ಲದ ದೀಪಕ್ ಪ್ರಕಾಶ್ ಅವರು ನಿತೀಶ್ ಸಂಪುಟದಲ್ಲಿ ಸ್ಥಾನ ಪಡೆದಿರುವುದು ರಾಜಕೀಯ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ. ದೀಪಕ್ ರಾಷ್ಟ್ರೀಯ ಲೋಕ ಮೋರ್ಚಾದ (ಆರ್‌ಎಲ್‌ಎಂ) ಮುಖ್ಯಸ್ಥ ಉಪೇಂದ್ರ ಕುಶ್ವಾಹ ಅವರ ಪುತ್ರ. ರಾಜ್ಯ ರಾಜಕಾರಣದಲ್ಲಿ ಅಪರಿಚಿತರಾಗಿದ್ದ ದೀಪಕ್ ಹೆಸರು ಇದೇ ಮೊದಲ ಬಾರಿಗೆ ಮುನ್ನೆಲೆಗೆ ಬಂದಿದೆ. ವಿದೇಶದಲ್ಲಿ ಶಿಕ್ಷಣ ಪಡೆಯುತ್ತಿದ್ದ ಅವರು ಇತ್ತೀಚೆಗೆ ಭಾರತಕ್ಕೆ ಮರಳಿದ್ದಾರೆ.

ಸಂಪುಟಕ್ಕೆ ಸೇರ್ಪಡೆಯಾದ 6 ತಿಂಗಳ ಒಳಗಾಗಿ ಅವರು ರಾಜ್ಯ ವಿಧಾನಮಂಡಲದ ಎರಡು ಸದನಗಳ ಪೈಕಿ ಒಂದರ ಸದಸ್ಯರಾಗಬೇಕಾಗುತ್ತದೆ.

ಸಸಾರಾಂ ಕ್ಷೇತ್ರದಿಂದ ಗೆದ್ದಿರುವ ಆರ್‌ಎಲ್‌ಎಂ ಪಕ್ಷದ ಸ್ನೇಹಲತಾ ಕುಶ್ವಾಹ ಅವರಿಗೂ ಸಂಪುಟದಲ್ಲಿ ಸ್ಥಾನ ಸಿಗುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಂದ ಚುನಾವಣಾ ಆಯೋಗಕ್ಕೆ ಪತ್ರ

'ಎಸ್‌ಐಆರ್: ಆಘಾತಕಾರಿ ಘಟ್ಟ ತಲುಪಿದೆ'

ಕೋಲ್ಕತ್ತ/ಚೆನ್ನೈ/ತಿರುವನಂತಪುರ (ಪಿಟಿಐ): 'ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಸೂಕ್ತ ಕಾರ್ಯ ಯೋಜನೆ ಇಲ್ಲದೆಯೇ ಬಲವಂತವಾಗಿ ನಡೆಸಲಾಗುತ್ತಿದೆ. ಸಾರ್ವಜನಿಕರನ್ನೂ, ಅಧಿಕಾರಿಗಳನ್ನೂ ಈ ಪ್ರಕ್ರಿಯೆಯು ಅಪಾಯಕ್ಕೆ ಒಡ್ಡುತ್ತಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಮಮತಾ ಬ್ಯಾನರ್ಜಿ

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಗುರುವಾರ ಪತ್ರ ಬರೆದಿರುವ ಮಮತಾ, 'ಎಸ್‌ಐಆರ್ ಪ್ರಕ್ರಿಯೆ ಭಯಾನಕ ಮತ್ತು ಆತಂಕಕಾರಿ ಘಟ್ಟ ತಲುಪಿದೆ. ಪ್ರಕ್ರಿಯೆ ಕುರಿತ ಕಳವಳವನ್ನು ಕಾಲ ಕಾಲಕ್ಕೆ ನಾನು ವ್ಯಕ್ತಪಡಿಸಿದ್ದೇನೆ. ಪರಿಸ್ಥಿತಿಯ ಗಂಭೀರತೆಯು ಈಗ ನಿಮಗೆ ಪತ್ರ ಬರೆಯುವಂತೆ ಮಾಡಿದೆ' ಎಂದಿದ್ದಾರೆ.

'ಪ್ರಕ್ರಿಯೆ ನಡೆಸಲು ಸಾಮಾನ್ಯ ಸಿದ್ಧತೆಯನ್ನೂ ಮಾಡಿಕೊಂಡಿಲ್ಲ. ಜನರ ಮೇಲೆ ಇದನ್ನು ಹೇರಲಾಗುತ್ತಿದೆ. ಪ್ರಕ್ರಿಯೆಯು ಸಂಪೂರ್ಣ ಗೊಂದಲದ ಗೂಡಾಗಿದೆ. ಬೂತ್ ಮಟ್ಟದ ಅಧಿಕಾರಿಗಳಾಗಿ (ಬಿಎಲ್‌ಒ) ಕೆಲಸ ಮಾಡುವವರಿಗೆ ಸೂಕ್ತ ತರಬೇತಿ ನೀಡಲಾಗಿಲ್ಲ. ಒದಗಿಸಬೇಕಿರುವ ಕಡ್ಡಾಯ ದಾಖಲೆಗಳ ಬಗ್ಗೆ ಗೊಂದಲಗಳಿವೆ' ಎಂದು ದೂರಿದ್ದಾರೆ.

'ಎಸ್‌ಐಆರ್ ಪ್ರಕ್ರಿಯೆಯನ್ನು ಸೂಕ್ತ ರೀತಿಯಲ್ಲಿ ನಿಭಾಯಿಸದೇ ಇರುವುದರಿಂದ ಸಾರ್ವಜನಿಕರು, ಅಧಿಕಾರಿಗಳ ಸಾವಿನ ಪ್ರಕರಣಗಳು ವರದಿಯಾಗುತ್ತಿವೆ. ಇದನ್ನು ಈಗ ಸಹಿಸಲು ಸಾಧ್ಯವೇ ಇಲ್ಲ. ಈಗ ಬಗ್ಗೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಲೇಬೇಕು' ಎಂದು ಆಯೋಗವನ್ನು ಮಮತಾ ಒತ್ತಾಯಿಸಿದ್ದಾರೆ.

ಪ್ರತಿಭಟನೆ: 'ಡಿಎಂಕೆ ತನ್ನ ಪಕ್ಷದ ಕಾರ್ಯಕರ್ತರನ್ನು ಬಳಸಿಕೊಂಡು ಅಕ್ರಮಗಳನ್ನು ನಡೆಸುತ್ತಿದೆ' ಎಂದು ಆರೋಪಿಸಿ ಎಐಎಡಿಎಂಕೆ ಪಕ್ಷವು ಡಿಎಂಕೆ ಸರ್ಕಾರದ ವಿರುದ್ಧ ಗುರುವಾರ ಪ್ರತಿಭಟನೆ ನಡೆಸಿತು.

ಇದು ಅವರ (ಮಮತಾ) ಹತಾಶೆಯನ್ನು ತೋರಿಸುತ್ತದೆ. ತಮ್ಮನ್ನು ಅಧಿಕಾರಕ್ಕೆ ತರುವವರನ್ನು ರಕ್ಷಿಸಲು ಮತದಾರರ ಪಟ್ಟಿಯನ್ನು ಸ್ವಚ್ಛ ಮಾಡುವ ಪ್ರಕ್ರಿಯೆಯನ್ನು ನಿಲ್ಲಿಸಲು ಯತ್ನಿಸುತ್ತಿದ್ದಾರೆ

ಪ್ರದೀಪ್ ಭಂಡಾರಿ, ಬಿಜೆಪಿಯ ರಾಷ್ಟ್ರೀಯ ವಕ್ತಾರ

ಇಲ್ಲದ ದಾಖಲೆ: ವೃದ್ಧ ಆತ್ಮಹತ್ಯೆಗೆ ಯತ್ನ

'2002ರ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇಲ್ಲದ ಸುದ್ದಿ ತಿಳಿದ ಬಳಿಕ ಭಯಭೀತಗೊಂಡ 63 ವರ್ಷದ ಅಶೋಕ್ ಸರ್ದಾರ್, ರೈಲು ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ಘಟನೆಯು ಪಶ್ಚಿಮ ಬಂಗಾಳದ 24 ಪರಗಣ ಜಿಲ್ಲೆಯಲ್ಲಿ ಬುಧವಾರ ರಾತ್ರಿ ನಡೆದಿದೆ. ವೃದ್ಧರನ್ನು ಆರ್‌ಜಿ ಕರ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಒಂದು ಕಾಲನ್ನು ಕತ್ತರಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ' ಎಂದು ಪೊಲೀಸರು ತಿಳಿಸಿದರು.

'ವಿಷಯ ಗೊತ್ತಾದ ದಿನದಿಂದ ಅವರು ಭಯಗೊಂಡಿದ್ದರು. 'ನನ್ನ ಬಳಿ ದಾಖಲೆಗಳು ಇಲ್ಲ. ನನ್ನನ್ನು ದೇಶದಿಂದ ಹೊರಹಾಕಬಹುದು' ಎಂದು ಭಯಗೊಂಡ ಕಾರಣದಿಂದಲೇ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಕುಟುಂಬ ಆರೋಪಿಸುತ್ತಿದೆ' ಎಂದು ತಿಳಿಸಿದರು. ಸರ್ದಾರ್ ಅವರು ಸೈಕಲ್ ರಿಕ್ಷಾ ಚಾಲಕರಾಗಿದ್ದರು.

ಎಲ್‌ಡಿಎಫ್ ವಿರುದ್ಧ ಪಿತೂರಿ ಆರೋಪ

ತಿರುವನಂತಪುರ ಕಾರ್ಪೊರೇಷನ್ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ ಕಾಂಗ್ರೆಸ್ ಪಕ್ಷದ ವ್ಯಾಸ್ನಾ ಎಸ್.ಎಲ್ ಅವರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕಿದ್ದ ಬಗ್ಗೆ ಪಕ್ಷವು ಗುರುವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. 'ಇದರ ಹಿಂದೆ ಪಿತೂರಿ ಇತ್ತು' ಎಂದೂ ಹೇಳಿದೆ.

'ಆಡಳಿತಾರೂಢ ಎಲ್‌ಡಿಎಫ್ ಪಕ್ಷದ ಹೇಡಿತನವನ್ನು ಇದು ತೋರಿಸುತ್ತದೆ. ಯಾವ ಅಧಿಕಾರಿ ವ್ಯಾಸ್ನಾ ಅವರ ಹೆಸರನ್ನು ಪಟ್ಟಿಯಿಂದ ಅಳಿಸಿದರೂ ಅವರಿಗೆ ಆ ಹುದ್ದೆಯಲ್ಲಿ ಇರುವ ಅರ್ಹತೆ ಇಲ್ಲ. ಎಲ್‌ಡಿಎಫ್ ಪಕ್ಷವು ಯಾವಾಗಲೂ ಅಧಿಕಾರದಲ್ಲಿ ಇರುವುದಿಲ್ಲ. ಇಂಥ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಹೇಳಿದರು.

ತಮ್ಮ ಹೆಸರನ್ನು ಪಟ್ಟಿಯಿಂದ ಅಳಿಸಿ ಹಾಕಿರುವ ಬಗ್ಗೆ ನೋಟಿಸ್ ಬಂದ ಕೂಡಲೇ ವ್ಯಾಸ್ನಾ ಅವರು ಕೇರಳ ಹೈಕೋರ್ಟ್ ಮೆಟ್ಟಿಲೇರಿದ್ದರು. ವ್ಯಾಸ್ನಾ ಅವರ ಮನವಿಯನ್ನು ಪುರಸ್ಕರಿಸಿ ಎಂದು ಕೋರ್ಟ್ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು. ಈ ಬಳಿಕ, ಆಯೋಗವು ವ್ಯಾಸ್ನಾ ಅವರ ಹೆಸರನ್ನು ಪಟ್ಟಿಗೆ ಬುಧವಾರ ಸೇರಿಸಿತು.

'ಕಾಶ್ಮೀರ್ ಟೈಮ್ಸ್' ಕಚೇರಿ ಮೇಲೆ ಎಸ್‌ಐಎ ದಾಳಿ

ಜಮ್ಮು (ಪಿಟಿಐ): 'ಕಾಶ್ಮೀರ್ ಟೈಮ್ಸ್' ಪತ್ರಿಕೆಯ ಕಚೇರಿ ಮೇಲೆ ಜಮ್ಮು ಮತ್ತು ಕಾಶ್ಮೀರ ಪೊಲೀಸರ ರಾಜ್ಯ ತನಿಖಾ ದಳವು (ಎಸ್‌ಐಎ) ಗುರುವಾರ ದಾಳಿ ನಡೆಸಿದೆ.

ದಾಳಿ ವೇಳೆ ಒಂದು ರಿವಾಲ್ವರ್, ಎಕೆ ರೈಫಲ್ ಮತ್ತು ಪಿಸ್ತೂಲ್‌ಗಳಲ್ಲಿ ಬಳಸುವ ಮದ್ದುಗುಂಡುಗಳು, ಗ್ರೆನೇಡ್‌ನ ಪಿನ್‌ಗಳು ಹಾಗೂ ಇತರ ವಸ್ತುಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ. ಕಚೇರಿ ಆವರಣದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದ್ದು, ಕಂಪ್ಯೂಟರ್‌ಗಳನ್ನು ಪರಿಶೀಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ದೇಶ ವಿರೋಧಿ ಚಟುವಟಿಕೆಗಳನ್ನು ಉತ್ತೇಜಿಸುತ್ತಿರುವ ಆರೋಪದ ಮೇಲೆ ಪತ್ರಿಕೆ ಹಾಗೂ ಅದರ ಮುಖ್ಯಸ್ಥರ ವಿರುದ್ಧ ಇತ್ತೀಚೆಗೆ ಪ್ರಕರಣ ದಾಖಲಾಗಿದೆ. ಪತ್ರಿಕೆಯ ಮುಖ್ಯಸ್ಥರನ್ನು ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಸುರಿಂದರ್ ಸಿಂಗ್ ಚೌಧರಿ, 'ತಪ್ಪು ನಡೆದಿರುವುದು ಸಾಬೀತಾದರೆ ಮಾತ್ರ ಕ್ರಮ ಕೈಗೊಳ್ಳಬೇಕು. ಯಾವುದೇ ಒತ್ತಡದಿಂದ ಕ್ರಮ ತೆಗೆದುಕೊಳ್ಳಬಾರದು. ಪತ್ರಿಕೆಯಿಂದ ತಪ್ಪಾಗಿದ್ದಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

'ಎಸ್‌ಇಪಿ ಪರಿಶೀಲನೆಗೆ ಸಮಿತಿ ರಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಖದೇವ್ ಥೋರಟ್ ಅಧ್ಯಕ್ಷತೆಯ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗ ಮೂರು ತಿಂಗಳ ಹಿಂದೆ ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಸಲ್ಲಿಸಲು ಎರಡು ದಿನಗಳಲ್ಲಿ ಸಮಿತಿ ರಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವರದಿ ಸಲ್ಲಿಕೆಯಾದ ಮೂರು ತಿಂಗಳಲ್ಲಿ ಮೂವರು ಪ್ರಧಾನ ಕಾರ್ಯದರ್ಶಿಗಳು ಬದಲಾದ ಕಾರಣ ಸಮಿತಿ ರಚನೆ ವಿಳಂಬವಾಗಿತ್ತು. ವರದಿಯಲ್ಲಿನ ಎಲ್ಲ ವಿವರಗಳನ್ನು ಸಮಿತಿ ಕೂಲಂಕಷವಾಗಿ ಪರಿಶೀಲಿಸಿದ ನಂತರ ಅನುಷ್ಠಾನಕ್ಕಾಗಿ ಸಂಪುಟದ ಅನುಮೋದನೆ ಪಡೆಯಲಾಗುವುದು' ಎಂದರು.

ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ವಿದೇಶಿ ವಿಶ್ವವಿದ್ಯಾಲಯಗಳಿಗೆ ಅನ್ವಯಿಸುವುದಿಲ್ಲ. ಖಾಸಗಿ ಮತ್ತು ಡೀಮ್ಡ್-ಟು-ಬಿ ವಿಶ್ವವಿದ್ಯಾಲಯಗಳೂ ರಾಷ್ಟ್ರೀಯ ಶಿಕ್ಷಣ ನೀತಿಯನ್ನೇ ಅನುಸರಿಸುತ್ತಿವೆ

ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ

ರಾಜ್ಯ ಶಿಕ್ಷಣ ನೀತಿ ಆಯೋಗದ ವರದಿಯನ್ನು ಪರಿಶೀಲಿಸಲು ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಚಿಸಬೇಕಿತ್ತು. ಸಮಿತಿ ರಚನೆಯ ಕಡತಕ್ಕೆ ಸಹಿ ಹಾಕಿದ್ದರೂ ಪ್ರಧಾನ ಕಾರ್ಯದರ್ಶಿ ಖುಷ್ಬೂ ಗೋಯೆಲ್ ಚೌಧರಿ ಅವರ ಗಮನಕ್ಕೆ ಬಂದಿಲ್ಲ ಎಂದು ಸುದ್ದಿಗೋಷ್ಠಿಯಲ್ಲೇ ಆಶ್ಚರ್ಯ ವ್ಯಕ್ತಪಡಿಸಿದ ಅವರು, ತಕ್ಷಣ ಕ್ರಮಕೈಗೊಳ್ಳಲು ಸೂಚಿಸಿದರು.

'ಆಯೋಗ ಮಧ್ಯಂತರ ವರದಿ ನೀಡಿದಾಗಲೇ ಹಲವು ಅಂಶಗಳನ್ನು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳದೆ ತರಾತುರಿಯಲ್ಲಿ ಎನ್‌ಇಪಿ ಜಾರಿಗೆ ತಂದಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಎಸ್‌ಇಪಿ ಆಯೋಗ ರಚಿಸಿತ್ತು. 2025–26ನೇ ಸಾಲಿನಿಂದಲೇ ರಾಜ್ಯ ಶಿಕ್ಷಣ ನೀತಿ ಪಾಲಿಸಲಾಗಿದೆ. ಅಂತಿಮ ವರದಿ ಆಧರಿಸಿ, ಅಳವಡಿಸಿಕೊಳ್ಳಬೇಕಿರುವುದು ಕೆಲ ಅಂಶಗಳಷ್ಟೇ ಬಾಕಿ ಇದೆ. ಪರಿಶೀಲನೆಗೆ ಒಳಪಡಿಸಿ ಎರಡು ತಿಂಗಳಲ್ಲಿ ಸಂಪುಟದ ಮುಂದೆ ಇಡಲಾಗುವುದು. ನಂತರ ಸಾರ್ವಜನಿಕ ಚರ್ಚೆಗೆ ಬಿಡಲಾಗುವುದು' ಎಂದು ಹೇಳಿದರು.

ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಚಾಲನೆ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಐವತ್ತಾರನೆಯ ಭಾರತದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಗುರುವಾರ ಸಂಜೆ ಆರಂಭವಾಯಿತು

ಚಿತ್ರೋತ್ಸವದ ಕೇಂದ್ರ ಸ್ಥಾನವಾದ ಹಳೇ ಮೆಡಿಕಲ್ ಕಾಲೇಜು (ಐನಾಕ್ಸ್ ಚಿತ್ರಮಂದಿರ) ಮುಂಭಾಗದಲ್ಲಿ ಕೆಂಪುಹಾಸಿನ ಮೇಲೆ ನಿರ್ಮಿಸಲಾದ ವಿಶೇಷ ವೇದಿಕೆಯಲ್ಲಿ ಕೇಂದ್ರ ಪ್ರಸಾರ ಖಾತೆ ಸಚಿವ ಎಲ್ ಮುರುಗನ್, ಗೋವಾ ರಾಜ್ಯಪಾಲ ಅಶೋಕ ಗಜಪತಿರಾಜು, ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸಸ್ಯವೊಂದಕ್ಕೆ ನೀರೆರೆಯುವ ಮೂಲಕ ಚಿತ್ರೋತ್ಸವ ಮತ್ತು ಮೆರವಣಿಗೆಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಚಿತ್ರೋತ್ಸಕ್ಕೆ ಶುಭ ಕೋರಿದರು.

ಅರ್ಧ ತಾಸು ನಡೆದ ಸಮಾರಂಭದ ನಂತರ ಮೆರವಣಿಗೆ ಆರಂಭವಾಯಿತು. ಇದೇ ಸಂದರ್ಭದಲ್ಲಿ ತೆಲುಗು ನಟ ನಂದಮೂರಿ ಬಾಲಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಕೇಂದ್ರ ಸಚಿವ ಶ್ರೀಪಾದ ನಾಯ್ಕ್, ಗೋವಾ ಸರ್ಕಾರದ ಸಚಿವರು, ವಾರ್ತಾ ಸಚಿವಾಲಯದ ಹಿರಿಯ ಅಧಿಕಾರಿಗಳು, ಭಾರತೀಯ ಮತ್ತು ವಿದೇಶಿ ಸಿನಿಮಾ ಗಣ್ಯರು ಮತ್ತು ಚಿತ್ರೋತ್ಸವದ ಪ್ರತಿನಿಧಿಗಳು ಭಾಗವಹಿಸಿದ್ದರು.

ಉದ್ಘಾಟನೆ ನಂತರ ನಡೆದ ಮೆರವಣಿಗೆಯಲ್ಲಿ ದೇಶದ ಹಲವಾರು ರಾಜ್ಯಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುವ ಕಲಾ ತಂಡಗಳು, ನೃತ್ಯಗಾರರು ಮತ್ತು ಹಾಡುಗಾರರು ತಮ್ಮ ವಾದ್ಯ ಮೇಳಗಳೊಂದಿಗೆ ಭಾಗವಹಿಸಿ ಚಿತ್ರೋತ್ಸವದ ಸಂಭ್ರಮವನ್ನು ಹೆಚ್ಚಿಸಿದರು.

ಶಬರಿಮಲೆ ದರ್ಶನ: ಕೇರಳ ಹೈಕೋರ್ಟ್ ನಿರ್ದೇಶನದ ಮೇರೆಗೆ ಕ್ರಮ

ಸ್ಪಾಟ್ ಬುಕ್ಕಿಂಗ್: 5 ಸಾವಿರಕ್ಕೆ ಸೀಮಿತ

ಪತ್ತನಂತಿಟ್ಟ (ಪಿಟಿಐ): ಕೇರಳ ಹೈಕೋರ್ಟ್ ನಿರ್ದೇಶನದ ಮೇರೆಗೆ ಶಬರಿಮಲೆ ದರ್ಶನಕ್ಕಾಗಿ 'ಸ್ಥಳದಲ್ಲೇ ಬುಕ್ಕಿಂಗ್' ಅನ್ನು ದಿನಕ್ಕೆ 5 ಸಾವಿರ ಜನರಿಗೆ ಮಿತಿಗೊಳಿಸಲಾಗಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ತಿಳಿಸಿದೆ.

'ನೀಲಕ್ಕಲ್ ಮತ್ತು ವಂಡಿಪೆರಿಯಾರ್ ಕೇಂದ್ರಗಳಲ್ಲಿ ಮಾತ್ರ ಸ್ಥಳದಲ್ಲೇ ಬುಕ್ಕಿಂಗ್ ಸೌಲಭ್ಯ ಲಭ್ಯವಿದೆ. ಪಂಪಾ, ಎರುಮೇಲಿ ಮತ್ತು ಚೆಂಗನ್ನೂರಿನಲ್ಲಿ ಈ ಸೌಲಭ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ನ.24ರವರೆಗೆ ನಿರ್ಬಂಧಗಳು ಜಾರಿಯಲ್ಲಿರುತ್ತವೆ' ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'ಶಬರಿಮಲೆ ದರ್ಶನಕ್ಕೆ ಬರುವ ಭಕ್ತರು ಸಾಧ್ಯವಾದಷ್ಟು 'ವರ್ಚುವಲ್ ಕ್ಯೂ' ವ್ಯವಸ್ಥೆ ಮೂಲಕ ತಮ್ಮ ಸ್ಲಾಟ್‌ಗಳನ್ನು ಪಡೆದುಕೊಳ್ಳಬೇಕು. ದರ್ಶನಕ್ಕಾಗಿ ನಿಗದಿಪಡಿಸಿದ ದಿನ ಮತ್ತು ಸಮಯದಲ್ಲಿ ಮಾತ್ರ ಬರಬೇಕು' ಎಂದು ಮನವಿ ಮಾಡಿದ್ದಾರೆ.

'ನ.17ರಂದು ದೇವಾಲಯದ ಬಾಗಿಲು ತೆರೆದ 48 ಗಂಟೆಯೊಳಗೆ ಸುಮಾರು ಎರಡು ಲಕ್ಷ ಭಕ್ತರು ಬಂದಿದ್ದರಿಂದ ಪರಿಸ್ಥಿತಿ ನಿಯಂತ್ರಣ ತಪ್ಪಿತ್ತು' ಎಂದು ಕೇರಳ ಹೈಕೋರ್ಟ್‌ನ ವಿಭಾಗೀಯ ಪೀಠದ ನ್ಯಾಯಮೂರ್ತಿಗಳಾದ ರಾಜಾ ವಿಜಯರಾಘವನ್ ವಿ, ಕೆ.ವಿ. ಜಯಕುಮಾರ್ ಟಿಡಿಬಿಯನ್ನು ಟೀಕಿಸಿದ್ದಾರೆ.

'ಮಂಡಲ- ಮಕರವಿಳಕ್ಕು ಋತುವಿನಲ್ಲಿ ಪ್ರತಿದಿನ ಸುಮಾರು ಒಂದು ಲಕ್ಷ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತಿತ್ತು. ವಾರ್ಷಿಕ 50 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡುತ್ತಿದ್ದರು. ಸದ್ಯದ ಈ ವ್ಯವಸ್ಥೆಗಳು ಸಾಕಾಗುವುದಿಲ್ಲ' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

ಪದ್ಮಕುಮಾರ್ ಬಂಧನ

ತಿರುವನಂತಪುರ (ಪಿಟಿಐ): ಶಬರಿಮಲೆ ದೇವಸ್ಥಾನದ ಚಿನ್ನ ನಾಪತ್ತೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಾಜಿ ಅಧ್ಯಕ್ಷ ಎ. ಪದ್ಮಕುಮಾರ್ ಅವರನ್ನು ಗುರುವಾರ ಬಂಧಿಸಿದೆ.

ಮಾಜಿ ಶಾಸಕರೂ ಆದ ಪದ್ಮಕುಮಾರ್ ಅವರನ್ನು ಬೆಳಿಗ್ಗೆಯಿಂದ ಅಪರಾಧ ವಿಭಾಗದ ಕಚೇರಿಯಲ್ಲಿ ವಿಚಾರಣೆ ನಡೆಸಲಾಯಿತು. ನಂತರ ಕೊಲ್ಲಂನ ನ್ಯಾಯಾಲಯಕ್ಕೆ ಅಧಿಕಾರಿಗಳು ಹಾಜರುಪಡಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದರು.

ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚಗಳು ಮತ್ತು ಶ್ರೀಕೋವಿಲ್ (ಗರ್ಭಗುಡಿ) ಬಾಗಿಲಿನ ಚೌಕಟ್ಟುಗಳನ್ನು ಚಿನ್ನ ಲೇಪನಕ್ಕಾಗಿ ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪೋಟಿ ಅವರಿಗೆ ಹಸ್ತಾಂತರಿಸುವ ಪ್ರಸ್ತಾವವನ್ನು ಮಂಡಳಿಯು ಪರಿಗಣಿಸಿದ್ದ 2019ರ ಸಂದರ್ಭದಲ್ಲಿ ಅವರು ಟಿಡಿಬಿ ಅಧ್ಯಕ್ಷರಾಗಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚಿನ್ನ ಲೇಪಿತ ತಾಮ್ರದ ಕವಚಗಳನ್ನು ಪೋಟಿ ಅವರಿಗೆ ಹಸ್ತಾಂತರಿಸಿದಾಗ ತಾನು ಮಂಡಳಿಯ ಅಧ್ಯಕ್ಷನಾಗಿರಲಿಲ್ಲ ಎಂದು ಪದ್ಮಕುಮಾರ್ ವಾದಿಸುತ್ತಿದ್ದಾರೆ. ಆದರೆ, ಅವರ ಅಧಿಕಾರಾವಧಿಯಲ್ಲಿಯೇ ಈ ಪ್ರಸ್ತಾವವನ್ನು ಜಾರಿಗೊಳಿಸಲಾಗಿದೆ' ಎಂದು ಎಸ್‌ಐಟಿ ಹೇಳಿದೆ.

ನಾಲ್ವರು ಸಂಚುಕೋರರ ಬಂಧನ

ಪ್ರಜಾವಾಣಿ ವಾರ್ತೆ

ಶ್ರೀನಗರ: ನ.10ರಂದು ನವದೆಹಲಿಯ ಕೆಂಪು ಕೋಟೆ ಬಳಿ ಸಂಭವಿಸಿದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಮತ್ತೆ ನಾಲ್ವರು ಪ್ರಮುಖ ಸಂಚುಕೋರರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ.

ಪುಲ್ವಾಮಾದ ಡಾ. ಮುಜಮ್ಮಿಲ್ ಶಕೀಲ್ ಗನಾಯಿ, ಅನಂತನಾಗ್ ಜಿಲ್ಲೆಯ ಡಾ.ಆದೀಲ್ ಅಹ್ಮದ್, ಲಖನೌದ ಡಾ.ಶಾಹೀನ್ ಸಯೀದ್, ಶೋಪಿಯಾನ್ ಜಿಲ್ಲೆಯ ಮುಫ್ತಿ ಇರ್ಫಾನ್ ಅಹ್ಮದ್ ವಾಗೆಯನ್ನು ಶ್ರೀನಗರದಲ್ಲಿ ವಶಕ್ಕೆ ಪಡೆಯಲಾಯಿತು. ನಾಲ್ವರ ಬಂಧನಕ್ಕೆ ಸಂಬಂಧಿಸಿದಂತೆ, ದೆಹಲಿಯ ಪಟಿಯಾಲ ಹೌಸ್ ಕೋರ್ಟ್ ನೀಡಿದ ಆದೇಶವನ್ನು ಶ್ರೀನಗರದ ನ್ಯಾಯಾಲಯಕ್ಕೆ ಸಲ್ಲಿಸಿದ ಎನ್‌ಐಎ ಅಧಿಕಾರಿಗಳು, ನಾಲ್ವರನ್ನೂ ತಮ್ಮ ವಶಕ್ಕೆ ಪಡೆದುಕೊಂಡರು.

ಸುದ್ದಿ 2 ನಿ

ರಾಬರ್ಟ್ ವಾದ್ ಇ.ಡಿ ಆರೋಪ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಮೂ ಸಂಜಯ್ ಭಂಡಾರಿ ಅವರಿಗೆ ಸಂಬಂ ಪ್ರಕರಣದಲ್ಲಿ ಕಾಂಗ್ರೆಸ್ ಸಂಸದೆ ಪ್ರಿಯಾ ಉದ್ಯಮಿ ರಾಬರ್ಟ್ ವಾದ್ರಾ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾ ಪ್ರಕರಣಗಳನ್ನು ವಿಚಾರಣೆ ನಡೆಸುವ ದಾಖಲಿಸಲಾಗಿತ್ತು ಎಂದು ಅಧಿಕಾರಿಗ

ಇದು ವಾದ್ರಾ ವಿರುದ್ಧದ ಎರಡನೇ ಆರೋಪಪಟ್ಟಿಯಾಗಿದೆ. ಜುಲೈನಲ್ಲಿ ಹ ವ್ಯವಹಾರದ ಅಕ್ರಮಗಳಿಗೆ ಸಂಬಂಧಿಸಿ ಅವರ ವಿರುದ್ಧ ಇ.ಡಿ ಆರೋಪಪಟ್ಟಿ ಸ ವಾದ್ರಾ ಅವರನ್ನು ಈ ಹಿಂದೆ ಇ.ಡಿ ವಿ ಅವರನ್ನು ಹಸ್ತಾಂತರಿಸುವಂತೆ ಭಾರತ ಹೈಕೋರ್ಟ್ ತಿರಸ್ಕರಿಸಿತ್ತು. ಜುಲೈನಲ್ಲಿ 'ತಲೆಮರೆಸಿಕೊಂಡಿರುವ ಆರ್ಥಿಕ ಅಪ

2016ರಲ್ಲಿ ಆದಾಯ ತೆರಿಗೆ ಇಲಾ ಕೂಡಲೇ ಭಂಡಾರಿ ಲಂಡನ್‌ಗೆ ಪರಾ ವಿರೋಧಿ ಕಾನೂನಿನಡಿ ಭಂಡಾರಿ ಮ ತೆರಿಗೆ ಇಲಾಖೆ ಆರೋಪಪಟ್ಟಿ ಸಲ್ಲಿಸಿತ್ತು ಇ.ಡಿಯು 2017ರ ಫೆಬ್ರುವರಿಯಲ್ಲಿ ಪಿ ಇತರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ

5 ಮರಿಗಳಿಗೆ ಜನ್

ಶಿಯೋಪುರ್ (ಪಿಟಿಐ): ಭಾರತ ಚೀತಾ, ಕುನೊ ರಾಷ್ಟ್ರೀಯ ಉದ್ಯಾ ಜನ್ಮ ನೀಡಿದೆ. ನಮೀಬಿಯಾದಿಂದ 'ಮುಖಿ' ಜನಿಸಿತ್ತು.

2 ವರ್ಷ 11 ತಿಂಗಳ ವಯಸ್ಸಿ ಮೊದಲ ಹೆಣ್ಣು ಚೀತಾ. ಇದೀಗ ವ ಭಾರತೀಯ ಚೀತಾವೂ ಆಗಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋ ಮುಖ್ಯಮಂತ್ರಿ ಮೋಹನ್ ಯಾದ ಚೀತಾ 5 ಮರಿಗಳಿಗೆ ಜನ್ಮ ನೀಡಿ ಅಭೂತಪೂರ್ವ ಪ್ರಗತಿಯಾಗಿದೆ. ಐತಿಹಾಸಿಕ ಮೈಲಿಗಲ್ಲು ಸಾಧಿಸಿ ಆರೋಗ್ಯವಾಗಿವೆ' ಎಂದು ಹೇಳಿದ್ದಾ

ನಮೀಬಿಯಾದಿಂದ ತರಲಾಗಿ ಚೀತಾಗಳು ಇಲ್ಲಿನ ವಾತಾವರಣಕ್ಕೆ ಭಾರತದಲ್ಲೇ ಜನಿಸಿದ್ದರಿಂದ ಈ ವ ಇದರ ಮರಿಗಳೂ ಇದೇ ರೀತಿ ಅ ಸಂತಾನೋತ್ಪತ್ತಿ ಮೂಲಕ ದೇಶದ ಎಂದು ನಿರೀಕ್ಷಿಸಲಾಗಿದೆ.

ಭಾರತದಲ್ಲಿ ನಶಿಸಿಹೋಗಿದ್ದ ಅಭಿವೃದ್ಧಿಪಡಿಸಲು, 'ಪ್ರಾಜೆಕ್ಟ್ ಇದರ ಭಾಗವಾಗಿ ನಮೀಬಿಯಾದಿ ಚೀತಾಗಳನ್ನು ತಂದು, ಕುನೊ ರ ಸೆ.17ರಂದು ಬಿಡಲಾಗಿತ್ತು.

ಸೇಲಂ: ರ‍್ಯಾಲಿಗೆ ಅನು

ಸೇಲಂ (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರ ನೇತೃತ್ವದಲ್ಲಿ ಡಿ.4ರಂದು ರ‍್ಯಾಲಿ ನಡೆಸಲು ಅನುಮತಿ ನೀಡುವಂತೆ ಪಕ್ಷದ ಪದಾಧಿಕಾರಿಗಳು ಪೊಲೀಸರಿಗೆ ಮನವಿ ಸಲ್ಲಿಸಿದ್ದಾರೆ.

ಬೋಸ್ ಮೈದಾನ, ಕೋಟೈ ಮೈದಾನ ಸೇರಿದಂತೆ ಮೂರು ಸ್ಥಳಗಳನ್ನು ಟಿವಿಕೆ ಗೊತ್ತುಪಡಿಸಿದೆ. ಆದರೆ, ಆ ದಿನದಂದು ರ‍್ಯಾಲಿ ಆಯೋಜನೆಗೆ ಅನುಮತಿ

ನ್ಯಾಯಕ್ಕಾಗಿ ಕಾಯ 50 ಸಾವಿರ ಮ

ನವದೆಹಲಿ (ಪಿಟಿಐ): ಕಾನೂನು ಸಂಘರ್ಷ ಎದುರಿಸುತ್ತಿರುವ ಮಕ್ಕಳ ಸ್ಥಿತಿಯು ಭಾರತದಲ್ಲಿ ಉತ್ತಮವಾಗಿಲ್ಲ. ನಿಧಾನಗತಿಯ ನ್ಯಾಯದಾನ ವ್ಯವಸ್ಥೆಯ ಕಾರಣ ಮಕ್ಕಳು ಸಂಕಷ್ಟ ಎದುರಿಸುತ್ತಿದ್ದಾರೆ. ಬಾಲ ನ್ಯಾಯಮಂಡಳಿಗಳ (ಜೆಜೆಬಿ) ಬಳಿ ಸಾವಿರಾರು ಪ್ರಕರಣಗಳು ವಿಚಾರಣೆಯೇ ಇಲ್ಲದೆ ಹಾಗೆಯೇ ಉಳಿದುಬಿಟ್ಟಿವೆ. ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಸಲ್ಲಿಸಿದ ಅರ್ಜಿಗಳಿಗೂ ಉತ್ತರ ನೀಡುತ್ತಿಲ್ಲ. ಇದರಿಂದ ಈ ಮಂಡಳಿಗಳ ಪಾರದರ್ಶಕತೆ ಬಗ್ಗೆಯೂ ಸಂಶಯ ಮೂಡುವಂತಾಗಿದೆ.

ಬಾಲ ನ್ಯಾಯ ಕಾಯ್ದೆ ಜಾರಿಯಾಗಿ 10 ವರ್ಷಗಳ ಕಳೆದರೂ ಕಾನೂನು ಸಂಘರ್ಷ ಎದುರಿಸುತ್ತಿರುವ ಮಕ್ಕಳ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಇಂಡಿಯಾ ಜಸ್ಟೀಸ್ ರಿಪೋರ್ಟ್ ಸಂಸ್ಥೆಯು 'ಬಾಲ ನ್ಯಾಯ ಮತ್ತು ಕಾನೂನು ಸಂಘರ್ಷ ಎದುರಿಸುತ್ತಿರುವ ಮಕ್ಕಳು: ಸೌಕರ್ಯಗಳ ಒಂದು ಅಧ್ಯಯನ' ವರದಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಈ ವರದಿಯಲ್ಲಿ ಹಲವು ಅಂಶಗಳ ಬಗ್ಗೆ ಚರ್ಚಿಸಲಾಗಿದೆ.

2022–23ನೇ ಸಾಲಿನ 2023 ಅ.31ರವರೆಗೆ ಮಾಹಿತಿಗಳನ್ನು ಈ ವರದಿಯಲ್ಲಿ ಸಂಗ್ರಹಿಸಲಾಗಿದೆ.

50,000+

ನಿಧಾನಗತಿ ನ್ಯಾಯದಾನ ವ್ಯವಸ್ಥೆಯಲ್ಲಿ ಸಿಲುಕಿರುವ ಮಕ್ಕಳ ಸಂಖ್ಯೆ

ಜೆಜೆಬಿ ಅವ್ಯವಸ್ಥೆ

765 ಜಿಲ್ಲೆಗಳಲ್ಲಿ 707 ಜೆಜೆಬಿಗಳು ಜಿಲ್ಲೆಯಲ್ಲಿಯೂ ಜೆಜೆಬಿ ಇರಲೇಬೇಕ ಕಾಯ್ದೆಯ ಅನ್ವಯ ಕಡ್ಡಾಯ. ಆದರ ವ್ಯವಸ್ಥಿತವಾಗಿಲ್ಲ. ಇಲ್ಲಿ ನ್ಯಾಯಾಧೀಶ ಇರುವುದಿಲ್ಲ, ಮಕ್ಕಳಿಗೆ ಕಾನೂನು ತಜ್ಞರೊಬ್ಬರು ಜೆಜೆಬಿಗಳಲ್ಲಿ ಇರಬೇ ಕ್ಲಿನಿಕ್ ಎನ್ನಲಾಗುತ್ತದೆ. ಆದರೆ, ಇಲ್ಲಿ

4ರಲ್ಲಿ ಒಂದು; ಪೂರ್ಣ ಪ್ರಮಾಣದ ನ್ಯಾಯಪೀಠ ಇಲ್ಲದೆಯೇ ಕಾರ್ಯನಿರ್ವಹಿಸುತ್ತಿರುವ ಜೆಜೆಬಿಗಳ ಸ

ಆರ್‌ಟಿಐಗೂ ಸಿಗದ ಉತ್ತರ

ಜೆಜೆಬಿಗಳ ಸ್ಥಿತಿಗತಿಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ದತ್ತಾಂಶಗಳನ್ನು ದಾಖಲು ಮಾಡ ಆದ್ದರಿಂದ, ಇಂಡಿಯಾ ಜಸ್ಟೀಸ್ ರಿಪೋರ್ಟ್ ಸಂಸ್ಥೆಯು ಈ ಕುರಿತು ಮಾಹಿತಿ ಕೋರಿ ಅರ್ಜಿ ಸಲ್ಲಿಸಿತ್ತು. ಇವುಗಳಲ್ಲಿ ಶೇ 11ರಷ್ಟು ಅರ್ಜಿಗಳನ್ನು ತಿರಸ್ಕರಿಸಲಾಯಿತು. ಶೇ 24 ಉತ್ತರವೇ ಬರಲಿಲ್ಲ. ಶೇ 29ರಷ್ಟು ಅರ್ಜಿಗಳನ್ನು ಬೇರೆ ಜೆಜೆಬಿಗಳಿಗೂ ವರ್ಗಾಯಿಸಲ ಶೇ39ರಷ್ಟು ಅರ್ಜಿಗಳಿಗೆ ಮಾತ್ರ ಉತ್ತರ ದೊರೆಯಿತು.

ಅಂಗವಿಕಲರ ನೆರವಿಗೆ ಎ.ಐ

ಆವಿಷ್ಕಾರಗಳಿಗೆ ಆದ್ಯತೆ ನೀಡಿ: ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ತಜ್ಞರ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೈಹಿಕವಾಗಿ ಮಾತ್ರವಲ್ಲ, ಬೌದ್ಧಿಕವಾಗಿಯೂ ವೈಕಲ್ಯ ಇರುವವರಿಗೆ ನೆರವಾಗಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಕೆಯಾಗಬೇಕು. ಅಂಥ ಆವಿಷ್ಕಾರಗಳಿಗೆ ಆದ್ಯತೆ ನೀಡಬೇಕು.

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ, ತಂತ್ರಜ್ಞಾನ ಶೃಂಗಸಭೆಯಲ್ಲಿ ನಡೆದ 'ಅವಿಭಾಜ್ಯ ಅಂಗವಾಗಿ ಒಳಗೊಳ್ಳುವಿಕೆ: ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಕಾರ್ಯಪಡೆ ಮೂಲಕ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಮತ್ತು ಎಐ ಬಳಕೆ' ಗೋಷ್ಠಿಯಲ್ಲಿ ಮೂಡಿಬಂದ ಅಭಿಪ್ರಾಯವಿದು.

ಕಣ್ಣಿಗೆ ಕಾಣುವ ವೈಕಲ್ಯವಷ್ಟೇ ಅಲ್ಲ, ಕಣ್ಣಿಗೆ ಕಾಣದ ವೈಕಲ್ಯಗಳ ಬಗ್ಗೆಯೂ ಗಮನಹರಿಸಬೇಕು. ಅಂಗವೈಕಲ್ಯವು ಕಾಣುತ್ತದೆ. ಆದರೆ, ಮಿದುಳಿಗೆ ಸಂಬಂಧಿಸಿದ ಸಮಸ್ಯೆ ಗೊತ್ತಾಗುವುದಿಲ್ಲ.

ಇಂಥ ಸಮಸ್ಯೆಗಳನ್ನು ಹೊಂದಿರುವವರನ್ನು ಸಬಲೀಕರಣಗೊಳಿಸುವುದು ಹೇಗೆ ಎಂದು ಮೊದಲು ಚಿಂತನೆ ನಡೆಸಬೇಕು. ಜೊತೆಗೆ ಅವರಲ್ಲಿರುವ ಪ್ರತಿಭೆಗಳು ಅರಳಲು ಯಾವ ರೀತಿಯ ತಾಂತ್ರಿಕ ಪ್ರೋತ್ಸಾಹ ಅಗತ್ಯ ಎಂಬುದನ್ನು ಕಂಡುಕೊಳ್ಳಬೇಕು ಎಂದು ತಜ್ಞರು ತಿಳಿಸಿದರು.

ಒಳಗೊಳ್ಳುವಿಕೆಯ ಅರ್ಥ ಇನ್ನಷ್ಟು ವಿಸ್ತಾರಗೊಳ್ಳಬೇಕು. ಅಂಗವಿಕಲರೂ ಸೇರಿದಂತೆ ಯಾರೂ ಆಧುನಿಕ ಜಗತ್ತಿನ ಸೌಲಭ್ಯಗಳಿಂದ, ಅವಕಾಶಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಸಂಪನ್ಮೂಲ ವ್ಯಕ್ತಿಗಳಾದ ರಾಹುಲ್ ಶಾ, ಜಿಗರ್ ಜೋಬನ್‌ಪುತ್ರ, ಸೌಮಿತ ಬಸು, ಅಮಿತ್ ಪ್ರಕಾಶ್, ರವಿ ನಾರಾಯಣ್, ಜವಾಹರ್ ಬೀಕೆ ಸಂವಾದದಲ್ಲಿ ಪಾಲ್ಗೊಂಡರು.



ಮಂಗಳವಾರ ಬೆಂಗಳೂರು ತಂತ್ರಜ್ಞಾನ ಶೃಂಗ ಸಭೆಯಲ್ಲಿ ದೃಷ್ಟಿಹೀನ ವಿದ್ಯಾರ್ಥಿಗಳು ವಸ್ತು ಪ್ರದರ್ಶನದಲ್ಲಿ ಭಾಗಿಯಾದರು —ಪ್ರಜಾವಾಣಿ ಚಿತ್ರ

ಒನ್‌ಟ್ಯಾಕ್ ಸರ್ಕೀಟ್‌ಗೆ ಚಾಲನೆ

ಅನುಭವ ಆರ್ಥಿಕತೆಗಾಗಿ ಭಾರತದ ಪ್ರಮುಖ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವಾದ ಒನ್‌ಟ್ಯಾಕ್‌ಗೆ (ಪ್ರವಾಸೋದ್ಯಮ, ಕಲೆ ಮತ್ತು ಸಂಸ್ಕೃತಿ), ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಬುಧವಾರ ಚಾಲನೆ ನೀಡಲಾಯಿತು.

ಉಡುಪಿಯಲ್ಲಿ ತನ್ನ ಮೊದಲ ಅನುಭವ ಸರ್ಕೀಟ್ ಅನ್ನು ಪ್ರಾರಂಭಿಸಿತು. ಕರ್ನಾಟಕ ವಿಷನ್ ಗ್ರೂಪ್ ಆನ್ ಸ್ಟಾರ್ಟ್ ಅಪ್‌ಗಳ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ರಾಜ್ಯ ಸರ್ಕಾರದ ಪ್ರವಾಸೋದ್ಯಮ ಕಾರ್ಯದರ್ಶಿ ತ್ರಿಲೋಕ ಚಂದ್ರ ಚಾಲನೆ ನೀಡಿದರು.

ಭವಿಷ್ಯೋದ್ಯಮಿಗಳ ನೆರವಿಗೆ ಸ್ಟಾರ್ಟ್‌ಅಪ್ ಸ್ಕೂಲ್: ಸ್ಟಾರ್ಟ್ ಅಪ್ ಮೂಲಕ ಭವಿಷ್ಯದಲ್ಲಿ ನವೋದ್ಯಮವನ್ನು ಆರಂಭಿಸುವವರಿಗೆ ನೆರವಾಗಲು ಸ್ಟಾರ್ಟ್ ಅಪ್ ಸ್ಕೂಲ್ ತಯಾರಾಗಿದೆ. ಐಕ್ವ್ ವೆಂಚರ್ಸ್ ಸಂಸ್ಥೆಯು ಸಹಯೋಗದಲ್ಲಿ ರೂಪಿಸಿ ಅಭಿವೃದ್ಧಿಪಡಿಸಿರುವ ಸ್ಟಾರ್ಟ್‌ಅಪ್ ಪಾರ್ಕ್ (ಸ್ಕೂಲ್), ಭಾರತದ ಮೊದಲ ಸಮಗ್ರ ಸ್ಟಾರ್ಟ್‌ಅಪ್ ಇನೋವೇಶನ್ ಹಬ್ ಆಗಿದ್ದು, ಮಡಿವಾಳದಲ್ಲಿ ಇದು ಕಾರ್ಯ ನಿರ್ವಹಿಸಲಿದೆ.

'ಇ.ವಿಗೂ ಬರಲಿದೆ ಎಐ'

ವಿದ್ಯುತ್ ಚಾಲಿತ ವಾಹನಗಳು (ಇವಿ) ಕೃತಕ ಬುದ್ಧಿಮತ್ತೆಯನ್ನು ಹೊಂದಿರುವ ವಾಹನಗಳೂ ಆಗಿರಲಿವೆ. ತಂತ್ರಜ್ಞಾನದ ವೇಗ ನೋಡಿದರೆ ಇದಕ್ಕೆ ಬಹಳ ಸಮಯ ಹಿಡಿಯಲಾರದು ಎಂಬುದು 'ಎಲೆಕ್ಟ್ರಿಕ್ ಮೊಬಿಲಿಟಿ' ಗೋಷ್ಠಿಯ ಒಟ್ಟಾರೆ ಅಭಿಪ್ರಾಯವಾಗಿ ಮೂಡಿಬಂತು.

ವಿದ್ಯುತ್ ಚಾಲಿತ ವಾಹನಗಳೇ ಮುಂದಿನ ಸಾರಿಗೆಯಾಗಿದೆ. ಈಗ ಹೇಗೆ ಪೆಟ್ರೋಲ್ ಬಂಕ್‌ಗಳು ಕಿಲೋಮೀಟರ್‌ಗೊಂದರಂತೆ ಇವೆಯೋ ಅದೇ ರೀತಿ ಚಾರ್ಜಿಂಗ್ ಪಾಯಿಂಟ್‌ಗಳು ಕೂಡ ಕಿಲೋಮೀಟರ್‌ಗೊಂದು ದೊರೆತಾಗ ಎಲ್ಲರಲ್ಲೂ ಇ.ವಿಗಳಿರಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟರು.

ದೀಪಾಲಂಕಾರದ ಆಕರ್ಷಣೆ: ಇಂದು ತೆರೆ

ಪರಿಷೆಗೆ ಯುವಜನರ ದಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿಯಲ್ಲಿ ನಡೆದಿರುವ ಕಡಲೆಕಾಯಿ ಪರಿಷೆಯು ನಾಲ್ಕನೇ ದಿನವೂ ಹೆಚ್ಚಿನ ಜನರನ್ನು ಆಕರ್ಷಿಸಿತು. ಹಿರಿಯರು, ಕುಟುಂಬದವರ ಜತೆಗೆ ಯುವ ಸಮೂಹದವರು ಪರಿಷೆಯಲ್ಲಿ ಸುತ್ತು ಹಾಕಿ ಬಗೆಬಗೆಯ ಕಡಲೆಕಾಯಿ ರುಚಿ ಸವಿದರು.

ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬೆಳಗಿನ ತರಗತಿ ಮುಗಿಸಿ ಮಧ್ಯಾಹ್ನ ನಂತರದ ಪರಿಷೆಯಲ್ಲಿ ಖುಷಿಯಿಂದಲೇ ಒಂದು ಸುತ್ತು ಹೆಜ್ಜೆ ಹಾಕುತ್ತಿದ್ದುದು ಕಂಡುಬಂದಿತು. ಕಡಲೆಕಾಯಿಯ ಬಗೆಗಳು, ಬೆಳೆಯುವ ಪರಿ, ಪ್ರದೇಶದ ವಿಶೇಷವನ್ನು ಮಾರಾಟಗಾರರಿಂದಲೇ ಹಲವು ಯುವತಿಯರು ಪಡೆದುಕೊಂಡರು.

ನಾಲ್ಕು ದಿನದಲ್ಲಿ ಎಂಟೂವರೆ ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸಿದ್ದಾರೆ. ಶುಕ್ರವಾರ ಪರಿಷೆಯ ಕೊನೆ ದಿನವಾಗಿದ್ದು, ಹೆಚ್ಚಿನ ಜನ ಆಗಮಿಸುವ ನಿರೀಕ್ಷೆಯಿದೆ.

'ಹಿಂದಿನ ವರ್ಷಗಳಲ್ಲಿ ಎರಡು ದಿನಕ್ಕೆ ಕಡಲೆಕಾಯಿ ಪರಿಷೆ ಮುಗಿದು ಹೋಗುತ್ತಿತ್ತು. ಈ ಬಾರಿ ಐದು ದಿನ ವಿಸ್ತರಣೆ ಆಗಿದ್ದರಿಂದ ಮೊದಲ ಬಾರಿ ಕುಟುಂಬದವರೊಂದಿಗೆ ಬಂದಿದ್ದೆ. ಎರಡನೇ ಬಾರಿ ಸ್ನೇಹಿತರೊಂದಿಗೆ ಬಂದಿದ್ದೇನೆ. ಹಸಿ, ಹುರಿದ, ಬೇಯಿಸಿದ ಕಡಲೆಕಾಯಿ ಸವಿಯುವ ಖುಷಿಯೇ ಬೇರೆ' ಎಂದು ಬನಶಂಕರಿಯ ವಿದ್ಯಾಶ್ರೀ ಹೇಳಿದರು.

ಆಕರ್ಷಕ ದೀಪಾಲಂಕಾರ: ಮೊದಲ ಬಾರಿಗೆ ದೀಪಾಲಂಕಾರವನ್ನು ಐದು ದಿನ ವಿಸ್ತರಿಸಿದ್ದರಿಂದ ವೈವಿಧ್ಯಮಯ ಚಟುವಟಿಕೆಗೆ ಮುಜರಾಯಿ ಇಲಾಖೆ ಹಾಗೂ ದೇವಸ್ಥಾನದ ಮಂಡಳಿ ಒತ್ತು ನೀಡಿದೆ.

ಪರಿಷೆ ಆರಂಭವಾಗುವ ಆಶ್ರಮ ವೃತ್ತದಿಂದ ಹಿಡಿದು ಗಾಂಧಿ ಬಜಾರ್ ಮುಖ್ಯರಸ್ತೆ, ಡಿವಿಜಿ ರಸ್ತೆ, ಕೆ.ಆರ್. ರಸ್ತೆ, ನಾರ್ತ್ ರೋಡ್, ನೆಟ್ಟಕಲ್ಲಪ್ಪ ಸರ್ಕಲ್ ರಸ್ತೆಯಲ್ಲದೇ ನರಸಿಂಹರಾಜ ಕಾಲೊನಿ ರಸ್ತೆಯಲ್ಲೂ ದೀಪಾಲಂಕಾರವನ್ನು ವಿಭಿನ್ನವಾಗಿ ಮಾಡಲಾಗಿದೆ.

ಖರೀದಿ ಭರಾಟೆ ಜೋರು: ಪರಿಷೆಯಲ್ಲಿ ಕಡಲೆಕಾಯಿ ಜತೆಗೆ ಆಟಿಕೆ, ಬಟ್ಟೆ, ಗೃಹೋಪಯೋಗಿ ವಸ್ತುಗಳ ಮಾರಾಟವೂ ಇದೆ. ತಿಂಡಿ ತಿನಿಸುಗಳ ಖರೀದಿಯೂ ಜೋರಾಗಿದೆ. ಉತ್ತರ ಭಾರತದಿಂದಲೂ ವ್ಯಾಪಾರಸ್ಥರು ಆಗಮಿಸಿದ್ದಾರೆ. ಪ್ಲಾಸ್ಟಿಕ್ ಬದಲು ಬಟ್ಟೆ ಬ್ಯಾಗ್‌ಗಳ ಬಳಕೆಗೆ ಒತ್ತು ನೀಡುವುದರಿಂದ ವಿಭಿನ್ನ ಬ್ಯಾಗುಗಳನ್ನು ಖರೀದಿಸುತ್ತಿದ್ದಾರೆ. ಇದರಿಂದ ಸತತ ನಾಲ್ಕು ದಿನದಿಂದ ವಹಿವಾಟು ನಡೆಯುತ್ತಿದೆ.

ಬಸವನಗುಡಿಯ ಕಡಲೆಕಾಯಿ ಪರಿಷೆಯಲ್ಲಿ ಗುರುವಾರ ಸಂಜೆ ಕಂಡುಬಂದ ಜನಸಾಗರ ಚಿತ್ರ: ರಂಜು ಪಿ

ಸಚಿವರ ಖುದ್ದು ಮೇಲುಸ್ತುವಾರಿ

ಬಸವನಗುಡಿ ಪರಿಷೆ ಸುಸೂತ್ರವಾಗಿ ನಡೆಯಲು ವಿಶೇಷವಾಗಿ ಗಮನ ನೀಡುತ್ತಿರುವ ಮುಜರಾಯಿ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಖುದ್ದು ಮೇಲುಸ್ತುವಾರಿ ವಹಿಸಿದ್ದಾರೆ. ನಾಲ್ಕನೇ ದಿನವೂ ದೇವಸ್ಥಾನದ ಆವರಣದಲ್ಲಿಯೇ ಕುಳಿತು ಆಗು ಹೋಗುಗಳನ್ನು ಗಮನಿಸಿದರು.

ಅಲ್ಲದೇ ತಾವೇ ಮೈಕ್ ಹಿಡಿದು, 'ಜನ ಸುರಕ್ಷತೆಗೆ ಒತ್ತು ಕೊಡಬೇಕು. ನಿಗದಿತ ಮಾರ್ಗದಲ್ಲಿಯೇ ಬರಬೇಕು. ಪೊಲೀಸರ ಸೂಚನೆಗಳನ್ನು ಪಾಲಿಸಬೇಕು' ಎಂದು ರಾಮಲಿಂಗಾರೆಡ್ಡಿ ಮನವಿ ಮಾಡುತ್ತಿದ್ದರು.

ರಾಮ್–ರಹೀಮ್ ಕೂಡಿಕೆಯೇ ಅನುಮಾನಾಸ್ಪದ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮದ ಹೆಸರಲ್ಲಿ ಸರ್ಕಾರಿ ಜಾಗಗಳನ್ನು ಅತಿಕ್ರಮಿಸುವುದು ಹಾಗೂ ದೇವರ ಹೆಸರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವುದನ್ನು ಸಹಿಸಲು ಆಗದು' ಎಂದು ಹೈಕೋರ್ಟ್ ಪ್ರಕರಣವೊಂದರ ವಿಚಾರಣೆ ವೇಳೆ ಅಸಮಾಧಾನ ವ್ಯಕ್ತಪಡಿಸಿದೆ.

ಸರ್ಕಾರಿ ಜಾಗ ತೆರವುಗೊಳಿಸುವಂತೆ ಕೋಲಾರ ತಹಶೀಲ್ದಾರ್ ನೀಡಿದ್ದ ನೋಟಿಸ್ ಪ್ರಶ್ನಿಸಿ ಗ್ರಾಮದ 'ವಿರಾಟ್ ಹಿಂದೂ ಸೇವಾ ಚಾರಿಟಬಲ್ ಟ್ರಸ್ಟ್' ಹಾಗೂ 'ಜಾಮಿಯಾ ಮಸ್ಜಿದ್ ಕಮಿಟಿ' ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, 'ಎರಡೂ ಧರ್ಮದವರು ಹೈಕೋರ್ಟ್ ಮೆಟ್ಟಿಲೇರಿರುವುದನ್ನು ನೋಡಿದರೆ ರಾಮ್-ರಹೀಮ್ ಕೂಡಿಕೆಯೇ ಹಲವು ಅನುಮಾನಗಳನ್ನು ಹುಟ್ಟು ಹಾಕುತ್ತಿದೆ' ಎಂದು ಆಶ್ಚರ್ಯ ವ್ಯಕ್ತಪಡಿಸಿತು.

ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಕೋಲಾರ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಯ ಕ್ಯಾಲನೂರು ಗ್ರಾಮದ ಸರ್ಕಾರಿ ಶಾಲೆಯ ಕಾಂಪೌಂಡ್ ಹಾಗೂ ಗ್ರಾಮದ ರಸ್ತೆಯ ಸರ್ಕಾರಿ ಜಾಗದಲ್ಲಿ ಕಟ್ಟಲಾಗಿರುವ ಮಳಿಗೆಗಳ ತೆರವಿಗೆ ನೀಡಲಾಗಿದ್ದ ನೋಟಿಸ್ ಅನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿಗೆ ಶಿವಕುಮಾರಸ್ವಾಮಿ ಆಯ್ಕೆ

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): ಶಿವಯೋಗಿ ಶಿವಾಚಾರ್ಯರ ಸ್ಮರಣಾರ್ಥ ಎನ್.ಚೆನ್ನಯ್ಯಸ್ವಾಮಿ ಮತ್ತು ಶಾರದಾದೇವಿ ಜನಕಲ್ಯಾಣ ಫೌಂಡೇಶನ್‌ನಿಂದ ನೀಡಲಾಗುವ 2025-26ನೇ ಸಾಲಿನ ಶಿವಯೋಗಿ ಶಿವಾಚಾರ್ಯ ರಾಷ್ಟ್ರೀಯ ಪ್ರಶಸ್ತಿಗೆ ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎಂ.ಶಿವಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

'ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ' ಎಂದು ಪ್ರತಿಷ್ಠಾನದ ಸಂಚಾಲಕ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

'ಆರ್ಟ್ ಆಫ್ ಲಿವಿಂಗ್'ಗೆ ರಾಷ್ಟ್ರೀಯ ಜಲ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಾದ್ಯಂತ ಜಲ ಪುನರುಜ್ಜೀವನಕ್ಕೆ ಕೈಗೊಂಡ ಕಾರ್ಯಕ್ರಮಗಳಿಗೆ 'ದಿ ಆರ್ಟ್ ಆಫ್ ಲಿವಿಂಗ್' ಸಂಸ್ಥೆ ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ.

ದೆಹಲಿಯ ವಿಜ್ಞಾನಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ನದಿಗಳ ಪುನಶ್ಚೇತನ, ಅಂತರ್ಜಲ ಮರುಪೂರಣ ಮತ್ತು ಎಲ್ಲಾ ಹವಾಮಾನಗಳಿಗೂ ಒಗ್ಗಿಕೊಳ್ಳುವಂತಹ ಕೃಷಿಯಲ್ಲಿ 'ದಿ ಆರ್ಟ್ ಆಫ್ ಲಿವಿಂಗ್' ಸಂಸ್ಥೆಯ ವೈಜ್ಞಾನಿಕ ಆಧರಿತ ಪ್ರಯತ್ನಗಳನ್ನು ಕೇಂದ್ರ ಸರ್ಕಾರದ ಜಲಶಕ್ತಿ ಸಚಿವಾಲಯವು ಗುರುತಿಸಿ ಉತ್ತಮ ಸರ್ಕಾರೇತರ ಸಂಸ್ಥೆ ಮತ್ತು ಬೆಸ್ಟ್ ಸಿವಿಲ್ ಸೊಸೈಟಿ ವರ್ಗದಲ್ಲಿ ಪ್ರಶಸ್ತಿ ನೀಡಿದೆ' ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರು ಆರ್ಟ್ ಆಫ್ ಲಿವಿಂಗ್‌ನ ಪ್ರತಿನಿಧಿಗಳಿಗೆ ರಾಷ್ಟ್ರೀಯ ಜಲ ಪುರಸ್ಕಾರ ಪ್ರದಾನ ಮಾಡಿದರು.

ಸಂಕ್ಷಿಪ್ತ ಸುದ್ದಿ

ರಾಮಲಿಂಗೇಶ್ವರಗೆ 'ಡಾ. ದೇಜಗೌ ಕನ್ನಡ ಶ್ರೀ ಪ್ರಶಸ್ತಿ'

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಶಮುಖ ಸಾಮಾಜಿಕ ಸೇವಾ ಸಂಸ್ಥೆ ನೀಡುವ 2025ನೇ ಸಾಲಿನ 'ಡಾ. ದೇಜಗೌ ಕನ್ನಡ ಶ್ರೀ ಪ್ರಶಸ್ತಿ'ಗೆ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಎಸ್. ರಾಮಲಿಂಗೇಶ್ವರ ಆಯ್ಕೆಯಾಗಿದ್ದಾರೆ.

ನವೆಂಬರ್ 22ರಂದು (ಶನಿವಾರ) ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕರಾದ ಎಸ್.ಟಿ. ಸೋಮಶೇಖರ್, ಎಂ. ಸತೀಶ್ ರೆಡ್ಡಿ, ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ, ಕನ್ನಡಪರ ಹೋರಾಟಗಾರ ಸಿ.ಕೆ. ರಾಮೇಗೌಡ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಮಸ್ಯೆಗೆ ಪರಿಹಾರ ಸೂಚಿಸಿದರೆ ₹25 ಲಕ್ಷ ಬಹುಮಾನ

ಬೆಂಗಳೂರು: ಬೆಂಗಳೂರು ನಗರ ಎದುರಿಸುತ್ತಿರುವ ವಾಹನ ದಟ್ಟಣೆ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆಗಳಿಗೆ ಉತ್ತಮ ಪರಿಹಾರದ ಆಲೋಚನೆಗಳಿದ್ದರೆ ₹25 ಲಕ್ಷ ಬಹುಮಾನ ಗೆಲ್ಲುವ ಅವಕಾಶವಿದೆ. ಅಂತಹ ಸ್ಟಾರ್ಟ್‌ಅಪ್‌ಗಳಿಂದ ವಿಶ್ವ ಆರ್ಥಿಕ ವೇದಿಕೆಯು 'ಯೆಸ್ ಬೆಂಗಳೂರು ಅರ್ಬನ್ ಇನ್ನೋವೇಶನ್ ಚಾಲೆಂಜ್' ಅಡಿಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂಚಿಸುವ ಆಲೋಚನೆಗಳನ್ನು ಸ್ಟಾರ್ಟ್‌ಅಪ್‌ಗಳು https://uplink.weforum.org/uplink/s/uplink-issue/a00TE00000IOEHIYA5/yesbengaluru-urban-innovation-challenge?activeTab = Roadblocks ಈ ವೆಬ್‌ಸೈಟ್ ಮೂಲಕ ಹಂಚಿಕೊಳ್ಳಬಹುದು. ನವೆಂಬರ್ 24ರ ಒಳಗೆ ಸಲ್ಲಿಸಬೇಕು. ಆಯ್ಕೆಯಾದ ನಾವಿನ್ಯಕಾರರನ್ನು 2026ರ ಆರಂಭದಲ್ಲಿ ಘೋಷಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, (ಈ ಕೆಳಕಂಡ 'ಷೆಡ್ಯೂಲ್' ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ), ಈ ಷೆಡ್ಯೂಲ್ ಸ್ವತ್ತುಗಳ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸ್ವತ್ತಿನ ಪ್ರಸ್ತುತ ಮಾಲೀಕರ ಮಾಲಿಕತ್ವದ ಹಕ್ಕನ್ನು ಪರಿಶೀಲನೆ ನಡೆಸಲು ಇಚ್ಛಿಸಿರುತ್ತಾರೆ ಮತ್ತು ಸದರಿ ಮಾಲೀಕರಾದ **ಶ್ರೀ ಸುರೇಶ ಬಿ.ಎಸ್. (ಬಿನ್ ಲೇಟ್ ಬಿ.ಎಂ. ಸುಬ್ಬಣ್ಣ)** ಮತ್ತು **ಶ್ರೀ ಸಂಜಯ್ ಸುರೇಶ (ಬಿನ್ ಶ್ರೀ ಸುರೇಶ ಬಿ.ಎಸ್.) ('ಮಾಲೀಕರು')** ನಮ್ಮ ಕಕ್ಷಿದಾರರಿಗೆ ತಾವುಗಳೇ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವ ಮತ್ತು ಪರಭಾರೆ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ದಿನಗಳ ಕಾಲಾವಧಿಯ ಒಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಉದ್ದೇಶಪೂರ್ವಕವಾಗಿ ಮನ್ನಾ ಮಾಡಲಾಗಿದೆ/ ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ತಿಳಿಸಿದ ಕಾಲಾವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳು ನಮ್ಮ ಕಕ್ಷಿದಾರರು ಬದ್ಧವಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಕಸಬಾ ಹೋಬಳಿ, ಮಜರ ಹೊಸಹಳ್ಳಿ ಗ್ರಾಮ, ಇಲ್ಲಿರುವ ಕೈಗಾರಿಕಾ ಸ್ವತ್ತಿನ ಇ–ಖಾತಾ ನಂ. 150300301700200254 (ಸರ್ವೆ ನಂ. 111, 112, 113, 114 ಒಳಗೊಂಡಿರುವ) ಮತ್ತು ಸರ್ವೆ ನಂ. 60/9, ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಕಸಬಾ ಹೋಬಳಿ, ಹೊಸಹುಡ್ಯ ಗ್ರಾಮ, ಇಲ್ಲಿರುವ ಸರ್ವೆ ನಂ. 12/2, 13/1, 13/2, 13/3,ರ ಸ್ಥಿರಾಸ್ತಿ ಸ್ವತ್ತುಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ವಿವರಿಸಲಾಗಿದೆ.

ಕ್ರಮ ಸಂಖ್ಯೆ.	ಸರ್ವೆ ನಂಬರು	ವಿಸ್ತೀರ್ಣ	ಚಕ್ಕುಬಂಧಿ				ಪ್ರಸ್ತುತ ಮಾಲೀಕರು
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1.	ಇ ಖಾತಾ ನಂ. 150300301700200254 (ಮಜರ ಹೊಸಹಳ್ಳಿ ಗ್ರಾಮ ಸರ್ವೆ ನಂ. 111, 112, 113, ಮತ್ತು 114 ಒಳಗೊಂಡಿದೆ)	28,327 ಚದರ ಮೀಟರ್‌ಗಳು (07 ಎಕರೆಗಳು)	ಲ್ಯಾಂಡ್ ಬೇರಿಂಗ್ ಸರ್ವೆ ನಂ. 115, ಮಜರ ಹೊಸಹಳ್ಳಿ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 104 ಮತ್ತು 59, ಮಜರ ಹೊಸಹಳ್ಳಿ ಗ್ರಾಮ	ರಸ್ತೆ ಮತ್ತು ಸರ್ವೆ ನಂ. 58, ಮಜರ ಹೊಸಹಳ್ಳಿ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 12/2, 13/1, 13/2 ಮತ್ತು 13/3, ಹೊಸಹುಡ್ಯ ಗ್ರಾಮ	ಶ್ರೀ ಸುರೇಶ ಬಿ.ಎಸ್. (ಬಿನ್ ಲೇಟ್ ಬಿ.ಎಂ. ಸುಬ್ಬಣ್ಣ)
2.	ಸರ್ವೆ ನಂ. 60/9 (ಮಜರ ಹೊಸಹಳ್ಳಿ ಗ್ರಾಮ)	30 ಗುಂಟೆಗಳು	ರಸ್ತೆ ಮತ್ತು ಶ್ರೀ ವೆಂಕಟರಮಣಪ್ಪ ರವರಿಗೆ ಸೇರಿದ ಲ್ಯಾಂಡ್ ಬೇರಿಂಗ್ ಸರ್ವೆ ನಂ. 59	ಲ್ಯಾಂಡ್ ಬೇರಿಂಗ್ ಸರ್ವೆ ನಂ. 60/11 ಮತ್ತು ರಸ್ತೆ	ರಸ್ತೆ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 12/1 ಮತ್ತು 12/2, ಹೊಸಹುಡ್ಯ ಗ್ರಾಮ	ಶ್ರೀ ಸಂಜಯ್ ಸುರೇಶ (ಬಿನ್ ಶ್ರೀ ಸುರೇಶ ಬಿ.ಎಸ್.)
3.	ಸರ್ವೆ ನಂ. 12/2 (ಹೊಸಹುಡ್ಯ ಗ್ರಾಮ)	04 ಎಕರೆ 35 ಗುಂಟೆಗಳು	ಲ್ಯಾಂಡ್ ಬೇರಿಂಗ್ ಸರ್ವೆ ನಂ. 13/1, ಹೊಸಹುಡ್ಯ ಗ್ರಾಮ	ಲ್ಯಾಂಡ್ ಬೇರಿಂಗ್ ಸರ್ವೆ ನಂ. 12/1, ಹೊಸಹುಡ್ಯ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 59, 60/9, ಮಜರ ಹೊಸಹಳ್ಳಿ ಗ್ರಾಮ ಮತ್ತು ರಸ್ತೆ	ಲ್ಯಾಂಡ್ ಬೇರಿಂಗ್ ಸರ್ವೆ ನಂ. 11, ಹೊಸಹುಡ್ಯ ಗ್ರಾಮ	
4.	ಸರ್ವೆ ನಂ. 13/1 (ಹೊಸಹುಡ್ಯ ಗ್ರಾಮ)	01 ಎಕರೆ 7 ಗುಂಟೆಗಳು	ಲ್ಯಾಂಡ್ ಬೇರಿಂಗ್ ಸರ್ವೆ ನಂ. 13/2, ಹೊಸಹುಡ್ಯ ಗ್ರಾಮ	ಲ್ಯಾಂಡ್ ಬೇರಿಂಗ್ ಸರ್ವೆ ನಂ.12/2, ಹೊಸಹುಡ್ಯ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 111, 112 ಮತ್ತು 113, ಮಜರ ಹೊಸಹಳ್ಳಿ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 14/3 ಮತ್ತು 14/4, ಹೊಸಹುಡ್ಯ ಗ್ರಾಮ	
5.	ಸರ್ವೆ ನಂ. 13/2 (ಹೊಸಹುಡ್ಯ ಗ್ರಾಮ)	01 ಎಕರೆ 30 ಗುಂಟೆಗಳು	ಲ್ಯಾಂಡ್ ಬೇರಿಂಗ್ ಸರ್ವೆ ನಂ. 13/3, ಹೊಸಹುಡ್ಯ ಗ್ರಾಮ	ಲ್ಯಾಂಡ್ ಬೇರಿಂಗ್ ಸರ್ವೆ ನಂ.13/1, ಹೊಸಹುಡ್ಯ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 113 & 114, ಮಜರ ಹೊಸಹಳ್ಳಿ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 14/3 ಮತ್ತು 14/1, ಹೊಸಹುಡ್ಯ ಗ್ರಾಮ	
6.	ಸರ್ವೆ ನಂ. 13/3 (ಹೊಸಹುಡ್ಯ ಗ್ರಾಮ)	8 ಗುಂಟೆಗಳು	ಲ್ಯಾಂಡ್ ಬೇರಿಂಗ್ ಸರ್ವೆ ನಂ. 13/4, ಹೊಸಹುಡ್ಯ ಗ್ರಾಮ	ಲ್ಯಾಂಡ್ ಬೇರಿಂಗ್ ಸರ್ವೆ ನಂ.13/2, ಹೊಸಹುಡ್ಯ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 114 & 115, ಮಜರ ಹೊಸಹಳ್ಳಿ ಗ್ರಾಮ	ಲ್ಯಾಂಡ್ಸ್ ಬೇರಿಂಗ್ ಸರ್ವೆ ನಂ. 14/1 ಮತ್ತು 14/2, ಹೊಸಹುಡ್ಯ ಗ್ರಾಮ	
	ಒಟ್ಟಾರೆ ವಿಸ್ತೀರ್ಣ	15 ಎಕರೆ 30 ಗುಂಟೆಗಳು					

ಸಹಿ/-
ಶ್ರೀ. ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರುಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770.

ಸ್ಥಳ: ಬೆಂಗಳೂರು
ದಿನಾಂಕ: 21.11.2025

...ಮಿಷ

...ದ್ರಾ ವಿರುದ್ಧ
...ಪಟ್ಟಿ ಸಲ್ಲಿಕೆ

...ಲದ ಶಸ್ತ್ರಾಸ್ತ್ರ ಸಲಹೆಗಾರ
...ಧಿಸಿದ ಹಣ ಅಕ್ರಮ ವರ್ಗಾವಣೆ
...ಯಂಕಾ ಗಾಂಧಿ ಅವರ ಪತಿ,
...ಜಾರಿ ನಿರ್ದೇಶನಾಲಯ (ಇ.ಡಿ)
...ಯ್ದೆಯಲ್ಲಿನ (ಪಿಎಂಎಲ್‌ಎ)
...ಶೇಷ ನ್ಯಾಯಾಲಯದಲ್ಲಿ ದೂರು
...ಳು ತಿಳಿಸಿದ್ದಾರೆ.
...ಹಣ ಅಕ್ರಮ ವರ್ಗಾವಣೆ
...ರಿಯಾಣದ ಶಿಕೋಹಪುರದಲ್ಲಿ ಭೂ
...ದ ಹಣ ವರ್ಗಾವಣೆ ಪ್ರಕರಣದಲ್ಲಿ
...ಲ್ಲಿಸಿತ್ತು. ಭಂಡಾರಿ ಪ್ರಕರಣದಲ್ಲಿ
...ಚಾರಣೆ ನಡೆಸಿತ್ತು ಭಂಡಾರಿ
...ಮಾಡಿದ್ದ ಮನವಿಯನ್ನು ಲಂಡನ್
...ದೆಹಲಿ ನ್ಯಾಯಾಲಯವು ಅವರನ್ನು
...ರಾಧಿ' ಎಂದು ಘೋಷಿಸಿತ್ತು.
...ಖೆಯು ದೆಹಲಿಯಲ್ಲಿ ದಾಳಿ ನಡೆಸಿದ
...ಯಾಗಿದ್ದರು. 2015ರ ಕಪ್ಪುಹಣ
...ತ್ತು ಇತರರ ವಿರುದ್ಧ ಆದಾಯ
..., ಇದನ್ನು ಗಮನದಲ್ಲಿಟ್ಟುಕೊಂಡು
...ಎಂಎಲ್‌ಎ ಅಡಿ ಭಂಡಾರಿ ಮತ್ತು
...ು ದಾಖಲಿಸಿತ್ತು.

...ಮ ನೀಡಿದ ಚೀತಾ



...ದಲ್ಲಿ ಜನಿಸಿದ 'ಮುಖಿ' ಹೆಸರಿನ
...ನದಲ್ಲಿ, 5 ಮರಿಗಳಿಗೆ ಗುರುವಾರ
... ಭಾರತಕ್ಕೆ ತರಲಾಗಿದ್ದ ಚೀತಾಕ್ಕೆ
...ನ ಮುಖಿ, ಭಾರತದಲ್ಲಿ ಜನಿಸಿದ
...ರಿಗಳಿಗೆ ಜನ್ಮ ನೀಡಿದ ಮೊದಲ
...ಸ್ಟ್ ಮಾಡಿರುವ ಮಧ್ಯಪ್ರದೇಶದ
...ನ್ ಅವರು 'ಭಾರತದಲ್ಲಿ ಜನಿಸಿದ
...ತಿರುವುದು ಚೀತಾ ಯೋಜನೆಯ
... ಈ ಮೂಲಕ ಯೋಜನೆಯು
...ದೆ. ತಾಯಿ ಮತ್ತು ಮರಿಗಳು
...ರೆ.
...ದ್ದ ಚೀತಾಗಳ ಪೈಕಿ ಅನೇಕ
...ಒಗ್ಗಿಕೊಳ್ಳದೆ ಮೃತಪಟ್ಟವು. ಮುಖಿ
...ತಾವರಣಕ್ಕೆ ಹೊಂದಿಕೊಂಡಿದೆ.
...ರೋಗ್ಯವಾಗಿರಲಿದ್ದು, ಚೀತಾಗಳ
...ಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಲಿದೆ
... ಚೀತಾ ಸಂತತಿಯನ್ನು ಮತ್ತೆ
... ಚೀತಾ' ಹಮ್ಮಿಕೊಳ್ಳಲಾಗಿದೆ.
...ಂದ 5 ಹೆಣ್ಣು ಮತ್ತು 3 ಗಂಡು
...ರಾಷ್ಟ್ರೀಯ ಉದ್ಯಾನಕ್ಕೆ 2022ರ

...ಮತಿ ಕೋರಿದ ಟಿವಿಕೆ

...ನೀಡಲು ಕೆಲ ಸಮಸ್ಯೆಗಳಿರುವುದರಿಂದ
...ಹೊಸ ದಿನವನ್ನು ನಿಗದಿಪಡಿಸುವಂತೆ
...ಸೂಚಿಸಲಾಗಿದೆ ಎಂದು ಅಧಿಕಾರಿಗಳು
...ತಿಳಿಸಿದ್ದಾರೆ.
...ಕರೂರಿನಲ್ಲಿ ಸೆ.27ರಂದು
...ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ
...ಬಳಿಕ ಟಿವಿಕೆ ಪಕ್ಷದವರು ರ್‍ಯಾಲಿ ಅಥವಾ
...ಸಾರ್ವಜನಿಕ ಸಭೆಗೆ ಅನುಮತಿ ಕೋರಿ
...ಅಧಿಕಾರಿಗಳನ್ನು ಸಂಪರ್ಕಿಸಿದ್ದು ಇದೇ
...ಮೊದಲು.

...ುತ್ತಿರುವ
...ಕ್ಕಳು

4ರಲ್ಲಿ ಮೂವರು 16-18 ವರ್ಷದ ಒಳಗಿನ ಮಕ್ಕಳು

...ಕಾರ್ಯನಿರ್ವಹಿಸುತ್ತಿವೆ. ಪ್ರತಿ
...ು ಎನ್ನುವುದು ಬಾಲ ನ್ಯಾಯ
...ರೆ, ದೇಶದಲ್ಲಿ ಜೆಜೆಬಿಗಳು
...ರು ಇರುವುದಿಲ್ಲ, ದತ್ತಾಂಶಗಳೂ
...ಸಲಹೆಗಳನ್ನು ನೀಡಲು ಕಾನೂನು
...ಕು. ಇದನ್ನು ಕಾನೂನು ಸೇವಾ
...ಲ್ಲಿ ಇವರ ಲಭ್ಯತೆಯೂ ಇಲ್ಲ.

2022-23ರಲ್ಲಿ ಜೆಜೆಬಿಯಲ್ಲಿ ...ದಾಖಲಾದ ಒಟ್ಟು ಪ್ರಕರಣಗಳ ಸಂಖ್ಯೆ

55,816
...2022-23ರಲ್ಲಿ ವಿಚಾರಣೆ ನಡೆಸದೇ ಬಾಕಿ ಉಳಿದ ಪ್ರಕರಣಗಳ ಸಂಖ್ಯೆ

...ಸಂಖ್ಯೆ

* ಒಡಿಶಾದಲ್ಲಿ ಶೇ 83ರಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ ಉಳಿದಿವೆ. ಕರ್ನಾಟಕದಲ್ಲಿ ಶೇ 35ರಷ್ಟು ಪ್ರಕರಣಗಳು ಬಾಕಿ ಇವೆ

...ಸಲಾಗುತ್ತಿಲ್ಲ.
...ು ಒಟ್ಟು 250
...ರಷ್ಟು ಅರ್ಜಿಗಳಿಗೆ
...ಲಾಯಿತು.

‘ಹಗಲು’ ದರೋಡೆ: ಮೂವರ ವಶ

ತಿರುಪತಿಯಲ್ಲಿ ಇನೊವಾ ಕಾರು ಪತ್ತೆ, ಸಿಗದ ₹7.11 ಕೋಟಿ

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ಸಿಎಂಎಸ್ ಏಜೆನ್ಸಿ ವಾಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಮಹಿಳೆ ಸೇರಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಶಂಕಿತರ ಹೆಸರನ್ನು ಪೊಲೀಸರು ಬಹಿರಂಗಪಡಿಸಿಲ್ಲ.

ಹಣ ಸಾಗಣೆಗೆ ಬಳಕೆ ಮಾಡಿದ್ದ ಇನೊವಾ ಕಾರನ್ನು ತಿರುಪತಿಯಲ್ಲಿ ಜಪ್ತಿ ಮಾಡಲಾಗಿದೆ. ಆದರೆ, ಕಾರಿನಲ್ಲಿ ಹಣ ಸಿಕ್ಕಿಲ್ಲ. ಉಳಿದ ಆರೋಪಿಗಳು ಹಣದ ಜತೆಗೆ ಪರಾರಿ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರಕರಣದ ತನಿಖೆಗೆ ಸಿಸಿಬಿ ಹಾಗೂ ದಕ್ಷಿಣ ಉಪ ವಿಭಾಗದ ನೇತೃತ್ವದಲ್ಲಿ ನಾಲ್ಕು ತಂಡಗಳನ್ನು ರಚಿಸಿದ್ದು, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ಪ್ರಕರಣದ ತನಿಖೆ ತೀವ್ರಗೊಂಡಿದೆ.

‘ಸಿಎಂಎಸ್ ಏಜೆನ್ಸಿಯ ವಾಹನದಲ್ಲಿದ್ದ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದಾಗ ದರೋಡೆಕೋರರು ಹಿಂದಿ ಹಾಗೂ ತೆಲುಗು ಭಾಷೆಯಲ್ಲಿ ಮಾತನಾಡುತ್ತಿದ್ದರು ಎಂಬುದಾಗಿ ಹೇಳಿಕೆ ನೀಡಿದ್ದರು. ಅವರ ಹೇಳಿಕೆ ಆಧರಿಸಿ ಆಂಧ್ರಪ್ರದೇಶದಲ್ಲಿ ಗುರುವಾರ ಕಾರ್ಯಾಚರಣೆ ನಡೆಸಲಾಯಿತು. ವಶಕ್ಕೆ ಪಡೆದವರ ಪೈಕಿ, ಇಬ್ಬರು ಬೆಂಗಳೂರಿನ ಕಲ್ಯಾಣನಗರದವರು ಎಂಬುದು ಗೊತ್ತಾಗಿದೆ. ಇವರ ಹಿಂದೆ ದೊಡ್ಡ ತಂಡವಿರುವ ಶಂಕೆಯಿದ್ದು ಚಿತ್ತೂರು ಪೊಲೀಸರ ನೆರವು ಪಡೆದು ಪ್ರಕರಣದ ಸೂತ್ರಧಾರ ಸೇರಿ ಉಳಿದವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ. ಹಲವು ಲಾಡ್ಜ್‌ಗಳನ್ನು ಪರಿಶೀಲನೆ ನಡೆಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಡೇರಿ ವೃತ್ತದ ಮೇಲ್ಸೇತುವೆ ವಾಹನ ಕರೆದೊಯ್ದು, ಇನೊವಾ ಕಾರಿಗೆ ಹಣವನ್ನು ತುಂಬಿಸಿಕೊಂಡಿದ್ದರು. ಬಳಿಕ ಮಾರ್ಗದ ಮಧ್ಯೆ ಸಿಎಂಎಸ್ ಸಿಬ್ಬಂದಿ ಕೆಳಗೆ ಇಳಿಸಿ ಹೊಸಕೋಟೆ ಮಾರ್ಗವಾಗಿ ತೆರಳಿರುವುದು ಪತ್ತೆಯಾಗಿದೆ. ಮಾರ್ಗ ಮಧ್ಯೆ ವ್ಯಾಗನರ್ ಹಾಗೂ ಜೆನ್ ಕಾರಿಗೆ ಹಣ ತುಂಬಿಸಿಕೊಂಡು ಹೋಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಕಾರು ತೆರಳಿರುವ ಮಾರ್ಗದಲ್ಲಿರುವ 100 ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ಒಂದು ಸಾವಿರಕ್ಕೂ ಹೆಚ್ಚು ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಬೆಂಗಳೂರಿನ ಕಲ್ಯಾಣ ನಗರ ಸುತ್ತಮುತ್ತಲಿನ ತಂಡವೇ ದರೋಡೆ ನಡೆಸಿರುವುದು ಇದುವರೆಗೂ ನಡೆದ ತನಿಖೆಯಿಂದ ಗೊತ್ತಾಗಿದೆ. ಹೊರ ರಾಜ್ಯದ ಕೆಲವರು ಶಾಮೀಲಾಗಿರುವ ಸುಳಿವು ಸಹ ಸಿಕ್ಕಿದೆ. ಸಿಎಂಎಸ್ ವಾಹನ ಚಾಲಕ ಹಾಗೂ ಭದ್ರತಾ ಸಿಬ್ಬಂದಿಯ ಪಾತ್ರದ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ದರೋಡೆಗೆ ವೆಬ್ ಸರಣಿ ಪ್ರೇರಣೆ?: ದರೋಡೆಗೆ ಸಂಬಂಧಿಸಿದ ವೆಬ್ ಸರಣಿಗಳನ್ನು ವೀಕ್ಷಿಸಿ ಪ್ರೇರಣೆ ಪಡೆದು ₹7.11 ಕೋಟಿ ದೋಚಿರುವ ಬಗ್ಗೆ ಪೊಲೀಸರಿಗೆ ಅನುಮಾನ ವ್ಯಕ್ತವಾಗಿದೆ.

ಒಟಿಟಿ ಹಾಗೂ ಯೂ–ಟ್ಯೂಬ್‌ನಲ್ಲಿ ಹಣ ಕಳವಿಗೆ ಸಂಬಂಧಿಸಿದ ವಿಡಿಯೊಗಳನ್ನು ಗಮನಿಸಿ ಆರೋಪಿಗಳು ಯೋಜನೆ ರೂಪಿಸಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಜೈಲಿನಿಂದಲೇ ದರೋಡೆಗೆ ಸಂಚು ರೂಪಿಸಿರುವ ಬಗ್ಗೆ ಅನುಮಾನ ವ್ಯಕ್ತವಾದ ಕಾರಣ ತನಿಖಾ ತಂಡ ಪರಪ್ಪನ ಅಗ್ರಹಾರ ಜೈಲಿಗೂ ಭೇಟಿ ನೀಡಿ ಮಾಹಿತಿ ಕಲೆ ಹಾಕಿದೆ. ದರೋಡೆ ತಂಡ ಹಾಗೂ ಜೈಲಿನಲ್ಲಿರುವ ಆರೋಪಿಗಳಿಗೂ ಸಂಪರ್ಕ ಇದೆಯೇ ಎಂಬ ಆಯಾಮದಲ್ಲಿ ವಿಚಾರಣೆ ನಡೆದಿದೆ.

ಪ್ರಕರಣ ಸಂಬಂಧ ಈವರೆಗೂ 20ಕ್ಕೂ ಹೆಚ್ಚು ಜನರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಬ್ಯಾಂಕ್ ಮತ್ತು ಸಿಎಂಎಸ್ ಸಿಬ್ಬಂದಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ.

ಮತ್ತೆ ನಂಬರ್ ಪ್ಲೇಟ್ ಬದಲಾವಣೆ

ಬೆಂಗಳೂರಿನಲ್ಲಿ ಸಂಚರಿಸುವಾಗ ಸ್ವಿಫ್ಟ್ ಕಾರಿನ ನಕಲಿ ನಂಬರ್ ಪ್ಲೇಟ್ ಬಳಸಿದ್ದ ದರೋಡೆಕೋರರು, ಕರ್ನಾಟಕದ ಗಡಿ ದಾಟುತ್ತಿದ್ದಂತೆ ಇನೊವಾಗೆ ಉತ್ತರಪ್ರದೇಶದ ನೋಂದಣಿಯ ನಂಬರ್ ಪ್ಲೇಟ್ ಅಳವಡಿಸಿದ್ದರು.

ಅಪರಾಧ ಸುದ್ದಿ

ಬೈಕ್‌ನಲ್ಲಿದ್ದವರು ಯಾರು?

ಜೆ.ಪಿ. ನಗರದ ಸಾರಕ್ಕಿ ಮುಖ್ಯರಸ್ತೆಯ ಐಟಿಐ ಲೇಔಟ್‌ನಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಕರೆನ್ಸಿ ಚೆಸ್ಟ್‌ನಲ್ಲಿ ನಗದು ತುಂಬಿಸಿಕೊಂಡು ಸಿಎಂಎಸ್ ಏಜೆನ್ಸಿ ವಾಹನ ಹೊರಟಿತ್ತು. ಅಲ್ಲಿಗೆ ಇನೊವಾ ಬಂದಿರುವುದು ಕಂಡುಬಂದಿಲ್ಲ. ಆದರೆ, ಬೈಕ್‌ನಲ್ಲಿ ನಾಲ್ವರು ಬಂದು ಶಂಕಾಸ್ಪದವಾಗಿ ಓಡಾಟ ನಡೆಸಿರುವುದು ಪತ್ತೆಯಾಗಿದೆ. ಬೈಕ್‌ನಲ್ಲಿ ಬಂದಿದ್ದವರು ನೀಡಿದ ಮಾಹಿತಿ ಆಧರಿಸಿ ದರೋಡೆಕೋರರು ಇನೊವಾದಲ್ಲಿ ಹಣ ತುಂಬಿದ ವಾಹನ ಹಿಂಬಾಲಿಸಿದ್ದಾರೆ ಎಂಬುದು ತನಿಖೆಯಿಂದ ಪತ್ತೆಯಾಗಿದೆ.

‘ನನ್ನ ಕಾರಿನ ನಂಬರ್ ಯಾಕೆ ಬಳಸಿದ್ರು ಗೊತ್ತಿಲ್ಲ’

ಇಂದಿರಾನಗರದ ಗಂಗಾಧರ್ ಅವರ ಮಾರುತಿ ಸ್ವಿಫ್ಟ್ ಕಾರಿನ ನೋಂದಣಿ ಸಂಖ್ಯೆಯನ್ನು ದರೋಡೆಗೆ ಬಳಸಿದ್ದ ಇನೊವಾ ಕಾರಿಗೆ ದರೋಡೆಕೋರರು ಬಳಸಿರುವುದು ಗೊತ್ತಾಗಿದೆ.

‘ನನಗೆ ವಯಸ್ಸಾದ ಕಾರಣ ಕಾರು ಬಳಸುವುದಿಲ್ಲ. ನಿಮ್ಮ ಕಾರಿನ ನಂಬರ್ ಪ್ಲೇಟ್ ದುರ್ಬಳಕೆಯಾಗಿದೆ ಎಂದಷ್ಟೇ ಸಂಚಾರ ಇನ್‌ಸ್ಪೆಕ್ಟರ್ ಹೇಳಿದರು. ಟಿ.ವಿ. ನೋಡಿದಾಗಲೇ ನಿಜ ಸಂಗತಿ ಗೊತ್ತಾಯಿತು’ ಎಂದು ಗಂಗಾಧರ್ ತಿಳಿಸಿದರು.

ಅರ್ಧಗಂಟೆಯಲ್ಲಿ ದರೋಡೆ

ಜೆ.ಪಿ. ನಗರದ ಸಾರಕ್ಕಿ ಮುಖ್ಯರಸ್ತೆಯಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಕರೆನ್ಸಿ ಕೇಂದ್ರದಿಂದ ₹7.11 ಕೋಟಿ ಹಣ ತುಂಬಿಸಿಕೊಂಡು ನಗರದ ವಿವಿಧ ಎಟಿಎಂಗಳಿಗೆ ಹಾಕಲು ಬುಧವಾರ ಬೆಳಿಗ್ಗೆ 11.54ಕ್ಕೆ ವಾಹನ ಹೊರಟಿತ್ತು. ವಾಹನವನ್ನು ಮಧ್ಯಾಹ್ನ 12.21ರ ಸುಮಾರಿಗೆ ಅಶೋಕ ಪಿಲ್ಲರ್ ಬಳಿ ದರೋಡೆಕೋರರು ತಡೆದಿದ್ದರು. ಮಧ್ಯಾಹ್ನ 12.36ಕ್ಕೆ ಡೇರಿ ವೃತ್ತದ ಮೇಲ್ಸೇತುವೆಗೆ ಕೊಂಡೊಯ್ದು ವಾಹನ ನಿಲ್ಲಿಸಿ ಹಣ ದೋಚಿ ಪರಾರಿ ಆಗಿದ್ದರು. ಈ ಸಂಬಂಧ ಸಿಎಂಎಸ್ ಏಜೆನ್ಸಿ ವ್ಯವಸ್ಥಾಪಕ ವಿನೋದ್ ಚಂದ್ರಾಧರ್ ಅವರು ನೀಡಿದ ದೂರಿನ ಮೇಲೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಚು ಹೇಗಿತ್ತು?

- ಸಿಎಂಎಸ್ ಏಜೆನ್ಸಿ ವಾಹನದಲ್ಲಿದ್ದ ನಾಲ್ವರ ಮೊಬೈಲ್ ಕಸಿದುಕೊಂಡಿದ್ದ ಆರೋಪಿಗಳು
- ಚಾಲಕ ಬಿನೋದ್ ಕುಮಾರ್‌ಗೆ ಪಿಸ್ತೂಲ್ ತೋರಿಸಿ ಕೃತ್ಯ
- ಇನೊವಾ ಕಾರಿನಲ್ಲೇ ಸಿಎಂಎಸ್ ಸಿಬ್ಬಂದಿ ಕರೆದೊಯ್ದು ಬೇರೆ ಬೇರೆ ಸ್ಥಳಗಳಲ್ಲಿ ಇಳಿಸಿ ಹೋಗಿದ್ದಾರೆ
- ಸಿ.ಸಿ.ಟಿ.ವಿ ಕ್ಯಾಮೆರಾಗಳಿಲ್ಲದ ಸ್ಥಳಗಳನ್ನು ಗುರುತಿಸಿ ಕೃತ್ಯ
- ನ.17ರಿಂದಲೂ ಹಣ ತುಂಬಿದ ವಾಹನ ಸಾಗುವ ರಸ್ತೆಯಲ್ಲಿ ಸಂಚರಿಸಿ ಸಂಚು ರೂಪಿಸಿರುವ ಶಂಕೆ
- ಸಿದ್ದಾಪುರ ರಸ್ತೆಯಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸಿಎಂಎಸ್ ವಾಹನದ ಹಿಂದೆಯೇ ಇನೊವಾ ಸಾಗುತ್ತಿರುವ ದೃಶ್ಯ ಸೆರೆ

ರಾಜ್ಯದಲ್ಲಿ ದರೋಡೆಕೋರರಿಗೆ, ಕಳ್ಳರಿಗೆ ಭಯವಿಲ್ಲವಾಗಿದೆ. ಒಂದು ಕಡೆ ಕಾಂಗ್ರೆಸ್‌ನಿಂದ ಹಗಲುದರೋಡೆ ನಡೆದರೆ, ಇನ್ನೊಂದೆಡೆ ಡಕಾಯಿತರಿಂದ ನಡೆದಿದೆ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಸುದ್ದಿ 2 ನಿಮಿಷ

ದರೋಡೆಕೋರರ ಜತೆಗೆ ಕಾನ್‌ಸ್ಟೆಬಲ್ ಸಂಪರ್ಕ?

ಬೆಂಗಳೂರು: ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ನಡೆಸಿದ್ದ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಕೈವಾಡವಿರುವ ಅನುಮಾನ ವ್ಯಕ್ತವಾಗಿದೆ.

ದರೋಡೆ ಪ್ರಕರಣದಲ್ಲಿ ತನಿಖೆ ತೀವ್ರಗೊಳಿಸುತ್ತಿದಂತೆಯೇ ವಿವಿಧ ವಿಚಾರಗಳು ಬಹಿರಂಗವಾಗುತ್ತಿವೆ. ಹಲವು ಕೋನಗಳಲ್ಲಿ ನಡೆಸುತ್ತಿರುವ ತನಿಖೆಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಕೈವಾಡವಿರುವ ಶಂಕೆ ವ್ಯಕ್ತವಾಗಿದೆ.

ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯಕ್ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ದರೋಡೆ ನಡೆಸುವುದಕ್ಕೆ ಬಾಣಸವಾಡಿಯ ಕಲ್ಯಾಣ ನಗರ ಯುವಕರನ್ನು ಕಾನ್‌ಸ್ಟೆಬಲ್ ಸಿದ್ಧಪಡಿಸಿದ್ದರು. ಅಲ್ಲದೆ, ಪೊಲೀಸರ ತನಿಖೆ ಯಾವ ರೀತಿ ನಡೆಯುತ್ತದೆ? ಹೇಗೆ ತಪ್ಪಿಸಿಕೊಳ್ಳಬೇಕು? ಎಂಬೆಲ್ಲ ವಿಚಾರವನ್ನು ಚರ್ಚಿಸಿ ಸಂಚು ರೂಪಿಸಿದ್ದರು ಎಂದು ಹೇಳಲಾಗಿದೆ.

ಇದೇ ವೇಳೆ ದರೋಡೆ ಹಣದ ಆಸೆಗಾಗಿ ಸಂಸ್ಥೆಯ ಗೋಪ್ಯ ಮಾಹಿತಿಯನ್ನು ಹಂಚಿಕೊಂಡ ಆರೋಪದ ಮೇರೆಗೆ ಸಿಎಂಎಸ್ ಏಜೆನ್ಸಿಯ 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಈ ಪೈಕಿ ತಾಂತ್ರಿಕ ವಿಭಾಗ, ಭದ್ರತಾ ವಿಭಾಗದ ಅಧಿಕಾರಿ-ಸಿಬ್ಬಂದಿ, ಇಬ್ಬರು ಕಸ್ಟೋಡಿಯನ್ ಕೂಡ ಇದ್ದಾರೆ.

ಈ ಹಿಂದೆ ಸಿಎಂಎಸ್ ಸಂಸ್ಥೆಯ ವಾಹನದಲ್ಲಿ ಹಣ ಕಳವು ನಡೆದಿದ್ದಾಗ ವಾಹನದ ಎರಡೂ ಬದಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇದ್ದವು. ಆದರೆ, ಈ ವಾಹನಕ್ಕೆ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾವನ್ನೇ ತೆಗೆಯಲಾಗಿತ್ತು. ಹೀಗಾಗಿ ಸಿಎಂಎಸ್ ಸಂಸ್ಥೆಯ ಭದ್ರತಾ ವಿಭಾಗದ ಸಿಬ್ಬಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರು: ಜೇನು ನೊಣಗಳ ಮಾರಣ ಹೋಮ

ಚಿಕ್ಕಮಗಳೂರು: ಇಲ್ಲಿಯ ಸರ್ಕಾರಿ ವೈದ್ಯಕೀಯ ಕಾಲೇಜು ಕಟ್ಟಡದಲ್ಲಿ ಕಟ್ಟಿದ್ದ ಹತ್ತಾರು ಜೇನುಗೂಡುಗಳನ್ನು ತೆರವುಗೊಳಿಸಿದ್ದು, ಲಕ್ಷಾಂತರ ಜೇನುನೊಣಗಳ ಮಾರಣಹೋಮ ನಡೆದಿದೆ.

ವೈದ್ಯಕೀಯ ಕಾಲೇಜು ಬೋಧಕ ಕೊಠಡಿ, ವಿದ್ಯಾರ್ಥಿ, ವಿದ್ಯಾರ್ಥಿ ನಿಲಯಗಳ ಕಟ್ಟಡದಲ್ಲಿ 83ಕ್ಕೂ ಹೆಚ್ಚು ಜೇನುಗೂಡು ಕಟ್ಟಿದ್ದವು. ಕಟ್ಟಡಗಳಿಗೆ ಸರಿಯಾಗಿ ಮೆಶ್ ಅಳವಡಿಸದ ಕಾರಣ ಜೇನು ನೊಣಗಳು ವಸತಿ ನಿಲಯಗಳ ಒಳಗೆ ಹೋಗುತ್ತಿದ್ದವು.

ವಿದ್ಯಾರ್ಥಿಗಳು ಭಯದಲ್ಲಿದ್ದಾರೆ ಎಂದು ಪೋಷಕರು ದೂರಿದ್ದರು. ಜೇನುಗೂಡು ತೆರವುಗೊಳಿಸಲು ವೈದ್ಯಕೀಯ ಕಾಲೇಜಿನಿಂದ ವ್ಯಕ್ತಿಯೊಬ್ಬರಿಗೆ ಗುತ್ತಿಗೆ ನೀಡಲಾಗಿದೆ. ‘ರಾಸಾಯನಿಕ ಸಿಂಪಡಿಸಿ ಅವೈಜ್ಞಾನಿಕವಾಗಿ ಗೂಡು ತೆರವುಗೊಳಿಸಲಾಗುತ್ತಿದೆ. ಇದರಿಂದ ನೊಣಗಳ ಮಾರಣಹೋಮ ನಡೆದಿದೆ’ ಎಂದು ಪರಿಸರಾಸಕ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕಾಲೇಜಿನ ಡೀನ್ ಹರೀಶ್, ‘ತೆರವುಗೊಳಿಸಲು ಗುತ್ತಿಗೆ ನೀಡಲಾಗಿದೆ. ಯಾವ ರೀತಿ ತೆರವುಗೊಳಿಸಲಾಗುತ್ತಿದೆ ಎಂಬ ಮಾಹಿತಿ ಇಲ್ಲ. ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ತೆರವುಗೊಳಿಸಲು ತೀರ್ಮಾನಿಸಲಾಯಿತು. ಪರಿಸರ ಪ್ರೇಮಿಗಳು ಕರೆ ಮಾಡಿ ಅವುಗಳಿಂದ ಏನು ತೊಂದರೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ. ಪ್ರಾತ್ಯಕ್ಷಿಕೆ ಮೂಲಕ ವಿಡಿಯೊ ತೋರಿಸಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಗುವುದು’ ಎಂದರು.

ಚಿಂತನ – ಮಂಥನಗಳೊಂದಿಗೆ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ ತೆರೆ

ಡೀಪ್ ಟೆಕ್: ₹400 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಜಗತ್ತಿನ ಭವಿಷ್ಯ ದಿಕ್ಕುಗಳಿಗೆ ನಿರ್ಣಾಯಕವಾಗಿರುವ ಡೀಪ್ ಟೆಕ್ ನವೋದ್ಯಮಗಳಿಗೆ ₹400 ಕೋಟಿ ಸಹಾಯಾನುದಾನ ಒದಗಿಸುವುದರೊಂದಿಗೆ ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ ಗುರುವಾರ ತೆರೆಬಿದ್ದಿತು.

ತಂತ್ರಜ್ಞಾನ ಶೃಂಗಸಭೆಯ ಸಮಾರೋಪದ ಭಾಗವಾಗಿ ನಡೆದ ‘ಭವಿಷ್ಯ ರೂಪಿಸುವವರ ಸಮಾವೇಶ’ದಲ್ಲಿ ಈ ಸಹಾಯಾನುದಾನವನ್ನು ಘೋಷಿಸಲಾಯಿತು. ರಾಜ್ಯ ಸರ್ಕಾರ ಮತ್ತು ನವೋದ್ಯಮಗಳ ಆರಂಭಕ್ಕೆ ಬಂಡವಾಳ ಒದಗಿಸುವವರು (ವೆಂಚರ್ ಕ್ಯಾಪಿಟಲಿಸ್ಟ್) ಸೇರಿ ರೂಪಿಸಿರುವ ನಿಧಿಯಿಂದ ಈ ನೆರವನ್ನು ಘೋಷಿಸಲಾಯಿತು.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ‘ಮುಂದಿನ ದಶಕವು ವೈಜ್ಞಾನಿಕ ನಾವೀನ್ಯವನ್ನು ಆಧರಿಸಿದ ತಂತ್ರಜ್ಞಾನಗಳಾದ ಎಐ, ರೊಬೊಟಿಕ್ಸ್, ಕ್ವಾಂಟಂ ಕಂಪ್ಯೂಟಿಂಗ್ ಮತ್ತು ಜೈವಿಕ ತಂತ್ರಜ್ಞಾನಗಳ ಯುಗವಾಗಿರಲಿದೆ. ಬೆಂಗಳೂರು ತಂತ್ರಜ್ಞಾನ ಶೃಂಗವು ಅದಕ್ಕೆ ಮುನ್ನುಡಿ ಬರೆದಿದೆ’ ಎಂದರು.

‘ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಅವಕಾಶ ಹಾಗೂ ಮಾರುಕಟ್ಟೆ ಸೃಷ್ಟಿಸುವಲ್ಲಿ ಡೀಪ್ ಟೆಕ್ ಆವಿಷ್ಕಾರಗಳ ಮಹತ್ವವನ್ನು ಈ ಶೃಂಗಸಭೆ ಮನದಟ್ಟು ಮಾಡಿದೆ. ಮಾರುಕಟ್ಟೆಯ ಮಹತ್ವವನ್ನೂ ಸಾರಿದೆ. ಡೀಪ್ ಟೆಕ್‌ನ ಪ್ರಯೋಜನ ಕರ್ನಾಟಕ ಅಥವಾ ಭಾರತಕ್ಕೆ ಸೀಮಿತವಾಗಿರದೆ, ಇಡೀ ವಿಶ್ವಕ್ಕೆ ದೊರೆಯಲಿದೆ’ ಎಂದರು.

ಮುಕ್ತಾಯ: ಶೃಂಗಸಭೆಯು ಭವಿಷ್ಯ ರೂಪಿಸುವವರ ಸಮಾವೇಶದೊಂದಿಗೆ (ಎಫ್‌ಎಂಸಿ) ಮುಕ್ತಾಯಗೊಂಡಿತು. ಸುಹಾನಿ ಶಾ ಅವರಿಂದ ಸಿಂಫೊನಿ ಆಫ್ ಸೌಂಡ್ ಆ್ಯಂಡ್ ಮೈಂಡ್ ಪ್ರದರ್ಶನ, ಗಗನಯಾತ್ರಿ ಶುಭಾಂಶು ಶುಕ್ಲಾ, ಲೇಖಕ ಅಂಕುರ್ ವಾರಿಕೂ ಅವರ ಭಾಷಣಗಳು, ಕ್ವಿಕ್ ಕಾಮರ್ಸ್ ಜೆಪ್ಟೊ ಸಹ ಸ್ಥಾಪಕ ಕೈವಲ್ಯ ವೋಹ್ರಾ, ಟೆನಿಸ್ ತಾರೆ ಸಾನಿಯಾ ಮಿರ್ಜಾ ಮತ್ತು ಭಾರತದ ಮಹಿಳಾ ಕ್ರಿಕೆಟ್ ತಾರೆ ರಿಚಾ ಘೋಷ್ ಅವರ ಜೊತೆಗಿನ ಸಂವಾದ ಕಾರ್ಯಕ್ರಮಗಳು ಯುವಸಮುದಾಯಕ್ಕೆ ಸ್ಫೂರ್ತಿ ತುಂಬಿದವು.

ಅಮೆರಿಕದ ನಾಸಾ -ಏಮ್ಸ್ ರಾಷ್ಟ್ರೀಯ ಬಾಹ್ಯಾಕಾಶ ಸೊಸೈಟಿ (ಎನ್‌ಎಸ್‌ಎಸ್) ನಡೆಸಿದ ಬಾಹ್ಯಾಕಾಶ ವಸಾಹತು ವಿನ್ಯಾಸ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿರುವ ಕಲಬುರಗಿಯ ಎಸ್‌ಆರ್‌ಎನ್ ಮೆಹತಾ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳು ಶುಭಾಂಶು ಶುಕ್ಲಾ ಅವರ ಜೊತೆ ಸಮೂಹ ಚಿತ್ರ ತೆಗೆದುಕೊಂಡು ಸಂಭ್ರಮಿಸಿದರು.

ವಿವಿಧ ವಿಭಾಗದ 11 ಉತ್ತಮ ನಾವಿನ್ಯ ತಂತ್ರಜ್ಞಾನಗಳಿಗೆ ‘ಎಟಿಎಫ್-2025’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, 103 ಕಂಪನಿಗಳಿಗೆ ಎಲಿವೇಟ್, 30 ಕಂಪನಿಗಳಿಗೆ ಎಲಿವೇಟ್ ಉನ್ನತಿ ಹಾಗೂ 10 ಕಂಪನಿಗಳಿಗೆ ಎಲಿವೇಟ್ ಮೈನಾರಿಟಿ ಪ್ರಶಸ್ತಿಗಳನ್ನು ನೀಡಲಾಯಿತು.

ರಾಷ್ಟ್ರೀಯ ಬಾಹ್ಯಾಕಾಶ ಸೊಸೈಟಿ (ಎನ್‌ಎಸ್‌ಎಸ್) ಬಾಹ್ಯಾಕಾಶ ವಸಾಹತು ವಿನ್ಯಾಸ ಸ್ಪರ್ಧೆಯ ಎಂಟನೇ ತರಗತಿ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ಕಲಬುರಗಿಯ ಎಸ್‌ಆರ್‌ಎನ್ ಮೆಹ್ತಾ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳನ್ನು ಶುಭಾಂಶು ಶುಕ್ಲಾ ಗೌರವಿಸಿದರು. ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ನಾಲ್ಕೈದು ದಿನ ಹಸಿವೇ ಆಗಿರಲಿಲ್ಲ: ಶುಭಾಂಶು ಶುಕ್ಲಾ

“ಭಾರತದ ಮಹಾತ್ವಾಕಾಂಕ್ಷಿ ಗಗನಯಾನ ಯೋಜನೆಯ ಭಾಗವಾಗಿ ಇತ್ತೀಚೆಗೆ ಬಾಹ್ಯಾಕಾಶಕ್ಕೆ ತೆರಳಿದಾಗ ನನಗೆ ನಾಲ್ಕೈದು ದಿನ ಹಸಿವೇ ಆಗಿರಲಿಲ್ಲ’ ಎಂದು ಗಗನಯಾನಿ ಶುಭಾಂಶು ಶುಕ್ಲಾ ತಿಳಿಸಿದರು.

ಬಾಹ್ಯಾಕಾಶ ಯಾನದ ಅನುಭವವನ್ನು ಶೃಂಗಸಭೆಯಲ್ಲಿ ಬಿಚ್ಚಿಟ್ಟ ಅವರು, ‘ಬಾಹ್ಯಾಕಾಶದಲ್ಲಿ ಗುರುತ್ವಾಕರ್ಷಣೆ ಇಲ್ಲದ ಕಾರಣ ಹಸಿವು ಆಗುತ್ತಿರಲಿಲ್ಲ. ಅಲ್ಲಿ ಅಲ್ಲಿ ನನ್ನ ಎತ್ತರ 5 ಇಂಚು ಹೆಚ್ಚಿತ್ತು. 20 ದಿನಗಳಲ್ಲಿ ದೇಹದ ತೂಕ 5 ಕೆ.ಜಿ. ಕಡಿಮೆಯಾಗಿತ್ತು. ಗಗನಕ್ಕೇರುವಾಗ ಎದೆ ಮೇಲೆ ಬೈಕ್ ಇಟ್ಟಷ್ಟು ಭಾರವಾಗಿತ್ತು. ಉಸಿರಾಡುವುದೇ ಕಷ್ಟವಾಗಿತ್ತು’ ಎಂದು ವಿವರಿಸಿದರು.

‘ಬಾಹ್ಯಾಕಾಶದಲ್ಲಿ ನಾವು ಮಗುವಿನಂತಾಗುತ್ತೇವೆ. ತಿನ್ನುವುದು, ಮಲಗುವುದು, ನಡೆಯುವುದು ಸೇರಿದಂತೆ ಎಲ್ಲವೂ ಹೊಸತು. ಎಲ್ಲವನ್ನೂ ಮಗುವಿನಂತೆ ಕಲಿಯಬೇಕು’ ಎಂದರು.

‘ಮುಂಬರುವ ವರ್ಷಗಳಲ್ಲಿ ಭಾರತವು ಬಾಹ್ಯಾಂತರಿಕ್ಷ ಕಾರ್ಯಕ್ರಮಗಳಲ್ಲಿ ಗಮನಾರ್ಹವಾಗಿ ತೊಡಗಿಕೊಳ್ಳಲಿದೆ. ಈ ಕ್ಷೇತ್ರದಲ್ಲಿ ಭಾರತದ ಭವಿಷ್ಯ ಪ್ರಖರವಾಗಿದೆ. ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಗಗನಯಾನ ಕೈಗೊಳ್ಳಲಿದ್ದಾರೆ. ಈ ಕ್ಷೇತ್ರದಲ್ಲಿನ ನವೋದ್ಯಮಗಳಿಗೆ ಉಜ್ವಲ ಭವಿಷ್ಯ ಇದೆ’ ಎಂದು ಹೇಳಿದರು.

‘ದೇಶದ 300 ನವೋದ್ಯಮಗಳು ಈಗಾಗಲೇ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮುಂಬರುವ ವರ್ಷಗಳಲ್ಲಿ ಇಂತಹ ನವೋದ್ಯಮಗಳ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಗಲ ವಿಸ್ತರಿಸಲಿದೆ ನವೋದ್ಯಮ

ನವೋದ್ಯಮಗಳನ್ನು ರಾಜ್ಯದ ಮೂಲೆ ಮೂಲೆಗಳಿಗೆ ವಿಸ್ತರಿಸಲು ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ನಿರ್ಧರಿಸಿದೆ. 1000ಕ್ಕೂ ಅಧಿಕ ನವೋದ್ಯಮಿಗಳಿಗೆ ನೆರವಾಗಲು ಯೋಜನೆ ರೂಪಿಸಿದೆ. ಅದಕ್ಕೆ ಪೂರಕವಾಗಿ ₹ 250 ಕೋಟಿಯಲ್ಲಿ ಯೋಜನೆ ರೂಪಿಸಲಾಗಿದೆ ಎನ್ನುತ್ತದೆ ‘ಬಿಯಾಂಡ್ ಬೆಂಗಳೂರು’ ವರದಿ.

ಮೈಸೂರು, ಹುಬ್ಬಳ್ಳಿ - ಧಾರವಾಡ ಹಾಗೂ ಮಂಗಳೂರಿನ ಐಟಿ ಕ್ಲಸ್ಟರ್‌ಗಳ ಕೊಡುಗೆ, ಪ್ರಗತಿಯ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆ. 2025ರಲ್ಲಿ ₹15 ಸಾವಿರ ಕೋಟಿ ಬಂಡವಾಳವನ್ನು ನವೋದ್ಯಮಗಳು ಆಕರ್ಷಿಸಿವೆ ಎನ್ನುತ್ತದೆ ವರದಿ.

ಮೈಸೂರು ಕ್ಲಸ್ಟರ್: 2023-24ನೇ ಸಾಲಿನಲ್ಲಿ ₹5,700 ಕೋಟಿ ಮೊತ್ತ ರಫ್ತು ವಹಿವಾಟು ನಡೆಸಿದೆ. ರಾಜ್ಯದ ಎರಡನೇ ಅತಿದೊಡ್ಡ ಐಟಿ ರಫ್ತು ಕ್ಲಸ್ಟರ್ ಆಗಿದೆ. ಆಂತರಿಕ ವ್ಯಾಪಾರ ಮತ್ತು ಉದ್ದಿಮೆ ಉತ್ತೇಜನಾ ಇಲಾಖೆಯಿಂದ ಮಾನ್ಯತೆ ಪಡೆದಿರುವ ತಂತ್ರಜ್ಞಾನ, ಆರೋಗ್ಯ ರಕ್ಷಣೆ, ಶಿಕ್ಷಣ, ಪ್ರವಾಸೋದ್ಯಮ, ಎಲೆಕ್ಟ್ರಾನಿಕ್ಸ್ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿನ 440 ನವೋದ್ಯಮಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ.

ಮಂಗಳೂರು ಕ್ಲಸ್ಟರ್: 250 ನವೋದ್ಯಮಗಳು, ತಂತ್ರಜ್ಞಾನ ಕಂಪನಿಗಳನ್ನು ಹೊಂದಿದ್ದು, ₹4.500 ಕೋಟಿ ಐಟಿ ರಫ್ತು ದಾಖಲಿಸಿದೆ. ಎಐ, ಡೀಪ್ ಟೆಕ್, ಸಾಗರ ಮತ್ತು ಹಣಕಾಸು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದೆ.

ಹುಬ್ಬಳ್ಳಿ-ಧಾರವಾಡ- ಬೆಳಗಾವಿ ಕ್ಲಸ್ಟರ್: ₹3,500 ಕೋಟಿ ಐಟಿ ರಫ್ತು ವಹಿವಾಟು ನಡೆಸಿದೆ. ಬೆಳಗಾವಿಯು ವೈಮಾಂತರಿಕ್ಷ ತಯಾರಿಕಾ ವಲಯದಲ್ಲಿ ಮುಂಚೂಣಿಯಲ್ಲಿದೆ. ಡೀಪ್ ಟೆಕ್, ಸಾಫ್ಟ್‌ವೇರ್, ಇಎಸ್‌ಡಿಎಂ ಕೃಷಿ ತಂತ್ರಜ್ಞಾನ ಮತ್ತು ತಯಾರಿಕಾ ವಲಯಗಳಲ್ಲಿ 400ಕ್ಕೂ ಹೆಚ್ಚು ನವೋದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಬಾಗಲಕೋಟೆ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಕೃಷಿ ತಂತ್ರಜ್ಞಾನ ಮತ್ತು ಆಹಾರ ತಂತ್ರಜ್ಞಾನ ಕೇಂದ್ರಗಳಲ್ಲಿ 22 ಸಾವಿರಕ್ಕೂ ಹೆಚ್ಚು ‘ಎಸ್‌ಎಂಇ’ಗಳು ಕಾರ್ಯನಿರ್ವಹಿಸುತ್ತಿವೆ.

ನ. 27ರಂದು ರಾಜ್ಯ ವ್ಯಾಪಿ ಪ್ರತಿಭಟನೆಗೆ ಎಐಸಿಸಿಟಿಯು ನಿರ್ಧಾರ

‘ಗುತ್ತಿಗೆ ಕಾರ್ಮಿಕರ ಕಾಯಂಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಪದ್ಧತಿ ರದ್ದುಪಡಿಸಿ, ಗುತ್ತಿಗೆ ಕಾರ್ಮಿಕರ ಸೇವೆ ಕಾಯಂಗೊಳಿಸಬೇಕು. ಕನಿಷ್ಠ ವೇತನ ₹45 ಸಾವಿರ ನಿಗದಿ ಮಾಡಬೇಕು ಎಂದು ಒತ್ತಾಯಿಸಿ ನವೆಂಬರ್ 27ರಂದು ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ಕಾರ್ಮಿಕ ಸಂಘಟನೆಗಳ ಒಕ್ಕೂಟ ನಿರ್ಧರಿಸಿದೆ.

ನಗರದಲ್ಲಿ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಗುರುವಾರ ಆಯೋಜಿಸಿದ್ದ ‘ಸಂವಿಧಾನದ ಭರವಸೆ ಎಲ್ಲಿದೆ?. ಶೋಷಕ ಗುತ್ತಿಗೆ ಕಾರ್ಮಿಕ ವ್ಯವಸ್ಥೆ ಮತ್ತು ಮರೀಚಿಕೆಯಾದ ಘನತೆಯ ವೇತನ’ ದುಂಡು ಮೇಜಿನ ಸಭೆಯಲ್ಲಿ ಗುತ್ತಿಗೆ ಕಾರ್ಮಿಕ ವ್ಯವಸ್ಥೆಯ ವಿರುದ್ಧ ಸಂಘಟಿತ ಹೋರಾಟ ಮಾಡಲು ನಿರ್ಣಯ ಕೈಗೊಳ್ಳಲಾಯಿತು.

ಎಐಸಿಸಿಟಿಯು ರಾಜ್ಯ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್ ಮಾತನಾಡಿ, ‘ಕಾರ್ಮಿಕ ವರ್ಗದವರ ಮೇಲೆ ದಾಳಿ ನಡೆಯುತ್ತಿದ್ದು, ಕಾರ್ಮಿಕ ಕಾನೂನುಗಳ ಬದಲಾವಣೆಗೆ ಕೇಂದ್ರ ಸರ್ಕಾರ ಹೊರಟಿದೆ. ರಾಜ್ಯ ಸರ್ಕಾರ ಕೂಡ ಇದಕ್ಕೆ ಕೈಜೋಡಿಸಲು ಮುಂದಾಗಿದೆ. ದೇಶದಲ್ಲಿ ಶೇಕಡ 90ರಷ್ಟು ಕಾರ್ಮಿಕರು ಕನಿಷ್ಠ ವೇತನ, ಉದ್ಯೋಗ ಹಾಗೂ ಸಾಮಾಜಿಕ ಭದ್ರತೆಯಿಂದ ವಂಚಿತರಾಗಿದ್ದಾರೆ. ಕಾರ್ಮಿಕ ಶ್ರಮ ದೋಚುವ ಗುತ್ತಿಗೆ ಪದ್ಧತಿ ಯಾರಿಗೆ ಬೇಕು’ ಎಂದು ಅವರು ಪ್ರಶ್ನಿಸಿದರು

‘ಗುತ್ತಿಗೆ ಕಾರ್ಮಿಕ ವ್ಯವಸ್ಥೆ ರದ್ದುಗೊಳಿಸಬೇಕು, ಎಲ್ಲಾ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಬೇಕು, ಕನಿಷ್ಠ ವೇತನ ₹42 ಸಾವಿರ ಘೋಷಿಸಬೇಕು. ಉದ್ಯೋಗ ಖಾತರಿ ಹಾಗೂ ಸಮಾನ ದುಡಿಮೆಗೆ ಸಮಾನ ವೇತನ ನೀಡುವಂತೆ ಒತ್ತಾಯಿಸಿ ನ.27ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು’ ಎಂದರು.

ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಮಾತನಾಡಿ, ಕಡಿಮೆ ವೇತನ ಪರಿಣಾಮ ಮಕ್ಕಳಿಗೆ ಸರಿಯಾದ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತಿಲ್ಲ. ಅಂಕಿ ಅಂಶ ಪ್ರಕಾರ ಶೇಕಡ 22ರಷ್ಟು ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ. ಇದು ಕೇವಲ ಕಾರ್ಮಿಕರ ಮೇಲೆ ಮಾತ್ರವಲ್ಲದೆ ಇಡೀ ಕುಟುಂಬ ಮತ್ತು ಸಮಾಜವನ್ನೇ ಬಾಧಿಸುವ ಸಮಸ್ಯೆ ಎಂಬುದಾಗಿ ಗುರುತಿಸಬೇಕು ಎಂದರು.

ನಗರದಲ್ಲಿ ಎಐಸಿಸಿಟಿಯು ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಮೈತ್ರೇಯಿ ಕೃಷ್ಣನ್, ಅಪ್ಪಣ್ಣ, ನಿರ್ಮಲಾ, ವಿ.ಪಿ.ನಿರಂಜನಾರಾಧ್ಯ ಭಾಗವಹಿಸಿದ್ದರು.

ಹಲವು ಕೈಗಾರಿಕೆಗಳಲ್ಲಿ ಕನಿಷ್ಠ ವೇತನ ಹೆಚ್ಚಿಸಿದ್ದರೂ ಗಾರ್ಮೆಂಟ್ಸ್ ಕಾರ್ಮಿಕರ ವೇತನದಲ್ಲಿ ಬದಲಾವಣೆಯಾಗಿಲ್ಲ. ಇದು ಲಿಂಗ ತಾರತಮ್ಯವಲ್ಲದೆ ಬೇರೇನೂ ಅಲ್ಲ. ಆಶಾ, ಅಂಗನವಾಡಿ ಕಾರ್ಯಕರ್ತೆಯರೂ ಸಮಸ್ಯೆ ಎದುರಿಸುತ್ತಿದ್ದಾರೆ

ಆರ್.ಪ್ರತಿಭಾ, ಜಿಎಟಿಡಬ್ಲ್ಯುಯು ಅಧ್ಯಕ್ಷೆ

ಬೆಳಗಾವಿ: ಕೃಷ್ಣಮೃಗಗಳ ಆರೋಗ್ಯದಲ್ಲಿ ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಇರುವ ಏಳು ಕೃಷ್ಣಮೃಗಗಳ ಆರೋಗ್ಯದಲ್ಲಿ ಮತ್ತಷ್ಟು ಚೇತರಿಕೆ ಕಂಡುಬಂದಿದೆ.

ಕಳೆದ 3 ದಿನಗಳಿಂದ ಪ್ರಾಣಿಗಳ ಸಾವಿನ ಪ್ರಕರಣ ವರದಿಯಾಗಿಲ್ಲ. ಗಳಲೆ ರೋಗದಿಂದ (ಇಂಡೀಡ್ ಹೆಮರೈಜಿಕ್ ಸೆಪ್ಟಿಸಿಮಿಯಾ) ಕಿರು ಮೃಗಾಲಯದಲ್ಲಿದ್ದ 31 ಕೃಷ್ಣಮೃಗಗಳು ಸಾವನ್ನಪ್ಪಿವೆ. ಬದುಕುಳಿದ ಏಳು ಪ್ರಾಣಿಗಳು ಎಂದಿನಂತೆ ಗುರುವಾರ ಆಹಾರ ಸೇವಿಸಿ ಲವಲವಿಕೆಯಿಂದ ಓಡಾಡಿದವು.

ಬೆಂಗಳೂರಿನಿಂದ ಬಂದಿರುವ ತಜ್ಞರ ತಂಡ ಇಲ್ಲಿಯೇ ಬೀಡುಬಿಟ್ಟು, ಔಷಧೋಪಚಾರ ಮಾಡುತ್ತಿದೆ.

‘ಏಳು ಕೃಷ್ಣಮೃಗಗಳು ಸೋಂಕಿಗೆ ಒಳಗಾಗಿದ್ದು, 10 ದಿನ ಅವುಗಳ ಮೇಲೆ ನಿಗಾ ಇರಿಸುವಂತೆ ನಿರ್ದೇಶನ ನೀಡಲಾಗಿದೆ. ಐದು ದಿನಗಳಿಂದ ಅವು ಆರೈಕೆಗೆ ಸ್ಪಂದಿಸುತ್ತಿವೆ’ ಎಂದು ವಲಯ ಅರಣ್ಯಾಧಿಕಾರಿ ಪವನ ಕುರನಿಂಗ ಹೇಳಿದರು.

ಸುತ್ತಲಿನ ಗ್ರಾಮಗಳಲ್ಲಿ ಎಚ್ಚರಿಕೆ

‘ಹೆಮರೈಜಿಕ್ ಸೆಪ್ಟಿಸಿಮಿಯಾ ಸೋಂಕು ಸಸ್ಯಾಹಾರಿ ಪ್ರಾಣಿಗಳಿಗೆ ಮಾತ್ರ ಬರುತ್ತದೆ. ಇದು ಗಾಳಿಯಲ್ಲಿ ಹರಡುವುದು ಸಾಮಾನ್ಯ. ಮನುಷ್ಯರು ಅಥವಾ ಪ್ರಾಣಿಗಳ ದೇಹಕ್ಕೆ ಅಂಟಿಕೊಂಡು ಅದರ ಮೂಲಕವೂ ಇತರ ಜಾನುವಾರುಗಳಿಗೆ ತಗಲುವ ಸಾಧ್ಯತೆ ಇದೆ’ ಎಂದು ತಜ್ಞ ವೈದ್ಯರು ತಿಳಿಸಿದ್ದಾರೆ.

ಹೀಗಾಗಿ, ಈ ಮೃಗಾಲಯದ ಸುತ್ತಲಿನ ಗ್ರಾಮಗಳಲ್ಲೂ ಎಚ್ಚರ ವಹಿಸುವಂತೆ ಪಶು ಸಂಗೋಪನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳಿಗೆ ಮುನ್ಸೂಚನೆ ನೀಡಲಾಗಿದೆ. ಜಾನುವಾರುಗಳನ್ನು ಮೃಗಾಲಯದ ಆಸುಪಾಸು ಬಿಡದಂತೆ ಗ್ರಾಮಗಳಲ್ಲಿ ತಿಳಿವಳಿಕೆ ನೀಡಲಾಗಿದೆ' ಎಂದು ಡಿಸಿಎಫ್ ಎನ್.ಇ.ಕ್ರಾಂತಿ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಧನ ವಾರ್ತೆ

ಈಶ್ವರ ಗೌಡ

ಉಡುಪಿ: ಯಕ್ಷಗಾನದಲ್ಲಿ ಮಹಿಷಾಸುರ ಪಾತ್ರ ನಿರ್ವಹಿಸಿ, ಚೌಕಿಗೆ ಮರಳಿ ಬಣ್ಣ ತೆಗೆಯುವ ಮೊದಲೇ ಮಂದಾರ್ತಿ ಎರಡನೇ ಮೇಳದ ಕಲಾವಿದ ಈಶ್ವರ ಗೌಡ ನೆಮ್ಮಾರ್ (51) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಕುಂದಾಪುರದ ಸೌಡ ಸಮೀಪ ಬುಧವಾರ ನಡೆದ ಯಕ್ಷಗಾನದ ವೇಳೆ ಈಶ್ವರ ಅವರಿಗೆ ಹೃದಯಾಘಾತವಾಗಿದ್ದು, ಸಹ ಕಲಾವಿದರು ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲೇ ಅವರು ಮೃತಪಟ್ಟಿದ್ದಾರೆ.

ಶೃಂಗೇರಿಯವರಾದ ಅವರಿಗೆ ಪತ್ನಿ ಇಬ್ಬರು ಪುತ್ರರು ಇದ್ದಾರೆ. ಈಶ್ವರ ಗೌಡ ಅವರು ಶಿವರಾಜಪುರ, ಮೇಗರವಳ್ಳಿ, ಮಡಾಮಕ್ಕಿ, ಅಮೃತೇಶ್ವರಿ, ಮಂದಾರ್ತಿ ಮೇಳಗಳಲ್ಲಿ ಸುಮಾರು ಮೂರು ದಶಕಗಳಿಂದ ಕಲಾಸೇವೆ ಮಾಡಿದ್ದಾರೆ. ಪೌರಾಣಿಕ ಪುರುಷ ಪಾತ್ರಗಳನ್ನು ಪ್ರಸ್ತುತಪಡಿಸುವ ಮೂಲಕ ಅವರು ಪ್ರಸಿದ್ಧಿ ಪಡೆದಿದ್ದರು.

ಶುಕ್ರವಾರ ● ನವೆಂಬರ್ 21, 20
ಪ್ರಜಾವಾಣಿ

ವಾಡ್‌... ಆಕ್ಷೇಪ...

ಮಂಗಲ್ ಪಾಂಡೆ, ರಾ... ಚಂದ್ರ ಬೋಸ್ ವಾ...

● ಆರ್. ಮಂಜುನಾಥ್

ಬೆಂಗಳೂರು: ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿ ಅವುಗಳ ನಂಬರ್‌ಗಳು ಅದಲು ಬದಲಾಗಿರುವುದು ಬಿಟ್ಟರೆ, ನಾಗರಿಕರು, ಜನಪ್ರತಿನಿಧಿಗಳ ಆಕ್ಷೇಪಣೆಗೆ ನಗರಾಭಿವೃದ್ಧಿ ಇಲಾಖೆ ಮಣೆ ಹಾಕಿಲ್ಲ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ ಗ್ರೇಟರ್ ಬೆಂಗಳೂರ ಪ್ರಾಧಿಕಾರ ಹಾಗೂ ಐದು ನಗರ ಪಾಲಿಕೆಗಳನ್ನು ರಚಿಸಿ, 2025ರ ಸೆಪ್ಟೆಂಬರ್ 2ರಂದು ಅಧಿಸೂಚಿಸಲಾಗಿತ್ತು. ಸೆಪ್ಟೆಂಬರ್ 30ರಂದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಮರು ವಿಂಗಡಿಸಿ ಕರಡು ಅಧಿಸೂಚನೆಯಾಗಿತ್ತು. ನ.1ರಂದು ಅಂತಿಮ ಅಧಿಸೂಚನೆಯಾಗಬೇಕಿದ್ದರೂ, ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡಿ 15 ದಿನ ಅವಕಾಶವನ್ನು ಸರ್ಕಾರ ಪಡೆದುಕೊಂಡಿತ್ತು.

ಅದರಂತೆ, ಐದೂ ನಗರ ಪಾಲಿಕೆಗಳ ವಾರ್ಡ್‌ಗಳನ್ನು ಅಂತಿಮಗೊಳಿಸಿ ನ.19ರಂದು ಅಧಿಸೂಚನೆ ಹೊರಡಿಸಿದೆ. ಆದರೆ, ನಾಗರಿಕರು ಹಾಗೂ ಜನಪ್ರತಿನಿಧಿಗಳು ಸಲ್ಲಿಸಿದ್ದ ಆಕ್ಷೇಪಗಳನ್ನು ಪರಿಗಣಿಸಿಲ್ಲ ಎಂಬ ಆರೋಪ ವ್ಯಕ್ತವಾಗಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಒಂದು ವಾರ್ಡ್ ಅನ್ನು ಹೆಚ್ಚಿಸಿ-

ಬೆಂಗಳೂರು ಕೇ...

ವಿಧಾನಸಭೆ ಕ್ಷೇತ್ರ: ಚಾಮರಾಜಪೇಟೆ- 12, ಸಿ.ವಿ. ರಾಮನ್ ನಗರ- 13, ಗಾ... ಶಾಂತಿನಗರ- 10, ಶಿವಾಜಿನಗರ- 8

ಉತ್ತರ ನಗರ ಪಾಲಿಕೆ;72 ...

ವಿಧಾನಸಭೆ ಕ್ಷೇತ್ರ: ದಾಸರಹಳ್ಳಿ- 8 ... 11, ಬ್ಯಾಟರಾಯನಪುರ- 7, ಯಲಹ... ರಾಜರಾಜೇಶ್ವರಿನಗರ- 5 , ಸರ್ವಜ್ಞನ...

.ದಕ್ಷಿಣ ನಗರ ಪಾಲಿಕೆ; 72 ...

ವಿಧಾನ ಸಭೆ ಕ್ಷೇತ್ರ: ಆನೇಕಲ್- 1 ... ಪದ್ಮನಾಭನಗರ- 6, ಬಿಟಿಎಂ ಲೇಔಟ... ಬೊಮ್ಮನಹಳ್ಳಿ- 20, ಮಹದೇವಪುರ...

ಕೆಎಸ್‌ಆರ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕೆಎಸ್‌ಆರ್‌ಟಿಸಿ) ಕೈಗೊಂಡಿರುವ ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಗಳಿಗಾಗಿ ಚಿನ್ನದ ವರ್ಗದಲ್ಲಿ ಅಪೆಕ್ಸ್ ಇಂಡಿಯಾ ಮಾನವ ಸಂಪನ್ಮೂಲ ಶ್ರೇಷ್ಠತೆ ಪ್ರಶಸ್ತಿ ಮತ್ತು 2,600 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿನ ಪಾರದರ್ಶಕತೆ, ತ್ವರಿತ, ತಂತ್ರಜ್ಞಾನ ಅವಲಂಬಿತ ಪ್ರಕ್ರಿಯೆಗೆ ಅಪೆಕ್ಸ್ ಇಂಡಿಯಾ ಮಾನವ ಸಂಪನ್ಮೂಲ ಧಾರಣಾ ಶ್ರೇಷ್ಠತೆ ಪ್ರಶಸ್ತಿ ಲಭಿಸಿದೆ.

ಖಾಸಗಿ ಆಸ್ಪತ್ರೆ ಸ್ಕ್ಯಾನಿಂಗ್ ಯಂತ್ರ ಮುಟ್ಟುಗೋಲು

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಯಲ್ಲಿ ನೋಂದಣಿ ಪತ್ರ ಪಡೆಯದೇ ಬಳಸುತ್ತಿದ್ದ ಸ್ಕ್ಯಾನಿಂಗ್ ಯಂತ್ರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

‘ದಕ್ಷಿಣ ತಾಲ್ಲೂಕು ವ್ಯಾಪ್ತಿಯ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಆಸ್ಪತ್ರೆಯಲ್ಲಿರುವ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು ಗರ್ಭಧಾರಣೆಯ ಪೂರ್ವ ಮತ್ತು ಪ್ರಸವಪೂರ್ವ ರೋಗನಿರ್ಣಯ ತಂತ್ರಗಳ ಕಾಯಿದೆ ಪ್ರಕಾರ ಬಳಸದೇ ಇರುವುದು ಕಂಡುಬಂದಿತು. ದಾಖಲೆಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಮುಟ್ಟುಗೋಲು ಹಾಕಿಕೊಳ್ಳಲಾಯಿತು’ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ರವಿಂದ್ರನಾಥ್ ಎಂ. ಮೇಟಿ ತಿಳಿಸಿದ್ದಾರೆ.

ಛಾಯಾಗ್ರಹಣ ಕಾರ್ಯಾಗಾರ

ಬೆಂಗಳೂರು: ಸಾಗರ ಫೋಟೋಗ್ರಫಿಕ್ ಸೊಸೈಟಿಯು (ಎಸ್‌ಪಿಎಸ್) ನೀನಾಸಂ ಸಂಸ್ಥೆಯ ಸಹಯೋಗದಲ್ಲಿ ಡಿಸೆಂಬರ್ 25ರಿಂದ 28ರವರೆಗೆ ಶಿವಮೊಗ್ಗ ಜಿಲ್ಲೆಯ ಸಾಗರ ಸಮೀಪದ ಹೆಗ್ಗೋಡಿನಲ್ಲಿ ರಾಜ್ಯಮಟ್ಟದ ಛಾಯಾಗ್ರಹಣ ಕಾರ್ಯಾಗಾರವನ್ನು ಆಯೋಜಿಸಿದೆ.

ಆಸಕ್ತರು ಕಮ್ಮಟದ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳಬೇಕು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

ಮಾಹಿತಿಗೆ: 94486 27878 ಅಥವಾ 98459 31306ಕ್ಕೆ ಕರೆ ಮಾಡಬಹುದು..

ಜೆಡಿಎಸ್ ಬೆಳ್ಳಿಹಬ್ಬ: ಸಮಾವೇಶ

ಪಕ್ಷ ಸ್ಥಾಪನೆ, ಹೋರಾಟ, ಮುಖ್ಯ ತೀರ್ಮಾನ ಕುರಿತ ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ನಿಖಿಲ್

ಬೆಂಗಳೂರು: 'ಜೆಡಿಎಸ್ ಸ್ಥಾಪನೆಯಾಗಿ 25 ವರ್ಷ ಪೂರ್ಣಗೊಂಡಿದ್ದು, ಅದರ ನಿಮಿತ್ತ ಇದೇ 21 ಮತ್ತು 22ರಂದು ರಾಷ್ಟ್ರೀಯ ಸಮಾವೇಶ ನಡೆಯಲಿದೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಸಮಾವೇಶ ನಡೆಯಲಿದೆ. ಪಕ್ಷ ಸ್ಥಾಪನೆ, ಪಕ್ಷ ನಡೆದು ಬಂದ ಹಾದಿ, ಹೋರಾಟಗಳು, ಅಧಿಕಾರದಲ್ಲಿದ್ದಾಗ ತೆಗೆದುಕೊಂಡ ಮುಖ್ಯ ತೀರ್ಮಾನ ಕುರಿತು ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗುತ್ತದೆ' ಎಂದು ತಿಳಿಸಿದರು.

'ಪಕ್ಷದ ಅಧ್ಯಕ್ಷ ಎಚ್.ಡಿ.ದೇವೇಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ವಿವಿಧ ರಾಜ್ಯಗಳ ರಾಜ್ಯ ಘಟಕದ ಅಧ್ಯಕ್ಷರು, ಶಾಸಕರು ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ' ಎಂದರು.

ನೂತನ ಅಧ್ಯಕ್ಷ ಆಯ್ಕೆ?

ಜೆಡಿಎಸ್ ರಾಜ್ಯ ಘಟಕಕ್ಕೆ ನೂತನ ಅಧ್ಯಕ್ಷರನ್ನು ಪಕ್ಷವು ಶನಿವಾರ ಘೋಷಿಸುವ ಸಾಧ್ಯತೆ ಇದೆ. ಅಧ್ಯಕ್ಷರು ಬದಲಾಗುತ್ತಾರೆ ಎಂಬುದರ ಬಗ್ಗೆ ಪಕ್ಷದಲ್ಲಿ ಚರ್ಚೆಗಳು ನಡೆಯುತ್ತಿವೆ. ಸಮಾವೇಶದ ಭಾಗವಾಗಿ ನಡೆಯಲಿರುವ ರಾಷ್ಟ್ರೀಯ ಪರಿಷತ್ ಮತ್ತು ರಾಜ್ಯ ಪರಿಷತ್ ಸಭೆಗಳಲ್ಲಿ ಈ ವಿಚಾರವನ್ನು ಚರ್ಚಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ನಿಖಿಲ್ ಕುಮಾರಸ್ವಾಮಿ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ಪಕ್ಷದ ಹಲವು ನಾಯಕರು ಒತ್ತಾಯಿಸಿದ್ದಾರೆ. ಸಭೆಗಳಲ್ಲಿ ಈ ವಿಚಾರವಾಗಿಯೂ ಚರ್ಚಿಸಲಾಗುತ್ತದೆ. ಸಭೆಯಲ್ಲೇ ಹೆಸರನ್ನು ಅಂತಿಮಗೊಳಿಸಿ, ಶನಿವಾರದ ಕಾರ್ಯಕ್ರಮದಲ್ಲಿ ಘೋಷಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಪರಿಷತ್ ಸಭೆ: 'ಶುಕ್ರವಾರ ಸಂಜೆ ಪಕ್ಷದ ರಾಷ್ಟ್ರೀಯ ಪರಿಷತ್ ಮತ್ತು ರಾಜ್ಯ ಪರಿಷತ್‌ನ ಸಭೆ ನಡೆಯಲಿದೆ. ಸಭೆಯಲ್ಲಿ ಹಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತದೆ' ಎಂದು ನಿಖಿಲ್ ಮಾಹಿತಿ ನೀಡಿದರು.

ದಂಡ: ಮತ್ತೆ ಶೇ50 ರಿಯಾಯಿತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಿ ಆದೇಶಿಸಿದೆ.

ನ.21ರಿಂದ ಡಿ.12ರವರೆಗೆ ಈ ರಿಯಾಯಿತಿ ಬಳಸಿಕೊಂಡು ವಾಹನಗಳ ಮಾಲೀಕರು ದಂಡ ಪಾವತಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪೊಲೀಸ್ ಇಲಾಖೆಯ ಸಂಚಾರ ಇ-ಚಲನ್‌ನಲ್ಲಿ ದಾಖಲಾಗಿರುವ ದಂಡದ ಪ್ರಕರಣಗಳು ಹಾಗೂ ಸಾರಿಗೆ ಇಲಾಖೆಯಲ್ಲಿ 1991-92ರಿಂದ 2019-20ರ ಅವಧಿಯಲ್ಲಿ ದಾಖಲಾಗಿ ಪಾವತಿ ಬಾಕಿಯಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ 50 ರಿಯಾಯಿತಿ ನೀಡಿ ಆದೇಶಿಸಿದೆ.

ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವ ಒಪ್ಪಿದ್ದ ಸರ್ಕಾರವು, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಳೆದ ಜುಲೈ 5ರಿಂದ 11ರ ವರೆಗೆ ದಂಡ ಪಾವತಿಸಲು ಅವಕಾಶ ಕಲ್ಪಿಸಿತ್ತು. ಅದಾದ ಮೇಲೆ ಆಗಸ್ಟ್ 23ರಿಂದ ಸೆಪ್ಟೆಂಬರ್ 12ರ ವರೆಗೆ ಎರಡನೇ ಬಾರಿ ಅವಕಾಶ ನೀಡಿತ್ತು.

ಅಸ್ತ್ರಂ ಆ್ಯಪ್, ಕೆಎಸ್‌ಪಿ ಆ್ಯಪ್, ಕರ್ನಾಟಕ ಒನ್ ಕೇಂದ್ರ ಸೇರಿದಂತೆ ಸಂಬಂಧಪಟ್ಟ ವೇದಿಕೆಗಳಲ್ಲಿ ದಂಡವನ್ನು ಮಾಲೀಕರು ಪಾವತಿ ಮಾಡಬಹುದು ಎಂದು ಮೂಲಗಳು ತಿಳಿಸಿವೆ.

'ಲೋಕಾ' ಬಲೆಗೆ ಬಿದ್ದ ಎಫ್‌ಡಿಸಿ

ಕಲಬುರಗಿ: ನಿವೃತ್ತ ಶಿಕ್ಷಕಿಯೊಬ್ಬರ ಪಿಂಚಣಿ ಹಾಗೂ ಇತರ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವ ಕುರಿತ ಕಡತವನ್ನು ಮುಂದೆ ಕಳುಹಿಸಲು ₹28,500 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಸೇಡಂ ಬಿಇಒ ಕಚೇರಿಯ ಎಫ್‌ಡಿಸಿ ಶಿವಲಿಂಗಪ್ಪ ಲೋಕಾಯುಕ್ತ ಪೊಲೀಸರ ಬಲೆಗೆ ಗುರುವಾರ ಬಿದ್ದಿದ್ದಾರೆ.

ವರ್ಷದ ಹಿಂದೆ ನಿವೃತ್ತರಾಗಿದ್ದ ಶಿಕ್ಷಕಿ ರಜಾಕ್ ಬೇಗಂ ಅವರ ಪಿಂಚಣಿ ಹಣ ಹಾಗೂ ಇತರ ಸರ್ಕಾರಿ ಸೌಲಭ್ಯ ಲೆಕ್ಕಹಾಕಿ ಕಡತ ಕಳುಹಿಸಲು ಶಿವಲಿಂಗಪ್ಪ ₹28,500 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರಲ್ಲಿ ಯುಪಿಐ ಮೂಲಕ ಮುಂಗಡವಾಗಿ ₹15 ಸಾವಿರ ಪಡೆದಿದ್ದರು. ಈ ಸಂಬಂಧ ರಜಾಕ್‌ಬೇಗಂ ಅವರ ಪುತ್ರ ಅಫ್ರಿದಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಶಿವಲಿಂಗಪ್ಪ ಯುಪಿಐ ಮೂಲಕ ₹10 ಸಾವಿರ ಹಣ ಪಡೆದಾಗ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು.

ಎಎಬಿ ಹೈಕೋರ್ಟ್ ವಿಭಾಗಕ್ಕೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ (ಎಎಬಿ) ಕರ್ನಾಟಕ ಹೈಕೋರ್ಟ್ ಆಡಳಿತ ನ್ಯಾಯಮಂಡಳಿ ವಿಭಾಗದ ಸಂಚಾಲಕರನ್ನಾಗಿ ಹೈಕೋರ್ಟ್ ವಕೀಲ ಆತ್ಮ ವಿ.ಹಿರೇಮಠ ಅವರನ್ನು ನೇಮಕ ಮಾಡಿ ಆದೇಶಿಸಲಾಗಿದೆ.

ಮತ್ತೊಬ್ಬ ಹೈಕೋರ್ಟ್ ವಕೀಲ ಎಚ್.ಎನ್.ತಮ್ಮಯ್ಯ ಅವರನ್ನು ಡಿಆರ್‌ಟಿ ಕಮರ್ಶಿಯಲ್ ನ್ಯಾಯಾಲಯದ ವಿಭಾಗಕ್ಕೆ ಸಂಚಾಲಕರನ್ನಾಗಿ ನೇಮಕ ಮಾಡಿ ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಆದೇಶಿಸಿದ್ದಾರೆ.

ಕರ್ನಾಟಕ ಸರ್ಕಾರ
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ)
ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052
ಸಂಖ್ಯೆ: ಜೆ ಪಿ/ಎನ್ ಸಿ ಇ/293/ಇ–ಟೆಂಡರ್ ಆರ್‌ಡಿಸಿ/2026 ದಿನಾಂಕ: 20.11.2025
ಟೆಂಡರ್ ಪ್ರಕಟಣೆ
ಆರ್‌ಡಿಸಿ 2026 ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಕರ್ನಾಟಕ ರಾಜ್ಯದ ಎನ್‌ಸಿಸಿ ಕ್ಯಾಡೆಟ್‌ಗಳಿಗೆ ವೇಷಭೂಷಣಗಳು, ಆಭರಣಗಳು, ಮೇಕಪ್ ಕಿಟ್‌ಗಳು, ಪ್ರಾಪ್ಸ್ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಕೆ ಮಾಡುವ ಟೆಂಡರ್ ಅನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ.
ಟೆಂಡರ್ ವಿವರಗಳು https://kppp.karnataka.gov.in/kppp ಎಂಬ ವೆಬ್‌ಸೈಟ್‌ನಲ್ಲಿ ದಿನಾಂಕ 20/11/2025 ರಿಂದ ಲಭ್ಯವಿದ್ದು, 27/11/2025 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.
ಟೆಂಡರ್ ಸಂಖ್ಯೆ : NCC/2025-26/SE0010
ಸಹಿ/– (ಮಲ್ಲಿನಾಥ), ಆಡಳಿತಾಧಿಕಾರಿಗಳು
ಎನ್.ಸಿ.ಸಿ ಉಪಮಹಾನಿರ್ದೇಶಕರ ಪರವಾಗಿ
ವಾ.ಸಾ.ಸಂ.ಇ/ವಾಪ್ರ/3935/ಆಕಾರ್/2025–26

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ
ರೇಷ್ಮೆ ಇಲಾಖೆ
ಬಹುಮಹಡಿ ಕಟ್ಟಡ, 5ನೇ ಮಹಡಿ, 1ನೇ ಹಂತ,
ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001
ದೂರವಾಣಿ: 080–22252611, ಇ–ಮೇಲ್: teamsilk.tech2@gmail.com
ಸಂಖ್ಯೆ: DOS:EPRO:RFIX:1:2025 ದಿನಾಂಕ: 19–11–2025
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕರೆ–2)
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬಳಕೆ ಮಾಡುವ ಪ್ಲಾಸ್ಟಿಕ್ ಚಂದ್ರಿಕೆಗಳ (Plastic Mountages) ಸರಬರಾಜಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. (SD/2025-26/IND0098/CALL-2) ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: 06–12–2025 ಸಂಜೆ 5.30 ಗಂಟೆಯವರೆಗೆ. ಆಸಕ್ತ ಬಿಡ್ಡುದಾರರು ಟೆಂಡರ್‌ನ ಬಿಡ್ ದಾಖಲೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್ ಭೇಟಿ ನೀಡಿ ಪಡೆಯಬಹುದು.
ಸಹಿ/–
ರೇಷ್ಮೆ ಹೆಚ್ಚುವರಿ ನಿರ್ದೇಶಕರು (ತಾಂತ್ರಿಕ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
DIPR/CP/SPAN/3925/2025-26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ದೂರವಾಣಿ ; 08182–2268512 ಇಮೇಲ್ : ka.shivamogga.cc@gmail.com
ಸಂಖ್ಯೆ: ಶಿಮನಪಾ/ಆ.ವಿ/ಸಿಆರ್/27/2025–26 ದಿನಾಂಕ: 17.11.2025
ಟೆಂಡರ್ ಪ್ರಕಟಣೆ
ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆಯ ವಿವಿಧ ವಾರ್ಡ್ ಗಳಲ್ಲಿ ಚರಂಡಿ ಹೂಳು ತೆಗೆಯಲು ಹಾಗೂ ರಾಜಕಾಲುವೆಗಳ ಹೂಳು ತೆಗೆಯಲು ಉಪಯುಕ್ತವಾಗುವಂತೆ ಹಾಗೂ ಪಾರ್ಕ್ ಗಳ ನಿರ್ವಹಣೆಗಾಗಿ ಹಾಗೂ ಯು.ಜಿ.ಡಿ ನಿರ್ವಹಣೆಗೆ ಸಹಾಯವಾಗುವಂತೆ Mini Excavator ಖರೀದಿಸಲು ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ ಶಿವಮೊಗ್ಗ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ಟೆಂಡರ್ ಸಲ್ಲಿಸುವುದು.

ಕ್ರ ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.	ಲೆಕ್ಕ ಶೀರ್ಷಿಕೆ
1.	ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸಗಳಿಗೆ ಅನುಕೂಲವಾಗುವಂತೆ Mini Excavator ಯಂತ್ರೋಪಕರಣಗಳನ್ನು ಖರೀದಿಸುವ ಬಗ್ಗೆ. (Indent No: DMA/2025-26/INDENT 5635)	97.00	1,92,000	2025–26ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ

1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 18.11.2025 2) ಪೂರ್ವಭಾವಿ ಸಭೆ (PRE-BID MEETING) :27.11.2025 ರ ಪೂರ್ವಾಹ್ನ 11:00 ಗಂಟೆಗೆ ಮಹಾನಗರಪಾಲಿಕೆ ಶಿವಮೊಗ್ಗ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.12.2025 ಸಂಜೆ 05.00 ಗಂಟೆಗೆ.
ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಪರಿಸರ ಅಭಿಯಂತರರು. ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ವಾ.ಸಾ.ಸಂ.ಇ./ಶಿ/ನಂ.75.11/ಝೇಂಕಾರ್/2025–26
ಸಹಿ/–
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಎಂಸಿಎ ಹೌಸ್, ನಂ.42, ಮಿಲ್ಲರ್ಸ್ ರಸ್ತೆ, ಬೆಂಗಳೂರು – 560 001.
ದೂರವಾಣಿ: 080–22256288. ಇ–ಮೇಲ್: adminmca@mcaltd.in
ವೆಬ್‌ಸೈಟ್: www.mcaltd.karnataka.gov.in
ಸಂಖ್ಯೆ:ಕೆಎಸ್‌ಎಂಸಿಎ/ಆಡಳಿತ/ಸ.ವ್ಯ/ಹೊರಗುತ್ತಿಗೆ/2025–26/ಕರೆ–2 ದಿನಾಂಕ:21.11.2025
ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ
ಕೆಎಸ್‌ಎಂಸಿಎ ಸಂಸ್ಥೆಯ ಕೇಂದ್ರ ಕಚೇರಿ ಮತ್ತು ಶಾಖಾ ಕಚೇರಿಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೇಲೆ ಒದಗಿಸಲು ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿ: 2 ವರ್ಷಗಳು. ಟೆಂಡರ್ ಚಾಲ್ತಿಯಲ್ಲಿರುವ ದಿನಾಂಕ: 21.11.2025 ರಿಂದ 29.11.2025 ರವರೆಗೆ. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 29.11.2025 ರಂದು ಸಂಜೆ 5.30 ಗಂಟೆ ವರೆಗೆ. ಟೆಂಡರ್ ತೆರೆಯುವ ದಿನಾಂಕ:01.12.2025. ಹೆಚ್ಚಿನ ವಿವರಗಳು, ಟೆಂಡರ್ ನಿಯಮಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರೀಯ ವಿದ್ಯಾಲಯ, ಡಿ.ಆರ್.ಡಿ.ಒ.
ಶಿಕ್ಷಣ ಇಲಾಖೆಯ ಸಚಿವಾಲಯದ ಅಡಿಯಲ್ಲಿ, ಭಾರತ ಸರ್ಕಾರ.
ಸಿ.ವಿ. ರಾಮನ್ ನಗರ, ಬೆಂಗಳೂರು - 560093.
ದೂರವಾಣಿ : 25243919
ಇ-ಮೇಲ್ ಐಡಿ : kvdrdobangalore@gmail.com, ವೆಬ್‌ಸೈಟ್ : drdobangalore.kvs.ac.in
ಉಲ್ಲೇಖ : ಎಫ್.ಕೆ.ವಿ.ಡಿಆರ್‌ಡಿಒ/ಎಸ್.ಎಫ್./2025–26 ದಿನಾಂಕ : 19.11.2025
ವಾಕ್–ಇನ್–ಇಂಟರ್‌ವ್ಯೂ (ಗುತ್ತಿಗೆ ಆಧಾರದ ಮೇಲೆ)
ಕೇಂದ್ರೀಯ ವಿದ್ಯಾಲಯ, ಡಿ.ಆರ್.ಡಿ.ಒ., ಸಿ.ವಿ.ರಾಮನ್ ನಗರ, ಬೆಂಗಳೂರು-560093 ಇಲ್ಲಿ ಗುತ್ತಿಗೆ ಆಧಾರದ ಮೇಲೆ (2025–26) ಶಿಕ್ಷಕರ ಆಯ್ಕೆ ಪಟ್ಟಿಯನ್ನು (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ಈ ಕೆಳಗಿನಂತೆ ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇವೆಗಳನ್ನು ಅವರು ನೀಡಿದ ಆದ್ಯತೆಗೆ ಅನುಗುಣವಾಗಿ ಮತ್ತು ಅಗತ್ಯವಿರುವಾಗ ಈ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ.
ಸಂದರ್ಶನದ ದಿನಾಂಕ : 24.11.2025, ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ
ಹುದ್ದೆ / ವಿಷಯ : ತರಬೇತಿ ಪಡೆದ ಪದವೀಧರ ಶಿಕ್ಷಕರು (ಟಿ.ಜಿ.ಟಿ.) :
ಹಿಂದಿ, ಗಣಿತ ಮತ್ತು ಸಮಾಜ ವಿಜ್ಞಾನ
ಅರ್ಹತಾ ಮಾನದಂಡಗಳು, ಅರ್ಹತೆಗಳು ಮತ್ತು ಸಂಭಾವನೆ ಕುರಿತು ವಿವರವಾದ ಮಾಹಿತಿಗಾಗಿ, ಅಭ್ಯರ್ಥಿಗಳು ವಿದ್ಯಾಲಯದ ವೆಬ್‌ಸೈಟ್ : drdobangalore.kvs.ac.in ಗೆ ಭೇಟಿ ನೀಡಿ ಪಡೆಯಬಹುದು. ಅಭ್ಯರ್ಥಿಗಳು ವರ್ಷದ / ಸೆಮಿಸ್ಟರ್‌ನ ಮೂಲ ಪ್ರಮಾಣ ಪತ್ರಗಳು, ಸ್ವಯಂ ದೃಢೀಕರಿಸಿದ ನಕಲು ಪ್ರತಿಗಳ ಒಂದು ಜೊತೆ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಒಂದು ಛಾಯಾಚಿತ್ರ, ಸೇವಾ ಅನುಭವ ಪ್ರಮಾಣ ಪತ್ರಗಳು ಮತ್ತು ಯಾವುದೇ ಇತರೆ ಸಂಬಂಧಿತ ದಾಖಲೆಗಳನ್ನು ವಾಕ್–ಇನ್–ಸಂದರ್ಶನದ ದಿನದಂದು ತರಬೇಕು.
ಸಹಿ/- ಗ್ಲೋರಿ ಜ್ಞಾನಸೆಲ್ವಿ
ಪ್ರಾಂಶುಪಾಲರು I/C

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸರ್ವಜ್ಞನಗರ ವಿಭಾಗ,
9ನೇ ಸಿ ಮೇನ್, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣನಗರ,
ಬೆಂಗಳೂರು–560043
ನಂ.: ಕಾಪಾ/ಎಸ್‌ಸಿಎನ್/ಕೆಪಿಪಿಪಿ/ಟೆಂಡರ್/11/ಸಿಓಆರ್–01/2025–26 ದಿನಾಂಕ : 20.11.2025
ತಿದ್ದುಪಡಿ–1
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ವಿಷಯ :– ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನೆ (ಐಎಫ್‌ಟಿ) ಗಾಗಿ ತಿದ್ದುಪಡಿ ಕುರಿತು.
ಉಲ್ಲೇಖ:– (1) ಟೆಂಡರ್ ಅಧಿಸೂಚನೆ ಸಂಖ್ಯೆ : EE/SGN/ KPPP/ TEND/ 11/ 2025-26 Dated: 11.11.2025.
ಸಂಬಂಧಪಟ್ಟ ಎಲ್ಲಾ ಗುತ್ತಿಗೆದಾರರಿಗೆ, ವಿಶೇಷವಾಗಿ ದಿನಾಂಕ: 13.11.2025 ರಂದು ಇದೇ ಪತ್ರಿಕೆಯಲ್ಲಿ ಪ್ರಕಟವಾದ ಮೇಲಿನ ಟೆಂಡರ್ ಅಧಿಸೂಚನೆಯಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಮುಂದೂಡಲಾಗಿದೆ ಎಂದು ತಿಳಿಸಲಾಗಿದೆ. ಕಾರ್ಯಕ್ರಮಗಳ ಕ್ಯಾಲೆಂಡರ್ ಅನ್ನು ಮತ್ತಷ್ಟು ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಸರ್ವಜ್ಞನಗರ ವಿಭಾಗ, ವಲಯ–1, ಬೆಂ.ಉ.ನ.ಪಾ

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಜಮಖಂಡಿ ಪ್ರಾದೇಶಿಕ ಉಪವಿಭಾಗ, ಜಮಖಂಡಿ
OFFICE OF THE ASSISTANT CONSERVATOR OF FORETS,
BAGALKOTE TERRITORIAL SUB DIVISION, JAMAKHANDI
ದೂರವಾಣಿ ಸಂಖ್ಯೆ:7348962827 ಇ–ಮೇಲ್:acftjkd@gmail.com
ಸಂಖ್ಯೆ:ಸಅಸಂ/ಜಕೆಡಿ/ಇ–ಟೆಂಡರ್/2025–26 ದಿನಾಂಕ:28–10–2025
ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025–26 ನೇ ಸಾಲಿಗೆ ಜಮಖಂಡಿ ಪ್ರಾದೇಶಿಕ ಉಪವಿಭಾಗ ವ್ಯಾಪ್ತಿಯ ಜಮಖಂಡಿ, ಮುಧೋಳ ಮತ್ತು ಬೀಳಗಿ ವಲಯಗಳಲ್ಲಿ ಕೆ.ಎಫ್.ಡಿ.ಎಫ ಪ್ಲೆಕ್ಸಿ ಫಂಡ್ ಯೋಜನೆಯಡಿಯಲ್ಲಿ ಅತಿಕ್ರಮಣ ತೆರವು ಸ್ಥಳಗಳಲ್ಲಿ ಮಳೆಗಾಲದ ನೆಡುತೋಪು ನಿರ್ಮಾಣ (ಸಸಿ ಬೆಳೆಸುವುದನ್ನು ಒಳಗೊಂಡಂತೆ) ಕಾಮಗಾರಿ ಕೈಗೊಳ್ಳಲು ನೊಂದಾಯಿತ ಅರ್ಹ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:25–11–2025 ರಂದು ಮಧ್ಯಾಹ್ನ 12–00 ಗಂಟೆ ಇರುತ್ತದೆ. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ–ಟೆಂಡರ್‌ನಲ್ಲಿ ಭಾಗವಹಿ ಸಬಹುದು.
ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಜಮಖಂಡಿ ಉಪ ವಿಭಾಗ, ಜಮಖಂಡಿ
DIPR/BGK/RO-NO-401/KSMCA/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–1ರವರ ಕಛೇರಿ, ಬೆಂಘತ್ಯಾನಿನಿ, 1ನೇ ಮಹಡಿ,
ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052
ಸಂ:ಉಪ್ರವ್ಯ–1(ಬೆಂಘತ್ಯಾನಿನಿ)/ಪಿಆರ್/838/25–26 ದಿನಾಂಕ:19.11.2025
ತಿದ್ದುಪಡಿ–1
ವಿಷಯ: ಟೆಂಡರ್ ಅಧಿಸೂಚನೆಯ ವೇಳಾಪಟ್ಟಿಯಲ್ಲಿ ಬದಲಾವಣೆ.
ಉಲ್ಲೇಖ: (1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಉಪ್ರವ್ಯ–1/ಬೆಂಘತ್ಯಾನಿನಿ/ಟೆಂಡ್/11/2025–26 ದಿನಾಂಕ: 05.11.2025.
ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಮೇಲಿನ ಟೆಂಡರ್ ಅಧಿಸೂಚನೆಯ ವೇಳಾಪಟ್ಟಿಯನ್ನು ವಿಸ್ತರಿಸಲಾಗಿದೆ, ವೇಳಾಪಟ್ಟಿಯಲ್ಲಿನ ಬದಲಾವಣೆಯನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.
ನಿಗಧಿತ ಅವಧಿ / ವೇಳಾಪಟ್ಟಿ

ಕ್ರ. ಸಂ.	ವಿವರ	ಟೆಂಡರ್ ಅಧಿಸೂಚನೆ ಯಂತೆ	ವಿಸ್ತರಿಸಲಾದ ದಿನಾಂಕಗಳನ್ನು ಈ ರೀತಿ ಓದಿಕೊಳ್ಳುವುದು
1	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	27.11.2025 ರ ಸಂಜೆ 16:00ರವರೆಗೆ	04.12.2025 ರ ಸಂಜೆ 16:00 ರವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	28.11.2025 ರ ಸಂಜೆ 16:30 ಗಂಟೆಯ ನಂತರ	05.12.2025 ರ ಸಂಜೆ 16:30 ಗಂಟೆಯ ನಂತರ

ಹೆಚ್ಚಿನ ಮಾಹಿತಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ www.kppp.karnataka.gov.in ನಿಂದ ಪಡೆಯಬಹುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1
ಬೆಂಘತ್ಯಾನಿನಿ
ವಾಸಾಸಂಇ/ವಾಪ್ರ/ಜಿಎ/3941/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ,
ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029
ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: KWB/TEC/CE(B)/HYR/UGD/1197/2025-26 Dated: 14.11.2025
ಕಾಮಗಾರಿಯ ಹೆಸರು: ಹಿರಿಯೂರು ನಗರದ ದಕ್ಷಿಣ ಭಾಗಕ್ಕೆ ಒಳಚರಂಡಿ ಯೋಜನೆ ಒದಗಿಸುವುದು. (ಹಂತ–1)
ಇಂಡೆಂಟ್ ಸಂಖ್ಯೆ: KUWSDB/2025-26/WS/Work_INDENT430
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನಲ್ಲಿ ಸಂಪರ್ಕಿಸಬಹುದು.
ಸಹಿ/– ಮುಖ್ಯ ಅಭಿಯಂತರರು (ಬೆಂ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ಡಿಐಪಿಆರ್/ಸಿಪಿ/3936/ಸಿಸಿಎಲ್/2025–26

ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು–560 056, ದೂ : 080–23213023
ಸಂಖ್ಯೆ : ಎಸಿಎ–3/ಸಂ.ನ/2026–27 ದಿನಾಂಕ: 18.11.2025
ಜಾಹೀರಾತು
ಬೆಂಗಳೂರು ವಿಶ್ವವಿದ್ಯಾಲಯವು, 2026–27ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗದಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ, ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮಿ ಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿವಿಧ ರೀತಿಯ ಸಂಯೋಜನೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ, ಅರ್ಜಿಗಳನ್ನು ಅಧಿಸೂಚನೆ ಸಂಖ್ಯೆ.ಎಸಿಎ–3/ಸಂನ/2026–27, ದಿನಾಂಕ: 18.11.2025 ರ ಮೂಲಕ ಆಹ್ವಾನಿಸಿದೆ. ಈ ಅಧಿಸೂಚನೆಯು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.karnataka.gov.in ನಲ್ಲಿ ಲಭ್ಯವಿರುತ್ತದೆ.
ಅರ್ಜಿಗಳನ್ನು ಸರ್ಕಾರದ ಆನ್–ಲೈನ್ ವೆಬ್‌ಸೈಟ್ https://uucms.karnataka.gov.in ಮೂಲಕ ಮಾತ್ರವೇ ಸಲ್ಲಿಸತಕ್ಕದ್ದು.
ಅರ್ಜಿಗಳನ್ನು ರೂ.2,200/– ದಂಡ ಶುಲ್ಕ ರಹಿತವಾಗಿ ದಿನಾಂಕ: 7.12.2025 ರವರೆಗೆ ಮತ್ತು ದಿನಾಂಕ 10.12.2025 ರವರೆಗೆ ರೂ.1,000/– ದಂಡ ಶುಲ್ಕದೊಂದಿಗೆ ಈ ಅಧಿಸೂಚನೆಯನ್ನು ಪರಾಮರ್ಶಿಸಿದ ನಂತರವೇ ಕಾಲೇಜುಗಳು/ಸಂಸ್ಥೆಗಳು ಸಂಯೋಜನಾ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
ಹೆಚ್ಚಿನ ಮಾಹಿತಿಯನ್ನು ವಿದ್ಯಾಕಾರ್ಯ ಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–560056 (ದೂರವಾಣಿ: 8618709950/9611792343) ಸಂಪರ್ಕಿಸಬಹುದು.
ಸಹಿ/–
ಕುಲಸಚಿವರು
ದಿನಾಂಕ : 20–11–2025
ವಾ.ಸಾ.ಸಂ.ಇ/ವಾಪ್ರ/3944/ಆಕಾರ್/2025–26

DAKSHINA KANNADA CO-OPERATIVE MILK PRODUCERS' UNION LTD.,
(FSSC 22000 VERSION 5.1 CERTIFIED DAIRY)
KULSHEKAR, MANGALORE-575 005
Phone No. - 2230511 Email: qcdkmul@gmail.com
IFT NO: DKMU/QC/IPM/4474/2025-26 Date: 19.11.2025
E-TENDER NOTIFICATION
Tenders are invited for the Biannual service contract for Integrated Pest management at Dakshina Kannada Milk Union under two bid (Technical and Commercial) systems from eligible/Registered Pest control agencies through E-procurement portal of government of Karnataka. The Interested Contractors/Agencies may apply through website https://kppp.karnataka.gov.in.

Sl. No.	Name of the Work	EMD (in Rs)
1	Biannual service contract for integrated pest management (IPM) at Dakshina Kannada Milk Union	60,000/-

The last date for submission of bids is 20.12.2025 up to 4.00 PM
Date of opening of technical tender is on 22.12.2025 at 4:30 PM
Date of opening of Commercial tender: will be initiated later.
Item wise detailed tender form cost is as E-Procurement portal of Government of Karnataka. The Managing Director reserves the right to accept or reject any or all tenders without assigning any reason whatsoever.
Further details can be had from e-procurement website: https://kppp.karnataka.gov.in Helpdesk phone: 080-46010000, 08068948777 email: support@eprochelpdesk.com.
Place: Mangalore
Date: 19.11.2025
Sd/-
Managing Director

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553,
ಫ್ಯಾಕ್ಸ್: 080–22340139. ಇ–ಮೇಲ್: directorayush.eproc@gmail.com
ಸಂಖ್ಯೆ: ಆಯುಷ್/49/ಸಂಗ್ರಹಣಾ/2025-26 ದಿನಾಂಕ: 20-11-2025
ಇ–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಆಯುಷ್ ನಿರ್ದೇಶನಾಲಯ ಮತ್ತು ಇದರ ಅಧೀನ ಕಛೇರಿಗಳಿಗೆ ಗ್ರೂಪ್–'ಡಿ' ಹಾಗೂ ಇನ್ನಿತರೆ ನೌಕರರ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ನಿಯಮಗಳನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಫಾರಂಗಾಗಿ, ಇಎಂಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ http://kppp.karnataka. gov.in ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.
ಇ–ಟೆಂಡರ್ ಪ್ರಕ್ರಿಯೆ:

1.	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ	ದಿನಾಂಕ : 20–11–2025 ಸಂಜೆ 5.30 ಗಂಟೆಗೆ
2.	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ	ದಿನಾಂಕ : 06–12–2025 ಸಂಜೆ 5.30 ಗಂಟೆಗೆ.
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್)	ದಿನಾಂಕ : 08–12–2025 ಬೆಳಗ್ಗೆ 11.30 ಗಂಟೆಗೆ.

ಸಹಿ/–
ಲೆಕ್ಕಾಧಿಕಾರಿಗಳು / ಅಧ್ಯಕ್ಷರು
DIPR/CP/RO3928/AAPL/2025-26

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಂ. 49, ಖನಿಜ ಭವನ, ಪಶ್ಚಿಮ ಭಾಗ, 2 ನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ: 080–22354737/22354738 ಇ–ಮೇಲ್:kmerc2014@gmail.com
ಸಂಖ್ಯೆ: ಕೆ.ಎಂ.ಇ.ಆರ್.ಸಿ/SCHM/RAIL/1//2025–26/1110 ದಿನಾಂಕ: 19.11.2025
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ (ಕೆ.ಎಂ.ಇ.ಆರ್.ಸಿ)ವು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಮೈಲಾರ–ತೋರಣಗಲ್ಲು ರಸ್ತೆ SH-40 ರ ಕಿ.ಮೀ. 130.20 ರಲ್ಲಿ ಯಶವಂತನಗರದ ಬಳಿ RUB ನಿರ್ಮಾಣಕ್ಕಾಗಿ "ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಕನ್ಸಲ್ಟೆನ್ಸಿ (PMC) ಸೇವೆಗಳನ್ನು ಒದಗಿಸುವ ಏಜೆನ್ಸಿಯ ಆಯ್ಕೆ"ಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ.
ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ವೆಬ್‌ಸೈಟ್ https://kppp.karnataka.gov.in) ನಿಂದ ಪಡೆಯಬಹುದು. ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ 17.12.2025. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಮೂಲಕ ಸಂಪರ್ಕಿಸಬಹುದು. (ಕೆಎಂಇಆರ್‌ಸಿ: 080–22354737/38 ಮತ್ತು KPPP ಮೊಬೈಲ್: 8046010000/8068948777)
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕೆಎಂಇಆರ್‌ಸಿ
ಡಿಐಪಿಆರ್/ಸಿಪಿ/3920/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ವೈದ್ಯಕೀಯ ಶಿಕ್ಷಣ ಸ್ವಾಯುಕ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ – 577201
www.sims-shimoga.com Ph: 08182 229933/229963
Fax: 08182 264100
ಕ್ರ.ಸಂ/ಶಿ.ವೈ.ವಿ.ಸಂ.ಶಿ/ವಿ.ಆರ್.ಡಿ.ಎಲ್/2025–26/E-office No: 1427558
ದಿನಾಂಕ: 17.11.2025
ಅಧಿಸೂಚನೆ
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ DHR / ICMR ವತಿಯಿಂದ Viral Reserch Diagnostic Laboratory (VRDL). ಮಂಜೂರಾಗಿದ್ದು, ಈ ವಿಭಾಗಕ್ಕೆ ಕೆಳಕಂಡ ಹುದ್ದೆಯನ್ನು ಗುತ್ತಿಗೆ ಆದಾರದ ಮೇಲೆ ಸಂಚಿತ ವೇತನದಡಿಯಲ್ಲಿ ನೇಮಕಾತಿ ಸಲುವಾಗಿ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.sims-shimoga.com ನಲ್ಲಿ ಪಡೆಯತಕ್ಕದ್ದು. ಅರ್ಜಿದಾರರು ಭರ್ತಿಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರವರ ಹೆಸರಿಗೆ ಪಡೆದಿರುವ ರೂ. 1000/–ಡಿ.ಡಿ.ಯೊಂದಿಗೆ (ಹಿಂದಿರುಗಿಸಲಾಗುವುದಿಲ್ಲ) ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ.– 577201 ಈ ವಿಳಾಸಕ್ಕೆ ಸಲ್ಲಿಸತಕ್ಕದು. ಲಕೋಟೆಯ ಮೇಲೆ Project Technical Assistant ಎಂದು ಕಡ್ಡಾಯವಾಗಿ ನಮೂದಿಸತಕ್ಕದು, ವೇತನ ಮತ್ತು ಕನಿಷ್ಠ ಅರ್ಹತೆಯ ವಿವರಗಳನ್ನು Annexure-1 ರಲ್ಲಿ, (Website) ನಮೂದಿಸಲಾಗಿದೆ. ಅಯ್ಕೆಯನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಮಾಡಲಾಗುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 02–12–2025 ಸಂಜೆ 5.00 ಗಂಟೆ,
Sl. 1. Details of posts: Project Technical Assistant **No. of post:** 01 Post (VRDL-EBS) **Salary (Monthly):** 28,000+HRA
ಸಹಿ/– ನಿರ್ದೇಶಕರು ಮತ್ತು ಡೀನ್,
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/89/11/1260

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ವಿ.ಲೆ.ಶಿ/ ಟೆಂಡರು /2025–26/1334
ದಿನಾಂಕ 18–11–2025
ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024–25 ನೇ ಸಾಲಿನ ಅಲ್ಪಸಂಖ್ಯಾಂತರ ಕಲ್ಯಾಣ ಇಲಾಖೆ ಶಾದಿಮಹಲ್ ಕಟ್ಟಡ ನಿರ್ಮಾಣ, 2025–26 ನೇ ಸಾಲಿನ 2059–00–101–0–28 ಜಿಲ್ಲಾ ಪಂಚಾಯಿತಿ ಲೋಕೋಪಯೋಗಿ ಕಾಮಗಾರಿಗಳು, 2025–26 ಮೀನುಗಾರಿಕೆ ಇಲಾಖೆ ಕಟ್ಟಡಗಳ ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ 2405–00–101–0–27 ಮತ್ತು 2024–25 ನೇ ಸಾಲಿನ ಮುಖ್ಯ ಮಂತ್ರಿಗಳ ವಿಶೇಷ ಅನುದಾನ ಒಟ್ಟು 04 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/BD/WORK_INDENT19560/Call-2
2.RDPR/2025-26/OW/WORK_INDENT20097/Call-2
3.RDPR/2025-26/BD/WORK_INDENT20723
4.RDPR/2025-26/BD/WORK_INDENT18298/Call-2
ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 18–11–2025 ರಿಂದ ದಿನಾಂಕ 25–11–2025 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 25–11–2025 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 26–11–2025 ರಂದು 17.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/680/ಕೆಎಸ್‌ಎಂಸಿಎ/2025–26

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–0816–2272200, ಸಹಾಯವಾಣಿ–9449872599,
ಇ–ಮೇಲ್: ka.tumakuru.cc.@gmail.com
ವೆಬ್‌ಸೈಟ್:www.tumakurucity. mrc.gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/18/2025–26
ದಿನಾಂಕ: 20.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ (ಸ್ಮಾರ್ಟ್ ಸಿಟಿ ಉಳಿಕೆ ಅನುದಾನ) ಅನುದಾನದಲ್ಲಿ **"ತುಮಕೂರು ನಗರದ ಮಹಾತ್ಮಗಾಂಧಿ ಕ್ರೀಡಾಂಗಣಕ್ಕೆ ಬೆಳಕಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು"** ಕೈಗೊಳ್ಳಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಹೊಸದಾಗಿ ಮತ್ತು ಮರು ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಲು ಹೊಸದಾಗಿ ಮತ್ತು ಮರು ಟೆಂಡರ್ ಆಹ್ವಾನಿಸಲಾಗಿದ್ದು,
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಪ್ರಿ–ಬಿಡ್ ಮಿಟಿಂಗ್ ದಿನಾಂಕ: 29–11–2025 ಬೆಳಗ್ಗೆ 11.30 ಗಂಟೆಗೆ. 2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 02–12–2025 ರಂದು ಸಾಯಂಕಾಲ 5.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 03–12–2025 ಸಾಯಂಕಾಲ 5.30 ಗಂಟೆಗೆ. 4. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 30–12–2025ರ ಬೆಳಗ್ಗೆ 10.30 ಗಂಟೆಗೆ. ದಿನಾಂಕಗಳು ಮುಂದೂಡಿಕೆ / ಯಾವುದೇ ತಿದ್ದುಪಡಿಗಳು ಇದ್ದಲ್ಲಿ ಕೇವಲ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/346/KSMCA/2025-26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1770/2025–26/ ದಿನಾಂಕ:18.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26/ ದಿನಾಂಕ: 18.11.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 2702 ಕೆರೆಗಳ ದುರಸ್ತಿ ಮತ್ತು ನಿರ್ವಹಣೆ ಯೋಜನೆಯಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಅಂದಾಜು ಮೊತ್ತ ರೂ. 128.00 ಕೋಟಿ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 19.11.2025 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 26.11.2025 ರಂದು ಬೆಳಗ್ಗೆ 11.30 ಗಂಟೆಗೆ ಅಧೀಕ್ಷಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, ಜಯನಗರ ವಾಣಿಜ್ಯ ಸಂಕೀರ್ಣ, 3ನೇ ಹಂತ, ಜಯನಗರ, ಬೆಂಗಳೂರು–560011 ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ:09.12.2025 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.12.2025ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:362/ಕೆಎಸ್‌ಎಂಸಿಎ/2025–26

ಸುಭಾಷಿತ

ಯಾವಾಗಲೂ ಇತರರಿಗೆ ಆಶ್ರಯ ಕೊಡುತ್ತಾ ಬಾಳಿದವರಿಗೆ ಆಶ್ರಿತರು ದೂರವಾದರೆ, ಆಶ್ರಯವೇ ತಪ್ಪಿದಂತಾಗುತ್ತದೆ.
–ಕುವೆಂಪು

ಸಂಪಾದಕೀಯ

ತುಮಕೂರಿಗೆ ಮೆಟ್ರೊ ವಿಸ್ತರಣೆ ಆಡಂಬರದ ಅತಾರ್ಕಿಕ ಯೋಜನೆ

'ನಮ್ಮ ಮೆಟ್ರೊ' ಜಾಲವನ್ನು ಬೆಂಗಳೂರಿನಿಂದ ತುಮಕೂರಿನವರೆಗೆ ವಿಸ್ತರಿಸುವ ಬಗ್ಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ರಾಜ್ಯ ಸರ್ಕಾರ ಮುಂದಡಿ ಇರಿಸಿರುವುದು ಹಲವು ಕಾರಣಗಳಿಂದಾಗಿ ತಪ್ಪು. ಈ ಯೋಜನೆಯು ತರ್ಕಹೀನ, ಇದು ತಜ್ಞರ ಸಲಹೆಗಳಿಗೆ ವಿರುದ್ಧ, ಸಾರಿಗೆ ವ್ಯವಸ್ಥೆಗಳ ಮೂಲತತ್ತ್ವಗಳಿಗೂ ವಿರುದ್ಧ. ಹೀಗಿರುವಾಗ, ಡಿಪಿಆರ್ ಸಿದ್ಧಪಡಿಸಲು ಮುಂದಾಗಿರುವುದು ಸಾರ್ವಜನಿಕರ ಹಣವನ್ನು ಪೋಲು ಮಾಡುವ ಕ್ರಮವಾಗುತ್ತದೆ. ಮೆಟ್ರೊ ಜಾಲವನ್ನು ಬೆಂಗಳೂರಿನಿಂದ ತುಮಕೂರಿಗೆ ವಿಸ್ತರಣೆ ಮಾಡುವ ಪ್ರಸ್ತಾವವನ್ನು ಪರಿಗಣಿಸುವ ಅಗತ್ಯವೂ ಇಲ್ಲವಾಗಿತ್ತು. ತುಮಕೂರು ಜಿಲ್ಲೆಯವರೇ ಆಗಿರುವ ರಾಜ್ಯದ ಗೃಹ ಸಚಿವ ಜಿ. ಪರಮೇಶ್ವರ ಅವರು, ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆಯನ್ನು ಕೈಗೆತ್ತಿಕೊಂಡಲ್ಲಿ ಅಗತ್ಯವಿರುವ ಅಷ್ಟೂ ಹಣವನ್ನು ಹೂಡಿಕೆ ಮಾಡಲು ಕತಾರ್‌ನ ಕಂಪನಿಯೊಂದು ಸಿದ್ಧವಾಗಿದೆ ಎಂದು ಹೇಳಿದ್ದಾರೆ. ಹಣ ಸಿಗುವುದು ಖಚಿತ ಎಂಬುದು ಆ ಹಣವನ್ನು ಅರ್ಥಹೀನವಾದ ಯೋಜನೆಯೊಂದರ ಮೇಲೆ ಸುರಿಯಲು ಪರವಾನಗಿ ಆಗುವುದಿಲ್ಲ. ವಿದೇಶದಿಂದ ಹಣ ತಂದು, ಅದನ್ನು ಬಿಳಿಯಾನೆಯೊಂದರ ಮೇಲೆ ಸುರಿದರೆ ಬಿಳಿಯಾನೆಯ ಸ್ವರೂಪವೇನೂ ಬದಲಾಗುವುದಿಲ್ಲ.

ಅಗತ್ಯವೇ ಇಲ್ಲದ ಹಾಗೂ ಸೂಕ್ತವಲ್ಲದ ಮಾರ್ಗವೊಂದರಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಾಣ ಮಾಡುವುದಕ್ಕಿಂತ ಹೆಚ್ಚು ಮಹತ್ವದ ಸಾರಿಗೆ ಅಗತ್ಯಗಳನ್ನು ಪೂರೈಸಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮೇಲಿದೆ. ಮೆಟ್ರೊ ರೈಲು ವಿನ್ಯಾಸವಾಗಿರುವುದು ನಗರವೊಂದರ ಒಳಗಿನ ಸಂಚಾರಕ್ಕಾಗಿ. ಅದು ಹತ್ತಿರದ ಹಾಗೂ ಹೆಚ್ಚು ಓಡಾಟ ನಡೆಸುವ ಮಾರ್ಗಗಳಿಗಾಗಿ ಇದೆ. ಮೆಟ್ರೊ ರೈಲು ಮಾರ್ಗದಲ್ಲಿ ನಿಲ್ದಾಣಗಳ ನಡುವಿನ ಅಂತರವು ಕಡಿಮೆ ಇರುತ್ತದೆ. ಇಂಥದ್ದೊಂದು ಸಾರಿಗೆ ವ್ಯವಸ್ಥೆಯನ್ನು 70 ಕಿ.ಮೀ. ದೂರವಿರುವ ಇನ್ನೊಂದು ನಗರಕ್ಕೆ ಸಂಪರ್ಕ ಕಲ್ಪಿಸಲು ವಿಸ್ತರಿಸುವುದು ಇದರ ಮೂಲ ಉದ್ದೇಶಕ್ಕೆ ವಿರುದ್ಧ. ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಹೇಳಿರುವ ಪ್ರಕಾರ ಮಾದಾವರ–ನೆಲಮಂಗಲದ ನಡುವೆ ಪ್ರತಿ 1ರಿಂದ 2 ಕಿ.ಮೀ.ಗೆ ಒಂದು ನಿಲ್ದಾಣ ಇರಲಿದೆ. ನೆಲಮಂಗಲದಿಂದ ತುಮಕೂರಿನ ನಡುವಿನ ಮಾರ್ಗದಲ್ಲಿ 4ರಿಂದ 5 ಕಿ.ಮೀ. ನಡುವೆ ಒಂದು ನಿಲ್ದಾಣ ಇದ್ದರೆ ಸಾಕು ಎಂದು ಅದು ಅಂದಾಜಿಸಿದೆ. ಹೀಗೆ ಮಾಡುವುದರಿಂದ ಬೆಂಗಳೂರು ನಗರದ ಅಗತ್ಯಗಳಿಗೂ ಸ್ಪಂದಿಸಿದಂತೆ ಆಗುವುದಿಲ್ಲ, ಎರಡು ನಗರಗಳ ನಡುವೆ ನಿತ್ಯ ಓಡಾಡುವವರಿಗೂ ಅನುಕೂಲ ಆಗುವುದಿಲ್ಲ. ತುಮಕೂರಿನಿಂದ ಬೆಂಗಳೂರಿಗೆ ಮೆಟ್ರೊ ಮೂಲಕ ಸಂಚರಿಸಲು ಎರಡು ತಾಸು ಬೇಕಾಗಬಹುದು. ಈ ರೀತಿ ಆದರೆ, ರಸ್ತೆ ಮಾರ್ಗವಾಗಿ ಪ್ರಯಾಣ ಬೆಳೆಸುವುದೇ ಹೆಚ್ಚು ಅನುಕೂಲಕರ ಆಗುತ್ತದೆ. ವೇಗವಾಗಿ ಪ್ರಯಾಣಿಸಲು ಆಗದಿದ್ದರೆ, ಇಷ್ಟು ದೂರದ ಪ್ರಯಾಣಕ್ಕೆ ಮೆಟ್ರೊ ರೈಲಿನಲ್ಲಿ ಆರಾಮದಾಯಕ ಆಸನಗಳ ವ್ಯವಸ್ಥೆ ಇಲ್ಲದಿದ್ದರೆ, ಎರಡು ನಗರಗಳ ನಡುವಿನ ಮೆಟ್ರೊ ರೈಲು ಸಂಪರ್ಕವು ತನ್ನದೇ ದ್ವಂದ್ವಗಳ ಪರಿಣಾಮವಾಗಿ ನಿರರ್ಥಕವಾಗುತ್ತದೆ. ವಿಶ್ವದ ಇತರೆಡೆಗಳಲ್ಲಿ ಮೆಟ್ರೊ ರೈಲುಗಳು ಎರಡು ನಗರಗಳ ನಡುವೆ ಸಂಪರ್ಕ ಬೆಳೆಸಲು ಬಳಕೆಯಾಗುತ್ತಿಲ್ಲ; ಆ ಉದ್ದೇಶಕ್ಕೆ ಉಪನಗರ ರೈಲುಗಳನ್ನು ಬಳಸಲಾಗುತ್ತದೆ.

ಬೆಂಗಳೂರಿನಿಂದ ತುಮಕೂರಿನವರೆಗೆ ಮೆಟ್ರೊ ರೈಲು ಮಾರ್ಗ ವಿಸ್ತರಿಸುವ ಯೋಜನೆ ಅತಾರ್ಕಿಕ ಹಾಗೂ ಮೆಟ್ರೊ ರೈಲಿನ ಪರಿಕಲ್ಪನೆಗೆ ವಿರುದ್ಧವಾದುದು.

ನೈರುತ್ಯ ರೈಲ್ವೆಯು ಬೆಂಗಳೂರು ಮತ್ತು ತುಮಕೂರಿನ ನಡುವೆ ನಾಲ್ಕು ಪಥಗಳ ರೈಲು ಹಳಿ ನಿರ್ಮಾಣಕ್ಕೆ ₹3,500 ಕೋಟಿ ಹೂಡಿಕೆ ಮಾಡುತ್ತಿದೆ. ಇದು ಮೆಟ್ರೊ ಮಾರ್ಗವನ್ನು ತುಮಕೂರಿಗೆ ವಿಸ್ತರಿಸಲು ಅಗತ್ಯವಿರುವ ಅಂದಾಜು ವೆಚ್ಚಕ್ಕೆ ಹೋಲಿಸಿದರೆ ಬಹಳ ಕಡಿಮೆ. ತುಮಕೂರಿಗೆ ಉಪನಗರ ರೈಲು ಮಾರ್ಗ ನಿರ್ಮಿಸುವ ಪ್ರಸ್ತಾವನೆಯನ್ನು ಕೆ-ರೈಡ್ ಹೊಂದಿದೆ. ಮೇಲ್ದರ್ಜೆಗೆ ಬರಲಿರುವ ರೈಲ್ವೆ ಕಾರಿಡಾರ್‌ಗೆ ಪರ್ಯಾಯವಾಗಿ ಮೆಟ್ರೊ ರೈಲು ಮಾರ್ಗವನ್ನು ನಿರ್ಮಾಣ ಮಾಡುವುದು 'ವ್ಯರ್ಥ ವೆಚ್ಚ'ಕ್ಕೆ ಹೊಸತೊಂದು ವ್ಯಾಖ್ಯಾನದಂತೆ ಕಾಣಿಸುತ್ತಿದೆ. ಬೆಂಗಳೂರಿನ ವಾಯವ್ಯ ಹೆಬ್ಬಾಗಿಲನ್ನು ಸಂಪರ್ಕಿಸುವ ಬಹುಮಾದರಿಗಳ ಸಂಪರ್ಕ ವ್ಯವಸ್ಥೆ ಈಗ ತುಮಕೂರಿಗೆ ಬೇಕಾಗಿದೆ. ತುಮಕೂರಿನ ಕಡೆಯಿಂದ ಉಪನಗರ ರೈಲು ಅಥವಾ ಮುಖ್ಯ ರೈಲಿನಲ್ಲಿ ಬಂದಿಳಿಯುವವರು ಯಾವ ತೊಂದರೆಯೂ ಇಲ್ಲದೆ ಬೆಂಗಳೂರಿನ ಬಿಎಂಟಿಸಿ ಅಥವಾ ಮೆಟ್ರೊ ರೈಲು ಮಾರ್ಗವನ್ನು ಬಳಸಲು ಸಾಧ್ಯವಾಗುವಂತೆ ಆಗಬೇಕು. ತುಮಕೂರಿನ ಕಡೆಯಿಂದ ಬರುವ ರೈಲುಗಳು ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣ, ಕೆಎಸ್‌ಆರ್ ರೈಲು ನಿಲ್ದಾಣದವರೆಗೆ ಯಾವ ಅಡ್ಡಿಗಳೂ ಇಲ್ಲದೆ ಬರುತ್ತಿವೆ. ಅಂದರೆ ₹20,000 ಕೋಟಿ ಅಂದಾಜು ವೆಚ್ಚದ ಮೆಟ್ರೊ ರೈಲು ಸಂಪರ್ಕ ಇಲ್ಲದಿದ್ದರೂ, ತುಮಕೂರಿನ ಕಡೆಯಿಂದ ಬರುವವರು ಬೆಂಗಳೂರಿನ ಹೃದಯಭಾಗವನ್ನು ಆರಾಮವಾಗಿ ತಲುಪಬಲ್ಲರು. ತುಮಕೂರಿಗೆ ಮೆಟ್ರೊ ಸಂಪರ್ಕ ಕಲ್ಪಿಸುವುದು ಸಾರಿಗೆ ವ್ಯವಸ್ಥೆ ಸುಗಮವಾಗಲಿ ಎಂಬ ಉದ್ದೇಶದ ಯೋಜನೆ ಅಲ್ಲ. ಅದು ರಾಜಕೀಯಕ್ಕೆ ಅನುಕೂಲಕರವಾದ, ಹಣಕಾಸಿನ ದೃಷ್ಟಿಯಿಂದ ಬೇಜವಾಬ್ದಾರಿಯ, ತಾಂತ್ರಿಕವಾಗಿ ಕಾರ್ಯಸಾಧು ಅಲ್ಲದ, ಆಡಂಬರದ ಯೋಜನೆಯಂತೆ ಇದೆ. ಡಿಪಿಆರ್ ಉದ್ದೇಶವನ್ನು ಸರ್ಕಾರ ಕೈಬಿಡಬೇಕು. ಸಾರ್ವಜನಿಕರ ಹಿತಾಸಕ್ತಿಯನ್ನು ನಿಜವಾಗಿಯೂ ಕಾಯುವ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಗಮನ ನೀಡಬೇಕು.

ಜಾಲತಾಣ

ಮೆಕಾಲೆ ಶಿಕ್ಷಣ

ಮೆಕಾಲೆ ಶಿಕ್ಷಣ ಅಂದು ಅಪಾಯಕಾರಿ ಇದ್ದಿರಬಹುದು. ಅದು ಬ್ರಿಟಿಷರ ರಾಜಕೀಯ ಏಳಿಗೆಯ ಭಾಗವೂ ಆಗಿದ್ದಿರ ಬಹುದು. ಆದರೆ ಇಂದು, ಜಾಗತೀಕರಣದ ಈ ದಿನಗಳಲ್ಲಿ ವಿದ್ಯಾವಂತರಿಗೆ ಉದ್ಯೋಗದ ಅವಕಾಶಗಳು ಹೆಚ್ಚು ಹೆಚ್ಚು ತೆರೆದುಕೊಳ್ಳಲು ಮೆಕಾಲೆ ಶಿಕ್ಷಣ ಪೂರಕ.

ಗೋವಿಂದರಾಜ ಬೈಚಗುಪ್ಪೆ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜ್ಯದಲ್ಲಿ ಮೆಕ್ಕೆಜೋಳ ಬೆಳೆದ ರೈತರ ಪಾಡು ಕೇಳುವವರಿಲ್ಲದಂತಾಗಿದೆ. ರೈತ ವಿರೋಧಿಯಾದ ಕಾಂಗ್ರೆಸ್ ಸರ್ಕಾರ, ಅನ್ನದಾತರ ಸಂಕಷ್ಟಕ್ಕೆ ಸ್ಪಂದಿಸದೆ ತನ್ನದೇ ಕುರ್ಚಿ ರಾಜಕೀಯದಲ್ಲಿ ಮಗ್ನವಾಗಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 21-11-2000

- **ಈ ವರ್ಷ 40 ಶನಿವಾರ ದಿನಪೂರ್ತಿ ಶಾಲೆ**

ಬೆಂಗಳೂರು, ನ. 20– ಜನಗಣತಿ ಮತ್ತು ಚುನಾವಣಾ ಕಾರ್ಯದಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಈ ವರ್ಷ 40 ಶನಿವಾರಗಳಲ್ಲಿ ಪೂರ್ಣ ದಿನ ಶಾಲೆ ನಡೆಸಲಾಗುತ್ತದೆ ಎಂದು ಸಾರಿಗೆ ಸಚಿವ ಸಿ.ಆರ್. ಸಗೀರ್ ಅಹ್ಮದ್ ವಿಧಾನಸಭೆಯಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ಅವರಿಗೆ ಶಿಕ್ಷಣ ಸಚಿವರ ಪರವಾಗಿ ಉತ್ತರ ನೀಡುತ್ತಾ, ಈ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಜನಗಣತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಕಾರ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಈ ನಿರ್ಧಾರ ಮಾಡಲಾಗಿದೆ ಎಂದರು.

- **ಸೆನೆಟ್ ರದ್ದು, ಕುಲಪತಿ ಅಧಿಕಾರ ಮೊಟಕು**

ಬೆಂಗಳೂರು, ನ. 20– ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಸೆನೆಟ್ ಅನ್ನು ರದ್ದುಪಡಿಸುವುದು ಮತ್ತು ಕುಲಪತಿಗಳ ನೇಮಕಕ್ಕೆ ಸಮಿತಿ ರಚಿಸುವ ರಾಜ್ಯಪಾಲರ ಅಧಿಕಾರ ಕಿತ್ತುಕೊಳ್ಳುವುದು ಮುಂತಾದ ಪ್ರಮುಖ ಬದಲಾವಣೆಗಳಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮಸೂದೆಯನ್ನು ಸಚಿವ ಸಂಪುಟ ಅನುಮೋದಿಸಿದ್ದು, ಇದೇ ಅಧಿವೇಶನದಲ್ಲಿ ಅದು ಮಂಡನೆಯಾಗಲಿದೆ.

75 ವರ್ಷಗಳ ಹಿಂದೆ

ಮಂಗಳವಾರ, 21-11-1950

- **ರಸ್ತೆ ಸಾರಿಗೆ ರಾಷ್ಟ್ರೀಕರಣ ತತ್ವಕ್ಕೆ ವಿರೋಧ ಬೇಡ**

ನವದೆಹಲಿ, ನ. 20– ಪಾರ್ಲಿಮೆಂಟಿನ ಮುಂದಿರುವ ರಸ್ತೆ ಸಾರಿಗೆ ಸಂಸ್ಥೆಗಳ ಮಸೂದೆಯಲ್ಲಿ ಅಡಕವಾಗಿರುವ ರಾಷ್ಟ್ರೀಕರಣದ ಮೂಲ ತತ್ವಗಳಿಗೆ ಅಪಾಯ ತಂದೊಡ್ಡುವಂತಹ ಸಲಹೆಗಳನ್ನು ಮುಂದಿಡುವ ಬಯಕೆಯಿದ್ದರೆ ಅದನ್ನು ತ್ಯಜಿಸಿ ಎಂಬುದಾಗಿ, ಭಾರತ ಸರ್ಕಾರದ ಸಾರಿಗೆ ಮತ್ತು ರೈಲ್ವೆ ಖಾತೆ ಸಚಿವ ಗೋಪಾಲಸ್ವಾಮಿ ಅಯ್ಯಂಗಾರರು ಇಂದು ಖಾಸಗಿ ಬಸ್ ಮಾಲೀಕರಿಗೆ ಸೂಚಿಸಿದರು.

ಫಲಿತಾಂಶ ಪ್ರಾತಿನಿಧಿಕವಲ್ಲ...

ವಿಶ್ಲೇಷಣೆ

ಯೋಗೇಂದ್ರ ಯಾದವ್

ಬಿಹಾರ ವಿಧಾನಸಭೆ ಚುನಾವಣೆಯ ಫಲಿತಾಂಶವನ್ನು ನೀವು ಹೇಗೆ ಗ್ರಹಿಸಬೇಕು ಎಂದು ಮಾಧ್ಯಮ ಬಯಸುತ್ತದೆ ಎಂಬುದು ಇಲ್ಲಿದೆ. ಜೊತೆಗೆ, ಮುಂದಿನ ದಿನಗಳಲ್ಲಿ ಸಂಗತಿಗಳು ಹೇಗೆ ಬಿಚ್ಚಿಕೊಳ್ಳಲಿವೆ ಎಂಬುದರ ಸೂಚನೆಯೂ ಇದೆ. ಈ ಪ್ರಚಂಡ ಗೆಲುವು ರಾಜ್ಯವೊಂದರ ಚುನಾವಣೆಯ ಫಲಿತಾಂಶವಷ್ಟೇ ಅಲ್ಲ, ಬಿಜೆಪಿಯ ದೇಶವ್ಯಾಪಿ ಚುನಾವಣಾ ಜೈತ್ರಯಾತ್ರೆಯ ಪುನರಾರಂಭವೂ ಹೌದು. ಈ ಸಂಕಥನಕ್ಕೆ ಇನ್ನೊಂದು ಆಯಾಮವೂ ಇದೆ– ಚುನಾವಣೆ ನಡೆಸುವುದರಲ್ಲಿ ಯಾವ ಅರ್ಥವೂ ಇಲ್ಲ; ವಂಚನೆಯಿಂದ ಕೂಡಿದ ಚುನಾವಣೆಯಲ್ಲಿ ಭಾಗವಹಿಸಿ ಅದನ್ನು ನ್ಯಾಯಸಮ್ಮತಗೊಳಿಸಿದರೂ ಈ ನಿರಂಕುಶ ಅಧಿಕಾರದ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುವುದು ಸಾಧ್ಯವಿಲ್ಲ ಎಂಬುದನ್ನು ಬಿಹಾರ ಸಾಬೀತುಪಡಿಸಿದೆ.

ಈ ಎರಡೂ ಪ್ರತಿಪಾದನೆಗಳಲ್ಲಿ ಸತ್ಯಾಂಶ ಇದೆ. ದೊಡ್ಡ ಪ್ರಮಾಣದಲ್ಲಿ ಮಿಥ್ಯೆಯೂ ಇದೆ. ಈ ಎರಡೂ ಪ್ರತಿಪಾದನೆಗಳು ಈ ಚುನಾವಣೆಯ ರಾಜಕೀಯ ವಾಸ್ತವದ ದೂರದ ಗ್ರಹಿಕೆಯ ಆಧಾರದಲ್ಲಿವೆ; ಇದು ರಾಜಕೀಯ ಸಾಧ್ಯತೆಗಳು ಮತ್ತು ಜನರ ಕುರಿತ ಸೀಮಿತ ಗ್ರಹಿಕೆಯನ್ನು ಅವಲಂಬಿಸಿದೆ. 2024ರ ನಂತರದ ರಾಜಕಾರಣಕ್ಕೆ ಬಿಹಾರದ ಫಲಿತಾಂಶವು ಒಂದು ತಿರುವನ್ನು ಕೊಟ್ಟಿದೆ ಎಂಬ ಯೋಚನೆಯು ಮೂರು ಕಲ್ಪನೆಗಳ ಆಧಾರದಲ್ಲಿದೆ: ಇದು ಅನಿರೀಕ್ಷಿತ, ಇದು ಈಗಾಗಲೇ ಇದ್ದ ಪ್ರವೃತ್ತಿಯನ್ನು ಮುರಿದು ಹಾಕಿದೆ ಮತ್ತು ಇದು ಪ್ರಾತಿನಿಧಿಕ. ಆದರೆ, ಈ ಎಲ್ಲವೂ ಪ್ರಶ್ನಾರ್ಹವೇ ಆಗಿವೆ.

ಮೊದಲನೆಯದಾಗಿ, ಬಿಹಾರದ ರಾಜಕೀಯ ಪಥವು ಇಡೀ ಭಾರತವನ್ನು ಬಿಡಿ, ಹಿಂದಿ ಭಾಷಿಕ ಪ್ರದೇಶವನ್ನು ಕೂಡ ಪ್ರತಿನಿಧಿಸುವುದಿಲ್ಲ. ಉತ್ತರ ಭಾರತದಲ್ಲಿ ಬಿಜೆಪಿ ಸಮಾನ ಪಾಲುದಾರ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಳ್ಳಲೇಬೇಕಾದ ಒಂದೇ ರಾಜ್ಯ ಬಿಹಾರ; ದೂರದ ಪಶ್ಚಿಮ ಬಂಗಾಳ ಬಿಡಿ, ನೆರೆಯ ಜಾರ್ಖಂಡ್‌ನಲ್ಲಿ ಕೂಡ ಬಿಹಾರ ರಾಜಕಾರಣದ ಪ್ರವೃತ್ತಿ ಮತ್ತು ಒಲವುಗಳು ಪ್ರತಿಧ್ವನಿಸುವುದಿಲ್ಲ. ಎರಡನೆಯದಾಗಿ, ಕಳೆದ ವರ್ಷ ನಡೆದ ಲೋಕಸಭೆ ಚುನಾವಣೆ ಫಲಿತಾಂಶವನ್ನು ಬಿಹಾರ ಫಲಿತಾಂಶವು ತಿರುವುಮುರುವಾಗಿಸಿದೆ ಎಂಬ ಭಾವನೆ ಇದೆ. 174 ಕ್ಷೇತ್ರಗಳಲ್ಲಿ ಮುನ್ನಡೆ ಪಡೆಯುವ ಮೂಲಕ ಬಿಹಾರದಲ್ಲಿ ಎನ್‌ಡಿಎ ತನ್ನ ಪ್ರಾಬಲ್ಯವನ್ನು ಮುಂದುವರಿಸಿತ್ತು ಮತ್ತು ಮಹಾಮೈತ್ರಿಕೂಟಕ್ಕಿಂತ ಶೇ 8ರಷ್ಟು ಹೆಚ್ಚು ಮತಗಳನ್ನು ಪಡೆದಿತ್ತು. ಈಗ 202 ಕ್ಷೇತ್ರಗಳಲ್ಲಿ ಗೆಲುವು ಸಿಕ್ಕಿದೆ ಎಂಬುದನ್ನು ನಂಬಲಾಗುತ್ತಿಲ್ಲ ಎಂಬುದು ನಿಜ. ಆದರೆ, ಮಹಾಮೈತ್ರಿಕೂಟಕ್ಕಿಂತ ಶೇ 1.2ರಷ್ಟು ಹೆಚ್ಚು ಮತಗಳನ್ನು ಪಡೆದ ಕಾರಣ ಇಷ್ಟೊಂದು ಕ್ಷೇತ್ರಗಳಲ್ಲಿ ಗೆಲುವು ಸಾಧ್ಯವಾಗಿದೆ. ಲೋಕಸಭಾ ಚುನಾವಣೆಯ ಬಳಿಕ ಪ್ರಮುಖ ಏರಿಳಿತಗಳನ್ನು ಕಂಡ ಹರಿಯಾಣ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳ ಸಾಲಿನಲ್ಲಿಯೂ ಬಿಹಾರವನ್ನು ಸೇರಿಸಲು ಆಗದು.

ಕೊನೆಯದಾಗಿ, ಬಿಹಾರ ರಾಜಕಾರಣದ ಬೇರುಗಳನ್ನು ಅರ್ಥ ಮಾಡಿಕೊಂಡವರಿಗೆ ಫಲಿತಾಂಶದಲ್ಲಿ ಅನಿರೀಕ್ಷಿತವಾದದ್ದು ಏನೂ ಇಲ್ಲ. 2005ರ ಬಳಿಕ ನಡೆದ ಎಲ್ಲ ಚುನಾವಣೆಗಳಲ್ಲಿಯೂ ಆರ್‌ಜೆಡಿ, ಜೆಡಿಯು ಮತ್ತು ಬಿಜೆಪಿ ಪೈಕಿ ಎರಡು ಪಕ್ಷಗಳ ಮೈತ್ರಿಕೂಟ ನಿರಾಯಾಸ ಗೆಲುವು ಪಡೆದಿದೆ– 2020ರ ವಿಚಿತ್ರ ಚುನಾವಣೆ ಮಾತ್ರ ಇದಕ್ಕೆ ಅಪವಾದ. ಮಹಾಮೈತ್ರಿಕೂಟಕ್ಕೆ ಹೋಲಿಸಿದರೆ ಎನ್‌ಡಿಎ ಮೈತ್ರಿಕೂಟವು ಗಣನೀಯವಾಗಿ ದೊಡ್ಡದು. ಜೊತೆಗೆ, ಎನ್‌ಡಿಎಯ ಸಾಮಾಜಿಕ ಸಮೀಕರಣವು ಮಹಾಮೈತ್ರಿಕೂಟಕ್ಕೆ ಹೋಲಿಸಿದರೆ ಹೆಚ್ಚು ವಿಸ್ತಾರವಾದುದು. ಮಹಾಮೈತ್ರಿಕೂಟದ ಮೂಲ ಮತಬ್ಯಾಂಕ್ (ಮುಸ್ಲಿಂ + ಯಾದವ) ಶೇ 32ರಷ್ಟಿದ್ದರೆ, ಎನ್‌ಡಿಎಯ ಮೂಲ ಮತಬ್ಯಾಂಕ್ (ಕುರ್ಮಿ + ಕುಶ್ವಾಹ + ಬನಿಯಾ/ತೇಲಿ + ಪಾಸ್ವಾನ್) ಶೇ 28ರಷ್ಟಿದೆ. ಆದರೆ, ಮಹಾಮೈತ್ರಿಕೂಟದ ಪೂರಕ ಬೆಂಬಲ ನೆಲೆಯು (ಮಲ್ಲ + ರವಿದಾಸಿ + ತಂತಿ/ಪಾನ್) ಶೇ 10ರಷ್ಟಿದೆ ಮತ್ತು ಪೂರ್ಣ ಬದ್ಧತೆಯನ್ನು ನಿರೀಕ್ಷಿಸುವಂತಿಲ್ಲ. ಆದರೆ, ಆರ್ಥಿಕವಾಗಿ ಹಿಂದುಳಿದ ಹಿಂದೂ ಜಾತಿಗಳು ಎನ್‌ಡಿಎ ಬೆಂಬಲಕ್ಕಿವೆ, ಶೇ 20ರಷ್ಟಿರುವ ಇವು ಹೆಚ್ಚು ಖಚಿತ.

> ಬಿಹಾರದಲ್ಲಿನ ಚುನಾವಣೆ ವಂಚನೆಯಿಂದ ಕೂಡಿತ್ತು ಎಂದು ಹೇಳುವುದಕ್ಕೆ ಖಚಿತ ಸಾಕ್ಷ್ಯಗಳಿಲ್ಲವಾದರೂ, ಅದು ನ್ಯಾಯಸಮ್ಮತ ಆಗಿರಲಿಲ್ಲ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ದೇಶದಲ್ಲಿನ ಮುಂದಿನ ಚುನಾವಣೆಗಳ ದಿಕ್ಕನ್ನು ಗುರ್ತಿಸಲು ಬಿಹಾರದ ಫಲಿತಾಂಶವು ಮಾನದಂಡವಲ್ಲ ಎನ್ನುವುದಂತೂ ಸ್ಪಷ್ಟ.

ಹಾಗಾಗಿ, ಪರಿಸ್ಥಿತಿಯು ಎನ್‌ಡಿಎಗೆ ಆರಂಭದಿಂದಲೇ ಅನುಕೂಲಕರವಾಗಿತ್ತು. ಸಾಮಾಜಿಕ ಗುಂಪುಗಳ ನಿಷ್ಠೆಯನ್ನು ಬದಲಿಸುವ ಮೂಲಕ ಅಥವಾ ಜಾತಿಯನ್ನು ಮೀರಿದ ಪರಿಣಾಮಕಾರಿ ಪ್ರಚಾರ ಅಭಿಯಾನದ ಮೂಲಕ ಈ ಸಮೀಕರಣವನ್ನು ಬದಲಾಯಿಸುವ ಹೊಣೆ ಮಹಾಮೈತ್ರಿಕೂಟದ್ದೇ ಆಗಿತ್ತು. ಕೆಲವು ಪ್ರಯತ್ನಗಳನ್ನು ಮಾಡಲಾಗಿದೆ– ಆರ್ಥಿಕವಾಗಿ ಹಿಂದುಳಿದ ಜಾತಿಗಳತ್ತ ಗಮನ ಹರಿಸಲಾಗಿದೆ ಮತ್ತು ಸರ್ಕಾರಿ ಉದ್ಯೋಗಗಳ ಭರವಸೆ ಕೊಡಲಾಗಿದೆ– ಆದರೆ ಇದು ತೀರಾ ವಿಳಂಬವಾಯಿತು ಮತ್ತು ಅತ್ಯಲ್ಪವಾಗಿತ್ತು. ಕೆಲವು ಚುನಾವಣೆಗಳಿಂದ ಎನ್‌ಡಿಎ ಕಷ್ಟಪಟ್ಟು ಬೆಳೆಸಿದ್ದ ಮಹಿಳಾ ಮತದಾರರ ನಿಷ್ಠೆಯು ಕೊನೆಯ ಕ್ಷಣದಲ್ಲಿ ಕೊಟ್ಟ ₹10 ಸಾವಿರದ ಲಂಚದಿಂದಾಗಿ ಇನ್ನಷ್ಟು ಗಟ್ಟಿಗೊಂಡಿತು. ಈ ಮೂಲಭೂತ ಅಂಶಗಳ ಜೊತೆಗೆ, ಸರ್ಕಾರದಿಂದ ಹೆಚ್ಚಿನ ನಿರೀಕ್ಷೆ ಇಲ್ಲದಿದ್ದುದು, ನಿತೀಶ್ ಕುಮಾರ್ ವಿರುದ್ಧ ಹೇಳಿಕೊಳ್ಳುವಂತಹ ಆಡಳಿತ ವಿರೋಧಿ ಅಲೆ ಇಲ್ಲದಿದ್ದುದು ಬಿಹಾರ ಫಲಿತಾಂಶದ ಸ್ವರೂಪವನ್ನು ವಿವರಿಸುತ್ತದೆ. ಆರ್‌ಜೆಡಿ ಮತ್ತು ಕಾಂಗ್ರೆಸ್ ಮಾಡಿದ್ದೆಲ್ಲವೂ ವಿಫಲವಾಯಿತು ಎಂದೋ, ಬಿಜೆಪಿಯ ಎಲ್ಲ ನಡೆಯೂ ಅತ್ಯದ್ಭುತವಾಗಿತ್ತು ಎಂದೋ ನಾವು ಭಾವಿಸುವ ಅಗತ್ಯ ಇಲ್ಲ. ಫಲಿತಾಂಶದ ಬಳಿಕ ಮಾಧ್ಯಮವು ಬಿತ್ತರಿಸಿದ ಆಶ್ಚರ್ಯ ಮತ್ತು ಆಘಾತದ ಭಾವ ಕೂಡ ಕೃತಕ ಸೃಷ್ಟಿಯೇ ಇರಬಹುದು.

ಹಾಗೆಯೇ, ಈಗಿನ ಆಡಳಿತ ವ್ಯವಸ್ಥೆಯ ಹಲವು ಟೀಕಾಕಾರರು ವ್ಯಕ್ತಪಡಿಸಿದ ಆಘಾತವು ಕೂಡ ಅತಿರೇಕದ್ದೇ ಆಗಿದೆ. ದೂರದಲ್ಲಿ ನಿಂತು ನೋಡಿದವರಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳ ಪ್ರತಿಧ್ವನಿಯನ್ನು ಆಲಿಸಿದವರಲ್ಲಿ ಮಹಾಮೈತ್ರಿಕೂಟವು ಮುನ್ನಡೆಯಲ್ಲಿದೆ ಎಂಬ ತಪ್ಪು ಭಾವನೆ ಮೂಡಿರಬಹುದು. ಅಂತಿಮ ಫಲಿತಾಂಶವು ಕೊಟ್ಟ ತೀವ್ರ ಆಘಾತವು ಸಂದೇಹದ ಕಿಡಿ ಹಚ್ಚಿತು. ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಕೊರತೆಯು ಫಲಿತಾಂಶವನ್ನು ಆಡಳಿತಾರೂಢರಿಗೆ ಬೇಕಾದ ರೀತಿಯಲ್ಲಿ ರೂಪಿಸಲಾಗಿದೆ ಎಂಬ ಸಂದೇಹದ ಜ್ವಾಲೆ ಏಳುವಂತೆ ಮಾಡಿತು. ಹಾಗಾಗಿಯೇ, ಕೆಲವು ವಲಯಗಳಲ್ಲಿ ಭವಿಷ್ಯದಲ್ಲಿ ಚುನಾವಣೆ ಬಹಿಷ್ಕರಿಸಬೇಕು ಎಂಬ ಕರೆಗೆ ಕಾರಣವಾಯಿತು.

ನ್ಯಾಯಯುತವಲ್ಲದ ಮತ್ತು ವಂಚನೆಯಿಂದ ಕೂಡಿದ ಚುನಾವಣೆಯ ನಡುವೆ ವ್ಯತ್ಯಾಸವಿದೆ ಎಂಬುದನ್ನು ಗುರುತಿಸುವುದು ಬಹಳ ಮುಖ್ಯ. ಭಾರತದ ಚುನಾವಣೆಗಳು ಈಗ ನ್ಯಾಯಯುತವಲ್ಲ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಚುನಾವಣಾ ಪೈಪೋಟಿಯಲ್ಲಿ ಸ್ಪರ್ಧೆಗೆ ಸಮಾನ ನೆಲೆ ಎಂಬುದು ಇಲ್ಲವೇ ಇಲ್ಲ. ವ್ಯವಸ್ಥೆಯ ಈ ಪೂರ್ವಗ್ರಹಕ್ಕೆ ಬಿಹಾರ ಚುನಾವಣೆಯಲ್ಲಿ ಬೇಕಾದಷ್ಟು ಪುರಾವೆಗಳು ಸಿಕ್ಕಿವೆ. ಅನುಮಾನಾಸ್ಪದವಾದ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯಲ್ಲಿ 68 ಲಕ್ಷ ಮತದಾರರ ಹೆಸರು ಅಳಿಸಿ ಹಾಕಿ, 24 ಲಕ್ಷ ಹೊಸ ಮತದಾರರ ಹೆಸರು ಸೇರ್ಪಡೆ ಮಾಡಿರುವುದು ಇದಕ್ಕೆ ಒಂದು ಉದಾಹರಣೆ. ಕೋಮು ಧ್ರುವೀಕರಣದ ಪ್ರಚಾರ, ಅಕ್ರಮ ವಲಸಿಗರ ಕುರಿತು ವಿವಾದಾತ್ಮಕ ಆರೋಪಗಳು, ಚುನಾವಣಾ ಪ್ರಚಾರ ಅವಧಿಯಲ್ಲಿಯೂ ₹10 ಸಾವಿರ ಲಂಚ ವಿತರಣೆ, ಇತರ ರಾಜ್ಯಗಳಿಂದ ಬಿಜೆಪಿ ಮತದಾರರನ್ನು ಕರೆತರಲು ವಿಶೇಷ ರೈಲುಗಳು ಮುಂತಾದವು ನಡೆದಾಗ ಆಯೋಗದ ಮೌನಸಮ್ಮತಿಯು ಮೇಲಿನ ವಿಚಾರದಲ್ಲಿ ಯಾವ ಅನುಮಾನವೂ ಇಲ್ಲದಂತೆ ಮಾಡುತ್ತದೆ. ಆಡಳಿತ ಪಕ್ಷವು ಸಮೂಹ ಮಾಧ್ಯಮದ ಮೇಲೆ ಹೊಂದಿರುವ ನಿಯಂತ್ರಣ ಮತ್ತು ಚುನಾವಣೆ ಸಂದರ್ಭದಲ್ಲಿ ಆ ಪಕ್ಷಕ್ಕೆ ಸಿಗುವ ಅಪರಿಮಿತ ಹಣ, ಮುಕ್ತ ಮತ್ತು ನ್ಯಾಯಯುತ ಚುನಾವಣೆ ಇನ್ನು ಸಾಧ್ಯವೇ ಇಲ್ಲವೇನೋ ಎಂಬ ಭಾವ ಮೂಡಿಸುತ್ತದೆ. ವಿರೋಧ ಪಕ್ಷಗಳು ಗೆಲ್ಲುವ ಸಾಧ್ಯತೆ ಇನ್ನೂ ಶೂನ್ಯಕ್ಕೆ ಇಳಿದಿಲ್ಲ. ಆದರೆ, ವಿರೋಧ ಪಕ್ಷಗಳ ಮುಂದೆ ಇರುವ ಸವಾಲು ಬೃಹತ್ತಾದುದೇ ಆಗಿದೆ.

ಚುನಾವಣಾ ವಂಚನೆಯು ಇವೆಲ್ಲಕ್ಕಿಂತ ಭಿನ್ನವಾದುದು. ಮತದಾನ ಮತ್ತು ಮತ ಎಣಿಕೆ ಪ್ರಕ್ರಿಯೆಯನ್ನು ತಿರುಚುವುದು ಚುನಾವಣಾ ವಂಚನೆ. ಹಾಗಾದಾಗ, ಫಲಿತಾಂಶವು ಮತದಾರರ ಆಯ್ಕೆಯನ್ನು ಪ್ರತಿಫಲಿಸುವುದಿಲ್ಲ. ಈ ವಿಚಾರದಲ್ಲಿ ಬಿಹಾರದ ಮತದಾನದ ಕುರಿತು ಹಲವು ಅನುಮಾನಗಳು (ಮತದಾನದ ಪ್ರಮಾಣ ಪ್ರಕಟಣೆಯಲ್ಲಿ ವಿಳಂಬ, ಅಂಚೆ ಮತ ಮತ್ತು ಇವಿಎಂ ಮತಗಳ ನಡುವೆ ಭಾರಿ ವ್ಯತ್ಯಾಸ, ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರು ತೆಗೆದು ಹಾಕಿರುವುದು, 'ಇತರರಿಗೆ' ಮತಗಳಲ್ಲಿ ಭಾರಿ ಇಳಿಕೆ) ವ್ಯಕ್ತವಾಗಿವೆ. ಇಂತಹ ಗಂಭೀರ ಆರೋಪ ಮಾಡಲು ಬೇಕಿರುವ ಉನ್ನತ ಗುಣಮಟ್ಟದ ದೃಢವಾದ ಯಾವುದೇ ಸಾಕ್ಷ್ಯ ನಮ್ಮಲ್ಲಿ ಇಲ್ಲ. ಮೇಲೆ ವಿವರಿಸಿದ ಅಂಶಗಳನ್ನು ನೋಡಿದರೆ, ಚುನಾವಣಾ ವಂಚನೆ ನಡೆದಿರುವುದಕ್ಕೆ ಸಾಕ್ಷ್ಯ ಹುಡುಕಲು ಬಿಹಾರ ಸರಿಯಾದ ಸ್ಥಳ ಅಲ್ಲವೇ ಅಲ್ಲ.

ನಮ್ಮ ಪ್ರಜಾಪ್ರಭುತ್ವವನ್ನು ಮರಳಿ ಪಡೆಯಲು ಶ್ರಮಿಸುತ್ತಿರುವವರಿಗೆ ವಿರೋಧ ಪಕ್ಷಗಳ ಕುಸಿತವು ದೊಡ್ಡ ಹಿನ್ನಡೆಯಾಗಿ ಕಾಣಿಸುವುದು ಸಹಜ. ಹಾಗಿದ್ದರೂ ಇದು ಹಾದಿಯ ಕೊನೆ ಅಲ್ಲ. ಮುಂದಿನ ಸುತ್ತಿನ ಚುನಾವಣೆಗಳು, ಅದರಲ್ಲೂ ವಿಶೇಷವಾಗಿ, ಪಶ್ಚಿಮ ಬಂಗಾಳದ ಚುನಾವಣೆಗಳು ಚುನಾವಣಾ ಸಮಗ್ರತೆಯ ಪರೀಕ್ಷೆಗೆ ಉತ್ತಮ. ಮುಂದಿನ ವಿದ್ಯಮಾನಗಳು ಯಾವ ಸ್ವರೂಪ ಪಡೆದುಕೊಳ್ಳಲಿವೆ ಎಂಬುದರ ನಿಜವಾದ ಸುಳಿವು ಉತ್ತರ ಪ್ರದೇಶದ ವಿಧಾನಸಭೆ ಚುನಾವಣೆಯಲ್ಲಿ ದೊರೆಯಲಿದೆ.

ವಾಚಕರ ವಾಣಿ

ಸಕ್ಕರೆ ಬೆಲೆ: ಜನಹಿತದ ಅಂಕುಶ ಅಗತ್ಯ

ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಕೆ.ಜಿ.ಗೆ ₹31ರಿಂದ ₹40ಕ್ಕೆ ಹೆಚ್ಚಿಸಬೇಕೆನ್ನುವುದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟದ ಒತ್ತಾಯ. ಈ ಬಗ್ಗೆ ಪರಿಶೀಲಿಸುವುದಾಗಿ ಕೇಂದ್ರ ಆಹಾರ ಸಚಿವರು ಹೇಳಿದ್ದಾರೆ. ಕೆಲವು ತಿಂಗಳ ಹಿಂದೆ ಮುಕ್ತ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹40ರಿಂದ ₹42 ಇದ್ದ ಸಕ್ಕರೆ ಬೆಲೆ ಈಗ ₹45ರಿಂದ ₹46ಕ್ಕೆ ಮುಟ್ಟಿದೆ. ಸರ್ಕಾರವು ಏಕಾಏಕಿ ಕನಿಷ್ಠ ಮಾರಾಟ ಬೆಲೆ ಹೆಚ್ಚಿಸಲು ಒಪ್ಪಿದರೆ, ಸಕ್ಕರೆ ಬೆಲೆ ₹56ರಿಂದ ₹60ಕ್ಕೆ ಜಿಗಿಯುವ ಸಂಭವವಿದೆ. ಹಾಗಾಗಿ, ಒಕ್ಕೂಟದ ಹಿತಕಾಯುವ ಆತುರದಲ್ಲಿ ಗ್ರಾಹಕರ ಬಗೆಗಿನ ಕಾಳಜಿಯನ್ನೂ ಮರೆಯಬಾರದು.

ಮುಳ್ಳೂರು ಪ್ರಕಾಶ್, ಮೈಸೂರು

ಕುರುಡು ಕಾಂಚಾಣದ ಬೆನ್ನತ್ತಿದ ಬಿಸಿಸಿಐ

ಪಾಕಿಸ್ತಾನ ಪ್ರಚೋದಿತ ಉಗ್ರರ ಅಟ್ಟಹಾಸ ಭಾರತದಲ್ಲಿ ನಿಂತಿಲ್ಲ. ದೆಹಲಿಯ ಕೆಂಪುಕೋಟೆ ಬಳಿ ನಡೆದ ಬಾಂಬ್ ಸ್ಫೋಟ ಪ್ರಕರಣ ಇನ್ನೂ ಜನರ ಮನದಲ್ಲಿ ಹಸಿರಾಗಿಯೇ ಇದೆ. ಹಾಗಾಗಿ, ಪಾಕಿಸ್ತಾನದ ಕ್ರಿಕೆಟ್ ತಂಡದ ಜೊತೆಗಿನ ಕ್ರೀಡಾ ಸಂಬಂಧಕ್ಕೆ ಸಂಪೂರ್ಣ ನಿರ್ಬಂಧ ಹೇರುವುದು ಹಿತಕರ. ಆದರೆ, ಬಾಂಬ್ ಸ್ಫೋಟಕ್ಕೆ ಸಿಲುಕಿದ ಸಂತ್ರಸ್ತರು ಮತ್ತು ದೇಶದ ಜನರ ಭಾವನೆಗಳಿಗೆ ಬೆಲೆ ಕೊಡದೆ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕುರುಡು ಕಾಂಚಾಣದ ಬೆನ್ನುಹತ್ತಿರುವುದು ದುರದೃಷ್ಟಕರ.

ಆರ್.ಟಿ. ಶರಣ್, ಕಲಬುರಗಿ

ಫುಟ್‌ಬಾಲ್: ಆತ್ಮವಿಮರ್ಶೆಗೆ ಸಕಾಲ

ಒಂದೂವರೆ ಲಕ್ಷ ಜನಸಂಖ್ಯೆ ಹೊಂದಿರುವ ಮತ್ತು ಜಗತ್ತಿನ ಬಹುತೇಕ ಜನರು ಕೇಳಿರದ, 'ಕ್ಯುರಸಾವೊ' ಎಂಬ ದೇಶವು 2026ರ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಗೆ ಅರ್ಹತೆ ಗಿಟ್ಟಿಸಿಕೊಂಡಿದೆ. 146 ಕೋಟಿ ಜನಸಂಖ್ಯೆಯ ಭಾರತವು ಈ ಪಂದ್ಯಾವಳಿಗೆ ಅರ್ಹತೆ ಪಡೆಯಲು ಪ್ರತಿ ಸಲ ಸ್ಪರ್ಧಿಸುತ್ತಿದ್ದರೂ ಸಾಫಲ್ಯ ಕಂಡಿಲ್ಲ. ಕಾರಣ ಏನಿರಬಹುದು: ಕ್ರಿಕೆಟ್ ಆಟದೆಡೆಗಿನ ಅತಿಯಾದ ವ್ಯಾಮೋಹವು ಇತರ ಕ್ರೀಡೆಗಳತ್ತ ನಮ್ಮ ಗಮನವನ್ನು ಕುಂಠಿತಗೊಳಿಸಿದೆಯೇ? ಗ್ರಾಮೀಣ ಮಟ್ಟದವರೆಗೂ ಕ್ರೀಡಾಳುಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ನಮ್ಮ ವ್ಯವಸ್ಥೆಯು ಬೇಜವಾಬ್ದಾರಿ ತೋರುತ್ತಿದೆಯೇ? ಈ ಎಲ್ಲ ಕಾರಣಗಳೂ ಒಟ್ಟಾಗಿ ಫುಟ್‌ಬಾಲ್ ಆಟದ ಏಳಿಗೆಗೆ ಧಕ್ಕೆಯಾಗುತ್ತಿದೆ. ನಾವು ಆತ್ಮವಿಮರ್ಶೆ ಮಾಡಿಕೊಳ್ಳಲು ಇದು ಸಕಾಲ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಹಸೀನಾ ಹಸ್ತಾಂತರ ಮಾಡುವುದು ಬೇಡ

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು ಮರಣದಂಡನೆ ವಿಧಿಸಿದೆ. ಇದು ರಾಜಕೀಯ ದ್ವೇಷ ಸಾಧನೆಯೇ ಹೊರತು, ಸಹಜ ನ್ಯಾಯ ಅಲ್ಲ. ಬಾಂಗ್ಲಾದ ಕೋರಿಕೆ ಮೇರೆಗೆ ಹಸೀನಾ ಅವರನ್ನು ಹಸ್ತಾಂತರಿಸಬಾರದು. ಈ ಹಿಂದೆ ಭಾರತವು ಪಾರ್ಸಿಗಳು ಮತ್ತು ಬೌದ್ಧರಿಗೆ ಆಶ್ರಯ ನೀಡಿ ಮಾನವೀಯತೆ ಮೆರೆದಿದೆ. ಮಾನವೀಯತೆಯೇ ಪರಮ ಧರ್ಮ ಎಂಬುದನ್ನು ಜಗತ್ತಿಗೆ ಸಾರಬೇಕು.

ಚಂದ್ರಶೇಖರ ಎಚ್.ಎಸ್., ಬೆಂಗಳೂರು

ಕಣ್ಣುಕುಕ್ಕುವ ವಿಡಿಯೊ ಪರದೆ ನಿರ್ಬಂಧಿಸಿ

ಪ್ರಸ್ತುತ ಹಲವು ಕಂಪನಿಗಳು ವಿಡಿಯೊ ಜಾಹೀರಾತು ಕಾರ್ಯತಂತ್ರಕ್ಕೆ ಒತ್ತು ನೀಡುತ್ತಿವೆ. ಮಾರುಕಟ್ಟೆಯಲ್ಲಿ ಹೊಸತನ ಮತ್ತು ವರ್ಚಸ್ಸು ಬೆಳೆಸಿಕೊಳ್ಳುವುದು ಇದರ ಹಿಂದಿರುವ ಉದ್ದೇಶ. ಈಗ ಬೆಂಗಳೂರು ಸೇರಿದಂತೆ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲೆಂದರಲ್ಲಿ ಜಾಹೀರಾತು ಪ್ರದರ್ಶಿಸುವ ವಿಡಿಯೊ ಪರದೆಗಳು ತಲೆಎತ್ತುತ್ತಿದ್ದು, ಬೆಳಕಿನ ಮಾಲಿನ್ಯವನ್ನು ಸೃಷ್ಟಿಸುತ್ತಿವೆ. ಮೊದಲೇ ಹೈಬೀಮ್ ಲೈಟ್ ಬಳಸಿ ವಾಹನ ಚಲಾಯಿಸುವವರ ಸಂಖ್ಯೆ ಹೆಚ್ಚಿದೆ. ಸಿಗ್ನಲ್‌ಗಳ ಬಳಿ ಅಳವಡಿಸಿರುವ ಕಣ್ಣು ಕೋರೈಸುವ ವಿಡಿಯೊ ಪರದೆಗಳಿಂದ ನಾಗರಿಕರು ರಸ್ತೆ ದಾಟಲೂ ತೊಂದರೆ ಅನುಭವಿಸುವಂತಾಗಿದೆ. ಇದು ದೊಡ್ಡ ಪಿಡುಗಾಗುವ ಮೊದಲೇ, ರಾಜ್ಯ ಸರ್ಕಾರ ಹೊಸ ಜಾಹೀರಾತು ನೀತಿಯನ್ನು ರೂಪಿಸಬೇಕಿದೆ.

ಶ್ರೀರಾಮ ಶಾಸ್ತ್ರಿ, ಬೆಂಗಳೂರು

ಆಗ–ಈಗ

ಆಗ: ಎಲ್ಲೋ ಎಡವಟ್ಟಾಗಿದೆ ಜನರ ತೀರ್ಪಿಗೆ ತಲೆ ಬಾಗುತ್ತೇವೆ.
ಈಗ: ಎಲ್ಲ ಕಡೆ ಮತಗಳ್ಳತನವಾಗಿದೆ ಕೋರ್ಟಿಗೆ ಹೋಗುತ್ತೇವೆ.

ಎಚ್.ವಿ. ಶ್ರೀಧರ್, ಬೆಂಗಳೂರು

'ಜನಶತಾಬ್ದಿ'ಯ ಮಂದಗತಿ ಪ್ರಯಾಣ!

ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಡುವ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲು ಬೆಳಿಗ್ಗೆ 11.14 ಗಂಟೆಗೆ ಹಾವೇರಿಯನ್ನು, ಮಧ್ಯಾಹ್ನ 1.10 ಗಂಟೆಗೆ ಹುಬ್ಬಳ್ಳಿಯನ್ನು ತಲುಪುತ್ತದೆ. ಪ್ರತಿ ಗಂಟೆಗೆ ಸರಾಸರಿ 76.65 ಕಿ.ಮೀ. ವೇಗದಲ್ಲಿ ಬೆಂಗಳೂರಿನಿಂದ ಹಾವೇರಿಗೆ 394 ಕಿ.ಮೀ. ಅಂತರ ಕ್ರಮಿಸಲು ಅದು ತೆಗೆದುಕೊಳ್ಳುವ ಸಮಯ 5.14 ಗಂಟೆ. ಅದೇ ರೈಲು ಪ್ರತಿ ಗಂಟೆಗೆ 48.38 ಕಿ.ಮೀ. ವೇಗದಲ್ಲಿ ಹಾವೇರಿಯಿಂದ ಹುಬ್ಬಳ್ಳಿಗೆ 75 ಕಿ.ಮೀ. ಅಂತರ ಕ್ರಮಿಸಲು ತೆಗೆದುಕೊಳ್ಳುವ ಸಮಯ 1.55 ಗಂಟೆ! ಹಾವೇರಿಯಿಂದ ಹುಬ್ಬಳ್ಳಿಗೂ ಗಂಟೆಗೆ 76.65 ಕಿ.ಮೀ. ವೇಗದಲ್ಲಿ ಚಲಿಸಿದರೆ ಕೇವಲ 6.11 ಗಂಟೆಗಳಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ತಲುಪುವ ಸಾಮರ್ಥ್ಯ ಈ ರೈಲಿಗಿದ್ದರೂ, ವಾಸ್ತವದಲ್ಲಿ 7.10 ಗಂಟೆ ತೆಗೆದುಕೊಳ್ಳುತ್ತದೆ. 2002ರ ನವೆಂಬರ್ 24ರಂದು ತನ್ನ ಮೊದಲ ಪ್ರಯಾಣ ಆರಂಭಿಸಿದ ಈ ರೈಲಿಗೆ ಇದೇ 24ಕ್ಕೆ 23 ವರ್ಷ ತುಂಬುವ ಸಂದರ್ಭದಲ್ಲೂ, ಅದರ ವೇಗ ಹೆಚ್ಚಾಗಿಲ್ಲ ಎನ್ನುವುದು ವಿಪರ್ಯಾಸ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಚುರುಮುರಿ

ಅರ್ಥ, ಅಪಾರ್ಥ!

• ಬಿ.ಎನ್. ಮಲ್ಲೇಶ್

ಬ್ರೇಕಿಂಗ್ ನ್ಯೂಸ್ ಟೀವಿ ಪತ್ರಕರ್ತ ತೆಪರೇಸಿ ಸಂಪಾದಕರ ಮುಂದೆ ತಲೆ ಕೆಡಿಸ್ಕಂಡು ಕೂತಿದ್ದ. 'ಯಾಕ್ರಿ ತೆಪರೇಸಿ, ಏನಾತು?' ಸಂಪಾದಕರು ಕೇಳಿದರು.

'ಏನೂ ಅರ್ಥ ಆಗ್ತಿಲ್ಲ ಸಾ...' ಎಂದ ತೆಪರೇಸಿ.

'ಅಂಥಾದ್ದೇನ್ರಿ ನಿಮ್ಗೆ ಅರ್ಥ ಆಗದೇ ಇರೋ ಅಂಥದ್ದು?'

'ಎಲ್ಲದಕ್ಕೂ ಕೊನೆ ಅಂತ ಇರುತ್ತೆ ಅಂದ್ರೆ ಏನ್ಸಾ?'

'ಹಾಗಂತ ಯಾರು ಹೇಳಿದ್ದು?'

'ಯಾರರೆ ಹೇಳ್ಲಿರ್ಲಿ, ಇಲ್ಲಿ ಯಾವುದೂ ಶಾಶ್ವತ ಅಲ್ಲ ಅಂದ್ರೆ ಏನರ್ಥ?'

'ಗೊತ್ತಿಲ್ಲ...'

'ಸರಿ, ಕೆಲ್ಸ ಮಾಡೋನೊಬ್ಬ, ಲಾಭ ಪಡೆಯೋನೊಬ್ಬ ಅಂದ್ರೆ?'

'ಅಂದ್ರೆ ನೀನು ಕೆಲ್ಸ ಮಾಡ್ತಿದೀಯ, ನಾನು ಕೂತ್ಕಂಡು ಸಂಬಳ ತಗೋತಿದೀನಿ ಅಂತಾನಾ?'

'ಥೋ... ನಿಮ್ ಬಗ್ಗೆ ಅಲ್ಲ ಸಾ... ಈಗ ಎಲ್ಲಿ ಭಕ್ತಿ ಇದೆ, ಅಲ್ಲಿ ಭಗವಂತ ಇರ್ತಾನೆ ಅಂದ್ರೆ?'

'ಇದ್ರಲ್ಲಿ ಅರ್ಥ ಆಗದೇ ಇರೋ ಅಂಥದ್ದು ಏನಿದೆ? ಯಾರು ಹೇಳಿದ್ರು ಇದನ್ನ?'

'ಒಬ್ಬ ರಾಜಕಾರಣಿ ಅನ್ಕಳಿ...'

'ಅಂದ್ರೆ ಹೈಕಮಾಂಡ್ ಮೇಲೆ ಭಕ್ತಿ ಇದ್ರೆ ಅದು ಕುರ್ಚಿ ಕೊಟ್ಟು ಕಾಪಾಡುತ್ತೆ ಅಂತ...'

'ನಾನು ಅಧಿಕಾರದಲ್ಲಿ ಇರ್ತೀನೋ ಇಲ್ವೋ ಗೊತ್ತಿಲ್ಲ ಅಂದ್ರೆ?'

'ಅಂದ್ರೆ ಹೆಚ್ಚಿನ ಅಧಿಕಾರ ಕೊಟ್ರೆ ಇರ್ತೀನಿ, ಇಲ್ಲಾಂದ್ರೆ ಇಲ್ಲ ಅಂತ ಅರ್ಥ...'

'ಕರೆಕ್ಟ್... ನಾನೇನು ಓಡಿ ಹೋಗೋ ಮನುಷ್ಯ ಅಲ್ಲ ಅಂದ್ರೆ?'

'ಏನೇ ಬಂದ್ರೂ ಇಲ್ಲೇ ಇದ್ದು ಎದುರಿಸ್ತೀನಿ ಅಂತ... ಅಲ, ಈ ಡೈಲಾಗ್‌ಗಳು ನಮ್ ಬಂಡೆ ಸಾಹೇಬ್ರವು ಅನಿಸ್ತಿದೆ, ಹೌದಾ?'

'ಹೌದು ಸಾ... ಎಲ್ಲ ಅವರ ಮಾತೇ, ಆದ್ರೆ ಒಂದೂ ಅರ್ಥ ಆಗ್ತಿಲ್ಲ...' ತೆಪರೇಸಿ ತಲೆ ಕೆರೆದುಕೊಂಡ.

'ನಿಮ್ಗೆಲ್ಲಿ, ಇದೆಲ್ಲ ಅರ್ಥ ಆಗ್ಬೇಕು ಅಂದ್ರೆ ನಿಮ್ಗೆ ರಾಜಕೀಯ ಡಿಕ್ಷನರಿ ಗೊತ್ತಿರಬೇಕು...'

'ಇಲ್ಲದಿದ್ರೆ?'

'ಅರ್ಥ, ಅಪಾರ್ಥ ಆಗಿ ಆಮೇಲೆ ಒದೆ ತಿನ್ಬೇಕಾಗುತ್ತೆ...' ತೆಪರೇಸಿ ಪಿಟಿಕ್ಕನ್ನಲಿಲ್ಲ.

ಸಂಗತ

ಬಿಹಾರ ಚದುರಂಗ: ದಲಿತರ ಮತಗಣಿತ

ಬಿಹಾರ ವಿಧಾನಸಭೆ ಚುನಾವಣೆಯ ಫಲಿತಾಂಶದಲ್ಲಿ ದಲಿತರ ಮತಗಳ ಧ್ರುವೀಕರಣಕ್ಕೆ ವಿಶೇಷ ಮಹತ್ವವಿದೆ. ಈ ಧ್ರುವೀಕರಣದಲ್ಲಿ ನಿತೀಶ್ ಜಾಣ್ಮೆಯಿದೆ.

• ವಾದಿರಾಜ್

ಬಿಹಾರದಲ್ಲಿನ ವಿಧಾನಸಭೆ ಚುನಾವಣೆಯ ಫಲಿತಾಂಶ ಹಲವು ಆಯಾಮದ ಚರ್ಚೆಗೆ ಕಾರಣವಾಗಿದೆ. ಶೇ 20ರಷ್ಟು ಪರಿಶಿಷ್ಟ ಜಾತಿ, ಪಂಗಡಗಳ ಜನಸಂಖ್ಯೆ ಇರುವ ಬಿಹಾರದಲ್ಲಿ 38 ಎಸ್‌ಸಿ, 2 ಎಸ್‌ಟಿ ಮೀಸಲು ಕ್ಷೇತ್ರಗಳಿವೆ. 2007ರಲ್ಲಿ ಪ್ರಬಲ ಚಮ್ಮಾರ್, ಪಾಸ್ವಾನ್ ಜಾತಿಗಳೊಡನೆ ಸ್ಪರ್ಧಿಸಲಾಗದೆ ಹೊರಗುಳಿದವರಿಗಾಗಿ 'ಮಹಾದಲಿತ್ ರಾಜಕಾರಣ'ದ ದಾಳ ಉರುಳಿಸಿದವರು ನಿತೀಶ್ ಕುಮಾರ್. ಇದೊಂದು ಪರ್ಯಾಯ 'ಒಳಮೀಸಲಾತಿ'ಯೇ ಆಗಿತ್ತು.

ಮೀಸಲಾತಿಯ ವರ್ಗೀಕರಣದ ಗೋಜಿಗೆ ಹೋಗದೆ ಸರ್ಕಾರಿ ಸೌಲಭ್ಯಗಳ ವಿತರಣೆ, ಪ್ರಾತಿನಿಧ್ಯದ ಅವಕಾಶಗಳಲ್ಲಿ ಒಟ್ಟು 23 ಜಾತಿಗಳ ಪೈಕಿ ಮಹಾದಲಿತರೆನಿಸಿದ 19 ಜಾತಿಗಳಿಗೆ ಆದ್ಯತೆ ಸಿಗುವಂತೆ ಮಾಡಿದವರು ನಿತೀಶ್. ರಾಜಕೀಯ ಒತ್ತಡ ತಂದು ಸ್ಪೃಶ್ಯ ದಲಿತರೆನಿಸಿದ ಪಾಸಿ, ದೋಭಿ ಜಾತಿಗಳೂ ಮಹಾದಲಿತರೊಳಗೆ ಬಂದರು. ಶೇ 32ರಷ್ಟು ಜನಸಂಖ್ಯೆ ಇರುವ ಚಮ್ಮಾರರು ಬೀದಿಗೆ ಇಳಿದರು. ಮಹಾದಲಿತರೊಳಗೆ ಜಾಗ ಗಿಟ್ಟಿಸಿದರು. ಇಡೀ ಪ್ರಕ್ರಿಯೆ ನಿತೀಶರಿಗೆ ದಲಿತರೊಳಗೆ ಮತಬ್ಯಾಂಕ್ ಸೃಷ್ಟಿಸಿತು. ಪ್ರಬಲ ಸಮುದಾಯವೆನಿಸಿದ ಪಾಸ್ವಾನ್‌ರ ಮುನಿಸಿಗೂ ಕಾರಣವಾಯಿತು. 2020ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು 45 ಸ್ಥಾನಕ್ಕೆ ಇಳಿಯಲು ಚಿರಾಗ್ ಪಾಸ್ವಾನ್‌ರ ಏಟೇ ಕಾರಣವಾಗಿತ್ತು.

ಈ ಸಲದ ಫಲಿತಾಂಶ ದಲಿತರೊಳಗಿನ ಬಿರುಕುಗಳನ್ನು ಮುಚ್ಚಿದೆ. ನಿತೀಶ್ ಮತ್ತು ಪಾಸ್ವಾನ್‌ರನ್ನು ಬೆಸೆದಿದೆ. 38 ಮೀಸಲು ಕ್ಷೇತ್ರಗಳಲ್ಲಿ 34 ಕಡೆ ಎನ್‌ಡಿಎ ಪಾರಮ್ಯ ಮೆರೆದಿದೆ. ದಲಿತ ನೆಲೆಯ ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ ಮತ್ತು ಜಿತನ್ ರಾಂ ಮಾಂಝಿ ಅವರ ಎಚ್‌ಎಎಂ, ಮತ ಶೇಖರಣೆಯಲ್ಲಿ ನ್ಯಾಯ ಒದಗಿಸಿರುವುದು ಎದ್ದು ಕಾಣುತ್ತದೆ. ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ಜೆಡಿಯು 15ರಲ್ಲಿ ಸ್ಪರ್ಧಿಸಿ 14, ಎಲ್‌ಜೆಪಿ 8ರಲ್ಲಿ 5 ಕಡೆ ಜಯ ಸಾಧಿಸಿದ್ದರೆ, ಎಚ್‌ಎಎಂ ಸ್ಪರ್ಧಿಸಿದ 4 ಕ್ಷೇತ್ರಗಳಲ್ಲೂ ಜಯಿಸಿದೆ. ಬಿಜೆಪಿ ಸ್ಪರ್ಧಿಸಿದ್ದೂ ಹನ್ನೊಂದು, ಗೆದ್ದದ್ದೂ ಹನ್ನೊಂದು. ಆರ್‌ಜೆಡಿ 19ರಲ್ಲಿ ಸ್ಪರ್ಧಿಸಿದರೂ, ದಕ್ಕಿದ್ದು 4 ಮಾತ್ರ. ಕಾಂಗ್ರೆಸ್ 8 ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೂ ಖಾತೆ ತೆರೆಯಲಿಲ್ಲ. ಕಳೆದ ಸಲ 4 ಮೀಸಲು ಕ್ಷೇತ್ರಗಳಲ್ಲಿ ಗೆದ್ದಿದ್ದ ಎಡ ಪಕ್ಷಗಳು ಈ ಸಲ 8 ಕಡೆ ಸ್ಪರ್ಧಿಸಿದರೂ ದಕ್ಕಿದ್ದು ಶೂನ್ಯ. ಎರಡು ಎಸ್‌ಟಿ ಮೀಸಲು ಕ್ಷೇತ್ರಗಳು ಕಾಂಗ್ರೆಸ್, ಬಿಜೆಪಿ ಪಾಲಾಗಿವೆ. ಪ್ರಬಲ ಪಾಸ್ವಾನ್ ಮತ್ತು ಚಮ್ಮಾರ್ ಜಾತಿಗಳಿಂದ ತಲಾ 11 ಶಾಸಕರು ವಿಧಾನಸಭೆ ಪ್ರವೇಶಿಸಿದ್ದಾರೆ.

ಮಹಾದಲಿತರಲ್ಲಿ ಪ್ರಮುಖ ಜಾತಿ ಎನಿಸಿದ ಇಲಿ ಹಿಡಿಯುವ ಕಾಯಕದ ಮುಷಹರ್ ಸಮುದಾಯದಿಂದ ಮೊದಲ ಬಾರಿಗೆ 9 ಶಾಸಕರು ಆಯ್ಕೆಯಾಗಿದ್ದಾರೆ. ಪಾಸಿ ಮತ್ತು ದೋಭಿ ಸಮುದಾಯದಿಂದ ತಲಾ ಇಬ್ಬರು ಶಾಸಕರಾಗಿದ್ದಾರೆ. ಸಂಖ್ಯಾಬಲದಲ್ಲಿ ನಗಣ್ಯವೆನಿಸುವ ಭುಲಿಯಾ, ರಾಜ್ವರ್, ಸರ್ದರ್ ಸಮುದಾಯಗಳಿಂದ ತಲಾ ಒಬ್ಬರು ಗೆದ್ದಿದ್ದಾರೆ. ಕಳೆದ ಸಲ– ಚಮ್ಮಾರ್, ಪಾಸ್ವಾನ್ ತಲಾ 13ರಲ್ಲಿ ಗೆದ್ದಿದ್ದರು. ಮುಷಹರ್ 7, ಪಾಸಿ 3, ಚೌಪಾಲ್, ವಾಲ್ಮೀಕಿಯಲ್ಲಿ ತಲಾ ಒಬ್ಬರು ಶಾಸಕರಿದ್ದರು.

ಈ ಬಾರಿ ಆರ್‌ಜೆಡಿಯಿಂದ ಗೆದ್ದ ನಾಲ್ವರಲ್ಲಿ ಇಬ್ಬರು ಚಮ್ಮಾರರು, ತಲಾ ಒಬ್ಬರು ಮುಷಹರ್ ಮತ್ತು ಪಾಸ್ವಾನರು. ಜೆಡಿಯುನಿಂದ ಗೆದ್ದ 14ರಲ್ಲಿ 5 ಚಮ್ಮಾರರು, 1 ಪಾಸ್ವಾನ್, 4 ಮುಷಹರ್, 2 ಪಾಸಿ, 1 ದೋಭಿ, 1 ಸರ್ದರ್. ಬಿಜೆಪಿಯ 11 ಶಾಸಕರಲ್ಲಿ ಮೂವರು ಚಮ್ಮಾರರಾದರೆ, ಏಳು ಪಾಸ್ವಾನರು, ಒಬ್ಬರು ಮುಷಹರ್. ಎಲ್‌ಜೆಪಿ ಗೆದ್ದ ದಲಿತ ಶಾಸಕರಲ್ಲಿ ಒಬ್ಬರು ಚಮ್ಮಾರ್, ಇಬ್ಬರು ಪಾಸ್ವಾನ್, ತಲಾ ಒಬ್ಬರು ದೋಭಿ ಮತ್ತು ರಾಜ್ವರ್ ಸಮುದಾಯದವರು. ಎಚ್‌ಎಎಂ ಪಕ್ಷದಿಂದ ಮೂವರು ಮುಷಹರ್, ಒಬ್ಬರು ಭುಲಿಯಾ ಸಮುದಾಯದವರು ಶಾಸಕರಾಗಿದ್ದಾರೆ. ಶಾಸಕರಾಗಿ ಆಯ್ಕೆಯಾದ 7 ದಲಿತ ಮಹಿಳೆಯರು ಎನ್‌ಡಿಎದವರೇ ಆಗಿದ್ದಾರೆ.

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ದಲಿತ ಸಮಾಜದವರೇ. ಕಾಂಗ್ರೆಸ್ ಪಕ್ಷ ಬಿಹಾರದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಕಳೆದ ಮಾರ್ಚ್‌ನಲ್ಲಿ ಚಮ್ಮಾರ್ ಸಮುದಾಯದ ರಾಜೇಶ್ ರಾಮ್ ಅವರನ್ನು ನೇಮಿಸಿತು. ಈ ಇಬ್ಬರನ್ನು ಸಮರ್ಥವಾಗಿ ಬಳಸಿಕೊಳ್ಳಲಾಗದೆ ಕಾಂಗ್ರೆಸ್ ಮುಗ್ಗರಿಸಿದೆ. ರಾಜೇಶ್‌ರಿಗೆ ತಮ್ಮ ಕ್ಷೇತ್ರವನ್ನೂ ಉಳಿಸಿಕೊಳ್ಳಲಾಗಲಿಲ್ಲ.

ಚಿರಾಗ್ ಪಾಸ್ವಾನ್ ಮತ್ತು ಜಿತನ್ ಮಾಂಝಿ ಅವರನ್ನು ಪರಿಣಾಮಕಾರಿಯಾಗಿ ಬಳಸುವುದರಲ್ಲಿ ಎನ್‌ಡಿಎ ಯಶಸ್ಸು ಸಾಧಿಸಿದೆ. ಕುಂಕುಮಧಾರಿ ಚಿರಾಗ್ ಪಾಸ್ವಾನ್ ಪ್ರಭಾವ ದಲಿತರಾಚೆಗೂ ವಿಸ್ತರಿಸಿದೆ.

ರಾಷ್ಟ್ರೀಯ ಪಕ್ಷ ಬಿಎಸ್‌ಪಿ ಸಾಮಾನ್ಯ ಕ್ಷೇತ್ರ ಒಂದರಲ್ಲಿ ಗೆಲುವು ಕಂಡಿದೆ. ಮೀಸಲು ಕ್ಷೇತ್ರಗಳಲ್ಲಿ ಬಿಎಸ್‌ಪಿ ಪ್ರಭಾವ ಮಂಕಾಗಿದೆ. ಒಂದು ಕ್ಷೇತ್ರದಲ್ಲಿ ಎರಡನೇ ಸ್ಥಾನ ದಕ್ಕಿದರೆ, 13 ಕಡೆಗಳಲ್ಲಿ ಮೂರನೇ ಸ್ಥಾನದಲ್ಲಿದೆ.

ಒಟ್ಟಾರೆ ಬಿಹಾರದ ದಲಿತ ರಾಜಕಾರಣ ಹೊರಳು ದಾರಿಯಲ್ಲಿದೆ. ದಲಿತ ಮಹಿಳೆ, ಅಲಕ್ಷಿತ ಜಾತಿಗಳ ಪ್ರಾತಿನಿಧ್ಯಗಳಲ್ಲಿನ ಹೆಚ್ಚಳ ಪ್ರಜಾಪ್ರಭುತ್ವದ ಆಶಯಗಳ ಕುರಿತಾದ ಭರವಸೆಗೆ ಕಾರಣವಾಗಿದೆ.

(ಲೇಖಕ: ಆರ್‌ಎಸ್‌ಎಸ್ ಕಾರ್ಯಕರ್ತ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೀಜ ಮಸೂದೆ-2025 ವಿರೋಧ ಏಕೆ?

ಪ್ರಜಾವಾಣಿ ವಾರ್ತೆ

ಬಿತ್ತನೆ ಬೀಜಗಳ ಗುಣಮಟ್ಟ ಮತ್ತು ರೈತರ ಹಕ್ಕುಗಳನ್ನು ಕಾಪಾಡುವ ದಿಸೆಯಲ್ಲಿ ಭಾರತದಲ್ಲಿ ಈಗಾಗಲೇ ಹಲವು ಕಾಯ್ದೆ, ನಿಯಮಗಳನ್ನು ಜಾರಿ ಮಾಡಲಾಗಿದೆ. ಬೀಜ ಕಾಯ್ದೆ (1966), ಬೀಜ ನಿಯಮಗಳು (1968), ಬೀಜ (ನಿಯಂತ್ರಣ) ಆದೇಶ (1983) ರಾಷ್ಟ್ರೀಯ ಬೀಜ ನೀತಿ (2002) ಸೇರಿದಂತೆ ಹಲವು ನಿಯಮಗಳಿವೆ. ದೇಶದ ಕಾನೂನುಗಳಲ್ಲಿ ಮುಖ್ಯವಾದದ್ದು ಸಸ್ಯ ವೈವಿಧ್ಯ ಮತ್ತು ರೈತರ ಹಕ್ಕುಗಳ ರಕ್ಷಣೆಯ ಕಾಯ್ದೆ-1970 (ಪಿಪಿವಿಎಫ್‌ಆರ್‌ಎ). ರೈತರ ಹಕ್ಕುಗಳ ಕುರಿತು ಜಗತ್ತಿನಲ್ಲಿರುವ ಉತ್ತಮ ಕಾಯ್ದೆಗಳಲ್ಲಿ ಇದೂ ಒಂದು ಎನ್ನಲಾಗಿದೆ. ಇವುಗಳನ್ನು ಬದಲಾಯಿಸುವ ದಿಸೆಯಲ್ಲಿ 2004 ಮತ್ತು 2019ರಲ್ಲಿ ಬೀಜ ಮಸೂದೆಗಳನ್ನು ರೂಪಿಸಲಾಗಿತ್ತು. ಆದರೆ, ರೈತರಿಂದ ತೀವ್ರ ವಿರೋಧ ವ್ಯಕ್ತವಾದದ್ದರಿಂದ ಅವು ಕಾಯ್ದೆಗಳಾಗಲಿಲ್ಲ.

ಈಗ ಬಿತ್ತನೆ ಬೀಜಗಳ ಗುಣಮಟ್ಟ, ಉತ್ಪಾದನೆ ಮತ್ತು ಮಾರಾಟವನ್ನು ನಿಯಂತ್ರಿಸುವ ಉದ್ದೇಶದಿಂದ ಬೀಜ ಕಾಯ್ದೆ 1966 ಮತ್ತು 1983ರ ಬೀಜ (ನಿಯಂತ್ರಣ) ಆದೇಶಕ್ಕೆ ತಿದ್ದುಪಡಿ ಮಾಡಿ ಬಿತ್ತನೆ ಬೀಜ ಮಸೂದೆ-2025 ಅನ್ನು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ರೂಪಿಸಿದೆ. ಅದರ ವೆಬ್‌ಸೈಟ್‌ನಲ್ಲಿ ಮಸೂದೆಯ ಕರಡನ್ನು ಪ್ರಕಟಿಸಲಾಗಿದ್ದು, ರೈತರು, ಸಂಘ ಸಂಸ್ಥೆಗಳ ಪ್ರತಿಕ್ರಿಯೆಯನ್ನು ಆಹ್ವಾನಿಸಿದೆ. ಉದ್ಯಮ ಹಾಗೂ ರೈತರ ಸದ್ಯದ ಅಗತ್ಯಗಳ ಆಧಾರದಲ್ಲಿ ಮಸೂದೆ ರೂಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಮಸೂದೆ ಕುರಿತ ಆಕ್ಷೇಪಣೆಗಳನ್ನು ಎಂಎಸ್ ವರ್ಡ್ ಮತ್ತು ಪಿಡಿಎಫ್ ಮಾದರಿಯಲ್ಲಿ jsseeds-agri@gov.in ವಿಳಾಸಕ್ಕೆ 2025ರ ಡಿ.11ರ ಒಳಗೆ ಇ-ಮೇಲ್ ಕಳುಹಿಸಬಹುದು ಎಂದು ಅದು ತಿಳಿಸಿದೆ.

ಆದರೆ, ಮಸೂದೆಯಲ್ಲಿನ ಹಲವು ಅಂಶಗಳಿಗೆ ರೈತರು, ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ರೈತರ ಹಕ್ಕುಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

ಆಧಾರ: ಕರಡು ಬೀಜ ಮಸೂದೆ-2025, ಪಿಟಿಐ, ಡೌನ್ ಟು ಅರ್ಥ್, ಸೆಂಟರ್ ಫಾರ್ ಸಸ್ಟೈನಬಲ್ ಅಗ್ರಿಕಲ್ಚರ್

ಕೇಂದ್ರದ ಕೈಯಲ್ಲಿ ಅಧಿಕಾರ

ಮಸೂದೆಯು ಕೇಂದ್ರ ಸರ್ಕಾರಕ್ಕೆ ಹೆಚ್ಚು ಅಧಿಕಾರ ನೀಡುತ್ತದೆ ಎಂಬುದು ಮತ್ತೊಂದು ಆರೋಪ. 38ನೇ ಸೆಕ್ಷನ್, ಯಾವುದೇ ರಾಜ್ಯಗಳಿಗೆ ಮತ್ತು ಕೇಂದ್ರ ಬೀಜ ಸಮಿತಿಗೆ ಸಲಹೆ ನೀಡುವ ಅಧಿಕಾರವನ್ನು ಕೇಂದ್ರಕ್ಕೆ ಕೊಡುತ್ತದೆ. 'ನೀತಿ'ಯ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರವೂ ಅದರದ್ದೇ.

ಸೆಕ್ಷನ್ 41ರ ಪ್ರಕಾರ, ಈ ಕಾಯ್ದೆಯ ಅಡಿಯಲ್ಲಿ ಮಾಡಲಾಗುವ ಯಾವುದೇ ಆದೇಶವು, ಈ ಕಾಯ್ದೆಯನ್ನು ಬಿಟ್ಟು ಬೇರೆ ಯಾವುದೇ ಕಾನೂನು, ನಿಬಂಧನೆಗಳಿಗೆ ಒಳಪಡುವುದಿಲ್ಲ. ರಾಜ್ಯಗಳಲ್ಲಿ ಜಾರಿಯಲ್ಲಿರುವ ಬೀಜಕ್ಕೆ ಸಂಬಂಧಿಸಿದ ಕಾನೂನುಗಳು, ಆದೇಶಗಳ (ಬೆಲೆ ನಿಗದು, ವ್ಯಾಪಾರ, ಪರವಾನಗಿ ಇತ್ಯಾದಿ) ಅಡಿ ಕೈಗೊಂಡ ತೀರ್ಮಾನಗಳನ್ನು ಇದು ರದ್ದುಪಡಿಸಬಹುದಾಗಿದೆ. ಹೀಗಾದಲ್ಲಿ ರಾಜ್ಯಗಳ ಸ್ವಾಯತ್ತೆಗೆ ಧಕ್ಕೆಯಾಗಲಿದೆ ಎಂಬ ಕಳವಳವೂ ವ್ಯಕ್ತವಾಗಿದೆ.

ತುರ್ತು ಸಂದರ್ಭದಲ್ಲಷ್ಟೇ ಬೆಲೆ ನಿಯಂತ್ರಣ

ಸೆಕ್ಷನ್ 22 ಬೆಲೆಯ ನಿಯಂತ್ರಣದ ಬಗ್ಗೆ ಹೇಳುತ್ತದೆ. ಆದರೆ, ಇದು ರೈತರು ಹಿಂದಿನಿಂದಲೂ ಮುಂದಿಟ್ಟಿರುವ ಬೇಡಿಕೆಯ ರೀತಿಯಲ್ಲಿ ಇಲ್ಲ ಎಂಬುದು ರೈತ ಸಂಘಟನೆಗಳ ಆರೋಪ. ಬಿತ್ತನೆ ಬೀಜಗಳ ಕೊರತೆ, ಕೃತಕ ಬೆಲೆ ಏರಿಕೆ ಅಥವಾ ಏಕಸ್ವಾಮ್ಯದ ಬೆಲೆ ನಿಗದಿಯಂತಹ 'ತುರ್ತು ಸನ್ನಿವೇಶ'ಗಳಲ್ಲಿ ಬೆಲೆ ನಿಯಂತ್ರಣ ಮಾಡಲು ಕೇಂದ್ರ ಸರ್ಕಾರಕ್ಕೆ ಈ ಮಸೂದೆ ಅವಕಾಶ ನೀಡುತ್ತದೆ. ಬಿತ್ತನೆ ಬೀಜಗಳಿಗೆ ಶಾಶ್ವತವಾದ ಬೆಲೆ ಮತ್ತು ರಾಯಧನದ ವ್ಯವಸ್ಥೆ ಬೇಕು ಮತ್ತು ಇದಕ್ಕಾಗಿ ಒಂದು ಅಧಿಕೃತ ಸಂಸ್ಥೆಯ ಅಗತ್ಯವಿದೆ ಎಂಬುದು ರೈತರ ದೊಡ್ಡ ಬೇಡಿಕೆ. ಕರಡು ಮಸೂದೆಯಲ್ಲಿ ಇಂತಹ ಪ್ರಸ್ತಾಪಗಳಿಲ್ಲ.

ಆಕ್ಷೇಪಗಳೇನು?

- ಗುಣಮಟ್ಟದ ಬಿತ್ತನೆ ಬೀಜಗಳ ಉತ್ಪಾದನೆ ಮತ್ತು ಪೂರೈಕೆಯನ್ನು ಬಲಪಡಿಸುವುದು ಮಸೂದೆಯ ಉದ್ದೇಶ ಎಂದು ಕರಡಿನ ಆರಂಭದಲ್ಲೇ ಹೇಳಲಾಗಿದೆ. ಆದರೆ, ಮಸೂದೆಯಲ್ಲಿ ಎಲ್ಲಿಯೂ ರೈತರ ಹಕ್ಕುಗಳು, ಕಳಪೆ ಬೀಜದಿಂದ ಉಂಟಾದ ಬೆಳೆನಷ್ಟ ಪರಿಹಾರದ ಪ್ರಸ್ತಾಪವೇ ಇಲ್ಲ. ಕಂಪನಿಗಳ ವ್ಯಾಪಾರ/ವಹಿವಾಟು ಸುಗಮಗೊಳಿಸುವುದೇ ಮಸೂದೆಯ ಮುಖ್ಯ ಉದ್ದೇಶವಾಗಿದ್ದು, ರೈತರ ಹಿತಾಸಕ್ತಿ, ಹಕ್ಕುಗಳು ಕಡೆಗಣಿಸಲ್ಪಟ್ಟಿವೆ
- ಹಲವು ಕಂಪನಿಗಳ ಕಳಪೆ ಗುಣಮಟ್ಟದ ಬೀಜದಿಂದ ನಷ್ಟ ಅನುಭವಿಸುವ ಪ್ರಕರಣಗಳು ಪ್ರತಿವರ್ಷ ಪುನರಾವರ್ತನೆಯಾಗುತ್ತಿವೆ. ಇಂಥ ಸಂದರ್ಭಗಳಲ್ಲಿ ಬೆಳೆನಷ್ಟ ಪರಿಹಾರ ಪಡೆಯಲು ರೈತರು ನ್ಯಾಯಾಲಯಗಳಿಗೆ ಹೋಗುವುದೊಂದೇ ಆಯ್ಕೆ. ಆದರೆ, ರೈತರಿಗೆ ಇದು ಸಾಧ್ಯವಿಲ್ಲ. ಮಸೂದೆಯು ಈ ಕುರಿತು ವಾಸ್ತವಿಕವಾದ ಯಾವುದೇ ಪರಿಹಾರ ಕ್ರಮವನ್ನು ಒಳಗೊಂಡಿಲ್ಲ
- ಕಂಪನಿಗಳ ಹೊರೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ಸಣ್ಣ ತಪ್ಪುಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಸಣ್ಣ, ಮಧ್ಯಮ ಮತ್ತು ಗಂಭೀರ- ಹೀಗೆ ಅಪರಾಧದ ಪ್ರಮಾಣವನ್ನು ಆಧರಿಸಿ ಮೂರು ಹಂತಗಳಲ್ಲಿ ದಂಡವನ್ನು ವಿಧಿಸಲಾಗುತ್ತದೆ. ಕಳಪೆ ಗುಣಮಟ್ಟದ ಬೀಜ ಮಾರುವುದು, ಎಸ್‌ಎಟಿಎಚ್‌ಐ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಡೇಟ್ ಮಾಡದೇ ಇರುವುದರಂಥ ಸಣ್ಣ ಅಪರಾಧಗಳಿಗೆ ದಂಡವು ₹1 ಲಕ್ಷದಿಂದ ಆರಂಭವಾಗುತ್ತದೆ. ನಕಲಿ ಅಥವಾ ನೋಂದಾಯಿತವಲ್ಲದ ಬೀಜಗಳನ್ನು ಮಾರುವುದರಂಥ ಗಂಭೀರ ಅಪರಾಧಗಳಿಗೆ ₹30 ಲಕ್ಷದವರೆಗೆ ದಂಡ ಮತ್ತು ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಮಸೂದೆ ಅವಕಾಶ ಕಲ್ಪಿಸಿದೆ. ಆ ದಂಡವು ರಾಜ್ಯಗಳಿಗೆ ಪಾವತಿಯಾಗುತ್ತದೆಯೇ ವಿನಾ ರೈತರಿಗೆ ಸಿಗುವುದಿಲ್ಲ
- ಕಾಯ್ದೆಯ ಅಡಿಯಲ್ಲಿ ಬಿತ್ತನೆ ಬೀಜಗಳನ್ನು ನೋಂದಣಿ ಮಾಡುವುದು ಕಡ್ಡಾಯ. ಉತ್ಪಾದಕರು (ಕಂಪನಿಗಳು), ಬೀಜ ಸಂಸ್ಕರಣ ಘಟಕಗಳು, ಡೀಲರ್‌ಗಳು, ವಿತರಕರು, ನರ್ಸರಿಗಳೂ ನೋಂದಣಿ ಮಾಡಬೇಕು. ಆದರೆ, ಕಾಯ್ದೆಯ ಅಡಿಯಲ್ಲಿ ನೋಂದಣಿ ಮಾಡಿದ ಬೀಜಗಳನ್ನು ರೈತರು ಬೆಳೆಯಬಹುದು, ಬಿತ್ತನೆ ಮಾಡಬಹುದು, ಮರುಬಿತ್ತನೆ ಮಾಡಬಹುದು, ಸಂರಕ್ಷಿಸಬಹುದು, ಬಳಸಬಹುದು, ಹಂಚಿಕೊಳ್ಳಬಹುದು ಅಥವಾ ಅವರ ಜಮೀನಿನಲ್ಲಿ ಬೆಳೆದ ಬೀಜವನ್ನು ಮಾರಾಟವನ್ನೂ ಮಾಡಬಹುದು. ಆದರೆ, ಆ ಬೀಜಗಳನ್ನು ಅಥವಾ ಗಿಡಗಳನ್ನು ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲ. ಕರಡು ಮಸೂದೆಯು ವ್ಯಕ್ತಿಗತ ರೈತರ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತದೆ. ರೈತರೇ ಸೇರಿ ಸ್ಥಾಪಿಸಿರುವ ರೈತ ಉತ್ಪಾದಕ ಕಂಪನಿಗಳು, ಸ್ವಸಹಾಯ ಸಂಘಗಳು, ಸಮುದಾಯ ಸಂಘಟನೆಗಳು ಸಂರಕ್ಷಿಸುತ್ತಿರುವ ಬೀಜ ತಳಿಗಳ ಮಾರಾಟಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ. ರೈತ ಉತ್ಪಾದಕ ಕಂಪನಿಗಳು, ಸಮುದಾಯ ಸಂಘಟನೆಗಳು ಸ್ಥಳೀಯ ಬೀಜ ಬ್ಯಾಂಕ್‌ಗಳನ್ನು ತೆರೆದು ಅವುಗಳನ್ನು ಸಂರಕ್ಷಿಸಿ, ಅವುಗಳನ್ನೇ ಬಳಸಲು ರೈತರಿಗೆ ಪ್ರೇರೇಪಿಸುತ್ತಿವೆ. ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದರೆ ಇಂತಹ ಸಂಘ-ಸಂಸ್ಥೆಗಳಿಗೆ ತೊಂದರೆಯಾಗಲಿದೆ
- ಮಸೂದೆಯ ಪ್ರಕಾರ, ಬಿತ್ತನೆ ಬೀಜದ ಕೃಷಿ ಮತ್ತು ಬಳಕೆಯ ಮೌಲ್ಯದ (ವಿಸಿಯು) ಪರೀಕ್ಷೆ ನಡೆಸಲು ಸರ್ಕಾರವು ವಿದೇಶಿ ಸಂಸ್ಥೆಯನ್ನು ಗೊತ್ತುಪಡಿಸಬಹುದು (ಸೆಕ್ಷನ್ 16/3). ಸರ್ಕಾರವು ವಿದೇಶಿ ಬೀಜ ಪ್ರಮಾಣೀಕರಣ ಸಂಸ್ಥೆಗಳನ್ನು ಪರಿಗಣಿಸಬಹುದು (ಸೆಕ್ಷನ್ 27). ಈ ಮೂಲಕ ಮಸೂದೆಯು, ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ (ಎಸ್‌ಎಯು) ಅಧಿಕಾರವನ್ನು ಮೊಟಕುಗೊಳಿಸಿದೆ. ಜತೆಗೆ, ಸ್ಥಳೀಯ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬದಲಿಗೆ ವಿದೇಶಿ ಸಂಸ್ಥೆಗಳಿಗೆ ಬೀಜ ಪರೀಕ್ಷೆಯ ಜವಾಬ್ದಾರಿ ವಹಿಸುವುದು ಭಾರತದ ವೈವಿಧ್ಯಮಯವಾದ, ಹವಾಮಾನಕ್ಕೆ ಹೊಂದುವ ಕೃಷಿ ಪದ್ಧತಿಗಳ ದೃಷ್ಟಿಯಿಂದ ಅಪೇಕ್ಷಣೀಯವಲ್ಲ. ರೈತರ ಆದಾಯ, ಕೃಷಿ, ಪರಿಸರದ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಲಿದೆ. ದೇಶದಲ್ಲಿ ಕುಲಾಂತರಿ ತಳಿ (ಜಿಎಂ) ಬೀಜ ಮಾರಾಟ ಹೆಚ್ಚಾಗಬಹುದು
- ಕೇಂದ್ರ ಸರ್ಕಾರವು ಕಾರ್ಪೊರೇಟ್ ಕಂಪನಿಗಳಿಗೆ ಮಣೆ ಹಾಕಲು ಹೊರಟಿದೆ ಎನ್ನುವುದು ಇನ್ನೊಂದು ಆಕ್ಷೇಪ. ಮಸೂದೆಯ 17ನೇ ಸೆಕ್ಷನ್‌ನ 8ನೇ ಉಪ ಸೆಕ್ಷನ್ ಪ್ರಕಾರ, ಬಿತ್ತನೆ ಬೀಜಗಳ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿರುವವರನ್ನು ಪ್ರೋತ್ಸಾಹಿಸುವುದಕ್ಕಾಗಿ ಮತ್ತು ಸುಗಮ ವ್ಯಾಪಾರಕ್ಕೆ ಅನುವು ಮಾಡುವುದಕ್ಕಾಗಿ ಹಲವು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಕಂಪನಿಗಳಿಗಾಗಿ ಪಾರದರ್ಶಕವಾದ ಕೇಂದ್ರ ಮಾನ್ಯತಾ ವ್ಯವಸ್ಥೆಯನ್ನು ರೂಪಿಸಲಿದೆ. ಈ ವ್ಯವಸ್ಥೆಯಡಿ ಮಾನ್ಯತೆ ಪಡೆದ ಕಂಪನಿಗಳು, ಮಾನ್ಯತೆ ಪಡೆದ ದಿನದಿಂದ ಈ ಸೆಕ್ಷನ್ ಅಡಿಯಲ್ಲಿ ನೋಂದಣಿಯಾಗಿವೆ ಎಂದು ಪರಿಗಣಿಸಲಾಗುತ್ತದೆ. ಇದು ಕಾರ್ಪೊರೇಟ್ ಕಂಪನಿಗಳಿಗೆ ಪ್ರಾಮುಖ್ಯ ನೀಡುವುದರ ಜೊತೆಗೆ, ರಾಜ್ಯಗಳ ಅಧಿಕಾರವನ್ನೂ ಕಸಿದುಕೊಳ್ಳುತ್ತದೆ. ದೊಡ್ಡ ಕಂಪನಿಗಳು ಮೂಲ ಮಾನ್ಯತಾ ಪ್ರಮಾಣಪತ್ರವನ್ನು ಸಲ್ಲಿಸಿದರೆ ರಾಜ್ಯಗಳು ಅದನ್ನು ಅಂಗೀಕರಿಸಿ, ರಾಜ್ಯದ ನೋಂದಣಿ ಪತ್ರದಲ್ಲಿ ಈ ಕಂಪನಿಗಳ ವಿವರಗಳನ್ನು ದಾಖಲಿಸಿಕೊಳ್ಳಬೇಕು. ಹೀಗಾದಾಗ, ರಾಜ್ಯ ಸರ್ಕಾರಗಳು ಆ ಕಂಪನಿಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಿವೆ. ಹಲವು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಕಂಪನಿಗಳು ಈ ಮಾನ್ಯತೆಯನ್ನು ಪಡೆಯುವ ಮೂಲಕ ಇಡೀ ದೇಶದ ಮಾರುಕಟ್ಟೆಗೆ ತೆರೆದುಕೊಳ್ಳಲಿವೆ.

26ಕ್ಕೆ ಪ್ರತಿಭಟನೆ

ತಕ್ಷಣವೇ ಈ ಕರಡು ಮಸೂದೆಯನ್ನು ವಾಪಸ್ ಪಡೆಯಬೇಕು ಎಂದು 250ಕ್ಕೂ ಹೆಚ್ಚು ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

'ಇದು ದೇಶದ ಬಿತ್ತನೆ ಬೀಜಗಳ ಸಾರ್ವಭೌಮತ್ವಕ್ಕೆ ಬೆದರಿಕೆ ಒಡ್ಡಲಿದೆ. ಬೀಜ ಕ್ಷೇತ್ರದಲ್ಲಿ ಏಕಸ್ವಾಮ್ಯ ಸಾಧಿಸಲು ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ನೀಡಲಿದೆ, ಬಿತ್ತನೆ ಬೀಜವನ್ನು ಸಂರಕ್ಷಿಸುವ, ಬಳಸುವ, ಹಂಚುವ ರೈತರ ಹಕ್ಕನ್ನು ಕಸಿದುಕೊಳ್ಳಲಿದೆ' ಎಂದು ಹೇಳಿದೆ.

ಅಖಿಲ ಭಾರತ ಕಿಸಾನ್ ಸಭಾ ಕೂಡ ಇಂತಹುದೇ ಅಭಿಪ್ರಾಯ ವ್ಯಕ್ತಪಡಿಸಿದ್ದು, 'ಈ ಶಾಸನವು ವಿನಾಶಕಾರಿ. ದೇಶದ ಕೃಷಿಯನ್ನು ನಾಶಮಾಡಲಿದೆ' ಎಂದು ಆತಂಕ ವ್ಯಕ್ತಪಡಿಸಿದೆ. ಮಸೂದೆಯು ಕಾನೂನು ಆಗಿ ಜಾರಿಗೆ ಬಂದರೆ, ಬಿತ್ತನೆ ಬೀಜಗಳು ದುಬಾರಿಯಾಗಲಿವೆ ಎಂದು ಹೇಳಿದೆ. ದೆಹಲಿಯಲ್ಲಿ ನಡೆದ ಪ್ರತಿಭಟನೆಯ ಐದನೇ ವರ್ಷಾಚರಣೆಯ ದಿನವಾದ ಇದೇ 26ರಂದು ಈ ಮಸೂದೆ ವಿರುದ್ಧ ಪ್ರತಿಭಟನೆ ನಡೆಸಲೂ ಅದು ಕರೆ ನೀಡಿದೆ.

ರಾಷ್ಟ್ರೀಯ

ಚೆನ್ನೈ: ಮಾನವಸಹಿತ ಆಳ ಸಮುದ್ರಯಾನಕ್ಕೆ ಭಾರತ ಸಜ್ಜು

ಚೆನ್ನೈ (ಪಿಟಿಐ): ಮಹತ್ವಾಕಾಂಕ್ಷೆಯ ಸಮುದ್ರಯಾನ ಯೋಜನೆಯ ಮೂಲಕ ಆಳ ಸಮುದ್ರದ ರಸಹ್ಯ ಭೇದಿಸಲು ಭಾರತ ಸಜ್ಜುಗೊಂಡಿದೆ. ಇದೇ ಯೋಜನೆಯ ಭಾಗವಾಗಿ ಮುಂದಿನ ವರ್ಷ ಚೆನ್ನೈ ಕರಾವಳಿಯಲ್ಲಿ ದೇಶದ ಉನ್ನತ ಸಾಗರ ಅಧ್ಯಯನ ಸಂಸ್ಥೆಯ ಇಬ್ಬರು ವಿಜ್ಞಾನಿಗಳು ಸಮುದ್ರದ 500 ಮೀಟರ್ ಆಳಕ್ಕಿಳಿಯಲಿದ್ದಾರೆ.

ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆಯ (ಎನ್‌ಐಒಟಿ) ವಿಜ್ಞಾನಿಗಳಾದ ರಮೇಶ್ ರಾಜು ಹಾಗೂ ಜಿತೇಂದ್ರ ಪಾಲ್ ಸಿಂಗ್ ಅವರು ಆಳ ಸಮುದ್ರಯಾನಕ್ಕೆಂದೇ ದೇಶೀಯವಾಗಿ ನಿರ್ಮಿಸಿರುವ 28 ಟನ್ ತೂಕದ 'ಮತ್ಸ್ಯ-6000' ಹೆಸರಿನ ಸಬ್‌ಮರ್ಸಿಬಲ್ (ಸಮುದ್ರದಡಿ ಸಂಚರಿಸುವ ನೌಕೆ) ನೌಕೆಯಲ್ಲಿ ಸಮುದ್ರದ 500 ಮೀಟರ್ ಆಳಕ್ಕೆ ತೆರಳಿ ಅನ್ವೇಷಣೆ ನಡೆಸಲಿದ್ದಾರೆ.

ಎನ್‌ಐಒಟಿ ನಿರ್ದೇಶಕ ಬಾಲಾಜಿ ರಾಮಕೃಷ್ಣನ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, 'ರಿಮೋಟ್ ಆಧಾರಿತ ಮಾನವರಹಿತ ಸಾಧನಗಳ ಮೂಲಕ ಆಳ ಸಮುದ್ರ ಅನ್ವೇಷಣೆಯನ್ನು ನಾವು ನಡೆಸಿದ್ದೇವೆ. ಆದರೆ, ಇದೇ ಮೊದಲ ಬಾರಿಗೆ ಸಮುದ್ರದ 6,000 ಮೀಟರ್ ಆಳಕ್ಕೆ ಮನುಷ್ಯರನ್ನು ಕಳುಹಿಸಿ ಅನ್ವೇಷಣೆ ನಡೆಸಲು ಉದ್ದೇಶಿಸಿದ್ದೇವೆ. ಇದರ ಮೊದಲ ಹಂತವಾಗಿ ತಜ್ಞರು 500 ಮೀಟರ್ ಆಳಕ್ಕೆ ತೆರಳುತ್ತಿದ್ದಾರೆ' ಎಂದಿದ್ದಾರೆ.

ಅಲ್ಲದೇ, '2027ರಲ್ಲಿ ಇದಕ್ಕಿಂತ 10 ಪಟ್ಟು ಆಳಕ್ಕೆ ತೆರಳಲು ಸಾಧ್ಯವಾಗಲಿದೆ. 6000 ಮೀಟರ್ ಆಳಕ್ಕೆ ತೆರಳಲು ಮತ್ಸ್ಯದಲ್ಲಿ ಪ್ರಸಕ್ತ ಇರುವ ಬಾಯ್ಲರ್ ಸ್ಟೀಲ್ ನೌಕಾ ಕೋಶ (ವಿಜ್ಞಾನಿಗಳು ಇರುವ ಜಾಗ) ಬದಲಿಸಿ, ಟೈಟಾನಿಯಂ ಕೋಶವನ್ನು ಅಳವಡಿಸಬೇಕಿದೆ. ಸದ್ಯಕ್ಕೆ ಬೆಂಗಳೂರಿನಲ್ಲಿರುವ ಇಸ್ರೊದ ಲಿಕ್ವಿಡ್ ಪ್ರೊಪಲ್ಶನ್ ಸಿಸ್ಟಮ್ ಸೆಂಟರ್‌ನಲ್ಲಿ ಅದನ್ನು ಅಭಿವೃದ್ಧಿಪಡಿಸಲಾಗುತ್ತಿದೆ' ಎಂದೂ ಬಾಲಾಜಿ ಹೇಳಿದ್ದಾರೆ.

ಮಾನವಸಹಿತ ಆಳ ಸಮುದ್ರಯಾನಕ್ಕೆ ಸಜ್ಜಾಗಿರುವ ಸಬ್‌ಮರ್ಸಿಬಲ್ ನೌಕೆ ಮತ್ಸ್ಯ-6000ರ ಪರೀಕ್ಷಾರ್ಥ ಪ್ರಯೋಗವನ್ನು ಚೆನ್ನೈನ ಬಂದರಿನಲ್ಲಿ ನಡೆಸಲಾಯಿತು — ಪಿಟಿಐ ಚಿತ್ರ

ಅತ್ಯಂತ ಆಳ ಸಮುದ್ರದಲ್ಲಿ ಮಾನವಸಹಿತ ಅನ್ವೇಷಣೆ ನಡೆಸುವ ಸಾಮರ್ಥ್ಯವು ಕೆಲವೇ ರಾಷ್ಟ್ರಗಳಲ್ಲಿದ್ದು, ಸಮುದ್ರಯಾನ ಯೋಜನೆ ಯಶಸ್ವಿಯಾದರೆ ಭಾರತವೂ ಈ ಸಾಲಿಗೆ ಸೇರ್ಪಡೆಯಾಗಲಿದೆ.

ಮತ್ಸ್ಯ – 6000

ಆಳ ಸಮುದ್ರಯಾನಕ್ಕೆಂದು ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಈ ನೌಕೆಯು ಪ್ರತಿ ನಿಮಿಷಕ್ಕೆ 30 ಮೀಟರ್ ಆಳದವರೆಗೆ ಸಂಚರಿಸಲಿದೆ. ಸಮುದ್ರದ ಆಳದಲ್ಲಿರುವ ಕತ್ತಲೆ ಭಾಗದಲ್ಲೂ ಅನ್ವೇಷಣೆಗೆ ಅನುವಾಗುವಂತೆ ದೀಪಗಳನ್ನು ಇದರಲ್ಲಿ ಅಳವಡಿಸಲಾಗಿದೆ.

ಜತೆಗೆ ಸಮುದ್ರದಲ್ಲಿ ಲಭ್ಯವಾಗುವ ಖನಿಜ ಸೇರಿದಂತೆ ಇತರೆ ವಸ್ತುಗಳ ಮಾದರಿಯನ್ನು ಸಂಗ್ರಹಿಸಲು ನೌಕೆಯಲ್ಲಿ ರೋಬೊಟಿಕ್ ಕೈಗಳೂ ಇವೆ.

ಮಧ್ಯ ಪ್ರದೇಶ: ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವಯಸ್ಸು 61 ವರ್ಷಕ್ಕೆ ಹೆಚ್ಚಳ

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು 60ರಿಂದ 61 ವರ್ಷಕ್ಕೆ ಹೆಚ್ಚಿಸಿ ಸುಪ್ರೀಂ ಕೋರ್ಟ್ ಗುರುವಾರ ಆದೇಶ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಪ್ರಸನ್ನ ಬಿ. ವರಾಳೆ ಮತ್ತು ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವು ಮಧ್ಯಂತರ ಆದೇಶದಲ್ಲಿ, ತೆಲಂಗಾಣ ಹೈಕೋರ್ಟ್ ತೆಗೆದುಕೊಂಡ ಇದೇ ರೀತಿಯ ನಿರ್ಧಾರವನ್ನು ಉಲ್ಲೇಖಿಸಿದೆ. 'ರಾಜ್ಯ ಸರ್ಕಾರವು ಪರಿಹಾರ ನೀಡಲು ಸಿದ್ಧರಿರುವಾಗ ನ್ಯಾಯಾಂಗ ಅಧಿಕಾರಿಗಳಿಗೆ ಅದನ್ನು ಏಕೆ ನಿರಾಕರಿಸಬೇಕು' ಎಂದು ಕೇಳಿದೆ. 'ನ್ಯಾಯಾಂಗ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಇತರ ನೌಕರರು ಒಂದೇ ಬೊಕ್ಕಸದಿಂದ ಸಂಬಳ ಪಡೆಯುತ್ತಾರೆ. ಇತರ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 62 ವರ್ಷ ಇದೆ. ಹೈಕೋರ್ಟ್ ನ್ಯಾಯಮೂರ್ತಿಗಳು ಮತ್ತು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸಿನ ನಡುವೆ ಒಂದು ವರ್ಷದ ವ್ಯತ್ಯಾಸವಿದೆ' ಎಂದು ಹೇಳಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳು 62 ವರ್ಷ ವಯಸ್ಸಿಗೆ ನಿವೃತ್ತರಾಗುತ್ತಾರೆ. ಈಗ ಮಧ್ಯಪ್ರದೇಶದಲ್ಲಿ ಜಿಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರ ನಿವೃತ್ತಿ ವಯಸ್ಸು 61ಕ್ಕೆ ಏರಿಕೆಯಾಗಿದೆ.

ನಾಲ್ಕು ವಾರಗಳ ನಂತರ ಅಂತಿಮ ವಿಚಾರಣೆ ನಡೆಸುವುದಾಗಿ ಹೇಳಿದ ಪೀಠವು, ಅರ್ಜಿ ವಿಚಾರಣೆ ಮುಂದೂಡಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮುಂಬೈ ಹೊರವಲಯದ ಪಶ್ಚಿಮ ಅಂಧೇರಿಯ ಲೋಖಂಡವಾಲದಲ್ಲಿ ಭಯೋತ್ಪಾದಕನೊಬ್ಬನನ್ನು ಬಂಧಿಸಲಾಗಿದೆ ಎಂದು ಪ್ರತಿಪಾದಿಸುತ್ತಾ ಪೊಲೀಸರು ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದುಕೊಂಡು ತಮ್ಮ ವಾಹನದತ್ತ ಕರೆದೊಯ್ಯುತ್ತಿರುವ ವಿಡಿಯೊ ತುಣುಕನ್ನು 'ಎಕ್ಸ್' ಬಳಕೆದಾರರೊಬ್ಬರು ಹಂಚಿಕೊಂಡಿದ್ದಾರೆ. ತಮ್ಮ ಮನೆಯಿಂದ ಕೆಲವೇ ಮೀಟರ್‌ಗಳಷ್ಟು ದೂರದಲ್ಲಿರುವ ಕಾಮಧೇನು ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಬಂಧನವಾಗಿದೆ ಎಂದು ಅವರು ಹೇಳಿದ್ದಾರೆ. ದೆಹಲಿಯಲ್ಲಿ ಕಾರು ಬಾಂಬ್ ಸ್ಫೋಟಗೊಂಡ ನಂತರದಲ್ಲಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. ಆದರೆ, ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ ಇದೇ 16ರಂದು ಫ್ರೀ ಪ್ರೆಸ್ ಜರ್ನಲ್‌ನಲ್ಲಿ ಪ್ರಕಟವಾದ ವರದಿಯೊಂದು ಸಿಕ್ಕಿತು. ಅದರೊಂದಿಗೆ ವಿಡಿಯೊ ತುಣುಕು ಕೂಡ ಇತ್ತು. ಮುಂಬೈ ಪೊಲೀಸರು ನಡೆಸಿದ ಅಣಕು ಬಂಧನ ಕಾರ್ಯಾಚರಣೆಯ ವಿಡಿಯೊ ಅದಾಗಿತ್ತು. ನಗರದಲ್ಲಿ ಭಯೋತ್ಪಾದನಾ ದಾಳಿ ನಡೆದಾಗ ಯಾವ ರೀತಿ ಕಾರ್ಯಾಚರಣೆ ನಡೆಸಲಾಗುತ್ತದೆ ಎಂಬುದನ್ನು ಜನರಿಗೆ ತೋರಿಸುವುದಕ್ಕಾಗಿ ಅಣಕು ಕಾರ್ಯಾಚರಣೆ ನಡೆಸಲಾಗಿದೆ ಎಂದು ಓಶಿವಾರಾ ಪೊಲೀಸರು ಸ್ಪಷ್ಟನೆ ನೀಡಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಓಶಿವಾರಾ ಪೊಲೀಸರನ್ನು ಸಂಪರ್ಕಿಸಿದಾಗ, ಅದು ನಿಜವಾದ ವಿಡಿಯೊ ಅಲ್ಲ, ಭದ್ರತಾ ಅಧಿಕಾರಿಗಳು ನಡೆಸಿದ ಅಣಕು ಕಾರ್ಯಾಚರಣೆಯದ್ದು ಎಂದು ಸ್ಪಷ್ಟಪಡಿಸಿದರು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನೀರೊಳಗಣ ಕಿಚ್ಚಿಗೆ ನೀರೇ ತಾಯಿ

ನುಡಿ ಬೆಳಗು



ರೇಣುಕಾ ನಿಡಗುಂದಿ

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ 80 ವರ್ಷ ವಯಸ್ಸಿನ ಅಜ್ಜ, ತನ್ನ ಹದಿಹರಯದ ಮೊಮ್ಮಗನನ್ನು ಕೈಯಾರೆ ಕೊಂದು ಹಾಕುತ್ತಾನೆ. ಅವನ ಅಂಗಾಂಗಗಳನ್ನು ತುಂಡರಿಸಿ ಬೇರೆ ಬೇರೆ ಕಡೆಗಳಲ್ಲಿ ಎಸೆದು ಬರುತ್ತಾನೆ. ಯಾರೋ ಮಾಂತ್ರಿಕ, 'ಈ ಹುಡುಗನ ಕಾರಣದಿಂದ ನಿನಗೆ ಕಷ್ಟಗಳು ಬಂದಿವೆ. ಇವನನ್ನು ಬಲಿಕೊಟ್ಟರೆ ನಿನ್ನ ಕುಟುಂಬಕ್ಕೆ ತಗುಲಿದ ಶಾಪ ಕಳೆಯುತ್ತದೆ' ಎಂದು ಹೇಳಿದ್ದಕ್ಕೆ ಕುರುಡು ನಂಬಿಕೆಯಲ್ಲಿ ಶಾಪವನ್ನು ಕಳೆದುಕೊಳ್ಳುವುದಕ್ಕಾಗಿ ಆತ ತನ್ನದೇ ವಂಶದ ಕುಡಿಯನ್ನು ಕೊಲೆ ಮಾಡುತ್ತಾನೆ. ನಾವಿರುವ 21ನೇ ಶತಮಾನದ ಘಟನೆಯಿದು. ಶಿಷ್ಟ ಸಮಾಜದಲ್ಲಿ ಇಂಥ ಘಟನೆಗಳಿಗೆ ಜನರು ಪ್ರತಿಕ್ರಿಯಿಸದಷ್ಟು ಸಂವೇದನೆ ಹೀನರಾಗಿದ್ದಾರೆ. ಈ ಪ್ರಗತಿಶೀಲ ಶಿಷ್ಟ ಸಮಾಜ ಇಷ್ಟೊಂದು ಮೌಢ್ಯದಲ್ಲಿ ನರಳುತ್ತಿದೆಯೆಂಬುದನ್ನು ಅರ್ಥೈಸುವುದಾದರೂ ಹೇಗೆ? ಮಾಂತ್ರಿಕನ ಮಾತಿಗೆ ಮರುಳಾಗಿ ಕರುಳುಬಳ್ಳಿಯನ್ನೇ ಕೊಲೆಮಾಡುವಷ್ಟು ಮನುಷ್ಯನ ನೈತಿಕತೆ ಕುಸಿದಿದೆಯೇ? ಹೌದು ಎನ್ನುವುದೇ ಸುಡುವಾಸ್ತವ.

ಹೊಸ ದಾಂಪತ್ಯಕ್ಕೆ ಕಾಲಿಟ್ಟ ಯುವತಿ ಪತಿಯನ್ನೇ ಕೊಂದು ಹಾಕುತ್ತಾಳೆ. ಪತಿಯು ವರದಕ್ಷಿಣೆಗಾಗಿ ತನ್ನ ಪತ್ನಿಯನ್ನು ಸುಟ್ಟು ಹಾಕುತ್ತಾನೆ. ಇನ್ನಾರೋ ತಾಯಿ ಹೆತ್ತ ಕಂದನನ್ನೇ ಕೊಲ್ಲುತ್ತಾಳೆ. ಇಷ್ಟೊಂದು ಕ್ರೌರ್ಯ, ಅನಾಗರಿಕತೆ ಮನುಷ್ಯರೊಳಗಡೆ ಹಾವಿನಂತೆ ಸುರುಳಿಸುತ್ತಿಕೊಂಡಿರುತ್ತದೆಯೇ? ಹೌದಾದರೆ ಇವನಂತಹ ದುಷ್ಟ ಪ್ರಾಣಿ ಬೇರೊಂದಿಲ್ಲ. ಕಾಡಿನೊಳಗೆ ಒಬ್ಬರೇ ಹೋಗುತ್ತಿದ್ದೀರಿ ಎಂದುಕೊಳ್ಳಿ. ಆಗ ಹುಲಿ ಎದುರಾಗುತ್ತದೆ. ಹುಲಿ ಹಸಿದಿದ್ದರೆ ಮಾತ್ರ ಅದು ನಿಮ್ಮ ಮೇಲೆರಗುತ್ತದೆ. ಆದರೆ ಒಬ್ಬ ಮನುಷ್ಯ ಅನ್ಯರ ಮೇಲೆ ಯಾವಾಗ ಎಲ್ಲಿ ಹೇಗೆ ಎರಗುತ್ತಾನೋ, ಆಕ್ರಮಣಕಾರಿಯಾಗುತ್ತಾನೋ ಎಂಬುದಕ್ಕೆ ದೊಡ್ಡ ಕಾರಣವೇ ಬೇಕಿರುವುದಿಲ್ಲ. 50 ರೂಪಾಯಿಯ ಬೀದಿ ಜಗಳದಲ್ಲೂ ಕೊಲೆ ಮಾಡಿದವರಿದ್ದಾರೆ. ಮನುಷ್ಯರಲ್ಲಿ ಇಷ್ಟೊಂದು ಸ್ವಾರ್ಥ, ಮೌಢ್ಯ, ನೀಚತನ ಯಾಕೆ ಮನೆ ಮಾಡಿದೆ?

ಜೋಹಾನಸ್‌ಬರ್ಗ್‌ನಲ್ಲಿ ಒಂದು ಸಭೆಯಲ್ಲಿ ಗಾಂಧೀಜಿಯವರ ಭಾಷಣ ನಡೆದಿತ್ತು. ಜನರು ಕಿಕ್ಕಿರಿದಿದ್ದರು. ಗಾಂಧೀಜಿ ಅವರು ಭಾಷಣ ಮುಗಿದ ಮೇಲೆ ವೇದಿಕೆ ಇಳಿದು ಸಭಾಭವನದ ಹೊರಗೆ ಬಂದಾಗ ಹೊರಬಾಗಿಲ ಮರೆಯಲ್ಲಿ ಒಬ್ಬ ಅವಿತುಕೊಂಡಿದ್ದನ್ನು ಕಂಡರು. ಆಗ ಅವರು ಅವನ ಬಳಿಗೆ ಹೋಗಿ ಹೆಗಲ ಮೇಲೆ ಕೈಹಾಕಿ ಮೆಲುದನಿಯಲ್ಲಿ ಗಂಭೀರವಾಗಿ ಏನೋ ಮಾತಾಡಿದರು. ಆ ಮನುಷ್ಯ ಮೊದಲು ಗಾಂಧೀಜಿಯ ಜೊತೆಗೆ ಬರಲು ಅನುಮಾನಿಸಿದ; ತರುವಾಯ ಜೊತೆಗೆ ಹೆಜ್ಜೆಹಾಕತೊಡಗಿದ. ಇನ್ನೊಂದು ಪಕ್ಕದಲ್ಲಿ ಶ್ರೀಮತಿ ಮಿಲ್ಲೀ ನಡೆಯುತ್ತಿದ್ದಳು. ಬೀದಿಯುದ್ದಕ್ಕೂ ಮೆದುವಾದ ಮಾತುಕತೆ. ಕೆಲಕಾಲ ನಡೆದ ಮೇಲೆ ಆ ವ್ಯಕ್ತಿ ಗಾಂಧೀಜಿಯ ಕೈಗೆ ಏನನ್ನೋ ಕೊಟ್ಟು ಹೊರಟುಹೋಗುತ್ತಾನೆ. ಆತ ಗಾಂಧೀಜಿಯನ್ನು ಕೊಲ್ಲಲು ಬಂದಿದ್ದ. ಗಾಂಧೀಜಿ, 'ನಾನು ಆ ಜನಕ್ಕೆ ದ್ರೋಹ ಮಾಡಿದ್ದೇನೆಂದೂ ಸರ್ಕಾರದೊಡನೆ ಸೇರಿ ಜನರ ವಿರುದ್ಧ ಒಳಸಂಚು ನಡೆಸುತ್ತಿದ್ದೇನೆಂದೂ ಅವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೇನೆಂದೂ ಅವನು ತಿಳಿದಿದ್ದ. ಒಂದೆರಡು ಮಾತು ಆಡಿದ ಮೇಲೆ ಆತ ಇರಿಯಲು ತಂದಿದ್ದ ಚಾಕುವನ್ನೇ ನನಗೆ ಕೊಟ್ಟು ಹೋದ' ಎನ್ನುತ್ತಾರೆ. ಹೀಗೆ ಗಾಂಧೀಜಿ ಕೊಲ್ಲಲು ಬಂದವನ ಮನಸ್ಸನ್ನೇ ಪರಿವರ್ತಿಸುತ್ತಾರೆ.

'ನೀರೊಳಗಣ ಕಿಚ್ಚಿಗೆ ನೀರೇ ತಾಯಿ, ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ, ಮರದೊಳಗಣ ಕಿಚ್ಚಿಗೆ ಮರವೇ ತಾಯಿ, ಅವು ಹೊರಹೊಮ್ಮಿದಾಗ ತಾಯ ತಿಂದು ತಾವು ತಲೆದೋರುವಂತೆ' ಎನ್ನುತ್ತಾನೆ ಶರಣ ಮೆರೆಮಿಂಡಯ್ಯ.

ಅದೇ ರೀತಿ, ಮನುಷ್ಯನೊಳಗಿನ ಕಿಚ್ಚು, ನಂಜು ಕಡೆಗೆ ಅವನನ್ನೇ ತಿಂದುಹಾಕುತ್ತವೆ. ❖

ಗುಂಡಣ್ಣ

ಪದಬಂಧ 6230

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಚರ್ಚೆಗೆ ಗ್ರಾಸವಾದ ವಾದ! (3)
3. ಪ್ರಯಾಸವಾಗದ ಪಯಣ (3)
5. ಅಭಿವ್ಯಕ್ತಿಗೊಳಿಸುತ್ತಿರುವ ಮನುಷ್ಯ! (2)
6. ಒಳ್ಳೆಯ ಭಾವನೆ (3)
7. ತಕಲಿ ಹಿಡಿದಿರುವ ಶೂರ! (2)
9. ನಗರದಿಂದ ತಂದಿರುವ ಆಭರಣ (2)
11. ಪುಷ್ಪಗಳನ್ನು ಜೋಡಿಸಿಡುವ ಕರಂಡ (3)
13. ದ್ವಾಪರ ಯುಗದಲ್ಲಿ ತೆರೆಯುವ ಬಾಗಿಲು! (2)
14. ಒಳ್ಳೆಯ ಸ್ವಭಾವವಿದು (3)
15. ಗರ ಬಡಿದಂತಿರುವ ಮುಖ್ಯಪಟ್ಟಣ (3)

ಮೇಲಿಂದ ಕೆಳಕ್ಕೆ

1. ಮೋಕ್ಷಕ್ಕೊಂದು ಪರ್ಯಾಯ ಪದ (3)
2. ಆ ದಿವಸ ತಂದಿಟ್ಟಿರುವ ಕಾಳುಕಡಿ (3)
3. ಭಾವ ಬೀರಿದ ವರ್ಚಸ್ಸು! (3)
4. ಈತ ಸರಿ ಸಮಾನನಾದವನು (3)
5. ಕಳೆಯುವ ಲೆಕ್ಕವಿದು (5)
8. ಲೀಲಾಜಾಲವಾಗಿ ಹರಾಜು ಹಾಕುತ್ತಿರುವವನು (5)
10. ಕತ್ತಿಯನ್ನು ಇಡುವ ಕೋಶ (3)
11. ಪುಷ್ಪದ ಶರ ಇಲ್ಲಿದೆ (3)
12. ತಡ ಎಂದು ಹೀಗೆನ್ನಿ (3)
13. ನಾಲ್ಕು ಯುಗಗಳಲ್ಲಿ ಮೂರನೆಯದು (3)



6229ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಜ್ಞಾನಿ 2.ಮತಗಟ್ಟೆ 4.ರಾವಣ 5.ಹಸನ್ಮುಖ 7.ಮನವಿ 9.ಶಿವಮೊಗ್ಗ 11.ಕರ 12.ಗತಿ 13.ಮತದಾನ 15.ಸಂಕರ 17.ವೀರಕಾವ್ಯ 19.ಸದನ 20.ಹರಿದಾರಿ 21.ಅಶನ

ಮೇಲಿಂದ ಕೆಳಕ್ಕೆ:
1.ವಿವಾಹ 2.ಮನೆ 3.ಗಗನ 4.ರಖಿಶಿ 6.ಸವಾರ 7.ಮಗ್ಗ 8.ವಿನಂತಿ 10.ವನದಾ 11.ಕದೂಸಂ 12.ಗಳಕಾ 13.ಮರ 14.ನವೀನ 16.ಕಸ್ತೂರಿ 18.ವ್ಯಸನ 19.ಸರಿ

ಸುಡೊಕು 6614

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	6		2			
	3				4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

6613 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ನವೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಪ್ರತಿಪದ್ ಗಂ 14-48 ನಕ್ಷತ್ರ: ಅನುರಾಧ ಗಂ 13-56 ಯೋಗ: ಅತಿಗಂಡ ಗಂ. 10-43 ಕರಣ: ಬವ ಗಂ. 14-48 ವೃಶ್ಚಿಕ ಮಾಸದ 06 ನೇ ದಿನ. ಮಳೆ ನಕ್ಷತ್ರ : ಅನುರಾಧ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-36 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 29 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 10, 7

ಮೇಷ: ಸ್ನೇಹಿತರ ಭರವಸೆಯ ಮಾತುಗಳು ಸೋಲುಗಳನ್ನು ಮೆಟ್ಟಿ ಆಶಾಭಾವನೆಯನ್ನು ತರುತ್ತದೆ. ಉದ್ಯಮದ ವಿಚಾರದಲ್ಲಿ ಹಿತಶತ್ರುಗಳ ಭಯ ಬಹಳವಾಗಿ ಕಾಡುತ್ತದೆ. ಕೃಷಿ ಕೆಲಸಗಳಿಗೆ ಸಮಯ ಸಿಗುವುದು.

ವೃಷಭ: ಸಂಪರ್ಕ ಸಂಬಂಧಿತ ಸಾಧನಗಳ ನಿರ್ವಹಣೆಯ ಕೊರತೆಯಿಂದ ಕೈಕೊಡುವ ಸಾಧ್ಯತೆ ಇದೆ. ಗುರುಗಳ ಮನಸ್ಸಿಗೆ ನೋವು ಉಂಟುಮಾಡುವಂಥ ಕೆಲಸ ಮಾಡದಿರಿ. ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ.

ಮಿಥುನ: ವೃತ್ತಿರಂಗದಲ್ಲಿ ಅನಿಶ್ಚಿತ ಸ್ಥಾನವು ನಿಷ್ಠೆಯ ನಡೆಯಿಂದಾಗಿ ನಿಶ್ಚಯವಾಗುತ್ತದೆ. ಪಾಲುದಾರಿಕೆಯನ್ನು ಮುಂದುವರಿಸುವ ಯೋಚನೆಯನ್ನು ಮಾಡಬಹುದು. ಅದರ ಬಗ್ಗೆ ಋಣಾತ್ಮಕವಾಗಿ ಚಿಂತಿಸದಿರಿ.

ಕರ್ಕಾಟಕ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಸಲಹೆ ಬರುವುದು. ದೈನಂದಿನ ಆಗುಹೋಗುಗಳ ಬಗ್ಗೆ ಗಮನಹರಿಸಿ. ಕ್ರೀಡೆಯಲ್ಲಿ ಜಯದ ಜತೆಗೆ ನೆಮ್ಮದಿ ನಿಮ್ಮದಾಗುತ್ತದೆ.

ಸಿಂಹ: ಮನುಷ್ಯ ಪ್ರಯತ್ನದ ಜತೆಯಲ್ಲಿ ದೇವರ ಕೃಪೆಗೆ ಪಾತ್ರರಾಗುವ ರೀತಿಯಲ್ಲಿ ನಡೆದುಕೊಂಡಾಗ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಪರಿಚಯವೇ ಇಲ್ಲದ ವ್ಯಕ್ತಿಯು ಸಹಕಾರ ನೀಡುವರು.

ಕನ್ಯಾ: ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಪೊಲೀಸ್ ಸಿಬ್ಬಂದಿಗೆ ಕೆಲಸವಿರಲಿದೆ.

ತುಲಾ: ಕುಟುಂಬದವರೊಡನೆ ಸಂಜೆಯನ್ನು ಸಂತೋಷದಿಂದ ಕಳೆಯುವಂತಾಗಲಿದೆ. ತಾಳ್ಮೆಯಿಂದ ವರ್ತಿಸಿದಲ್ಲಿ ಉತ್ತಮ ಫಲಿತಾಂಶ ಪಡೆಯುವಿರಿ. ಕಣ್ಣು, ಕಿವಿಗೆ ಸಂಬಂಧಿಸಿದ ಸಮಸ್ಯೆ ಇದ್ದಲ್ಲಿ ವೈದ್ಯರನ್ನು ಭೇಟಿ ಮಾಡಿರಿ.

ವೃಶ್ಚಿಕ: ಗುರಿ ಸಾಧಿಸಲು ಅನಿವಾರ್ಯವಾಗಿರುವ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದು ಉತ್ತಮ. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಮುಂದಿನ ಹೆಜ್ಜೆ ಇಡುವುದು ಸೂಕ್ತ.

ಧನು: ಸಂಗಾತಿಯ ಅಗಲುವಿಕೆಯು ತಾತ್ಕಾಲಿಕವಾದುದು ಎಂಬುದನ್ನು ಅರಿತುಕೊಳ್ಳಿ. ಉತ್ಪ್ರೇಕ್ಷೆ ಎನ್ನಿಸುವ ಕೆಲವು ಹೊಗಳಿಕೆಯ ಮಾತುಗಳಿಗೆ ಮರುಳಾಗದಿರಿ. ಲೇವಾದೇವಿ ವ್ಯವಹಾರ ನಡೆಸುವವರು ವಿಶ್ರಾಂತಿ ಪಡೆಯಿರಿ.

ಮಕರ: ಮನೆ ನಿರ್ಮಾಣದ ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗಲಿದ್ದೀರಿ. ಸ್ವಂತ ಊರಿನಲ್ಲಿ ಸ್ಥಾನಮಾನದಿಂದಾಗಿ ಹೆಚ್ಚಿನ ಗೌರವ ದೊರೆಯುವುದು.

ಕುಂಭ: ಜೀವನ ಶೈಲಿಯಲ್ಲಿ ಯಾವುದೇ ಬದಲಾವಣೆ ಬೇಡವೆಂದು ನಿಶ್ಚಯಿಸುವುದು ಉತ್ತಮ. ಸಂಗೀತ ಕಚೇರಿ, ನೃತ್ಯ ಕಾರ್ಯಕ್ರಮ ನೀಡುವ ಕಲಾವಿದರಿಗೆ ಬೇಡಿಕೆ ಹೆಚ್ಚಲಿದೆ. ಅಭದ್ರತೆಯ ಭಾವ ಬಿಟ್ಟು ಹೋಗಲಿದೆ.

ಮೀನ: ಅನಿರೀಕ್ಷಿತ ಘಟನೆಗಳಿಂದ ಇತರರ ಎದುರು ತಲೆತಗ್ಗಿಸ ಬೇಕಾದ ಪರಿಸ್ಥಿತಿ ಬರುವುದು. ಎಣ್ಣೆಯಲ್ಲಿ ಕರಿದ ಖಾದ್ಯಗಳ ಸೇವನೆಯಿಂದ ಅನಾರೋಗ್ಯ ಎದುರಾಗಬಹುದು.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ	
ಹಿಂದಿನ ಅಂತ್ಯ:	26,052
ಇಂದಿನ ಅಂತ್ಯ:	26,192
ದಿನದ ಗರಿಷ್ಠ:	26,246
	139

ಮೊಟ್ಟೆ ಧಾರಣೆ (ಎನ್ಇಸಿಸಿ) ಬೆಂಗಳೂರು

100 ಕ್ಕೆ	₹675
12 ಕ್ಕೆ	₹96
ಮೈಸೂರು: 100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹182
ಆರ್ಎಸ್ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹533-766
ದ್ವಿತಳಿ (ಬಿ.ವಿ)	₹245-895

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹29000
ಎಸಿ	₹15540
ಆರ್‌ಪಿ	₹19100
ಆರ್‌ಸಿ	₹10775

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1255 (1260)

26 ಕಂಪನಿಗಳಲ್ಲಿ ಡಾರ್ಕ್ ಪ್ಯಾಟರ್ನ್ ಇಲ್ಲ

ಕೇಂದ್ರ ಸರ್ಕಾರಕ್ಕೆ ಸ್ವ-ಇಚ್ಛೆಯ ಮುಚ್ಚಳಿಕೆ ನೀಡಿದ ಕಂಪನಿಗಳು

ನವದೆಹಲಿ (ಪಿಟಿಐ): ಇ-ವಾಣಿಜ್ಯ ಕ್ಷೇತ್ರದ 26 ಪ್ರಮುಖ ಕಂಪನಿಗಳು ತಾವು ಗ್ರಾಹಕರನ್ನು ತಪ್ಪುದಾರಿಗೆ ಎಳೆಯುವ ಕೆಲಸ ಮಾಡುತ್ತಿಲ್ಲ, ನ್ಯಾಯಸಮ್ಮತ ವಲ್ಲದ ವ್ಯಾಪಾರ ಪದ್ಧತಿಗಳನ್ನು ಅನುಸರಿಸುತ್ತಿಲ್ಲ ಎಂಬುದಾಗಿ ಮುಚ್ಚಳಿಕೆ ನೀಡಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಹೀಗೆ ಮುಚ್ಚಳಿಕೆ ನೀಡಿರುವ ಕಂಪನಿಗಳ ಪಟ್ಟಿಯಲ್ಲಿ ಜೆಪ್ಟೊ, ಬಿಗ್‌ಬಾಸ್ಕೆಟ್, ಸ್ವಿಗ್ಗಿ, ಜಿಯೊಮಾರ್ಟ್, ಜೊಮಾಟೊ ಪ್ರಮುಖವಾಗಿವೆ. ಇ-ವಾಣಿಜ್ಯ ವೇದಿಕೆಗಳು ನ್ಯಾಯಸಮ್ಮತ ವಲ್ಲದ ಇಂತಹ ಕ್ರಮಗಳನ್ನು ಆಶ್ರಯಿಸಿವೆಯೇ ಎಂಬ ಬಗ್ಗೆ ಕೇಂದ್ರ ಸರ್ಕಾರವು ನಿಗಾ ಇರಿಸಿದೆ.

26 ಕಂಪನಿಗಳು ಸ್ವ-ಇಚ್ಛೆಯಿಂದ ಮುಚ್ಚಳಿಕೆ ನೀಡಿವೆ. ಗ್ರಾಹಕರನ್ನು ತಪ್ಪುದಾರಿಗೆ ಎಳೆಯುವಂತಹ ಪದ್ಧತಿಗಳನ್ನು (ಡಾರ್ಕ್ ಪ್ಯಾಟರ್ನ್) ತಡೆಯಲು ಜಾರಿಗೆ ತಂದಿರುವ ನಿಯಮಗಳಿಗೆ ಬದ್ಧವಾಗಿ ತಾವು ನಡೆದುಕೊಳ್ಳುವುದಾಗಿ ಈ ಕಂಪನಿಗಳು ಹೇಳಿವೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ

ಇಲಾಖೆಯು ಗುರುವಾರ ತಿಳಿಸಿದೆ.

ಕಂಪನಿಗಳು ತಾವಾಗಿಯೇ ಮುಚ್ಚಳಿಕೆ ನೀಡಿರುವುದು ಡಿಜಿಟಲ್ ಮಾರುಕಟ್ಟೆಯಲ್ಲಿ ಗ್ರಾಹಕರ ಹಿತವನ್ನು ರಕ್ಷಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದು ಇಲಾಖೆ ಹೇಳಿದೆ.

ಈ 26 ಕಂಪನಿಗಳು ಆಂತರಿಕ ಪರಿಶೀಲನೆಯೊಂದನ್ನು ನಡೆಸಿವೆ, ಡಾರ್ಕ್ ಪ್ಯಾಟರ್ನ್ ಅಂಶಗಳು ತಮ್ಮಲ್ಲಿವೆಯೇ ಎಂಬುದನ್ನು ಪರಿಶೀಲಿಸಿ, ಅವು ಇದ್ದರೆ ಅವುಗಳನ್ನು ತೆಗೆಯಲಾಗಿದೆ ಎಂದು ಇಲಾಖೆಯ ಹೇಳಿಕೆಯು ತಿಳಿಸಿದೆ.

ಈ ಬಗೆಯಲ್ಲಿ ಮುಚ್ಚಳಿಕೆಯನ್ನು ಕೆಲವು ಕಂಪನಿಗಳು ನೀಡಿರುವುದು, ಇತರ ಕಂಪನಿಗಳಿಗೂ ಅದೇ ಮಾರ್ಗ ಅನುಸರಿಸಲು ಪ್ರೇರಣೆ ಆಗುತ್ತದೆ ಎಂದು ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಹೇಳಿದೆ.

ತಮ್ಮಲ್ಲಿ ಯಾವುದಾದರೂ ಡಾರ್ಕ್ ಪ್ಯಾಟರ್ನ್‌ಗಳು ಇವೆಯೇ ಎಂಬ ಬಗ್ಗೆ ಇ-ವಾಣಿಜ್ಯ ವೇದಿಕೆಗಳು ಪರಿಶೀಲನೆ ನಡೆಸಬೇಕು, ಇದ್ದಲ್ಲಿ ಅವುಗಳನ್ನು ನಿವಾರಿಸಬೇಕು ಎಂದು ಸಿಸಿಪಿಎ ಜೂನ್‌ನಲ್ಲಿ ಸಲಹೆ ನೀಡಿತ್ತು.

ಡಾರ್ಕ್ ಪ್ಯಾಟರ್ನ್‌ಗಳನ್ನು ಗುರುತಿಸಿ ಅವುಗಳ ಬಗ್ಗೆ ವರದಿ ಮಾಡಬೇಕು ಎಂದು ಗ್ರಾಹಕರಿಗೆ ಮಾಹಿತಿ ನೀಡಲಾಗಿದೆ ಎಂದು ಇಲಾಖೆ ಹೇಳಿದೆ. ಗ್ರಾಹಕರು ನೀಡುವ ದೂರುಗಳನ್ನು ವ್ಯವಸ್ಥಿತವಾಗಿ ಇತ್ಯರ್ಥಪಡಿಸಲಾಗುತ್ತದೆ ಹಾಗೂ ಕೆಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

ಕಣ್ಕಟ್ಟು ತಂತ್ರಗಳು ಹೇಗಿರುತ್ತವೆ?

2023ರ ನವೆಂಬರ್‌ನಲ್ಲಿ ಅಧಿಸೂಚನೆಯಲ್ಲಿ ಪ್ರಕಟಿಸಲಾದ ಡಾರ್ಕ್ ಪ್ಯಾಟರ್ನ್‌ಗಳ ತಡೆ ಮತ್ತು ನಿಯಂತ್ರಣ ಮಾರ್ಗಸೂಚಿಗಳು 13 ಬಗೆಯ ಡಾರ್ಕ್ ಪ್ಯಾಟರ್ನ್‌ಗಳನ್ನು ಗುರುತಿಸಿ, ನಿರ್ಬಂಧಿಸಿವೆ.

ಅವುಗಳಲ್ಲಿ ಕೆಲವು ಹೀಗಿವೆ:

- ಉತ್ಪನ್ನಗಳ ಸಂಗ್ರಹ ಹೆಚ್ಚಿಲ್ಲ ಎಂದು ಹೇಳಿ, ಅವುಗಳನ್ನು ಬೇಗನೆ ಖರೀದಿಸಬೇಕು ಎಂಬ ಆತುರವನ್ನು ಗ್ರಾಹಕರಲ್ಲಿ ವಿನಾಕಾರಣ ಮೂಡಿಸುವುದು
- ಗ್ರಾಹಕರ ಒಪ್ಪಿಗೆ ಇಲ್ಲದೆಯೇ ಅವರ ಖರೀದಿ ಬುಟ್ಟಿಗೆ ಹೆಚ್ಚುವರಿ ಉತ್ಪನ್ನಗಳನ್ನು ಸೇರಿಸುವುದು
- ನಿರ್ದಿಷ್ಟ ಉತ್ಪನ್ನವೊಂದನ್ನು ಖರೀದಿಸದೆ ಇರುವುದೇ ತಪ್ಪು ಎನ್ನುವ ಭಾವವನ್ನು ಗ್ರಾಹಕರಲ್ಲಿ ಮೂಡಿಸಲು ಯತ್ನಿಸುವುದು
- ಗ್ರಾಹಕರು ನಿರ್ದಿಷ್ಟ ಬಗೆಯ ತೀರ್ಮಾನವೊಂದನ್ನು ತೆಗೆದುಕೊಳ್ಳುವಂತೆ ಅವರ ಮೇಲೆ ಒತ್ತಡ ತರುವುದು
- ಕಡಿಮೆ ವೆಚ್ಚದ ಅಥವಾ ಉಚಿತವಾದ ಆರಂಭಿಕ ಚಂದಾದಾರಿಕೆಯ ಅವಧಿ ಮುಗಿದ ನಂತರ ಚಂದಾದಾರಿಕೆ ರದ್ದುಮಾಡುವುದನ್ನು ಬಹಳ ಕಷ್ಟದ ಪ್ರಕ್ರಿಯೆಯನ್ನಾಗಿಸುವುದು

ಡಾರ್ಕ್ ಪ್ಯಾಟರ್ನ್ ಎಂದರೇನು?

ಇ-ವಾಣಿಜ್ಯ ವೇದಿಕೆಗಳು ಗ್ರಾಹಕರ ಕಣ್ಣಿಗೆ ಮಣ್ಣೆರಚಲು ಅನುಸರಿಸುವ ಹಲವು ತಂತ್ರಗಳನ್ನು ಒಗ್ಗೂಡಿಸಿ ಡಾರ್ಕ್ ಪ್ಯಾಟರ್ನ್ ಎನ್ನಲಾಗುತ್ತದೆ. ಇಂತಹ ತಂತ್ರಗಳ ಮೂಲಕ ಕೆಲವು ಇ-ವಾಣಿಜ್ಯ ವೇದಿಕೆಗಳು ಗ್ರಾಹಕರು ತಮ್ಮ ಹಿತಾಸಕ್ತಿಗೆ ಪೂರಕವಲ್ಲದ ತೀರ್ಮಾನವನ್ನು ತಾವೇ ತೆಗೆದುಕೊಳ್ಳುವಂತೆ ಮಾಡುತ್ತವೆ.

ಉತ್ಪನ್ನದ ಬೆಲೆಯನ್ನು ಆರಂಭದಲ್ಲಿ ಕಡಿಮೆ ತೋರಿಸಿ, ಪಾವತಿ ಸಂದರ್ಭದಲ್ಲಿ ತೆರಿಗೆ ಮತ್ತಿತರ ಅಂಶಗಳನ್ನು ಸೇರಿಸಿ ಹೆಚ್ಚು ಬೆಲೆ ತೋರಿಸುವುದು; ಕಡಿಮೆ ಬೆಲೆಯ ಉತ್ಪನ್ನವೊಂದನ್ನು ಜಾಹೀರಾತಿನಲ್ಲಿ ತೋರಿಸಿ, ಗ್ರಾಹಕ ಅದನ್ನು ಖರೀದಿಸಲು ಬಯಸಿದಾಗ ಆ ಉತ್ಪನ್ನ ಲಭ್ಯವಿಲ್ಲವೆಂದು ಹೇಳಿ, ಅದೇ ಬಗೆಯ ದುಬಾರಿ ಬೆಲೆಯ ಉತ್ಪನ್ನ ಖರೀದಿಸಲು ಒತ್ತಾಯಿಸುವುದು; ಉತ್ಪನ್ನಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ, ಹೀಗಾಗಿ ಅವುಗಳನ್ನು ಬೇಗನೆ ಖರೀದಿಸಬೇಕು ಎಂದು ಹೇಳಿ ಗ್ರಾಹಕರಲ್ಲಿ ಅನಗತ್ಯ ಆತುರ ಮೂಡುವಂತೆ ಮಾಡುವುದು... ಇವೆಲ್ಲ ಡಾರ್ಕ್ ಪ್ಯಾಟರ್ನ್‌ನ ಭಾಗ.

ಇವು ಕೂಡ ತಮ್ಮಲ್ಲಿ ಡಾರ್ಕ್ ಪ್ಯಾಟರ್ನ್ ಇಲ್ಲ ಎಂದಿವೆ

ಫಾರ್ಮ್ ಈಸಿ, ಫ್ಲಿಪ್‌ಕಾರ್ಟ್, ಮಿಂತ್ರಾ, ವಾಲ್‌ಮಾರ್ಟ್, ಮೇಕ್‌ಮೈಟ್ರಿಪ್, ಪೇಜ್ ಇಂಡಸ್ಟ್ರೀಸ್, ವಿಲಿಯಂ ಪೆನ್, ಕ್ಲಿಯರ್‌ಟ್ರಿಪ್, ರಿಲಯನ್ಸ್ ಜುವೆಲ್ಸ್, ರಿಲಯನ್ಸ್ ಡಿಜಿಟಲ್, ನೆಟ್‌ಮೆಡ್ಸ್, ಟಾಟಾ 1 ಎಂಜಿ, ಮೀಶೊ, ಇಕ್ಸಿಗೊ, ಮಿಲ್‌ಬಾಸ್ಕೆಟ್, ಹ್ಯಾಮ್ಲೀಸ್, ಅಜಿಯೊ, ಟಿರಾ ಬ್ಯೂಟಿ, ಡ್ಯೂರೊಫ್ಲೆಕ್ಸ್, ಕ್ಯುರಾಡೆನ್ ಇಂಡಿಯಾ

ಸುದ್ದಿ 2 ನಿಮಿಷ

2031ರ ವೇಳೆಗೆ 100 ಕೋಟಿ 5ಜಿ ಬಳಕೆದಾರರು

ನವದೆಹಲಿ (ಪಿಟಿಐ): 2031ರ ವೇಳೆಗೆ ದೇಶದಲ್ಲಿ 5ಜಿ ಚಂದಾದಾರರ ಸಂಖ್ಯೆ 100 ಕೋಟಿ ದಾಟುವ ನಿರೀಕ್ಷೆ ಇದೆ ಎಂದು ಎರಿಕ್ಸನ್ ಮೊಬಿಲಿಟಿ ವರದಿ ಗುರುವಾರ ತಿಳಿಸಿದೆ.

'ಈಗ ದೇಶದಲ್ಲಿ ತಿಂಗಳಿಗೆ ಪ್ರತಿ ಒಂದು ಸ್ಮಾರ್ಟ್‌ಫೋನ್ ಮೂಲಕ ಸರಾಸರಿ 36 ಜಿ.ಬಿ ಡೇಟಾ ಬಳಕೆ ಆಗುತ್ತಿದೆ. ಇದು 2031ರ ವೇಳೆಗೆ 65 ಜಿ.ಬಿಗೆ ಹೆಚ್ಚಳವಾಗಲಿದೆ. ಭಾರತವು ಜಗತ್ತಿನಲ್ಲಿ ಅತಿ ಹೆಚ್ಚು ಡೇಟಾ ಬಳಸುವ ರಾಷ್ಟ್ರವಾಗಿದೆ' ಎಂದು ಎರಿಕ್ಸನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಬನ್ಸಾಲ್ ಹೇಳಿದ್ದಾರೆ.

ದೇಶದಲ್ಲಿ ಕ್ಷಿಪ್ರವಾಗಿ 5ಜಿ ಅಳವಡಿಕೆ ಆಗುತ್ತಿದೆ. 2025ರ ಅಂತ್ಯದ ವೇಳೆಗೆ ದೇಶದಲ್ಲಿ 5ಜಿ ಚಂದಾದಾರರ ಸಂಖ್ಯೆ 39.4 ಕೋಟಿಗೆ ತಲುಪಲಿದೆ ಎಂದು ತಿಳಿಸಿದೆ.

ಜಾಗತಿಕವಾಗಿ 2031ರ ವೇಳೆಗೆ 5ಜಿ ಚಂದಾದಾರರ ಸಂಖ್ಯೆ 640 ಕೋಟಿಗೆ ತಲುಪಬಹುದು ಎಂದು ಅಂದಾಜಿಸಿದೆ. ಫಿಕ್ಸೆಡ್ ವೈರ್‌ಲೆಸ್ ಅಕ್ಸೆಸ್ (ಎಫ್‌ಡಬ್ಲ್ಯುಎ) ಅನ್ನು ಸಹ ಜಾಗತಿಕವಾಗಿ 140 ಕೋಟಿ ಜನರು ಅಳವಡಿಸಿಕೊಳ್ಳಬಹುದು ಎಂದು ಹೇಳಿದೆ.

2031ರ ವೇಳೆಗೆ 6ಜಿ ಚಂದಾದಾರರ ಸಂಖ್ಯೆ ಜಾಗತಿಕವಾಗಿ 18 ಕೋಟಿಯಾಗಬಹುದು ಎಂದು ವರದಿ ಹೇಳಿದೆ.

ಬಂಡವಾಳ ಆಕರ್ಷಣೆಗೆ ಬ್ರಿಟನ್ ಪ್ರವಾಸ

ಬೆಂಗಳೂರು: ಬಂಡವಾಳ ಆಕರ್ಷಣೆಗಾಗಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ನೇತೃತ್ವದಲ್ಲಿ ಕೈಗಾರಿಕಾ ಇಲಾಖೆಯ ಅಧಿಕಾರಿಗಳ ನಿಯೋಗವು ಇದೇ 24ರಿಂದ ಮೂರು ದಿನ ಬ್ರಿಟನ್ ಪ್ರವಾಸ ಕೈಗೊಳ್ಳಲಿದ್ದು, ಬ್ರಿಟನ್-ಇಂಡಿಯಾ ವಾಣಿಜ್ಯ ಒಕ್ಕೂಟದ ಸಮ್ಮೇಳನದಲ್ಲಿ ಭಾಗಿಯಾಗಲಿದೆ.

ಬ್ರಿಟನ್‌ನ ಕಾಮನ್‌ವೆಲ್ತ್ ವ್ಯವಹಾರಗಳ ಸಚಿವೆ ಸೀಮಾ ಮಲ್ಹೋತ್ರಾ ಮತ್ತು ಭಾರತದಲ್ಲಿನ ಬ್ರಿಟನ್ ಹೈಕಮಿಷನರ್ ಲಿಂಡಾ ಕೆಮಾರೂನ್ ಅವರ ಜತೆ ಗುರುವಾರ ನಡೆಸಿದ ಸಭೆಯ ನಂತರ ಎಂ.ಬಿ.ಪಾಟೀಲ ಈ ಮಾಹಿತಿ ನೀಡಿದ್ದಾರೆ.

'ಬ್ರಿಟನ್, ಭಾರತದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ. ಬ್ರಿಟನ್ ಪ್ರವಾಸದ ವೇಳೆ ಎಲಿಮೆಂಟ್-6, ಎಆರ್‌ಎಂ, ಲಿಂಡೆ, ಮಾರ್ಟಿನ್ ಬೇಕರ್, ಫಿಡೊ ಎಐ, ಆಕ್ಸ್‌ಫರ್ಡ್ ಸ್ಪೇಸ್ ಸಿಸ್ಟಮ್ಸ್ ಸೇರಿ ಹಲವು ಬೃಹತ್ ಉದ್ದಿಮೆ ಸಮೂಹಗಳ ಪ್ರತಿನಿಧಿಗಳ ಜತೆ ಸಭೆ ನಡೆಸಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಉನ್ನತ ಶಿಕ್ಷಣ, ತಂತ್ರಜ್ಞಾನ ವಿನಿಮಯ, ವೈಮಾಂತರಿಕ್ಷ ಮತ್ತು ರಕ್ಷಣಾ, ವಿದ್ಯುತ್ ಚಾಲಿತ ವಾಹನ, ಹಸಿರು ಇಂಧನ ಕ್ಷೇತ್ರಗಳಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಅವಕಾಶಗಳನ್ನು ವಿವರಿಸಲಾಗುವುದು' ಎಂದು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಮುಂಬೈ ಧಾರಣೆ (ಶೇಂಗಾ)

20-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಪಾಮ್ ವಾರದ ಡೆಲಿವರಿ	1253 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,22,700 (1,23,400)
ಬೆಳ್ಳಿ ಕೆ.ಜಿಗೆ	1,55,000 (1,57,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಜನುಮದಾತೆಯ ದ್ವಿತೀಯ ಪುಣ್ಯಸ್ಮರಣೆ

ಸುಶೀಲಾ .ಎಸ್

ನಿಧನ : 21-11-2023

(ದಿ|| ಶ್ರೀನಿವಾಸ್‌ರವರ ಧರ್ಮಪತ್ನಿ)

ಮರೆಯಲಾಗದ ಮಾಣಿಕ್ಯ ನಮ್ಮ "ಅಮ್ಮ" ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ನಿಮ್ಮ ನೆನಪು ಸದಾ ಹಸಿರು, ನಿಮ್ಮ ಪ್ರೀತಿ ಹಾಗೂ ಆದರ್ಶಮಯ ಜೀವನ ನಮಗೆ ದಾರಿದೀಪ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ

ಸದಾ ನಿಮ್ಮ ನೆನಪಿನಲ್ಲಿ : ಕುಟುಂಬವರ್ಗದವರು

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹26800-26800
ಬೆಂಗಳೂರು	₹28000-32000
ತಿಪಟೂರು	₹26500-27415

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2400
ಮಧ್ಯಮ	₹600-1200
ಸಣ್ಣ	₹200-600

ಕಲ್ಲಿದ್ದಲು, ವಿದ್ಯುತ್ ಉತ್ಪಾದನೆಯಲ್ಲಿನ ಇಳಿಕೆಯೇ ಕಾರಣ

ಕೈಗಾರಿಕಾ ವಲಯ: ಶೂನ್ಯ ಪ್ರಗತಿ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳಲ್ಲಿ ಅಕ್ಟೋಬರ್ ತಿಂಗಳಲ್ಲಿ ಯಾವ ಬೆಳವಣಿಗೆಯೂ ಆಗಿಲ್ಲ.

ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರ ಮತ್ತು ಉಕ್ಕು ವಲಯಗಳಲ್ಲಿ ಬೆಳವಣಿಗೆ ಆಗಿದ್ದರೂ, ಕಲ್ಲಿದ್ದಲು ಮತ್ತು ವಿದ್ಯುತ್ ಉತ್ಪಾದನಾ ವಲಯಗಳಲ್ಲಿನ ಕುಸಿತವು ಒಟ್ಟಾರೆ ಬೆಳವಣಿಗೆಯು ಶೂನ್ಯ ಮಟ್ಟದಲ್ಲಿ ಇರುವಂತೆ ಮಾಡಿದೆ.

ಎಂಟು ಪ್ರಮುಖ ಕೈಗಾರಿಕಾ ವಲಯಗಳಾದ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಪೆಟ್ರೋಲಿಯಂ ಉತ್ಪನ್ನಗಳು, ವಿದ್ಯುತ್, ರಸಗೊಬ್ಬರ, ಸಿಮೆಂಟ್ ಮತ್ತು ಉಕ್ಕು ಸೆಪ್ಟೆಂಬರ್ ತಿಂಗಳಲ್ಲಿ ಒಟ್ಟಾರೆ ಶೇ 3.3ರಷ್ಟು ಬೆಳವಣಿಗೆ ಕಂಡಿತ್ತು. ಬೆಳವಣಿಗೆ ಪ್ರಮಾಣವು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಶೇ 3.8ರಷ್ಟು ಆಗಿತ್ತು.

ಈ ವರ್ಷದ ಅಕ್ಟೋಬರ್‌ನಲ್ಲಿ ಕಲ್ಲಿದ್ದಲು ಉತ್ಪಾದನೆಯು ಶೇ 8.5ರಷ್ಟು ಕುಸಿದಿದೆ, ವಿದ್ಯುತ್ ಉತ್ಪಾದನೆಯು ಶೇ 7.6ರಷ್ಟು ಕುಸಿದಿದೆ. ನೈಸರ್ಗಿಕ ಅನಿಲದ ಉತ್ಪಾದನೆಯು ಶೇ 5ರಷ್ಟು, ಕಚ್ಚಾ ತೈಲ ಉತ್ಪಾದನೆ ಶೇ 1.2ರಷ್ಟು ಕಡಿಮೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿರುವ ಎಂಟು ಪ್ರಮುಖ ಕೈಗಾರಿಕಾ ವಲಯಗಳ ಸೂಚ್ಯಂಕವು ಹೇಳಿದೆ.



ಪೆಟ್ರೋಲಿಯಂ ಸಂಸ್ಕರಣಾಗಾರಗಳಿಂದ ಬರುವ ಉತ್ಪನ್ನಗಳ ಪ್ರಮಾಣ ಶೇ 4.6ರಷ್ಟು, ರಸಗೊಬ್ಬರ ಉತ್ಪಾದನೆ ಶೇ 7.4ರಷ್ಟು, ಉಕ್ಕು ಉತ್ಪಾದನೆ ಶೇ 6.7ರಷ್ಟು, ಸಿಮೆಂಟ್ ಉತ್ಪಾದನೆ ಶೇ 5.3ರಷ್ಟು ಹೆಚ್ಚಳ ಆಗಿದೆ.

ಕಳೆದ ವರ್ಷದ ಏಪ್ರಿಲ್-ಅಕ್ಟೋಬರ್ ಅವಧಿಯಲ್ಲಿ ಈ ಎಂಟು ವಲಯಗಳಲ್ಲಿ ಶೇ 4.3ರಷ್ಟು ಬೆಳವಣಿಗೆ ಆಗಿತ್ತು. ಆದರೆ ಈ ಬಾರಿಯ ಅಕ್ಟೋಬರ್‌ನಲ್ಲಿನ ಶೂನ್ಯ ಬೆಳವಣಿಗೆಯ ಕಾರಣದಿಂದಾಗಿ ಈ ವರ್ಷದ ಏಪ್ರಿಲ್-ಅಕ್ಟೋಬರ್ ಅವಧಿಯ ಒಟ್ಟು ಬೆಳವಣಿಗೆ ಶೇ 2.5ಕ್ಕೆ ಕುಸಿದಿದೆ.

ಕೇಂದ್ರ ಬಿಡುಗಡೆ ಮಾಡಿರುವ ದತ್ತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅವರು, 'ಅತಿವೃಷ್ಟಿಯು ಅಕ್ಟೋಬರ್ ತಿಂಗಳಲ್ಲಿ ಗಣಿಗಾರಿಕೆ ಚಟುವಟಿಕೆಗಳ ಮೇಲೆ ಹಾಗೂ ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ' ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	40879-48589
ಚಿಪ್ಪು	17199-38749
ಕೋಕ	11229-35569
ಹೊಸಚಾಲಿ	25210-37810
ಪುತ್ತೂರು	
ಕೋಕ	20000-31500
ಹೊಸತು	26000-40000
ಹಳತು	45000-54000
ಸಾಗರ	
ಬಿಳಿಗೋಟು	11619-35800
ಚಾಲಿ	32099-43206
ಕೋಕ	12989-34916
ಕೆಂಪುಗೋಟು	28989-38989
ರಾಶಿ	40299-60010
ಸಿಪ್ಪೆಗೋಟು	16299-22899
ಶಿವಮೊಗ್ಗ	
ಬೆಟ್ಟೆ	43100-68099
ಗೊರಬಲು	20399-43699
ಹೊಸತು	43280-59389
ರಾಶಿ	44999-59599
ಸರಕು	50159-97810
ಸಿದ್ದಾಪುರ	
ಬಿಳಿಗೋಟು	25899-35989
ಚಾಲಿ	41599-48139
ಕೋಕ	22319-32899
ಕೆಂಪುಗೋಟು	30900-32399
ರಾಶಿ	47199-58399
ತಟ್ಟಿಬೆಟ್ಟೆ	38089-410000
ಶಿರಸಿ	
ಬೆಟ್ಟೆ	43099-53899
ಬಿಳಿಗೋಟು	29619-43878
ಚಾಲಿ	44728-49108
ಕೆಂಪುಗೋಟು	20699-35099
ರಾಶಿ	55050-60199
ಯಲ್ಲಾಪುರ	
ಆಪಿ	69375-69375
ಬಿಳಿಗೋಟು	18009-36619
ಚಾಲಿ	39333-48740
ಕೋಕ	11089-30899
ಕೆಂಪುಗೋಟು	15009-33099
ರಾಶಿ	52439-66899
ತಟ್ಟಿಬೆಟ್ಟೆ	36399-48489

ASTRO YATRA

ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕರು

ತಾತ ಮುತ್ತಾತನ ಕಾಲದಿಂದ ವಂಶ ಪಾರಂಪರಿಕ ಮೋಡಿ ಮಾಂತ್ರಿಕರು ರಾಮಣ್ಣನವರು ಕೊಳ್ಳೆಗಾಲದಿಂದ ನೇರ ಪರಿಹಾರ. 7090929523

ಮದುವೆಯಲ್ಲಿ ವಿಳಂಬ, ಸಂತಾನ ದೋಷ, ಮನೆಯಲ್ಲಿ ಅಶಾಂತಿ, ಗಂಡ ಹೆಂಡತಿ ಕಲಹ, ಮರಣ ಭಯ, ಆರೋಗ್ಯ ಸಮಸ್ಯೆ, ವ್ಯಾಪಾರದಲ್ಲಿ ನಷ್ಟ, ರಾಜಕೀಯ ಸೋಲು, ಶತ್ರುಗಳ ಕಾಟ, ಮಾಟ-ಮಂತ್ರ ದೋಷ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ-ಪುರುಷ ವಶೀಕರಣ ಮಾಡಿಕೊಡುತ್ತಾರೆ.

ನಿಮ್ಮ ಸಮಸ್ಯೆ ಏನೇ ಇದ್ದರು 3 ದಿನದಲ್ಲಿ ಕೊಳ್ಳೆಗಾಲದ ಬಲಿಷ್ಠ, ಕೇರಳದ ನೀಗೂಡ ಪ್ರಯೋಗಗಳಿಂದ ಶಾಶ್ವತ ಪರಿಹಾರ ಶತ:ಸಿದ್ಧ.

ವಿಳಾಸ (ಕೊಳ್ಳೆಗಾಲ) ಮೋಡಿ ರಾಮಣ್ಣ. 7090929523

ಎಫ್‌ಐಐ ಒಳಹರಿವು ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ತೈಲ ಮತ್ತು ಅನಿಲ ಹಾಗೂ ಆಯ್ದ ಹಣಕಾಸು ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.



ವಿದೇಶಿ ಬಂಡವಾಳದ ಒಳಹರಿವು (ಎಫ್‌ಐಐ) ಸಹ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 446 ಅಂಶ ಏರಿಕೆಯಾಗಿ, 85,632ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 139 ಅಂಶ ಹೆಚ್ಚಳವಾಗಿ, 26,192ಕ್ಕೆ ಕೊನೆಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹1,580 ಕೋಟಿ ಮೌಲ್ಯದಷ್ಟು ಷೇರುಗಳನ್ನು ಖರೀದಿ ಮಾಡಿದ್ದರೆ, ದೇಶದ ಹೂಡಿಕೆದಾರರು ₹1,360 ಕೋಟಿ ಮೌಲ್ಯದ ಷೇರು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.83ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರಲ್ ಕಚ್ಚಾ ತೈಲದ ಬೆಲೆ 64.03 ಡಾಲರ್ ಆಗಿದೆ.

'ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ಹೂಡಿಕೆದಾರರಲ್ಲಿ ಆಶಾವಾದ ಹೆಚ್ಚಳವಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ತಂತ್ರಜ್ಞಾನ ವಲಯದ ಕಂಪನಿಗಳ ಹಣಕಾಸು ಫಲಿತಾಂಶ ಸದೃಢವಾಗಿದೆ. ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳವಾಗಿದೆ. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ರೂಪಾಯಿ ಮೌಲ್ಯ: ಗುರಿ ಹೊಂದಿಲ್ಲ'

ನವದೆಹಲಿ (ಪಿಟಿಐ): 'ರೂಪಾಯಿ ಮೌಲ್ಯವನ್ನು ಇಂತಿಷ್ಟೇ ಮಟ್ಟದಲ್ಲಿ ಇರಿಸಬೇಕು ಎಂಬ ಗುರಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿಲ್ಲ' ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಗುರುವಾರ ತಿಳಿಸಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್‌ಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ರೂಪಾಯಿ ಮೌಲ್ಯ ಡಾಲರ್ ಎದುರು ಇಳಿದಿದೆ. ರೂಪಾಯಿಗೆ ಬೇಡಿಕೆ ಹೆಚ್ಚಳವಾದರೆ, ಡಾಲರ್ ಮೌಲ್ಯ ಇಳಿದು ರೂಪಾಯಿ ಮೌಲ್ಯ ಏರಿಕೆಯಾಗಲಿದೆ ಎಂದು ಹೇಳಿದ್ದಾರೆ.

ವ್ಯಾಪಾರ ನಿಯಮಗಳು ಮತ್ತು ಅಮೆರಿಕದ ಹೆಚ್ಚುವರಿ ಸುಂಕವು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ ಎಂದು ಹೇಳಿದ್ದಾರೆ.

ಆರ್‌ಬಿಐ ಬಳಿ ಇರುವ ವಿದೇಶಿ ವಿನಿಮಯ ಮೀಸಲು ಸಂಗ್ರಹ ಅತ್ಯುತ್ತಮವಾಗಿದೆ ಎಂದು ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ವಿಶ್ವದ ಪ್ರಮುಖ 100 ಬ್ಯಾಂಕ್‌ಗಳ ಪಟ್ಟಿಯಲ್ಲಿ ಎಸ್‌ಬಿಐ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಈಗಾಗಲೇ ಸ್ಥಾನ ಪಡೆದಿವೆ. ಅತಿ ಶೀಘ್ರದಲ್ಲಿ ಈ ಪಟ್ಟಿಯಲ್ಲಿ ದೇಶದ ಹಲವು ಬ್ಯಾಂಕ್‌ಗಳು ಸೇರಲಿವೆ

ಸಂಜಯ್ ಮಲ್ಹೋತ್ರಾ, ಆರ್‌ಬಿಐ ಗವರ್ನರ್

ದೇಶದಲ್ಲಿ ಆರ್ಥಿಕ ಸ್ಥಿರತೆ ಕಾಪಾಡುವುದು ಆರ್‌ಬಿಐನ ಪ್ರಮುಖ ಆದ್ಯತೆ. ಇದಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದರು. ಅಮೆರಿಕದೊಂದಿಗೆ ಭಾರತದ ವ್ಯಾಪಾರ ಒಪ್ಪಂದವು ಉತ್ತಮವಾಗಿರುವ ವಿಶ್ವಾಸವಿದೆ. ಇದು ರೂಪಾಯಿಯ ಮೇಲೆ ಒತ್ತಡ ಕಡಿಮೆ ಮಾಡಲಿದೆ ಎಂದು ಹೇಳಿದ್ದಾರೆ.

'ಉಕ್ಕು ವಲಯ ಹೂಡಿಕೆ ಅಗತ್ಯ'

ಭುವನೇಶ್ವರ್ (ಪಿಟಿಐ): 'ದೇಶದ ಉಕ್ಕು ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ (ಆರ್ ಆ್ಯಂಡ್ ಡಿ) ಹೆಚ್ಚಿನ ಹೂಡಿಕೆ ಅಗತ್ಯವಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ದೇಶದ ಉಕ್ಕು ವಲಯದ ಒಟ್ಟಾರೆ ಬೆಳವಣಿಗೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ಮೆಷಿನ್ ಲರ್ನಿಂಗ್ ಮತ್ತು ಡಿಜಿಟಲೀಕರಣದಂತಹ ತಂತ್ರಜ್ಞಾನದ ಅಳವಡಿಕೆ ಅಗತ್ಯ. ಇದು ಸ್ಪರ್ಧಾತ್ಮಕತೆ ಹೆಚ್ಚಿಸಲಿದೆ ಎಂದು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುರುವಾರ ಹೇಳಿದ್ದಾರೆ.

ದೇಶದ ಮೂಲಸೌಕರ್ಯ ಅಭಿವೃದ್ಧಿಗೆ ಉಕ್ಕು ಉದ್ಯಮವು ಬೆನ್ನೆಲುಬು ಆಗಿದೆ. ಇದು 'ವಿಕಸಿತ ಭಾರತ' ಗುರಿ ಸಾಧನೆಗೆ ಪ್ರಮುಖ ಪಾತ್ರ ವಹಿಸಲಿದೆ ಎಂದು ಕೇಂದ್ರ ಉಕ್ಕು ಖಾತೆ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮಾ ಹೇಳಿದ್ದಾರೆ.

'ಆಪರೇಷನ್ ಸಿಂಧೂರ: ಪಾಕಿಸ್ತಾನ ಯಶಸ್ವಿ'

ನವದೆಹಲಿ (ಪಿಟಿಐ): '2025ರ ಏಪ್ರಿಲ್‌ನಲ್ಲಿ ನಡೆದ ಪಹಲ್ಗಾಮ್ ದಾಳಿಯನ್ನು ಪಾಕಿಸ್ತಾನವೇ ನಡೆಸಿತ್ತು. ಇದೊಂದು ಬಂಡಾಯದ ದಾಳಿಯಾಗಿತ್ತು. ಜೊತೆಗೆ, ನಾಲ್ಕು ದಿನಗಳ ಪಾಕಿಸ್ತಾನ-ಭಾರತದ ಸಂಘರ್ಷದಲ್ಲಿ ಪಾಕಿಸ್ತಾನವೇ ಯಶಸ್ವಿಯಾಯಿತು' ಎಂದು ಅಮೆರಿಕ-ಚೀನಾ ಆರ್ಥಿಕ ಮತ್ತು ಭದ್ರತಾ ಪರಿಶೀಲನಾ ಸಮಿತಿಯು ತನ್ನ ವಾರ್ಷಿಕ ವರದಿಯನ್ನು ಸಂಸತ್ತಿಗೆ ಸಲ್ಲಿಸಿದೆ ಎಂದು ಕಾಂಗ್ರೆಸ್ ಹೇಳಿದೆ.

ಈ ವರದಿಯ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಇದು ಭಾರತದ ರಾಜತಾಂತ್ರಿಕತೆಗೆ ಆದ ಹಿನ್ನಡೆ. ಈ ವರದಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅಥವಾ ವಿದೇಶಾಂಗ ಸಚಿವಾಲಯದವರು ಆಕ್ಷೇಪಣೆ ಸಲ್ಲಿಸಲಿದ್ದಾರೆಯೆ' ಎಂದು ಪ್ರಶ್ನಿಸಿದೆ. '800 ಪುಟಗಳ ವರದಿಯಲ್ಲಿ 108 ಮತ್ತು 109ನೇ ಪುಟಗಳಲ್ಲಿ ಈ ಮಾಹಿತಿ ಇದೆ' ಎಂದೂ ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, 'ಟ್ರಂಪ್ ಅವರು ನಾನೇ ಆಪರೇಷ್ ಸಿಂಧೂರವನ್ನು ನಿಲ್ಲಿಸಿದೆ ಎಂದು ಸುಮಾರು 60 ಬಾರಿ ಹೇಳಿದ್ದಾರೆ. ಆದರೆ, ಪ್ರಧಾನಿ ಮೋದಿ ಅವರು ಈ ಬಗ್ಗೆ ಮೌನ ವಹಿಸಿದ್ದಾರೆ. ಈಗ ಈ ವರದಿ ಬಂದಿದೆ' ಎಂದರು.

ಇಸ್ರೇಲ್ ಸೇನೆಯು ಗಾಜಾ ಪಟ್ಟಿಯಲ್ಲಿ ದಾಳಿಗೊಳಗಾದ ಕಟ್ಟಡದ ಒಳಭಾಗದಲ್ಲಿ ಮಕ್ಕಳು ಅವಶೇಷಗಳನ್ನು ಹುಡುಕಾಡಿದರು —ಎಎಫ್‌ಪಿ ಚಿತ್ರ

ಸಾವಿನ ಸಂಖ್ಯೆ 31ಕ್ಕೆ ಏರಿಕೆ

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಖಾನ್ ಯೂನಿಸ್ ಖಾನ್ ಪಟ್ಟಣದ ಮೇಲೆ ಇಸ್ರೇಲ್ ಸೇನೆಯು ಗುರುವಾರ ಬೆಳಿಗ್ಗೆ ನಡೆಸಿದ ವಾಯುದಾಳಿಗೆ ಮತ್ತೆ ಐದು ಮಂದಿ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಯಾಲೆಸ್ಟೀನ್ ಪ್ರಾಂತ್ಯದಲ್ಲಿ ಕಳೆದ 12 ಗಂಟೆಗಳಲ್ಲಿ ನಡೆದ ವಾಯುದಾಳಿಗೆ ಮೃತಪಟ್ಟವರ ಸಂಖ್ಯೆ 33ಕ್ಕೆ ಏರಿಕೆಯಾಗಿದೆ. ಅಮೆರಿಕದ ಮಧ್ಯಸ್ಥಿಕೆಯಲ್ಲಿ ಅಕ್ಟೋಬರ್ 10ರಂದು ಕದನ ವಿರಾಮ ಏರ್ಪಟ್ಟ ಬಳಿಕ ಇಸ್ರೇಲ್ ನಡೆಸಿದ ಅತೀ ದೊಡ್ಡ ದಾಳಿ ಇದಾಗಿದೆ.

'ಖಾನ್ ಯೂನಿಸ್ ಖಾನ್ ಪಟ್ಟಣದಲ್ಲಿ ನಮ್ಮ ಸೈನಿಕರ ಮೇಲೆ ದಾಳಿ ನಡೆದಿದ್ದು, ಯಾವುದೇ ಸೈನಿಕರು ಸತ್ತಿಲ್ಲ' ಎಂದು ಇಸ್ರೇಲ್ ಸೇನೆ ತಿಳಿಸಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ಇಸ್ರೇಲ್ ಸೇನೆಯು ವೈಮಾನಿಕ ದಾಳಿ ನಡೆಸಿತ್ತು.

ತಲಾ ಐದು ಮಂದಿ ಮಕ್ಕಳು, ಹೆಣ್ಣು ಮಕ್ಕಳು ಸೇರಿದಂತೆ 17 ಮೃತದೇಹಗಳನ್ನು ಸ್ವೀಕರಿಸಲಾಗಿದೆ ಎಂದು ಖಾನ್ ಯೂನಿಸ್‌ನ ನಾಸೀರ್ ಆಸ್ಪತ್ರೆಯು ತಿಳಿಸಿದೆ. ಎರಡು ವಾಯುದಾಳಿಗಳಲ್ಲಿ ಮೃತಪಟ್ಟ 7 ಮಂದಿ ಮಕ್ಕಳು ಸೇರಿದಂತೆ ಮೂವರು ಮಹಿಳೆಯರ ಮೃತದೇಹಗಳನ್ನು ಸ್ವೀಕರಿಸಲಾಗಿದೆ ಎಂದು ಅಲ್ ಶಿಫಾ ಆಸ್ಪತ್ರೆಯು ತಿಳಿಸಿದೆ.

ದಾಳಿ ಕುರಿತು ಕಿಡಿಕಾರಿರುವ ಬಂಡುಕೋರ ಸಂಘಟನೆ ಹಮಾಸ್, 'ಅಘಾತಕಾರಿ ಹತ್ಯಾಕಾಂಡ' ಎಂದು ತಿಳಿಸಿದ್ದು, 'ಇಸ್ರೇಲ್ ಸೇನೆ ಮೇಲೆ ಯಾವುದೇ ದಾಳಿ ನಡೆಸಿಲ್ಲ' ಎಂದು ಸ್ಪಷ್ಟಪಡಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕರ್ನಾಟಕದಾದ್ಯಂತ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್ ಗಳಿಗೆ 7th,PUC, ಡಿಗ್ರಿ ಆದಂತ ಯುವಕ, ಯುವತಿಯರು ಬೇಕಾಗಿದ್ದಾರೆ 18,900-47000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000 7th, 10th, Any Degree 8095043191

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ವೈಯಕ್ತಿಕ

Change of Name

ನಾನು ಶಾಂತಿ ಯಾರಪUUಿನ, ಫ್ಲ್ಯಾಟ್ ನಂ. S02, ಧರಣಿ ಕಾಂಫರ್ಟ್ಸ್, 2ನೇ ಕ್ರಾಸ್, MLA ಲೇಔಟ್, ಕಲೆನ ಅಗ್ರಹಾರ, ಬೆಂಗಳೂರು-560076 ನಲ್ಲಿ ವಾಸವಿದ್ದು, ನನ್ನ ಹೆಸರನ್ನು ಶಾಂತಿ ಕುರಪಾಟಿ ಎಂದು ಬದಲಿಸಿಕೊಂಡಿದ್ದೇನೆ ಎಂದು ತಿಳಿಸುತ್ತೇನೆ. ಇದರಿಂದ ಮುಂದಕ್ಕೆ ನನ್ನ ಹೆಸರು ಶಾಂತಿ ಕುರಪಾಟಿ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ-ಪಾಕಿಸ್ತಾನ ನಡುವಿನ ಸಂಘರ್ಷ ಬಗೆಹರಿಸಿದ್ದೆ: ಟ್ರಂಪ್ ಪುನರುಚ್ಚಾರ

'ಶೇ 350ರಷ್ಟು ಸುಂಕ ವಿಧಿಸುವ ಬೆದರಿಕೆ ಹಾಕಿದ್ದೆ'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನಕ್ಕೆ ಶೇಕಡ 350ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ ನಂತರವೇ ಉಭಯ ದೇಶಗಳ ನಡುವಿನ ಸಂಘರ್ಷ ಬಗೆಹರಿಯಿತು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

'ನಾವು ಯುದ್ಧ ಮಾಡುವುದಿಲ್ಲ ಎಂದು ಹೇಳಲು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ನನಗೆ ಕರೆ ಮಾಡಿದ್ದರು. ಲಕ್ಷಾಂತರ ಜೀವಗಳನ್ನು ಉಳಿಸಿದ್ದಕ್ಕಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರೂ ಕರೆ ಮಾಡಿ ಧನ್ಯವಾದ ಅರ್ಪಿಸಿದ್ದರು' ಎಂದು

ಡೊನಾಲ್ಡ್ ಟ್ರಂಪ್

ತಿಳಿಸಿದ್ದಾರೆ.

'ವಿವಾದಗಳನ್ನು ಬಗೆಹರಿಸುವಲ್ಲಿ ನಾನು ನಿಪುಣ. ನಾನು ಯಾವಾಗಲೂ ಹಾಗೆಯೇ ಇದ್ದೇನೆ. ವಿಭಿನ್ನ ಯುದ್ಧಗಳ ಬಗ್ಗೆ ನಾನು ಮಾತನಾಡುತ್ತಿದ್ದೆ. ಅಣ್ವಸ್ತ್ರಗಳನ್ನು ಹೊಂದಿರುವ ಭಾರತ, ಪಾಕಿಸ್ತಾನದವರು ಯುದ್ಧ ಮಾಡಲು ಹೊರಟಿದ್ದರು' ಎಂದು ಟ್ರಂಪ್ ಬುಧವಾರ ಹೇಳಿದ್ದಾರೆ.

ಭಾರತವು ಮೂರನೇ ವ್ಯಕ್ತಿಯ ಹಸ್ತಕ್ಷೇಪವನ್ನು ನಿರಂತರವಾಗಿ ನಿರಾಕರಿಸುತ್ತಿದ್ದರೂ, ಈ ವರ್ಷದ ಮೇ ತಿಂಗಳಲ್ಲಿ, 'ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ಕೊನೆಗೊಳಿಸಲು ಸಹಾಯ ಮಾಡಿದ್ದೆ' ಎಂದು ಟ್ರಂಪ್ 60ಕ್ಕೂ ಹೆಚ್ಚು ಬಾರಿ ಹೇಳಿದ್ದಾರೆ.

ನಿರ್ದೇಶಿತ ಕ್ಷಿಪಣಿ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

93 ಮಿಲಿಯನ್ ಡಾಲರ್ (₹824 ಕೋಟಿ) ಮೌಲ್ಯದ ಗುರಿ ನಿರ್ದೇಶಿತ ಫಿರಂಗಿ ಹಾಗೂ ಜಾವೆಲಿನ್ ಟ್ಯಾಂಕ್ ವಿರೋಧಿ ಕ್ಷಿಪಣಿ ವ್ಯವಸ್ಥೆ ಹಾಗೂ ಇದಕ್ಕೆ ಸಂಬಂಧಿಸಿದ ಉಪಕರಣಗಳ ಮಾರಾಟಕ್ಕೆ ಅಮೆರಿಕ ಸರ್ಕಾರವು ಒಪ್ಪಿಗೆ ನೀಡಿದೆ. ಇದರಿಂದ ರಕ್ಷಣಾ ಕ್ಷೇತ್ರದಲ್ಲಿ ಭಾರತದ ಶಕ್ತಿ ಬಲವರ್ಧನೆಯಾಗಲಿದ್ದು, ಪ್ರಾದೇಶಿಕ ಅಪಾಯಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದ್ದ ಭಾರತದ ನಿರ್ಧಾರದ ವಿರುದ್ಧ ಕಿಡಿಕಾರಿದ್ದ ಅಮೆರಿಕ, ಭಾರತದಿಂದ ರಫ್ತು ಮಾಡುತ್ತಿದ್ದ ಉತ್ಪನ್ನಗಳ ಮೇಲೆ ಶೇಕಡ 50ರಷ್ಟು ಸುಂಕ ಹೇರಿತ್ತು. ಈ ಬೆಳವಣಿಗೆ ಬಳಿಕ ಅಮೆರಿಕ-ಭಾರತ ಮಧ್ಯೆ ನಡೆದ ಅತಿ ದೊಡ್ಡ ರಕ್ಷಣಾ ಉಪಕರಣಗಳ ಖರೀದಿ ವ್ಯವಹಾರವಾಗಿದೆ.

ಈ ಒಪ್ಪಂದಕ್ಕೆ ಅಗತ್ಯವಿರುವ ಪ್ರಮಾಣಪತ್ರಗಳನ್ನು ಅಮೆರಿಕ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆ ಕಳುಹಿಸಿದೆ ಎಂದು ಅಮೆರಿಕದ ಸಂಸತ್ ತಿಳಿಸಿದೆ.

ಪರಮಾಣು ಯೋಜನೆಗಳ ಮಾಹಿತಿ ನೀಡಲು ಇರಾನ್‌ಗೆ ಒತ್ತಡ

ವಿಯೆನ್ನಾ (ಎಪಿ): ಪರಮಾಣು ಯೋಜನೆಗಳ ಬಗ್ಗೆ ನಿಖರ ಮಾಹಿತಿ ನೀಡುವಂತೆ ಇರಾನ್ ಮೇಲೆ ಒತ್ತಡ ಹೇರಲು ವಿಶ್ವಸಂಸ್ಥೆಯ ಪರಮಾಣು ನಿಗಾ ಸಂಸ್ಥೆಯ (ಐಎಇಎ) ಸದಸ್ಯರು ಗುರುವಾರ ಮತ ಚಲಾಯಿಸಿದರು.

'ಯುರೇನಿಯಂ ದಾಸ್ತಾನು ಸೇರಿ ಪರಮಾಣು ಕಾರ್ಯಕ್ರಮಗಳ ಬಗ್ಗೆ ಇರಾನ್ ಖಚಿತವಾದ ಮಾಹಿತಿ ಒದಗಿಸಬೇಕು. ಇರಾನ್‌ನಲ್ಲಿರುವ ಪರಮಾಣು ಘಟಕಗಳ ಭೇಟಿಗೂ ವಿಶ್ವಸಂಸ್ಥೆಯ ಪರಮಾಣು ನಿಗಾ ಘಟಕದ ಅಧಿಕಾರಿಗಳಿಗೆ ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಸಂಪೂರ್ಣ ಮತ್ತು ತ್ವರಿತ ಸಹಕಾರವನ್ನು ಬಯಸುತ್ತೇವೆ' ಎಂದು ಐಎಇಎ ಹೇಳಿದೆ.

ವಿಶ್ವಸಂಸ್ಥೆಯ ಪರಮಾಣು ನಿಗಾ ಘಟಕದ 19 ರಾಷ್ಟ್ರಗಳ, 35 ಸದಸ್ಯರು ಮತ ಚಲಾಯಿಸಿದ್ದು ನಿರ್ಣಯ ಅಂಗೀಕರಿಸಲಾಗಿದೆ.

ರಷ್ಯಾ, ಚೀನಾ ಮತ್ತು ಪಶ್ಚಿಮ ಆಫ್ರಿಕಾದ ನೈಜರ್ ನಿರ್ಣಯವನ್ನು ವಿರೋಧಿಸಿವೆ. 12 ದೇಶಗಳು ಮತದಾನದಿಂದ ದೂರ ಉಳಿದಿದ್ದವು. ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ಅಮೆರಿಕ ನಿರ್ಣಯ ಬೆಂಬಲಿಸಿದ್ದವು.

ವಿಶ್ವಸಂಸ್ಥೆಯ ಅಣ್ವಸ್ತ್ರ ನಿಗಾ ಸಂಸ್ಥೆಯು ಬಹುಕಾಲದಿಂದ ಇರಾನ್‌ನ ಪರಮಾಣು ಯೋಜನೆಗಳ ಮೇಲ್ವಿಚಾರಣೆ ನಡೆಸುತ್ತಿದೆ.

ಚಾರಿತ್ರಿಕ ಸಾಧನೆಗೆ ತೆಂಬಾ ಪಡೆ ತವಕ

ಗುವಾಹಟಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಎರಡನೇ ಟೆಸ್ಟ್ ಪಂದ್ಯ ನಾಳೆಯಿಂದ

ಗುವಾಹಟಿ (ಎಎಫ್‌ಪಿ): ಭಾರತದ ನೆಲದಲ್ಲಿ 25 ವರ್ಷಗಳ ನಂತರ ಸರಣಿ ಗೆಲುವಿನ ದಾಖಲೆ ಬರೆಯಲು ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ತುದಿಗಾಲಿನಲ್ಲಿ ನಿಂತಿದೆ.

ಅಸ್ಸಾಂ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾಗಲಿರುವ ಸರಣಿಯ ಎರಡನೇ ಮತ್ತು ಕೊನೆಯ ಟೆಸ್ಟ್‌ನಲ್ಲಿ ಉಭಯ ತಂಡಗಳು ಕಣಕ್ಕಿಳಿಯಲಿವೆ. ಹಾಲಿ ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ತಂಡವು ಸರಣಿಯಲ್ಲಿ ಈಗಾಗಲೇ 1–0 ಮುನ್ನಡೆಯಲ್ಲಿದೆ. 2000ರಲ್ಲಿ ಭಾರತದ ನೆಲದಲ್ಲಿ ಟೆಸ್ಟ್ ಸರಣಿಯನ್ನು 2–0ಯಿಂದ ಜಯಿಸಿತ್ತು. ಪ್ರಸಕ್ತ ಸರಣಿಯಲ್ಲಿ 1–1ರ ಸಮಬಲ ಸಾಧಿಸಲು ಆತಿಥೇಯ ತಂಡಕ್ಕೂ ಈ ಟೆಸ್ಟ್‌ನಲ್ಲಿ ಜಯ ದಾಖಲಿಸಲೇಬೇಕಿದೆ. ಡ್ರಾ ಆದರೂ ಪ್ರವಾಸಿ ತಂಡದ ಮುಡಿಗೆ ಸರಣಿ ಕಿರೀಟ ಒಲಿಯಲಿದೆ.

‘ಈ ವರ್ಷದ ಆರಂಭದಲ್ಲಿ ನಾವು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಜಯಿಸಿದ್ದೇವೆ. ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆದ್ದಿದ್ದು ಅವಿಸ್ಮರಣೀಯ. 15 ವರ್ಷಗಳ ನಂತರ ಭಾರತದಲ್ಲಿ ಪಂದ್ಯ ಗೆದ್ದಿದ್ದು ಸಣ್ಣ ಸಾಧನೆಯೇನಲ್ಲ’ ಎಂದು ಕೋಲ್ಕತ್ತದಲ್ಲಿ ಈಚೆಗೆ ನಡೆದಿದ್ದ ಟೆಸ್ಟ್‌ನಲ್ಲಿ ಜಯಿಸಿದ ನಂತರ ದಕ್ಷಿಣ ಆಫ್ರಿಕಾದ ಕೋಚ್ ಶುಕ್ರಿ ಕಾನ್‌ರಾಡ್ ಹೇಳಿದ್ದರು.

ಪ್ರತಿ ಇನಿಂಗ್ಸ್‌ನಲ್ಲಿಯೂ ಅಲ್ಪ ಮೊತ್ತ ದಾಖಲಾದ ಮೊದಲ ಪಂದ್ಯದಲ್ಲಿ ತೆಂಬಾ ಬವುಮಾ ಅವರ ದಿಟ್ಟ ಅರ್ಧಶತಕವು ಗಮನ ಸೆಳೆದಿತ್ತು. ಮೂರು ದಿನಗಳಲ್ಲಿ ಮುಗಿದ ಪಂದ್ಯದಲ್ಲಿ 124 ರನ್ ಗಳ ಗುರಿಯನ್ನು ಬೆನ್ನಟ್ಟಿದ ಭಾರತವು 93ಕ್ಕೆ ಕುಸಿದಿತ್ತು. ಈಡನ್ ಗಾರ್ಡನ್ ಪಿಚ್‌ನಲ್ಲಿ ಉಭಯ ತಂಡಗಳ ಬೌಲರ್‌ಗಳು ಯಶಸ್ವಿಯಾಗಿದ್ದರು.

ಇದೀಗ ದಕ್ಷಿಣ ಆಫ್ರಿಕಾ ತಂಡಕ್ಕೆ ವೇಗಿ ಲುಂಗಿ ಎನ್‌ಗಿಡಿ ಬಲ ಸೇರಿಕೊಂಡಿದ್ದಾರೆ. ಪಕ್ಕೆಲುಬಿನ ನೋವಿನಿಂದಾಗಿ ವೇಗಿ ಕಗಿಸೊ ರಬಾಡ ಅವರು ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಈ ಪಂದ್ಯದಲ್ಲಿಯೂ ಅವರು ಕಣಕ್ಕಿಳಿಯುವುದು ಅನುಮಾನ. ಒಟ್ಟು ಎಂಟು ವಿಕೆಟ್ ಗಳಿಸಿದ್ದ ಸ್ಪಿನ್ನರ್ ಸೈಮನ್ ಹಾರ್ಮರ್ ಭಾರತ ತಂಡವನ್ನು ಅಪಾರವಾಗಿ ಕಾಡಿದ್ದರು.

ಶುಭಮನ್ ಗಿಲ್ ಆಡದಿದ್ದರೆ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು ತಂಡವನ್ನು ಮುನ್ನಡೆಸುವರು. ಮೂರನೇ ಕ್ರಮಾಂಕದ ಬ್ಯಾಟರ್ ಆಗಿ ಸಾಯಿ ಸುದರ್ಶನ್ ಅಥವಾ ಕನ್ನಡಿಗ ದೇವದತ್ತ ಪಡಿಕ್ಕಲ್ ಅವರು ಸ್ಥಾನ ಪಡೆಯುವ ಸಾಧ್ಯತೆ ಇದೆ.

ಈಡನ್ ಗಾರ್ಡನ್‌ನಲ್ಲಿ ಭಾರತ ತಂಡದ ಅಪೇಕ್ಷೆಯಂತೆ ಸ್ಪಿನ್ ಸ್ನೇಹಿ ಪಿಚ್ ಸಿದ್ಧವಾಗಿತ್ತು. ಆದರೂ ತಂಡವು ಸೋತಿತ್ತು. ಇದರಿಂದಾಗಿ ಕ್ರಿಕೆಟ್ ಪಂಡಿತರಿಂದ ಅಪಾರ ಟೀಕೆಗೊಳಗಾಗಿತ್ತು.

ಭಾರತ ತಂಡವು ತವರಿನಲ್ಲಿ ಆಡಿದ ಕಳೆದ 6 ಪಂದ್ಯಗಳಲ್ಲಿ ಇದು ನಾಲ್ಕನೇ ಸೋಲಾಗಿದೆ. ಕೆಲವು ತಿಂಗಳುಗಳ ಹಿಂದೆ ಭಾರತ ತಂಡವು 0–3ರಿಂದ ನ್ಯೂಜಿಲೆಂಡ್ ಎದುರು ಸೋತಿತ್ತು. ಇದೀಗ ಅತಿಥೇಯ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ವಿರುದ್ಧ ಟೀಕೆಗಳ ಮಳೆ ಸುರಿಯುತ್ತಿದೆ.

‘ಈಡನ್ ಗಾರ್ಡನ್‌ನಲ್ಲಿ ಇದ್ದ ಪಿಚ್‌ಗಿಂತಲೂ ಉತ್ತಮವಾದ ಅಂಗಣಗಳಲ್ಲಿ ಗೌತಮ್ ಗಂಭೀರ್ ಮತ್ತು ಅವರ ತಂಡದವರು ಆಡಬೇಕು ಎಂದು ನನಗನಿಸುತ್ತದೆ’ ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಸೌರವ್ ಗಂಗೂಲಿ ಇಂಡಿಯಾ ಟುಡೆ ಟಿ.ವಿ. ವಾಹಿನಿಯಲ್ಲಿ ಹೇಳಿದ್ದರು.

ಗಂಭೀರ್ ಅವರು ಕೋಚ್ ಆದ ನಂತರ ಭಾರತ ತಂಡವು 18 ಪಂದ್ಯಗಳನ್ನು ಆಡಿದೆ. ಅದರಲ್ಲಿ 9ರಲ್ಲಿ ಸೋತಿದೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಂತಹ ಖ್ಯಾತನಾಮ ಆಟಗಾರರು ಹೋದ ವರ್ಷ ಟಿ20 ಕ್ರಿಕೆಟ್ ಮಾದರಿಗೆ ನಿವೃತ್ತಿ ಘೋಷಿಸಿದ್ದರು. ಈ ವರ್ಷ ಅವರಿಬ್ಬರೂ ಟೆಸ್ಟ್ ಮಾದರಿಗೂ ವಿದಾಯ ಹೇಳಿದ್ದರು. ಗಿಲ್ ಅವರಿಗೆ ನಾಯಕತ್ವ ನೀಡಲಾಗಿತ್ತು.

ಗುವಾಹಟಿಯಲ್ಲಿ ಪಿಚ್ ಪರಿಶೀಲಿಸಿದ ಭಾರತದ ರಿಷಭ್ ಪಂತ್ — ಪಿಟಿಐ ಚಿತ್ರ

ಗಿಲ್‌ಗೆ ಫಿಟ್‌ನೆಸ್ ಪರೀಕ್ಷೆ ಇಂದು

ಗುವಾಹಟಿ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ವೇಳೆ ಕುತ್ತಿಗೆಯ ಸ್ನಾಯು ಸೆಳೆತಕ್ಕೊಳಗಾದ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಶುಕ್ರವಾರ ಫಿಟ್‌ನೆಸ್ ಪರೀಕ್ಷೆಗೆ ಒಳಗಾಗಲಿದ್ದಾರೆ ಎಂದು ಬ್ಯಾಟಿಂಗ್ ಕೋಚ್ ಸೀತಾಂಶು ಕೋಟಕ್ ತಿಳಿಸಿದ್ದಾರೆ.

ಗಿಲ್ ಅವರು ಎರಡನೇ ಟೆಸ್ಟ್ ಪಂದ್ಯಕ್ಕೆ ಲಭ್ಯರಾಗುವ ಕೊನೆಯ ಪ್ರಯತ್ನವಾಗಿ ಫಿಟ್‌ನೆಸ್ ಪರೀಕ್ಷೆ ನಡೆಯಲಿದೆ.

‘ಗಿಲ್, ಸಂಪೂರ್ಣ ಚೇತರಿಸಿಕೊಂಡರೂ ಮುಂದಿನ ಪಂದ್ಯದ ಸಮಯದಲ್ಲಿ ಸೆಳೆತ ಮರುಕಳಿಸುವ ಸಾಧ್ಯತೆ ಇದೆಯೇ ಎಂದು ಫಿಸಿಯೊಗಳು ಮತ್ತು ವೈದ್ಯರು ನಿರ್ಧರಿಸಲಿದ್ದಾರೆ. ಅದು ಬಹಳ ಮುಖ್ಯ’ ಎಂದು ಕೋಟಕ್ ಹೇಳಿದ್ದಾರೆ.

ಶುಭಮನ್

ಊಟದ ಹೊತ್ತಿಗೆ ಚಹಾ!

ಗುವಾಹಟಿಯು ಟೆಸ್ಟ್ ಕ್ರಿಕೆಟ್‌ಗೆ ಹೊಸ ತಾಣವಾಗಿದೆ. ಈ ಪ್ರದೇಶದಲ್ಲಿ ಸೂರ್ಯಾಸ್ತವು ಬೇಗನೆ ಆಗುತ್ತದೆ. ಆದ್ದರಿಂದ ಟೆಸ್ಟ್ ಪಂದ್ಯದ ಸಮಯದಲ್ಲಿಯೂ ವ್ಯತ್ಯಾಸವಾಗಿದೆ.

ಬೆಳಿಗ್ಗೆ 8.30ಕ್ಕೆ ಟಾಸ್ ಆಗಲಿದೆ. ಬೆಳಿಗ್ಗೆ 9ಕ್ಕೆ ಆಟ ಆರಂಭವಾಗುವುದು. ‘ಇದರಿಂದಾಗಿ ಚಹಾ ಮತ್ತು ಭೋಜನ ವಿರಾಮವು ಅದಲು ಬದಲಾಗಲಿದೆ. ಬೆಳಿಗ್ಗೆ 11 ಗಂಟೆಗೆ ಚಹಾ ವಿರಾಮ ಇರಲಿದೆ. 11.20ರಿಂದ ಮಧ್ಯಾಹ್ನ 1.20ರವರೆಗೆ ಎರಡನೇ ಅವಧಿ ಆಟ ನಡೆಯುವುದು. 1.20ರಿಂದ 2 ಗಂಟೆಯವರೆಗೆ ಊಟದ ವಿರಾಮ. ನಂತರ ಸಂಜೆ 4ರವರೆಗೆ ಆಟ ನಡೆಯಲಿದೆ.

ಭಾರತದಲ್ಲಿ ನಡೆಯುವ ಟೆಸ್ಟ್ ಪಂದ್ಯಗಳು ಬೆಳಿಗ್ಗೆ 9.30ಕ್ಕೆ ಆರಂಭವಾಗುವುದು ವಾಡಿಕೆ. 11.30 ರಿಂದ ಮಧ್ಯಾಹ್ನ 12.10 ಊಟ ಹಾಗೂ ಮಧ್ಯಾಹ್ನ 2.10ರಿಂದ 2.30 ಚಹಾ ವಿರಾಮ ಇರುತ್ತದೆ. ಇದೇ ಮೊದಲ ಬಾರಿ ಟೆಸ್ಟ್ ಪಂದ್ಯಕ್ಕೆ ಆತಿಥ್ಯ ವಹಿಸುತ್ತಿರುವ ಗುವಾಹಟಿಯಲ್ಲಿ ಈ ಸಂಪ್ರದಾಯ ಬದಲಾಗಲಿದೆ.

ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ‘ಎ’ ಡಿವಿಷನ್ ಲೀಗ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದ ಬ್ಯಾಂಕ್ ಆಫ್ ಬರೋಡಾ ತಂಡ. (ನಿಂತವರು) ಎಡದಿಂದ; ನವೀನ್, ನಾಗರಾಜ್, ಅರವಿಂದ್ ಎ, ಸಂಜಯ್ ರಾಜ್, ಸ್ಟಾಲಿನ್, ಹರೀಶ್, ರಾಜೇಶ್, ಕಾರ್ತಿಕ್, ಮುಫೀಜ್ (ಮಂಡಿಯೂರಿದವರು) ಸುಕೇಶ್, ಕ್ಲಿಂಟನ್, ಅನಿಲ್ ಕುಮಾರ್, ಅಶ್ವಿಜ್, ಆರನ್ ಮತ್ತು ದಿನೇಶ್ — ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

‘ಎ’ ಡಿವಿಷನ್ ಲೀಗ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಬ್ಯಾಂಕ್ ಆಫ್ ಬರೋಡಾಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನ್ ಅವರ ಅಮೋಘ ಆಟದ ನೆರವಿನಿಂದ ಬ್ಯಾಂಕ್ ಆಫ್ ಬರೋಡಾ ತಂಡವು ಗುರುವಾರ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ‘ಎ’ ಡಿವಿಷನ್ ಲೀಗ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಬರೋಡಾ ತಂಡವು 88–85ರಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವನ್ನು ಮಣಿಸಿ, ಪ್ರೊ. ಎನ್.ಸಿ. ಪರಪ್ಪ ಸ್ಮಾರಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಚಾಂಪಿಯನ್ ತಂಡ ₹50 ಸಾವಿರ ಮತ್ತು ರನ್ನರ್ಸ್ ಅಪ್ ತಂಡ ₹25 ಸಾವಿರ ಬಹುಮಾನ ಪಡೆಯಿತು.

ಪಂದ್ಯದ ಮೊದಲಾರ್ಧದಲ್ಲಿ 41–49ರಿಂದ ಹಿನ್ನಡೆಯಲ್ಲಿದ್ದ ಬರೋಡಾ ಉತ್ತರಾರ್ಧದಲ್ಲಿ ಚುರುಕಿನ ಆಟ ಪ್ರದರ್ಶಿಸಿ ಮೇಲುಗೈ ಸಾಧಿಸಿತು. ಬರೋಡಾ ಪರ ಆರನ್ 23, ಕಾರ್ತಿಕೇಯನ್ ಮತ್ತು ಅನಿಲ್ ಕುಮಾರ್ ತಲಾ 17 ಅಂಕ ಕಲೆಹಾಕಿ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು. ಯಂಗ್ ಓರಿಯನ್ಸ್ ಪರ ಶಶಾಂಕ್ ರೈ 25, ಗೌತಮ್ 23 ಮತ್ತು ಅಭಿಷೇಕ್ ಗೌಡ 17 ಪಾಯಿಂಟ್ಸ್ ಗಳಿಸಿದರು.

ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವು 72–57ರಿಂದ ಭಾರತ್ ಎಸ್.ಯು ತಂಡವನ್ನು ಮಣಿಸಿ ಎಂ.ಸಿ. ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ನಡೆದ ರಾಜ್ಯ ಬಿ ಡಿವಿಷನ್ ಲೀಗ್‌ನಲ್ಲಿ ಚಾಂಪಿಯನ್ ಆಯಿತು.

ಫೈನಲ್‌ನಲ್ಲಿ ಜಿಎಸ್‌ಟಿ ತಂಡದ ಪರ ವಿಷ್ಣು (28) ಮತ್ತು ಭುವನ್ (21) ಮಿಂಚಿದರು. ಭಾರತ್ ತಂಡದ ಅಕ್ಷಯ್ 22 ಮತ್ತು ಕನಿಷ್ಕ 21 ಅಂಕ ಗಳಿಸಿದರು. ಚಾಂಪಿಯನ್ ತಂಡ ₹40 ಸಾವಿರ ಮತ್ತು ರನ್ನರ್ ಅಪ್ ತಂಡ ₹20 ಸಾವಿರ ಬಹುಮಾನ ಗಳಿಸಿತು.

ಎಂಇಜಿ ಅಂಡ್ ಸೆಂಟರ್ ತಂಡವು 90–82ರಿಂದ ಎಚ್‌ಬಿಆರ್ ಬಿ.ಸಿ ತಂಡವನ್ನು ಸೋಲಿಸಿ, ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆದ ರಾಜ್ಯ ಸಿ ಡಿವಿಷನ್ ಲೀಗ್‌ನ ಪ್ರಶಸ್ತಿ ಗೆದ್ದುಕೊಂಡಿತು.

ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಎಂಇಜಿ ತಂಡದ ಪರ ಅಭಿಷೇಕ್ ವೈ.ಪಿ. 41 ಅಂಕ ಕಲೆಹಾಕಿ ಗೆಲುವಿನ ರೂವಾರಿಯಾದರು. ಎಚ್‌ಬಿಆರ್ ತಂಡದ ಶಶಿಧರ್ 26 ಪಾಯಿಂಟ್ಸ್ ಗಳಿಸಿದರು. ಎಂಇಜಿ ತಂಡ ₹30 ಸಾವಿರ ಮತ್ತು ಎಚ್‌ಬಿಆರ್ ತಂಡ ₹15 ಸಾವಿರ ಬಹುಮಾನ ಪಡೆಯಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ, ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್, ಎಡಿಜಿಪಿ (ಆಡಳಿತ) ಸೌಮೇಂದು ಮುಖರ್ಜಿ, ಡಿವೈಇಎಸ್ ಆಯುಕ್ತ ಆರ್.ಚೇತನ್, ಕೆಎಸ್‌ಬಿಬಿಎ ಉಪಾಧ್ಯಕ್ಷ ಆರ್. ರಾಜನ್, ಸಹ ಕಾರ್ಯದರ್ಶಿ ಆರ್. ಪ್ರಕಾಶ್, ಮಾಜಿ ಒಲಿಂಪಿಯನ್ ಜಿ. ದಿಲೀಪ್ ಭಾಗವಹಿಸಿದ್ದರು.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ

ಕರ್ನಾಟಕ ತಂಡದಲ್ಲಿ ದೇವದತ್ತ, ಕರುಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಭವಿ ಆಟಗಾರರಾದ ದೇವದತ್ತ ಪಡಿಕ್ಕಲ್ ಮತ್ತು ಕರುಣ್ ನಾಯರ್ ಅವರನ್ನು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಅಹಮದಾಬಾದಿನಲ್ಲಿ ಇದೇ 26ರಿಂದ ಟೂರ್ನಿಯ ಎಲೀಟ್ ಡಿ ಗುಂಪಿನ ಪಂದ್ಯಗಳು ನಡೆಯಲಿವೆ. ಉತ್ತರಾಖಂಡ, ರಾಜಸ್ಥಾನ, ತಮಿಳುನಾಡು, ದೆಹಲಿ, ಸೌರಾಷ್ಟ್ರ ಮತ್ತು ತ್ರಿಪುರ ತಂಡಗಳು ಇದೇ ಗುಂಪಿನಲ್ಲಿವೆ. ಟೂರ್ನಿಯಲ್ಲಿ ಕರ್ನಾಟಕವು ತನ್ನ ಮೊದಲ ಪಂದ್ಯದಲ್ಲಿ ಉತ್ತರಾಖಂಡ ಎದುರು ಆಡಲಿದೆ.

ಕರುಣ್

ಪಡಿಕ್ಕಲ್

ದಕ್ಷಿಣ ಆಫ್ರಿಕಾ ಎದುರು ನಡೆಯುತ್ತಿರುವ ಟೆಸ್ಟ್ ಸರಣಿಯಲ್ಲಿ ಆಡುತ್ತಿರುವ ಭಾರತ ತಂಡದಲ್ಲಿ ದೇವದತ್ತ ಇದ್ದಾರೆ. ಕರುಣ್ ಅವರು ರಣಜಿ ಟ್ರೋಫಿ ಟೂರ್ನಿಯ ಮೊದಲ ಹಂತದ ಐದು ಪಂದ್ಯಗಳಲ್ಲಿ ಒಟ್ಟು 602 ರನ್ ಪೇರಿಸಿದ್ದಾರೆ. 100.33 ಸರಾಸರಿಯಲ್ಲಿ ಅವರು ರನ್ ಗಳಿಸಿದ್ದಾರೆ. ಅದರಲ್ಲಿ ಒಟ್ಟು ಎರಡು ಶತಕಗಳೂ ಇವೆ. ಟಿ20 ತಂಡವನ್ನೂ ಮಯಂಕ್ ಅಗರವಾಲ್ ಮುನ್ನಡೆಸುವರು.

ತಂಡ ಇಂತಿದೆ: ಮಯಂಕ್ ಅಗರವಾಲ್ (ನಾಯಕ), ಮೆಕ್ನಿಲ್ ನೊರೋನಾ, ಕೆ.ಎಲ್. ಶ್ರೀಜಿತ್, ಕರುಣ್ ನಾಯರ್, ಆರ್. ಸ್ಮರಣ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ಶಿಖರ್ ಶೆಟ್ಟಿ, ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ, ಶ್ರೀವತ್ಸ ಆಚಾರ್ಯ, ಶುಭಾಂಗ್ ಹೆಗ್ಡೆ, ಪ್ರವೀಣ ದುಬೆ, ಬಿ.ಆರ್. ಶರತ್, ದೇವದತ್ತ ಪಡಿಕ್ಕಲ್.

ಫಿಫಾ ರ‍್ಯಾಂಕಿಂಗ್: 142ನೇ ಸ್ಥಾನಕ್ಕೆ ಕುಸಿದ ಭಾರತ ತಂಡ

ನವದೆಹಲಿ (ಪಿಟಿಐ): ಏಷ್ಯನ್ ಕಪ್ ಕ್ವಾಲಿಫೈಯರ್ಸ್‌ನಲ್ಲಿ ಮಂಗಳವಾರ ಬಾಂಗ್ಲಾದೇಶ ತಂಡದ ಎದುರು 0–1 ಸೋಲಿನ ಪರಿಣಾಮ ಭಾರತ ತಂಡವು ಗುರುವಾರ ಪ್ರಕಟವಾದ ಫಿಫಾ ಕ್ರಮಾಂಕ ಪಟ್ಟಿಯಲ್ಲಿ ಆರು ಸ್ಥಾನ ಕುಸಿತ ಕಂಡು 142ನೇ ಸ್ಥಾನಕ್ಕಿಳಿದಿದೆ.

ಖಾಲಿದ್ ಜಮೀಲ್ ತರಬೇತಿಯ ತಂಡ, 2023ರ ನಂತರ ಮೊದಲ ಬಾರಿ ನೆರೆಯ ರಾಷ್ಟ್ರಕ್ಕೆ ಸೋತಿತ್ತು.

ಗೋವಾದಲ್ಲಿ ಹೋದ ತಿಂಗಳು ಸಿಂಗಪುರಕ್ಕೆ ಸೋತಾಗಲೇ ಭಾರತ ತಂಡವು ಏಷ್ಯನ್ ಕಪ್ ಕ್ವಾಲಿಫೈಯರ್ ರೇಸ್‌ನಿಂದ ಹೊರಬಿದ್ದಿತ್ತು.

ಇದು 2016ರ ಅಕ್ಟೋಬರ್ ನಂತರ ಭಾರತದ ಅತ್ಯಂತ ಕಳಪೆ ರ‍್ಯಾಂಕಿಂಗ್ ಆಗಿದೆ. ಆ ವರ್ಷ ಭಾರತ 148ನೇ ಸ್ಥಾನಕ್ಕಿಳಿದಿತ್ತು. 2023ರ ಡಿಸೆಂಬರ್‌ನಲ್ಲಿ 102ನೇ ಸ್ಥಾನದಲ್ಲಿದ್ದ ಭಾರತ ಈಗ 40 ಸ್ಥಾನಗಳಷ್ಟು ಕೆಳಕ್ಕಿಳಿದಿದೆ. 1996ರ ಫೆಬ್ರುವರಿಯಲ್ಲಿ ಭಾರತ ತನ್ನ ಅತ್ಯುನ್ನತ (94ನೇ) ಕ್ರಮಾಂಕ ಗಳಿಸಿತ್ತು.

ಏಷ್ಯಾದ 46 ರಾಷ್ಟ್ರಗಳಲ್ಲಿ ಭಾರತ 27ನೇ ಸ್ಥಾನದಲ್ಲಿದೆ. ಜಪಾನ್ ಅಗ್ರಸ್ಥಾನದಲ್ಲಿದೆ.

ಮೋಹಿತ್, ಮಿಹಿಕಾಗೆ ಪ್ರಶಸ್ತಿ

ಧಾರವಾಡ: ಬೆಂಗಳೂರಿನ ಮೋಹಿತ್ ಬೆಳವಾಡಿ ಮತ್ತು ಮಿಹಿಕಾ ಉಡುಪ ಅವರು ಗುರುವಾರ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಕಾಸ್ಮೋಸ್ ಕ್ಲಬ್ ಆಯೋಜಿಸಿರುವ ಟೂರ್ನಿಯ ಬಾಲಕರ ಫೈನಲ್‌ನಲ್ಲಿ ಮೋಹಿತ್ ಬೆಳವಾಡಿ 11–7, 11–9, 11–5ರಿಂದ ಬೆಂಗಳೂರಿನ ಅರ್ಣವ್ ಮಿಥುನ್ ಅವರನ್ನು ಮಣಿಸಿದರು.

ಬಾಲಕಿಯರ ಫೈನಲ್‌ನಲ್ಲಿ ಮಿಹಿಕಾ ಉಡುಪ 14–12, 11–8, 11–5ರಿಂದ ಬೆಂಗಳೂರಿನ ಲಕ್ಷ್ಮಿ ಆಶ್ರಿತಾ ಅವರನ್ನು ಸೋಲಿಸಿದರು.

ಪ್ರಶಸ್ತಿಯೊಂದಿಗೆ ಮಿಹಿಕಾ ಉಡುಪ ಮತ್ತು ಮೋಹಿತ್

ನ್ಯಾಯಾಲಯಕ್ಕೆ ಎಸ್‌ಐಟಿ ವರದಿ

ಒಂದನೇ ಪುಟದಿಂದ...

‘ಈ ಪ್ರಕರಣದಲ್ಲಿ ನ್ಯಾಯಾಲಯದ ದಾರಿ ತಪ್ಪಿಸಲಾದ ಕುರಿತು ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬಿಎನ್‌ಎಸ್‌ಎಸ್ ಸೆಕ್ಷನ್ 379ರ ಅಡಿ ನಿರ್ದೇಶನ ನೀಡುವಂತೆ ಕೋರಿದ್ದೇವೆ. ನ್ಯಾಯಾಲಯದ ಆದೇಶವನ್ನು ಆಧರಿಸಿ ಈ ಪ್ರಕರಣದ ಮುಂದಿನ ತನಿಖೆ ನಡೆಯಲಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಳೂ ಸೇರಿದಂತೆ ಕೆಲವೊಂದು ಮಹತ್ವದ ದಾಖಲೆಗಳು ಇನ್ನಷ್ಟೇ ಕೈಸೇರಬೇಕಿದೆ. ಹಾಗಾಗಿ ಇದನ್ನು ಪ್ರಾಥಮಿಕ ವರದಿ ಎಂದು ಪರಿಗಣಿಸಬಹುದೇ ಹೊರತು, ಇದು ಸಮಗ್ರ ವರದಿ ಅಲ್ಲ. ಈ ಪ್ರಕರಣದ ತನಿಖೆ ಶುರುವಾಗುವ ಮುನ್ನ ನ್ಯಾಯಾಲಯಕ್ಕೆ ಹೇಗೆ ಸುಳ್ಳು ಪುರಾವೆಗಳನ್ನು ಒಪ್ಪಿಸಲಾಯಿತು, ಪ್ರಕರಣಕ್ಕೆ ಸಂಬಂಧಪಡದ ಬುರುಡೆಯನ್ನು ಹಾಗೂ ತಿರುಚಿದ ಸಾಕ್ಷ್ಯಗಳನ್ನು ತಂದೊಪ್ಪಿಸಿ ಹೇಗೆ ನ್ಯಾಯಾಂಗದ ಹಾದಿ ತಪ್ಪಿಸಲಾಯಿತು ಎಂಬ ವಿವರಗಳು ವರದಿಯಲ್ಲಿವೆ. ಸಾಕ್ಷಿ ದೂರುದಾರ ಸೇರಿದಂತೆ ಆರು ಮಂದಿ ಸೇರಿಕೊಂಡು ಹೇಗೆ ನ್ಯಾಯಾಲಯದ ದಾರಿ ತಪ್ಪಿಸಿದರು, ಇದಕ್ಕಾಗಿ ಹೇಗೆ ಸಂಚು ರೂಪಿಸಲಾಗಿದೆ ಎಂಬ ಅಂಶಗಳನ್ನು ಈ ವರದಿ ಕೇಂದ್ರೀಕರಿಸಿದೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಈ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಎಸ್‌ಐಟಿ ಅಧಿಕಾರಿಗಳು ವಿಶೇಷ ಸರ್ಕಾರಿ ವಕೀಲರ ಜೊತೆ ಸುದೀರ್ಘ ಸಮಾಲೋಚನೆ ನಡೆಸಿದರು.

ಏನಿದು ಸೆಕ್ಷನ್: ಬಿಎನ್‌ಎಸ್‌ಎಸ್ ಸೆಕ್ಷನ್ 215 ಸಾರ್ವಜನಿಕ ನ್ಯಾಯದಾನ ಪ್ರಕ್ರಿಯೆಗೆ ವಿರುದ್ಧವಾದ ಅಪರಾಧಗಳನ್ನು ನ್ಯಾಯಾಲಯದ ಗಮನಕ್ಕೆ ತರುವುದಕ್ಕೆ ಸಂಬಂಧಿಸಿದ್ದಾಗಿದೆ. ನ್ಯಾಯಾಲಯ ಇಂತಹ ನಿರ್ದಿಷ್ಟ ಅಪರಾಧಗಳನ್ನು ಯಾವ ರೀತಿ ಪರಿಗಣಿಸಬೇಕು ಎಂಬ ವಿಧಾನಗಳ ಕುರಿತು ಈ ಸೆಕ್ಷನ್ ನಿರ್ದಿಷ್ಟಪಡಿಸುತ್ತದೆ. ಈ ಕುರಿತು ವಿಚಾರಣೆ ಪ್ರಾರಂಭಿಸುವ ಮುನ್ನ ನ್ಯಾಯಾಲಯದಿಂದ ಅಥವಾ ಅಧಿಕೃತ ಅಧಿಕಾರಿಯಿಂದ ಲಿಖಿತ ದೂರು ಸಲ್ಲಿಕೆಯಾಗಿರಬೇಕು. ಸಾರ್ವಜನಿಕ ನ್ಯಾಯಕ್ಕೆ ವಿರುದ್ಧವಾದ ಅಪರಾಧಗಳ ತನಿಖೆಯನ್ನು ಹೇಗೆ ನಿಭಾಯಿಸಬೇಕು ಮತ್ತು ನ್ಯಾಯಾಲಯದ ಕಲಾಪಗಳಿಗೆ ಅಡಚಣೆಯಾದಾಗ ನ್ಯಾಯಾಲಯಗಳು ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬ ಕುರಿತು ಇದು ವಿವರಿಸುತ್ತದೆ.

ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ಹೂತುಹಾಕಿ, ಸಾಕ್ಷ್ಯಗಳನ್ನು ಮುಚ್ಚಿಹಾಕಲಾಗಿದೆ ಎಂದು ಆರೋಪಿಸಿ ಸಾಕ್ಷಿ ದೂರುದಾರ ಧರ್ಮಸ್ಥಳ ಪೊಲೀಸ್ ಠಾಣೆಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಿದ್ದ. ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಸರ್ಕಾರ 2025ರ ಜುಲೈ 19ರಂದು ಎಸ್‌ಐಟಿಯನ್ನು ರಚಿಸಿತ್ತು. ಎಸ್‌ಐಟಿಯು ಸುಮಾರು ನಾಲ್ಕು ತಿಂಗಳು ಈ ಪ್ರಕರಣದ ತನಿಖೆ ನಡೆಸಿದೆ.

‘ತನಿಖೆ ಇನ್ನೂ ಮುಕ್ತಾಯವಾಗಿಲ್ಲ’

‘ಈ ವರದಿ ಸಲ್ಲಿಕೆಯಾದ ಮಾತ್ರಕ್ಕೆ ಪ್ರಕರಣದ ತನಿಖೆಯನ್ನು ಮುಕ್ತಾಯಗೊಳಿಸಲಾಗಿದೆ ಎಂದು ಅರ್ಥವಲ್ಲ. ಇದೊಂದು ಪ್ರಾಥಮಿಕ ಪ್ರಕ್ರಿಯೆ ಮಾತ್ರ. ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಿರುವ ಆರೋಪ, ಅನುಮಾನಾಸ್ಪದ ಆತ್ಮಹತ್ಯೆ ಪ್ರಕರಣಗಳು, ನೇತ್ರಾವತಿ ಸ್ನಾನಘಟ್ಟದ ಸಮೀಪದ ಬಂಗ್ಲಗುಡ್ಡೆ ಕಾಡಿನಲ್ಲಿ ಸಿಕ್ಕ ಮೃತದೇಹಗಳ ಅವಶೇಷಗಳಿಗೆ ಸಂಬಂಧಿಸಿದ ತನಿಖೆ ಇನ್ನೂ ಮುಂದುವರಿಯಲಿದೆ. ಈ ಕುರಿತ ಸತ್ಯ ಸಂಗತಿ ಏನೆಂಬುದು ತನಿಖೆಯಿಂದ ಬಯಲಾಗಲಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಎಸ್‌ಐಟಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಅಧಿವೇಶನದಲ್ಲಿ ಎಸ್‌ಐಟಿ ವರದಿ ಮಾಹಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ಪ್ರಕರಣದ ತನಿಖಾ ವರದಿಯನ್ನು ಎಸ್‌ಐಟಿ, ಸರ್ಕಾರಕ್ಕೂ ಸಲ್ಲಿಸಲಿದೆ. ವರದಿಯಲ್ಲಿರುವ ಅಂಶಗಳನ್ನು ಬೆಳಗಾವಿ ಅಧಿವೇಶನ ದಲ್ಲಿ ಸದನಕ್ಕೆ ತಿಳಿಸುತ್ತೇವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ. ವರದಿ ಬಹಿರಂಗವಾದ ನಂತರ ಈ ಪ್ರಕರಣದಲ್ಲಿ ಏನು ಷಡ್ಯಂತ್ರ ನಡೆದಿದೆ, ಯಾರೆಲ್ಲಾ ಕಾರಣ ಎಂಬುದು ಗೊತ್ತಾಗಲಿದೆ’ ಎಂದರು.

ಮುಸ್ಲಿಂ ‘ಭವನ’ಗಳಿಗೆ ₹67 ಕೋಟಿ

ಒಂದನೇ ಪುಟದಿಂದ...

ಈ ಕುರಿತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅ.11ರಂದು ಆದೇಶ ಹೊರಡಿಸಿದೆ. ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಕೊಪ್ಪಳ, ಮೈಸೂರು, ಶಿವಮೊಗ್ಗ, ಹೊಸಪೇಟೆ ಈ ಏಳು ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಒಟ್ಟು 53 ತಾಲ್ಲೂಕುಗಳಲ್ಲಿ ಭವನ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಅಲ್ಪಸಂಖ್ಯಾತರ ಸಮುದಾಯದವರಿಗೆ ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಲಾ ₹ 50 ಲಕ್ಷ ಹಾಗೂ ಜಿಲ್ಲಾ ಮತ್ತು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ₹1 ಕೋಟಿ ವೆಚ್ಚದಲ್ಲಿ ಬಹೂಪಯೋಗಿ ಭವನಗಳನ್ನು ನಿರ್ಮಿಸಲಾಗುವುದು ಎಂದು ಈ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದರು. ‘ಹೋಬಳಿ ಮತ್ತು ತಾಲ್ಲೂಕುಮಟ್ಟದಲ್ಲಿ ₹2 ಕೋಟಿ ಹಾಗೂ ಜಿಲ್ಲಾ ಮತ್ತು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ₹3 ಕೋಟಿ ವೆಚ್ಚದಲ್ಲಿ ಬಹೂಪಯೋಗಿ ಭವನ ನಿರ್ಮಿಸಲು ಅನುಮತಿ ಕೊಡಿ’ ಎಂದು ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕ ಜೀಲಾನಿ ಎಚ್. ಮೊಕಾಶಿ ಅವರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಜುಲೈ 3ರಂದು ಆದೇಶ ಹೊರಡಿಸಿದ್ದ ಸರ್ಕಾರ, ತಾಲ್ಲೂಕುಮಟ್ಟದಲ್ಲಿ ₹ 1 ಕೋಟಿ, ಜಿಲ್ಲಾಮಟ್ಟದಲ್ಲಿ ₹ 2 ಕೋಟಿ ವೆಚ್ಚದಲ್ಲಿ ಭವನ ನಿರ್ಮಿಸಲು ಮಂಜೂರಾತಿ ನೀಡಿತ್ತು. ಅಲ್ಲದೆ, ಕಡ್ಡಾಯವಾಗಿ ಸರ್ಕಾರಿ ಜಾಗ ಅಥವಾ ವಕ್ಫ್ ಮಂಡಳಿಯಿಂದ ನಿಯಮಾನುಸಾರ ಪಡೆದ ನಿವೇಶನದಲ್ಲಿಯೇ ಭವನ ನಿರ್ಮಿಸಬೇಕು. ಸಂಬಂಧಪಟ್ಟ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ನಿವೇಶನ ಗುರುತಿಸಬೇಕು. ಜೊತೆಗೆ, ರಾಜ್ಯದಾದ್ಯಂತ ಏಕರೂಪವಾಗಿ ಭವನಗಳನ್ನು ನಿರ್ಮಿಸಲು ನಿರ್ದೇಶಕರು ಕ್ರಮ ತೆಗೆದುಕೊಳ್ಳಬೇಕು ಎಂದೂ ಆದೇಶ ಹೇಳಿತ್ತು. ನಗರ ಪ್ರದೇಶಗಳಲ್ಲಿರುವ ಅಲ್ಪಸಂಖ್ಯಾತರ ಕೊಳೆಗೇರಿ, ಕಾಲೊನಿಗಳ ಅಭಿವೃದ್ಧಿ ಯೋಜನೆ ಮತ್ತು ಮುಖ್ಯಮಂತ್ರಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರಿಗೆ ಒದಗಿಸುವ ಅನುದಾನಕ್ಕೆ ಸೀಮಿತವಾಗಿ ರೂಪಿಸಲಾಗಿರುವ ಕ್ರಿಯಾಯೋಜನೆಯಲ್ಲಿ ಈ ಬಹೂಪಯೋಗಿ ಭವನಗಳನ್ನು ನಿರ್ಮಿಸಲು ₹50 ಕೋಟಿ ಅನುದಾನ ಮೀಸಲಿಡಲಾಗಿತ್ತು. ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ. ಝೆಡ್. ಜಮೀರ್ ಅಹ್ಮದ್ ಖಾನ್ ಅವರು, ಭವನ ನಿರ್ಮಿಸಲು ಸಂಸ್ಥೆಗಳನ್ನು ಆಯ್ಕೆ ಮಾಡಿ ಅನುದಾನ ನಿಗದಿಪಡಿಸಿದ್ದರು. ಅದರಂತೆ ಮೊದಲ ಹಂತದಲ್ಲಿ 59 ಸಂಸ್ಥೆಗಳಿಗೆ ಒಟ್ಟು ₹ 81 ಕೋಟಿ ಮಂಜೂರು ಮಾಡಬೇಕು. ಮೊದಲ ಕಂತು ₹ 40.50 ಕೋಟಿ ಬಿಡುಗಡೆ ಮಾಡುವ ಜೊತೆಗೆ, ಅನುಷ್ಠಾನ ಏಜೆನ್ಸಿಯನ್ನೂ ಆಯ್ಕೆ ಮಾಡಿ ಆದೇಶ ಹೊರಡಿಸಬೇಕು ಎಂದು ಜೀಲಾನಿ.ಎಚ್. ಮೊಕಾಶಿ ಅವರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಈ ಪ್ರಸ್ತಾವವನ್ನು ಪರಿಗಣಿಸಿದ್ದ ಸರ್ಕಾರ, 59 ಸಂಸ್ಥೆಯ ಬದಲು ಹೆಚ್ಚುವರಿಯಾಗಿ ಒಂದು ಸಂಸ್ಥೆಯನ್ನು ಪಟ್ಟಿಯಲ್ಲಿ ಸೇರಿಸಿ ಒಟ್ಟು ₹ 67 ಕೋಟಿ ಮಂಜೂರು ಮಾಡಿದೆ. ಈ ಪೈಕಿ, ಶೇ 50ರಷ್ಟು ಅನುದಾನವನ್ನು ಬಿಡುಗಡೆ ಮಾಡಲು ಮತ್ತು ಭವನ ನಿರ್ಮಾಣ ಕಾಮಗಾರಿಯನ್ನು ರಾಜ್ಯ ಹ್ಯಾಬಿಟೇಟ್ ಕೇಂದ್ರದ ಮೂಲಕ ಅನುಷ್ಠಾನಗೊಳಿಸಲು ಅನುಮತಿ ನೀಡಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಮಸೂದೆಗೆ ಅಂಕಿತ: ಕಾಲಮಿತಿ ಸಲ್ಲ

ಒಂದನೇ ಪುಟದಿಂದ...

ತಮಿಳುನಾಡು ರಾಜ್ಯಪಾಲ ಆರ್. ಎನ್. ರವಿ ಅವರು 10 ಮಸೂದೆಗಳನ್ನು ಅನಿರ್ದಿಷ್ಟಾವಧಿಗೆ ತಡೆಹಿಡಿದಿರುವುದನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳ ವಿಚಾರವಾಗಿ ಮೂರು ತಿಂಗಳ ಅವಧಿಯಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಮಾಡಿ, ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ನೇತೃತ್ವದ ಪೀಠವು ಏಪ್ರಿಲ್ 8ರಂದು ತೀರ್ಪು ನೀಡಿತ್ತು.

ಈ ತೀರ್ಪಿನ ಕಾರಣದಿಂದ, ‘ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ’ ಎಂದು ಪ್ರಶ್ನಿಸಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಿಂದ ಸ್ಪಷ್ಟನೆ ಕೇಳಿದ್ದರು.

ಸಂವಿಧಾನದ 143(1)ನೇ ವಿಧಿಯು, ಸುಪ್ರೀಂ ಕೋರ್ಟ್‌ನೊಂದಿಗೆ ಸಮಾಲೋಚನೆ ನಡೆಸುವುದಕ್ಕೆ ರಾಷ್ಟ್ರಪತಿ ಹೊಂದಿರುವ ಅಧಿಕಾರಕ್ಕೆ ಸಂಬಂಧಿಸಿದ್ದಾಗಿದೆ. ಈ ವಿಧಿಯಡಿ ದತ್ತವಾದ ಅಧಿಕಾರವನ್ನು ಅಪರೂಪವೆಂಬಂತೆ ಬಳಸಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 14 ಮಹತ್ವದ ಪ್ರಶ್ನೆಗಳನ್ನು ಸುಪ್ರೀಂ ಕೋರ್ಟ್ ಮುಂದಿಟ್ಟಿದ್ದರು. ರಾಷ್ಟ್ರಪತಿಯವರು ಕೇಳಿರುವ ಪ್ರಶ್ನೆಗಳ ಕುರಿತು ವಿಚಾರಣೆ ನಡೆಸಿದ್ದ ಐವರು ಸದಸ್ಯರ ಸಂವಿಧಾನ ಪೀಠವು, ಸೆಪ್ಟೆಂಬರ್ 11ರಂದು ತೀರ್ಪನ್ನು ಕಾಯ್ದಿರಿಸಿತ್ತು. ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ತೀರ್ಪನ್ನು ಪೀಠವು ಈಗ ಪ್ರಕಟಿಸಿದೆ.

ಉತ್ತಮ ತೀರ್ಪು: ಇಳಂಗೋವನ್

ಒಂದನೇ ಪುಟದಿಂದ...

‘ವಿಧಾನಸಭೆ ಅಂಗೀಕರಿಸಿದ ಮಸೂದೆಯಲ್ಲಿ ಸಂವಿಧಾನಕ್ಕೆ ವಿರುದ್ಧವಾದ ಅಂಶಗಳಿವೆ ಎಂದು ರಾಜ್ಯಪಾಲರು ಗುರುತಿಸಿದಲ್ಲಿ, ಆ ಕುರಿತು ಅವರು ಸ್ಪಷ್ಟನೆ ಪಡೆಯಬೇಕು’ ಎಂದರು. ‘ರಾಜ್ಯಪಾಲರು ಯಾವುದೇ ಮಸೂದೆಯನ್ನು ತಿರಸ್ಕರಿಸುವಂತಿಲ್ಲ ಅಥವಾ ಈ ಮಸೂದೆಯನ್ನು ಅಂಗೀಕರಿಸಬಾರದು ಎಂದು ಹೇಳುವ ಹಾಗಿಲ್ಲ. ಅವರಿಗೆ ಇಂಥ ಅಧಿಕಾರವೇ ಇಲ್ಲ’ ಎಂದು ಅವರು ಪಿಟಿಐ ವಿಡಿಯೊಗೆ ತಿಳಿಸಿದರು.

‘ಶಾಸಕರು ಹಾಗೂ ಸಂಸದರೇ ರಾಷ್ಟ್ರಪತಿ ಅವರನ್ನು ಆಯ್ಕೆ ಮಾಡುತ್ತಾರೆ. ಉಪ ರಾಷ್ಟ್ರಪತಿಯನ್ನೂ ಸಂಸದರು ಆಯ್ಕೆ ಮಾಡುತ್ತಾರೆ. ಪ್ರಧಾನಿ ಕೂಡ ಚುನಾಯಿಸಲ್ಪಟ್ಟವರು. ಆದರೆ, ರಾಜ್ಯಪಾಲರನ್ನು ನೇಮಕ ಮಾಡಲಾಗುತ್ತದೆ. ಹೀಗಾಗಿ, ವಿಧಾನಸಭೆಯಲ್ಲಿ ಅಂಗೀಕಾರಗೊಂಡಿರುವ ಮಸೂದೆಯು ಸಂವಿಧಾನದಲ್ಲಿನ ಅವಕಾಶಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವುದಷ್ಟೇ ರಾಜ್ಯಪಾಲರ ಕೆಲಸ’ ಎಂದು ಹೇಳಿದರು.

‘ರಾಜ್ಯಪಾಲರು, ಮಸೂದೆಗೆ ಸಂಬಂಧಿಸಿ ಸ್ಪಷ್ಟನೆಯನ್ನು ಕೇಳಬಹುದಷ್ಟೆ. ಅದನ್ನು ತಿರಸ್ಕರಿಸುವಂತಿಲ್ಲ. ಒಂದು ವೇಳೆ ಸರ್ಕಾರವು ಸ್ಪಷ್ಟನೆ ನೀಡಿದಲ್ಲಿ ಅವರು ಅದನ್ನು ಒಪ್ಪಿಕೊಳ್ಳಬೇಕು. ಆದರೆ, ಈ ರಾಜ್ಯಪಾಲರು ಮೊಂಡು’ ಎಂದು ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಕುರಿತು ಪರೋಕ್ಷವಾಗಿ ಹೇಳಿದರು.

ಸಿದ್ದರಾಮಯ್ಯ ಸಿ.ಎಂ ಆಗಿ ಇರುವುದಿಲ್ಲ ಎಂದು ಯಾರೂ ಹೇಳಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎಂದು ಯಾರೂ ಹೇಳಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟನೆ ನೀಡಿದರು.

ಸದಾಶಿವನಗರದ ನಿವಾಸದ ಬಳಿ ಗುರುವಾರ ರಾತ್ರಿ ಸುದ್ದಿಗಾರರ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಉತ್ತರಿಸಿದರು.

‘ಐದೂ ವರ್ಷವೂ ನಾನೇ ಮುಖ್ಯಮಂತ್ರಿ’ ಎಂದು ಸಿದ್ದರಾಮಯ್ಯ ಅವರು ಚಾಮರಾಜನಗರದಲ್ಲಿ ಹೇಳಿರುವ ಬಗ್ಗೆ ಕೇಳಿದಾಗ, ‘ಬಹಳ ಸಂತೋಷ... ಅವರಿಗೆ ಮುಖ್ಯಮಂತ್ರಿ ಹುದ್ದೆ ಜವಾಬ್ದಾರಿಯನ್ನು ಪಕ್ಷ ಕೊಟ್ಟಿದೆ. ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ’ ಎಂದರು.

ವಿಧಾನ ಪರಿಷತ್ ಸದಸ್ಯರ ಭೇಟಿಯ ಬಗ್ಗೆ ಕೇಳಿದಾಗ, ‘ವಿಧಾನಪರಿಷತ್ ಸಭಾಧ್ಯಕ್ಷರು ಹಾಗೂ ಉಪ ಸಭಾಧ್ಯಕ್ಷರನ್ನು ಈ ಬಾರಿ ಕಾಂಗ್ರೆಸ್ ಪಕ್ಷದಿಂದಲೇ ಆಯ್ಕೆ ಮಾಡಬೇಕು ಎಂದು ಪಕ್ಷದ ಸದಸ್ಯರು ಮನವಿ ಮಾಡಿದ್ದಾರೆ. ಈ ಹಿಂದೆಯೇ ಇದನ್ನು ಮಾಡಬೇಕಿತ್ತು. ಮೇಲ್ಮನೆಯಲ್ಲಿ ವಿರೋಧ ಪಕ್ಷಗಳ ಹಾಗೂ ನಮ್ಮ ಸಂಖ್ಯೆ ಸಮನಾಗಿದೆ. ಗಾಯತ್ರಿ ಅವರ ಪ್ರಕರಣವನ್ನು ನ್ಯಾಯಾಲಯದಲ್ಲಿ ಗೆದ್ದಿದ್ದೇವೆ. ಅಲ್ಲಿಂದ ಆದೇಶ ಪಡೆಯಬೇಕಿದೆ. ಆಗ ನಮ್ಮ ಸದಸ್ಯರ ಸಂಖ್ಯೆ ಹೆಚ್ಚಳವಾಗಲಿದೆ ಎಂದು ಸದಸ್ಯರು ತಿಳಿಸಿದ್ದಾರೆ’ ಎಂದರು.

‘ನನಗೆ ಆರೋಗ್ಯ ಸರಿಯಿಲ್ಲದ ಕಾರಣಕ್ಕೆ ಮನೆಯಿಂದ ಹೊರಗಡೆ ಬಂದಿಲ್ಲ. ಸ್ನಾನವನ್ನೂ ಮಾಡಿಲ್ಲ. ಯಾರ ದೆಹಲಿ ಭೇಟಿ ವಿಚಾರವೂ ಗೊತ್ತಿಲ್ಲ’ ಎಂದರು.

‘ಕೊಟ್ಟ ಮಾತಿಗೆ ತಪ್ಪಲ್ಲ’: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿಗೆ ಎಂದೂ ತಪ್ಪುವವರಲ್ಲ’ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂಬ ಆಸೆ ಎಲ್ಲರಿಗೂ ಇದೆ. ನಾವುಗಳು ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡುವವರು. ಪಕ್ಷದ ವರಿಷ್ಠರು ಇದನ್ನು ತೀರ್ಮಾನಿಸುತ್ತಾರೆ’ ಎಂದರು.

ಅಧಿಕಾರ ಹಸ್ತಾಂತರದ ಬಗ್ಗೆ ಹೈಕಮಾಂಡ್ ಏನೂ ಹೇಳಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲೂ ಆ ವಿಚಾರ ಚರ್ಚೆಗೆ ಬಂದಿಲ್ಲ. ಹೀಗಾಗಿ, ಅದಕ್ಕೆ ಮಹತ್ವ ಯಾಕೆ ಕೊಡಬೇಕು

ಜಿ. ಪರಮೇಶ್ವರ, ಗೃಹ ಸಚಿವ

ಸಿ.ಎಂ ಮನೆಗೂ ಸಿಗದ ವಿದ್ಯುತ್ ಸಂಪರ್ಕ

ಒಂದನೇ ಪುಟದಿಂದ...

ಆದರೆ, ಬೆಂಗಳೂರಿನಲ್ಲಿ 1,200 ಚದರಡಿ ನಿವೇಶನದಲ್ಲಿ 4, 5, 6 ಅಂತಸ್ತು ನಿರ್ಮಾಣ ಮಾಡಿರುವವರ ಸಂಖ್ಯೆ ಹೆಚ್ಚಾಗಿದೆ. ಸರ್ಕಾರದ ಆದೇಶದಿಂದ ಅವರಿಗೆ ಯಾವುದೇ ರೀತಿಯ ಉಪಯೋಗ ಆಗುವುದಿಲ್ಲ ಎಂದು ಗುತ್ತಿಗೆದಾರರೊಬ್ಬರು ವಿವರಿಸಿದರು. ‘ಬೆಂಗಳೂರು ನಗರ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವಾಣಿಜ್ಯ ಕಟ್ಟಡಗಳು, 1,200 ಚದರ ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನದಲ್ಲಿ ಮನೆ ನಿರ್ಮಾಣ ಮಾಡಿರುವವರ ಸಂಖ್ಯೆ ಹೆಚ್ಚಾಗಿದೆ. ಕನಿಷ್ಠ 2,400 ಚದರ ಅಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ಮನೆಗಳಿಗೆ ಒಸಿಯಿಂದ ವಿನಾಯಿತಿ ನೀಡಿದರೆ, ಹೆಚ್ಚಿನ ಜನರಿಗೆ ಉಪಯೋಗ ಆಗುತ್ತದೆ’ ಎಂದು ಬೆಸ್ಕಾಂನ ಎಂಜಿನಿಯರ್ ಒಬ್ಬರು ತಿಳಿಸಿದರು.

ನನಗೂ ಗೊತ್ತಿಲ್ಲ: ತುಷಾರ್

‘ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ಸಮಸ್ಯೆಗೆ ಯಾವಾಗ ಪರಿಹಾರ ಸಿಗಲಿದೆ ಎಂಬುದು ನಮಗೂ ಗೊತ್ತಿಲ್ಲ. ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ನಿರ್ಧರಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಧಿಕಾರ ಈಗಲೂ, ಭವಿಷ್ಯದಲ್ಲೂ ಭದ್ರ’

ಒಂದನೇ ಪುಟದಿಂದ...

ಜಿಟಿಡಿ ನಮ್ಮ ಜತೆಗೇ ಇದ್ದಾರೆ: ಬಳಿಕ ಇಲ್ಲಿ ನಡೆದ ಸಹಕಾರ ಸಪ್ತಾಹದಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ಸಹಕಾರಿ ಚಳವಳಿಯಲ್ಲಿದ್ದ ಜಿ.ಟಿ. ದೇವೇಗೌಡರು ಜೆಡಿಎಸ್‌ನಲ್ಲಿದ್ದರೂ ನನ್ನ ಪರವಾಗಿಯೇ ಇದ್ದಾರೆ. ಪಕ್ಷದಿಂದ ನನ್ನನ್ನು ಉಚ್ಚಾಟಿಸಿದ ಮೇಲೆ ಅವರು ಅಲ್ಲಿಯೇ ಉಳಿದುಬಿಟ್ಟರು. ಈಗ ಒಂದು ರೀತಿಯಲ್ಲಿ ನಮ್ಮ ಜೊತೆಗೇ ಇದ್ದಾರೆ’ ಎಂದರು. ‘ನಾನು ಜೆಡಿಎಸ್‌ನಲ್ಲಿ ಇದ್ದಿದ್ದರೆ ದೇವೇಗೌಡರು ಹಾಗೂ ಅವರ ಮಕ್ಕಳು ಮುಖ್ಯಮಂತ್ರಿಯಾಗಲು ಬಿಡುತ್ತಿರಲಿಲ್ಲ. ಕಾಂಗ್ರೆಸ್ ಸೇರಿದ ಬಳಿಕ ಎರಡು ಬಾರಿ ಮುಖ್ಯಮಂತ್ರಿಯಾದೆ’ ಎಂದು ಅವರು ಹೇಳಿದರು.

ಚರ್ಚೆಗೆ ಗ್ರಾಸವಾದ ದೆಹಲಿ ಪ್ರವಾಸ

ನವದೆಹಲಿ: ಅಧಿಕಾರ ಹಸ್ತಾಂತರ ಹಾಗೂ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಕಾಂಗ್ರೆಸ್ ಪಾಳಯದಲ್ಲಿ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ, ಸಚಿವರಿಬ್ಬರು ಹಾಗೂ ಶಾಸಕರ ದೆಹಲಿ ಪ್ರವಾಸ ಗುರುವಾರ ಚರ್ಚೆಗೆ ಗ್ರಾಸವಾಯಿತು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಹಾಗೂ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ದೆಹಲಿಗೆ ಗುರುವಾರ ಸಂಜೆ ಬಂದರು. ಅವರಿಬ್ಬರೂ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿದ್ದಾರೆ ಎಂಬ ಸುದ್ದಿ ಹಬ್ಬಿತ್ತು. ‘ನಾವು ಇಲಾಖಾ ಕಾರ್ಯ ನಿಮಿತ್ತ ಬಂದಿದ್ದೇವೆ’ ಎಂದು ಸಚಿವರಿಬ್ಬರೂ ಸ್ಪಷ್ಟಪಡಿಸಿದರು.

ಶಾಸಕರಾದ ಟಿ.ಡಿ.ರಾಜೇಗೌಡ, ಎಚ್.ಡಿ.ರಂಗನಾಥ್, ವಿಧಾನ ಪರಿಷತ್ ಸದಸ್ಯ ರವಿ ಸೇರಿದಂತೆ ಕೆಲವು ಶಾಸಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದರು.

ತುರ್ತು ಕಾರ್ಯದ ನಿಮಿತ್ತ ಖರ್ಗೆ ಅವರು ಇನ್ನೊಂದು ಗೇಟಿನಿಂದ ನಿರ್ಗಮಿಸಿದ್ದಾಗಲೇ ಶಾಸಕರು ಬಾಗಿಲಲ್ಲಿ ಕಾಯುತ್ತಾ ನಿಂತಿದ್ದರು. ಖರ್ಗೆ ಅವರು ಮರಳಿದಾಗ ಹತ್ತು ನಿಮಿಷಕ್ಕೂ ಹೆಚ್ಚು ಕಾಲ ಮನೆಯ ಬಾಗಿಲಲ್ಲೇ ನಿಂತು ಮಾತುಕತೆ ನಡೆಸಿದರು. ಮಾತುಕತೆ ಪ್ರತಿಕ್ರಿಯೆ ನೀಡದೆ ಶಾಸಕರು ತೆರಳಿದರು.

‘ಇಲಾಖಾ ಕಾರ್ಯದ ಸಲುವಾಗಿ ಕೇಂದ್ರ ಸಚಿವರನ್ನು ಭೇಟಿ ಮಾಡಲು ಬಂದಿದ್ದೇನೆ. ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಶುಕ್ರವಾರ ಭೇಟಿ ಮಾಡುವ ಸಾಧ್ಯತೆ ಕಡಿಮೆ’ ಎಂದು ಚಲುವರಾಯಸ್ವಾಮಿ ಖರ್ಗೆ ಭೇಟಿಗೂ ಮೊದಲು ತಿಳಿಸಿದರು.

‘ಸಕ್ಕರೆ ವಿಷಯದ ಬಗ್ಗೆ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಲು ಬಂದಿದ್ದೇನೆ. ಸಿ.ಎಂ ಬದಲಾವಣೆ ಬಗ್ಗೆ ನಾನು ಮಾತನಾಡುವುದಿಲ್ಲ. ಅದಕ್ಕೆಂದೇ ಜನರು ಇದ್ದಾರೆ’ ಎಂದು ಎಂದು ಶಿವಾನಂದ ಪಾಟೀಲ ತಿಳಿಸಿದರು.

ಭಾರತ ನಾರಿಯರ ಅಪ್ರತಿಮ ಸಾಧನೆ

ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್‌ಗೆ ತೆರೆ
ಆತಿಥೇಯರಿಗೆ 9 ಚಿನ್ನ ಸೇರಿ ಒಟ್ಟು 20 ಪದಕ

ಚಿನ್ನ ಗೆದ್ದ ಭಾರತದ ಸಚಿನ್ ಸಿವಾಚ್

ಸ್ವರ್ಣ ಸಾಧನೆ ಮಾಡಿದ ಭಾರತದ ನಿಖತ್ ಜರೀನ್

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ಏಳು ಮಹಿಳಾ ಸ್ಪರ್ಧಿಗಳು ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್‌ನ ಅಂತಿಮ ದಿನವಾದ ಗುರುವಾರ ಮೈಲಿಗಲ್ಲು ಸ್ಥಾಪಿಸಿದರು. ಪುರುಷರ ವಿಭಾಗದಲ್ಲಿ ಎರಡು ಚಿನ್ನ ಸೇರಿದಂತೆ ಆತಿಥೇಯರು ಒಟ್ಟು 20 ಪದಕಗಳನ್ನು ಗೆದ್ದು ಪಾರಮ್ಯ ಮೆರೆದರು.

ನಿಖತ್ ಜರೀನ್ (51 ಕೆ.ಜಿ), ಜಾಸ್ಮಿನ್ ಲಂಬೋರಿಯಾ (57 ಕೆಜಿ), ಪರ್ವೀನ್ (60 ಕೆಜಿ), ಮೀನಾಕ್ಷಿ (48 ಕೆ.ಜಿ.), ಪ್ರೀತಿ (54 ಕೆ.ಜಿ), ಅರುಂಧತಿ ಚೌಧರಿ (70 ಕೆ.ಜಿ.) ಮತ್ತು ನೂಪುರ್ (80 + ಕೆ.ಜಿ) ಅವರು ಶಹೀದ್ ವಿಜಯ್ ಸಿಂಗ್ ಪಥಿಕ್ ಕ್ರೀಡಾ ಸಂಕೀರ್ಣದಲ್ಲಿ ಚಿನ್ನದ ಪದಕಗಳನ್ನು ಗೆದ್ದರು. ಪುರುಷರ ವಿಭಾಗದಲ್ಲಿ ಹಿತೇಶ್ ಗುಲಿಯಾ (70 ಕೆಜಿ) ಮತ್ತು ಸಚಿನ್ ಸಿವಾಚ್ (60 ಕೆಜಿ) ಸ್ವರ್ಣ ಸಾಧನೆ ಮಾಡಿದರು.

ಭಾರತದ ಬಾಕ್ಸರ್‌ಗಳು ಎಲ್ಲಾ 20 ತೂಕ ವಿಭಾಗಗಳಲ್ಲಿ ಕನಿಷ್ಠ ಒಂದು ಪದಕವನ್ನು ಗೆದ್ದುಕೊಂಡರು. ಒಂಬತ್ತು ಚಿನ್ನ, ಆರು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಶ್ರೇಷ್ಠ ಪ್ರದರ್ಶನದೊಂದಿಗೆ ಅಭಿಯಾನ ಮುಗಿಸಿದರು. ವಿಶೇಷವೆಂದರೆ ಭಾರತದ ನಾರಿಯರು ಗೆದ್ದ ತೂಕ ವಿಭಾಗಗಳು 2028ರ ಒಲಿಂಪಿಕ್ಸ್‌ನಲ್ಲೂ ಇವೆ. ಆ ಮೂಲಕ ಲಾಸ್ ಏಂಜಲೀಸ್ ಕ್ರೀಡೆಗಳಲ್ಲಿ ಭಾರತ ಹುಮ್ಮಸ್ಸಿನಿಂದ ಕಣಕ್ಕಿಳಿಯಲು ಬುನಾದಿ ಸಜ್ಜುಗೊಂಡಿದೆ.

ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 5–0ಯಿಂದ ತೈವಾನ್ ಗುವೊ ಯಿ ಕ್ಸುವಾನ್ ಅವರನ್ನು ನಿರಾಯಾಸವಾಗಿ ಹಿಮ್ಮೆಟ್ಟಿಸಿದರು. ವಿಶ್ವ ಚಾಂಪಿಯನ್ ಜಾಸ್ಮಿನ್ ಫೈನಲ್ ಹಣಾಹಣಿಯಲ್ಲಿ 4–1ರಿಂದ ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತೆ ವು ಶಿಹ್ ಯಿ (ತೈವಾನ್) ಅವರನ್ನು ಸುಲಭವಾಗಿ ಮಣಿಸಿದರು. ಪರ್ವೀನ್ 3–2ರ ರೋಚಕ ಪಂದ್ಯದಲ್ಲಿ ಜಪಾನ್‌ನ ಅಯಾಕಾ ಟಗುಚಿ ವಿರುದ್ಧ ಗೆಲುವು ಸಾಧಿಸಿದರು.

ವಿಶ್ವ ಚಾಂಪಿಯನ್ ಮೀನಾಕ್ಷಿ ಫೈನಲ್‌ನಲ್ಲಿ 5–0 ಯಿಂದ ಹಾಲಿ ಏಷ್ಯನ್ ಚಾಂಪಿಯನ್ ಫರ್ಜೊನಾ ಫೊಝಿಲೊವಾ ಅವರನ್ನು ಸೋಲಿಸಿದರು. ಪ್ರೀತಿ ಸಹ 5–0 ಯಿಂದ ಇಟಲಿಯ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ಸಿರಿನ್ ಚರಾಬಿ ಅವರನ್ನು ಮಣಿಸಿದರು. ಮಾಜಿ ಯುವ ವಿಶ್ವ ಚಾಂಪಿಯನ್ ಅರುಂಧತಿ ಚೌಧರಿ ಅವರಂತೂ ಅಮೋಘ ಪ್ರದರ್ಶನ ನೀಡಿ 5–0 ಯಿಂದ ಉಜ್ಬೇಕಿಸ್ತಾನದ ಅಝಿಝಾ ಝೊಕಿರೋವಾ ವಿರುದ್ಧ ಸುಲಭ ಗೆಲುವು ಸಾಧಿಸಿದರು.

ಭಾರತದ ಚಿನ್ನದ ಬೇಟೆ ಮುಂದುವರಿಸಿದ ನೂಪುರ್ 3–2ರಿಂದ ಉಜ್ಬೇಕಿಸ್ತಾನದ ಸೊಟಿಮ್‌ಬೊಯೆವಾ ಒಲ್ಟಿನೋಯ್ ಅವರನ್ನು ಫೈನಲ್‌ನಲ್ಲಿ ಸೋಲಿಸಿದರು.

ಸಚಿನ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 5–0ಯಿಂದ ಕಿರ್ಗಿಸ್ತಾನದ ಮುನಾರ್ಬೆಕ್ ಸೆಯಿಟ್ಬೆಕ್ ಉಲು ಅವರನ್ನು ಸೋಲಿಸಿದರು. ಹಿತೇಶ್ ಅವರು 3–2ರಿಂದ ಕಜಾಕಸ್ತಾನದ ನೂರ್ಬೆಕ್ ಮುರ್ಸಲ್ ವಿರುದ್ಧ ಮೇಲುಗೈ ಸಾಧಿಸಿ ಚಿನ್ನ ಗೆದ್ದರು.

ಜಾದುಮಣಿ ಸಿಂಗ್ (50 ಕೆಜಿ), ಪವನ್ ಬರ್ತ್ವಾಲ್ (55 ಕೆಜಿ), ಅಭಿನಾಶ್ ಜಾಮವಾಲ್ (65 ಕೆಜಿ), ಅಂಕುಶ್ ಫಂಗಲ್ (80 ಕೆಜಿ, ನರೇಂದರ್ ಬರ್ವಾಲ್ (90 + ಕೆಜಿ) ಮತ್ತು ಪೂಜಾ ರಾಣಿ (80 ಕೆಜಿ) ಬೆಳ್ಳಿ ಪದಕ ಗೆದ್ದರು.

ಚೆಸ್ ವಿಶ್ವಕಪ್ ಸೆಮಿಫೈನಲ್ ಇಂದಿನಿಂದ

ಜಾವೊಖಿರ್ ಸಿಂದರೋವ್

ಆ್ಯಂಡ್ರಿ ಇಸಿಪೆಂಕೊ

ಫಿಡೆ ಚಿತ್ರಗಳು

ಪಣಜಿ (ಪಿಟಿಐ): ಈ ತಿಂಗಳ 1ರಂದು ಚೆಸ್ ವಿಶ್ವಕಪ್ ಆರಂಭವಾದಾಗ ಆತಿಥೇಯ ಭಾರತದ 24 ಆಟಗಾರರು ಕಣದಲ್ಲಿದ್ದರು. ವಿಶ್ವ ಚಾಂಪಿಯನ್ ಗುಕೇಶ್ ಡಿ, ಅರ್ಜುನ್ ಇರಿಗೇಶಿ ಮತ್ತು ಪ್ರಜ್ಞಾನಂದ ಆರ್. ಅವರು ಕ್ರಮವಾಗಿ ಮೊದಲ ಮೂರು ಶ್ರೇಯಾಂಕ ಪಡೆದಿದ್ದರು. ಆದರೆ ಈ ಪ್ರತಿಷ್ಠಿತ ಟೂರ್ನಿ ಸೆಮಿಫೈನಲ್ ಹಂತ ತಲುಪುವ ಮೊದಲೇ ಭಾರತದ ಸವಾಲು ಅಂತ್ಯಗೊಂಡಿದೆ.

ಗುರುವಾರ ವಿಶ್ವಕಪ್‌ಗೆ ವಿರಾಮದ ದಿನವಾಗಿದ್ದು, ಶುಕ್ರವಾರ ಸೆಮಿಫೈನಲ್ ಪಂದ್ಯಗಳು ಆರಂಭವಾಗಲಿವೆ.

ಉಜ್ಬೇಕಿಸ್ತಾನದ ಆಟಗಾರರೇ ಇರುವ ಒಂದು ಸೆಮಿಫೈನಲ್‌ನಲ್ಲಿ ಜಾವೊಖಿರ್ ಸಿಂದರೋವ್ ಅವರು 23 ವರ್ಷ ವಯಸ್ಸಿನ ನದಿರ್ಬೆಕ್ ಯಾಕುಬೊಯೇವ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಚೀನಾದ ವೀ ಯಿ ಅವರು ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಅವರನ್ನು ಎದುರಿಸಲಿದ್ದಾರೆ.

ಭಾರತ ಬಿಟ್ಟರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಾವಂತ ಆಟಗಾರರನ್ನು ಹೊಂದಿರುವ ದೇಶ ಉಜ್ಬೇಕಿಸ್ತಾನ. 'ನಾನು ಮತ್ತು ಎದುರಾಳಿ ನೊದಿರ್ಬೆಕ್ ಯಾಕುಬೊಯೇವ್ ಇಬ್ಬರೂ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದರೆ ನನಗೆ ಅತೀವ ಸಂತಸವಾಗಲಿದೆ' ಎಂದು 19 ವರ್ಷ ವಯಸ್ಸಿನ ಸಿಂಧರೋವ್ ಹೇಳಿದ್ದಾರೆ.

ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು ಸೈಪ್ರಸ್‌ನಲ್ಲಿ ಮುಂದಿನ ವರ್ಷ ನಡೆಯಲಿರುವ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುತ್ತಾರೆ. ಫೈನಲ್ ತಲುಪಿದ ಇಬ್ಬರ ಜೊತೆ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ನಡೆಯುವ ಪಂದ್ಯದ ವಿಜೇತ ಆಟಗಾರ ಸಹ ಅರ್ಹತೆ ಪಡೆಯಲಿದ್ದಾರೆ.

ಉಜ್ಬೇಕಿಸ್ತಾನದ ಅಗ್ರ ಆಟಗಾರ, 21 ವರ್ಷ ವಯಸ್ಸಿನ ನೊದಿರ್ಬೆಕ್ ಅಬ್ದುಸತ್ತಾರೋವ್ ಅವರು ಮೂರನೇ ಸುತ್ತಿನಲ್ಲಿ ಮೆಕ್ಸಿಕೊದ ಹೊಸೆ ಮಾರ್ಟಿನೆಝ್ ಅಲ್ಕಂತಾರ ಅವರಿಗೆ ಅಚ್ಚರಿಯ ರೀತಿ ಮಣಿದಿದ್ದರು.

23 ವರ್ಷ ವಯಸ್ಸಿನ ಇಸಿಪೆಂಕೊ ಈ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದು, ಚೀನಾದ ಪ್ರಬಲ ಆಟಗಾರನ ವಿರುದ್ಧ ಅವರ ಹಣಾಹಣಿ ಕುತೂಹಲ ಕೆರಳಿಸಿದೆ. 26 ವರ್ಷ ವಯಸ್ಸಿನ ವೀ ಯಿ ಸದ್ಯ ಕಣದಲ್ಲಿರುವ ಗರಿಷ್ಠ (ಏಳನೇ) ಶ್ರೇಯಾಂಕದ ಆಟಗಾರ ಎನಿಸಿದ್ದಾರೆ.

ಕಿಕ್‌ಸ್ಟಾರ್ಟ್ ಚಾಂಪಿಯನ್

ಪುಷ್ಕರ್ ವಿ.

ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಆಟಗಾರರು ಗುರುವಾರ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 1–0 ಗೋಲಿನಿಂದ ಎಫ್‌ಸಿ ಬೆಂಗಳೂರು ತಂಡವನ್ನು ಮಣಿಸಿ, ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ಗೆದ್ದು ಸಂಭ್ರಮಿಸಿದರು

ಅರುಣ್‌ಕುಮಾರ್ ಪಾಟೀಲ ನಿಧನ

ಮೈಸೂರು: ನಗರದ ಬೋಗಾದಿ ನಿವಾಸಿ, ಭಾರತೀಯ ಕ್ರೀಡಾ ಪ್ರಾಧಿಕಾರದ (ಸಾಯ್) ನಿವೃತ್ತ ಜಿಮ್ನಾಸ್ಟಿಕ್ ತರಬೇತುದಾರ ಅರುಣ್ ಕುಮಾರ್ ಪಾಟೀಲ (69) ಗುರುವಾರ ನಿಧನರಾದರು. ಅವರಿಗೆ ತಾಯಿ, ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಹಲವು ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗಷ್ಟೇ ಅಲ್ಲದೆ, ನೂರಾರು ಆಸಕ್ತರಿಗೆ ಜಿಮ್ನಾಸ್ಟಿಕ್ ತರಬೇತಿ ನೀಡಿದ್ದರು. ವಿವಿಧ ಕ್ರೀಡಾ-ಸಂಸ್ಥೆಗಳ ಪದಾಧಿಕಾರಿಯಾಗಿದ್ದರು.

ಶುಕ್ರವಾರ ಬೆಳಿಗ್ಗೆ 9ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಎಂಟರ ಘಟ್ಟಕ್ಕೆ ಆಯುಷ್, ಲಕ್ಷ್ಯ

ಸಿಡ್ನಿ (ಪಿಟಿಐ): ಯುವತಾರೆ ಆಯುಷ್ ಶೆಟ್ಟಿ ಮತ್ತು ಅನುಭವಿ ಲಕ್ಷ್ಯ ಸೇನ್ ಅವರು ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ವಿಭಿನ್ನ ರೀತಿಯಲ್ಲಿ ಜಯಗಳಿಸಿ ಎಂಟರ ಘಟ್ಟ ತಲುಪಿದರು. ಕ್ವಾರ್ಟರ್‌ಫೈನಲ್ ಮುಖಾಮುಖಿ ಸಜ್ಜಾದರು.

ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರೂ ಸಹ ಎಂಟರ ಘಟ್ಟ ತಲುಪಿದರು. ಈ ಜೋಡಿ 21–18, 21–11 ರಿಂದ ತೈವಾನ್‌ನ ಸು ಚಿಂಗ್ ಹೆಂಗ್– ವು ಗುವಾನ್ ಜೋಡಿಯನ್ನು ಮಣಿಸಿತು. ಸಾತ್ವಿಕ್– ಚಿರಾಗ್ ಮುಂದಿನ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಫಜರ್ ಅಲ್ಫಿಯಾನ್– ಮುಹಮ್ಮದ್ ಶೊಯಿಬುಲ್ ಫಿಕ್ರಿ (ಇಂಡೊನೇಷ್ಯಾ) ಜೋಡಿಯನ್ನು ಎದುರಿಸಲಿದ್ದಾರೆ.

ಈ ವರ್ಷದ ಆರಂಭದಲ್ಲಿ ಅಮೆರಿಕ ಓಪನ್ ಸೂಪರ್ 300 ಟೂರ್ನಿಯ ವಿಜೇತರಾಗಿದ್ದ ಆಯುಷ್ 21–17, 21–16 ರಿಂದ ನಾಲ್ಕನೇ ಶ್ರೇಯಾಂಕದ ಕೊಡೈ ನರವೋಕಾ ಅವರನ್ನು ಸೋಲಿಸಿದರು. ಈ ಪಂದ್ಯ 68 ನಿಮಿಷಗಳವರೆಗೆ ನಡೆಯಿತು. 20 ವರ್ಷ ವಯಸ್ಸಿನ ಆಯುಷ್ ಶೆಟ್ಟಿ ಅವರಿಗೆ ಇದು ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ಜಪಾನ್ ಆಟಗಾರ ವಿರುದ್ಧ ಈ ವರ್ಷದ ಎರಡನೇ ಗೆಲುವಾಗಿದೆ.

ಏಳನೇ ಶ್ರೇಯಾಂಕದ ಲಕ್ಷ್ಯ ಸೇನ್ ಮತ್ತೊಂದು ಪಂದ್ಯದಲ್ಲಿ ಮೂರು ಗೇಮ್‌ಗಳನ್ನು ಕಂಡ 63 ನಿಮಿಷಗಳ ಪಂದ್ಯದಲ್ಲಿ ತೈವಾನ್‌ನ ಚಿ ಯು ಜೆನ್ ಅವರನ್ನು 21–17, 13–21, 21–13 ರಿಂದ ಸೋಲಿಸಿದರು.

ಈ ವರ್ಷ ಯಾವುದೇ ಟೂರ್ನಿಯಲ್ಲಿ ಪ್ರಿಕ್ವಾರ್ಟರ್‌ಫೈನಲ್‌ಗಿಂತ ಮೇಲೇರಲು ವಿಫಲರಾಗಿರುವ ಪ್ರಣಯ್ ಮತ್ತೊಮ್ಮೆ ವಿಫಲರಾದರು. ಎಂಟನೇ ಶ್ರೇಯಾಂಕದ ಫರ್ಹಾನ್ ಅಲ್ವಿ ಅವರು 21–19, 21–10 ರಿಂದ ಮಾಜಿ ವಿಶ್ವ ಜೂನಿಯರ್ ಚಾಂಪಿಯನ್ ಪ್ರಣಯ್ ಅವರನ್ನು ಸೋಲಿಸಿದರು. ₹4.21 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯ ಮೂರನೇ ದಿನವಾದ ಗುರುವಾರ ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಕೂಡ ನಿರ್ಗಮಿಸಿದರು.

ದಾಖಲೆ ಬರೆದ ಪ್ರಣವಿ ಅರಸ್

ಮುಂಬೈ (ಪಿಟಿಐ): ಕರ್ನಾಟಕದ ಯುವ ಗಾಲ್ಫರ್ ಪ್ರಣವಿ ಅರಸ್ ಗುರುವಾರ ಇಂಡಿಯನ್ ಗಾಲ್ಫ್ ಪ್ರೀಮಿಯರ್ ಲೀಗ್ (ಐಜಿಪಿಎಲ್) ಟೂರ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡರು. ಇದರೊಂದಿಗೆ ವೃತ್ತಿಪರ ಐಜಿಪಿಎಲ್ ಟೂರ್ನಿಯಲ್ಲಿ ಪುರುಷ ಸ್ಪರ್ಧಿಗಳನ್ನು ಮಣಿಸಿ ಕಿರೀಟ ಗೆದ್ದ ಭಾರತದ ಮೊದಲ ಮಹಿಳಾ ಗಾಲ್ಫರ್ ಎಂಬ ದಾಖಲೆ ಬರೆದರು.

ಬಾಂಬೆ ಪ್ರೆಸಿಡೆನ್ಸಿ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಅಂತಿಮ ಸುತ್ತಿನಲ್ಲಿ ಮೈಸೂರಿನ 22 ವರ್ಷದ ಪ್ರಣವಿ 8 ಅಂಡರ್‌ಗಳಲ್ಲಿ 60 ಅಂಕಗಳೊಂದಿಗೆ ಅಮೋಘ ಪ್ರದರ್ಶನ ನೀಡಿದರು. ಒಟ್ಟು 14 ಅಂಡರ್‌ಗಳೊಂದಿಗೆ ಚಾಂಪಿಯನ್ ಆದ ಅವರು ಟ್ರೋಫಿ ಮತ್ತು ₹22.50 ಲಕ್ಷ ಬಹುಮಾನ ತನ್ನದಾಗಿಸಿಕೊಂಡರು.

ಪ್ರಣವಿ ಅವರಿಗೆ ಪ್ರಬಲ ಸ್ಪರ್ಧೆಯೊಡ್ಡಿದ್ದ ಚಂಡೀಗಢದ ಕರಣ್‌ದೀಪ್ ಕೊಚ್ಚರ್ ರನ್ನರ್ ಅಪ್ ಆದರು. ಕೊನೆಯ ದಿನದ ಆರಂಭದ ತನಕ ಅಗ್ರಸ್ಥಾನದಲ್ಲಿದ್ದ ಕೊಚ್ಚರ್ 12 ಅಂಡರ್‌ಗಳೊಂದಿಗೆ ಎರಡನೇ ಸ್ಥಾನಕ್ಕೆ ಸರಿದರು. ಅವರು ₹15 ಲಕ್ಷ ಬಹುಮಾನ ಪಡೆದರು.

ಗೆಲುವಿನ ಬಳಿಕ ಪ್ರತಿಕ್ರಿಯಿಸಿದ ಪ್ರಣವಿ, 'ಈ ಭಾವನೆಯನ್ನು ಪದಗಳಲ್ಲಿ ವಿವರಿಸಲು ಸಾಧ್ಯವಾಗುತ್ತಿಲ್ಲ. ವೃತ್ತಿಪರ ಪುರುಷರೊಂದಿಗೆ ಸ್ಪರ್ಧಿಸಿದ್ದರಿಂದ ನನ್ನ ಆಟದ ಮಟ್ಟವನ್ನು ತಿಳಿಯಲು ಸಾಧ್ಯವಾಯಿತು' ಎಂದು ಹೇಳಿದರು.

ಆ್ಯಷಸ್ ಟೆಸ್ಟ್ ಸರಣಿ ಇಂದಿನಿಂದ

ಪರ್ತ್ (ಎಪಿ): ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಿನ ಆ್ಯಷಸ್ ಸರಣಿಯ ಮೊದಲ ಟೆಸ್ಟ್ ಶುಕ್ರವಾರ ಆರಂಭವಾಗಲಿದೆ. ದಶಕಗಳ ಬಳಿಕ ಸರಣಿ ಜಯಿಸುವತ್ತ ಇಂಗ್ಲೆಂಡ್ ತಂಡ ಚಿತ್ತ ಹರಿಸಿದೆ.

ಎರಡು ವರ್ಷಗಳ ಹಿಂದೆ ಓವಲ್‌ನಲ್ಲಿ ನಡೆದ ಐದನೇ ಟೆಸ್ಟ್ ಪಂದ್ಯವನ್ನು ಬೆನ್ ಸ್ಟೋಕ್ಸ್ ನಾಯಕತ್ವದ ತಂಡವು 49 ರನ್‌ಗಳಿಂದ ಜಯಿಸಿತ್ತು. ಆದರೆ, ತವರಿನಲ್ಲಿ ಸರಣಿಯನ್ನು ವಶಮಾಡಿಕೊಳ್ಳಲು ಇಂಗ್ಲೆಂಡ್‌ಗೆ ಸಾಧ್ಯವಾಗಿರಲಿಲ್ಲ. ಆ ಸರಣಿಯು 2–2ರಿಂದ ಸಮಬಲಗೊಂಡಿತ್ತು.

ಮತ್ತೊಂದೆಡೆ ಪ್ರಬಲ ಆಸ್ಟ್ರೇಲಿಯಾ ತಂಡವು 2010–11ರಿಂದ ತವರಿನಲ್ಲಿ ಅಜೇಯ ಓಟವನ್ನು ಮುಂದುವರಿಸಿದೆ.

ನಾಯಕ ಪ್ಯಾಟ್ ಕಮಿನ್ಸ್ ಮತ್ತು ವೇಗಿ ಜೋಶ್ ಹ್ಯಾಜಲ್‌ವುಡ್ ಅವರು ಗಾಯದ ಕಾರಣದಿಂದಾಗಿ ಮೊದಲ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. 31 ವರ್ಷದ ವೇಗಿ ಬ್ರೆಂಡನ್ ಡಾಗೆಟ್ ಮತ್ತು ಎಡಗೈ ಬ್ಯಾಟರ್ ಜೇಕ್ ವೀಥರಾಲ್ಡ್ (31 ವರ್ಷ) ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ನಿರೀಕ್ಷೆಯಿದೆ.